ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಿಎಂ ಸಿದ್ದರಾಮಯ್ಯ ಅವರನ್ನು ಸೋಮವಾರ ಕಾವೇರಿ ನಿವಾಸದಲ್ಲಿ ಭೇಟಿಯಾದ ಲಿಂಗಾಯತ ಸ್ವಾಮೀಜಿಗಳು, ಸಚಿವರು, ಶಾಸಕರು, ಸಮಾಜದ ಮುಖಂಡರು ಹಲವು ಬೇಡಿಕೆಗಳನ್ನು ಸಲ್ಲಿಸಿದರು.

ಸೊಲ್ಲಾಪುರದಲ್ಲಿ ಶಿವಸೇನೆಯಿಂದ ಕೆಎಸ್‌ಆರ್‌ಟಿಸಿ ಬಸ್‌ಗೆ ಮಸಿ

ನಿಲ್ಲದ ಮಹಾ ಪುಂಡಾಟ

ಬೆಳಗಾವಿ: ಮಹಾರಾಷ್ಟ್ರದ ಸೊಲ್ಲಾಪುರ ನಗರದ ಸಾಥ್ ರಸ್ತೆಯಲ್ಲಿ ಸೋಮವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಇಳಕಲ್-ಸೊಲ್ಲಾಪುರ ನಗರಗಳ ನಡುವೆ ಸಂಚರಿಸುವ ಬಸ್ ತಡೆದ ಶಿವಸೇನೆ (ಉದ್ಧವ್ ಠಾಕ್ರೆ) ಬಣದ 15 ರಿಂದ 20 ಕಿಡಿಗೇಡಿಗಳು ಪುಂಡಾಟ ಮೆರೆದಿದ್ದಾರೆ.

ಚಾಲಕನನ್ನು ಬಸ್ಸಿನಿಂದ ಕೆಳಗೆ ಇಳಿಸಿ, ಮುಖಕ್ಕೆ ಕೇಸರಿ ಬಣ್ಣ ಬಳಿದು ಜೈ ಮಹಾರಾಷ್ಟ್ರ ಎಂದು ಘೋಷಣೆ ಹೇಳಿಸಿದ್ದಾರೆ. ಅಲ್ಲದೇ, ಛತ್ರಪತಿ ಶಿವಾಜಿ ಮಹಾರಾಜ್ ಕಿ ಜೈ, ಜೈ ಮಹಾರಾಷ್ಟ್ರ, ಜೈ ಭವಾನಿ ಎಂದು ಬಸ್ಸಿನ ಮೇಲೆ ಬರೆದು, ಘೋಷಣೆ ಕೂಗಿದ್ದಾರೆ. ಈ ಸಂದರ್ಭದಲ್ಲಿ ಬಸ್ಸಿನಲ್ಲಿ ಸುಮಾರು 35 ಪ್ರಯಾಣಿಕರು ಇದ್ದರು. ಪುಂಡಾಟ ಬಳಿಕ ಬಸ್ಸನ್ನು ಬಿಟ್ಟು ಕಳುಹಿಸಿದ್ದಾರೆ.

ಮಹಾರಾಷ್ಟ್ರ ಸರಕಾರದ ಜತೆ ಮಾತುಕತೆ: ಈ ಕುರಿತು ಪ್ರತಿಕ್ರಿಯಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್ಸುಗಳಿಗೆ ಕಪ್ಪು ಬಣ್ಣ ಬಳಿದಿರುವ ಘಟನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರಕಾರದ ಜತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಮಾತುಕತೆ ನಡೆಸಲಿದ್ದಾರೆ. ಅವಶ್ಯಕತೆ ಬಿದ್ದರೆ ಮಹಾರಾಷ್ಟ್ರ ಸರಕಾರದೊಂದಿಗೆ ನಾನೂ ಮಾತನಾಡುವೆ. ನಮ್ಮ ಬಸ್ಸಿಗೆ ಅವರು ಮಸಿ ಬಳಿಯುವುದು, ಅವರ ಬಸ್ಸಿಗೆ ನಾವು ಮಸಿ ಬಳಿಯುವುದರಲ್ಲಿ ಅರ್ಥವಿಲ್ಲ. ಮಹಾರಾಷ್ಟ್ರದವರು ಇಲ್ಲಿ ಬರಬೇಕು, ನಮ್ಮವರು ಅಲ್ಲಿಗೆ ಹೋಗಬೇಕು. ಮಹಾರಾಷ್ಟ್ರ ಸರಕಾರ, ತಪ್ಪು ಮಾಡಿದವರನ್ನು ಬೆಂಬಲಿಸಬಾರದು. ಅವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಹೇಳಿದರು. ಮಹಾರಾಷ್ಟ್ರಕ್ಕೆ ಹೋಗುವ ಬಸ್ಸುಗಳನ್ನು ಸ್ಥಗಿತಗೊಳಿಸಲಾಗಿದೆ. ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರುವ ಬಸ್‌ಗಳ ಸಂಚಾರವೂ ಸ್ಥಗಿತಗೊಂಡಿದೆ ಎಂದರು.

ಸೊಲ್ಲಾಪುರದಲ್ಲಿ ಶಿವಸೇನೆ ಕಾರ್ಯಕರ್ತರು ಕರ್ನಾಟಕದ ಬಸ್ ತಡೆದು ಪುಂಡಾಟ ನಡೆಸಿದರು.

ಮೊದಲಿಗೆ ನಾವು ಭಾರತೀಯರು. ದೇಶ ಅಂತ ಬಂದರೆ ಎಲ್ಲರೂ ಒಂದೇ. ನಾವು ನಾವುಗಳೇ ಜಗಳವಾಡುವುದು ಬೇಡ. ಎಲ್ಲರಿಗೂ ಭಾಷಾಭಿಮಾನ ಇರುತ್ತದೆ. ಪ್ರಕರಣ ಇಲ್ಲಿಗೆ ನಿಲ್ಲಿಸೋಣ.
- ಲಕ್ಷ್ಮಿ ಹೆಬ್ಬಾಳ್ಕರ್, ಸಚಿವೆ

ಇದು ಇಬ್ಬರ ವೈಯಕ್ತಿಕ ಜಗಳವಾಗಿದ್ದು, ಇದಕ್ಕೆ ಕನ್ನಡ, ಮರಾಠಿ ಬಣ್ಣ ಬಳಿಯಬಾರದು. ಇದರಿಂದ ಬೆಳಗಾವಿಯ ಅಭಿವೃದ್ಧಿಗೆ ಪೆಟ್ಟು ಬೀಳುತ್ತದೆ. ಘಟನೆಯನ್ನು ಕನ್ನಡ, ಮರಾಠಿ ಸಂಘಟನೆ ಎಂದು ಬಿಂಬಿಸಬಾರದು.
- ಸತೀಶ್ ಜಾರಕಿಹೊಳಿ, ಸಚಿವ

ಕಂಡಕ್ಟರ್ ಆರೋಗ್ಯ ವಿಚಾರಿಸಿದ ಸಚಿವ

ಹಲ್ಲೆಗೆ ಒಳಗಾಗಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಅವರನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಹಲ್ಲೆಗೆ ಒಳಗಾಗಿರುವ ಮಹಾದೇವ ಅವರ ಆರೋಗ್ಯ ಸ್ಥಿರವಾಗಿದೆ. ಎರಡು ದಿನಗಳ ನಂತರ ಆಸ್ಪತ್ರೆಯಿಂದ ಬಿಡುಗಡೆ ಆಗಲಿದ್ದಾರೆ. ತಮ್ಮ ಮೇಲೆ ಪೋಕ್ಸೊ ಪ್ರಕರಣ ದಾಖಲಾದ ಕಾರಣ ಮಹಾದೇವ ಆತಂಕಗೊಂಡಿದ್ದಾರೆ ಎಂದರು.

ಚಿತ್ರದುರ್ಗದಲ್ಲಿ ಎಂಎಸ್‌ಆರ್‌ಟಿಸಿ ಬಸ್‌ಗೆ ಕನ್ನಡಿಗರು ಮಸಿ ಬಳಿದಿದ್ದರಿಂದ ಮಹಾರಾಷ್ಟ್ರದಲ್ಲಿ ನಮ್ಮ ಬಸ್‌ಗಳಿಗೆ ಅವರು ಮಸಿ ಬಳಿಯುತ್ತಿದ್ದಾರೆ. ಇಂಥ ಪ್ರಕರಣಗಳಲ್ಲಿ ಯಾರೂ ಬಸ್‌ಗಳಿಗೆ ಹಾನಿ ಮಾಡಬಾರದು. ಮಹಾರಾಷ್ಟ್ರದಲ್ಲಿ ನಮ್ಮ ಬಸ್‌ಗೆ ಹಾನಿ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಲ್ಲಿನ ಸರಕಾರವನ್ನು ಒತ್ತಾಯಿಸುತ್ತೇವೆ.
- ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಈವರೆಗೂ ರಾಜ್ಯದಿಂದ ಕುಂಭಮೇಳಕ್ಕೆ ಹೋಗಿ ಮೃತಪಟ್ಟವರ ಸಂಖ್ಯೆ 25ಕ್ಕೆ ಏರಿಕೆ

ಕುಂಭಮೇಳಕ್ಕೆ ತೆರಳಿದ್ದ ಗೋಕಾಕದ ಆರು ಮಂದಿ ಸಾವು

ಬೆಳಗಾವಿ: ಬೆಳಗಾವಿ ಜಿಲ್ಲೆಯಿಂದ ಪ್ರಯಾಗರಾಜ್ ಕುಂಭಮೇಳದಲ್ಲಿ ಪಾಲ್ಗೊಳ್ಳಲು ತೆರಳಿದ್ದ ಗೋಕಾಕದ ಆರು ಜನ ಪ್ರಯಾಣಿಕರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮಧ್ಯಪ್ರದೇಶದ ಜಬಲ್ಪುರನ ಖಿತೌಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ನಸುಕಿನ 5 ಗಂಟೆಗೆ ಅಪಘಾತ ಸಂಭವಿಸಿದೆ.

ಗೋಕಾಕ ನಗರದ ಲಕ್ಷ್ಮೀ ಬಡಾವಣೆಯ ನಿವಾಸಿ ಬಾಲಚಂದ್ರ ನಾರಾಯಣ ಗೌಡರ (50), ಹುಕ್ಕೇರಿ ತಾಲೂಕಿನ ಹತ್ತರಗಿ ಸಮೀಪದ ಆನಂದಪುರದ ಸುನೀಲ್ ಬಾಲಕೃಷ್ಣ ಶೇಡಶ್ಯಾಳೆ (45), ಗೋಕಾಕನ ಗೊಂಬಿಗುಡಿ ಬಡಾವಣೆ ನಿವಾಸಿ ಬಸವರಾಜ್ ನಿರಪಾದಪ್ಪ ಕುರಟ್ಟಿ (63), ಗೋಕಾಕನ ಗುರುವಾರ ಪೇಟೆಯ ಬಸವರಾಜ್ ಶಿವಪ್ಪ ದೊಡಮನಿ (49), ಗುರುವಾರ ಪೇಟೆಯ ನಿವಾಸಿ ವಿರೂಪಾಕ್ಷ ಚನ್ನಪ್ಪ ಗುಮತಿ (61) ಹಾಗೂ ಬಾಗಲಕೋಟೆಯ ಗುಳೇದಗುಡ್ಡ ತಾಲೂಕಿನ ಕಮತಗಿಯ ಈರಣ್ಣ ಶಂಕರಪ್ಪ ಶೇಬಿನಕಟ್ಟಿ (27) ಮೃತರು. ಮುಸ್ತಾಕ ಶಿಂಧಿಕುರಬೇಟ್, ಸದಾಶಿವ ಉಪಲಾಳಿ ಗಾಯಗೊಂಡಿದ್ದಾರೆ.

ಮೃತರ ಕುಟುಂಬಕ್ಕೆ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸಾಂತ್ವನ ಹೇಳಿದ್ದು, ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ನಿಷೇಧಾಜ್ಞೆಗೆ ಸಡ್ಡು, ಹೈಕೋರ್ಟ್ ಅನುಮತಿ ಪಡೆದು ಪ್ರತಿಭಟನಾ ಸಭೆ ನಡೆಸಿದ ಕೇಸರಿ ಪಡೆ

ಉದಯಗಿರಿ ಠಾಣೆಗೆ ಕಲ್ಲು ಎನ್‌ಐಎ ತನಿಖೆಗೆ ಆಗ್ರಹ

ಮೈಸೂರು: ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ವೆಸಗಿದ್ದ ಪ್ರಕರಣ ಖಂಡಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ನೇತೃತ್ವದಲ್ಲಿ ಬಿಜೆಪಿ ಮತ್ತು ಇತರ ಸಂಘಟನೆಗಳು ಹಮ್ಮಿಕೊಂಡಿದ್ದ ಮೈಸೂರು ಚಲೋ ಕಾರ್ಯಕ್ರಮ ಸೋಮವಾರ ಹಲವು ನಾಟಕೀಯ ಘಟನೆಗಳಿಗೆ ಸಾಕ್ಷಿಯಾಯಿತು.

ಮೈಸೂರು ಚಲೋ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿದ್ದ ನಗರ ಪೊಲೀಸ್ ಆಯುಕ್ತರು ಮೈಸೂರು ನಗರದಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ರಾಷ್ಟ್ರ ರಕ್ಷಣಾ ಸಮಿತಿ, ನ್ಯಾಯಾಲಯದ ಅನುಮತಿ ಮೇರೆಗೆ ಸಂಜೆ ವೇಳೆ ನಗರದ ವಿವಿ ಫುಟ್ಬಾಲ್ ಮೈದಾನದಲ್ಲಿ ಪ್ರತಿಭಟನಾ ಸಭೆ ನಡೆಸುವಲ್ಲಿ ಯಶಸ್ವಿಯಾಯಿತು. ಆದರೆ ಸಭೆಯಲ್ಲಿ ಪಾಲ್ಗೊಳ್ಳಲು ಬೆಳಗ್ಗೆಯೇ ಮೈಸೂರಿಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಪ್ರತಿಪಕ್ಷ ನಾಯಕ ಆರ್.ಅಶೋಕ ಮಧ್ಯಾಹ್ನದವರೆಗೂ ಸಭೆ ನಡೆಸಲು ಸಾಧ್ಯವಾಗದ ಕಾರಣ ಬೆಂಗಳೂರಿಗೆ ವಾಪಾಸಾದರು.

ನಗರದ ಗನ್‌ಹೌಸ್ ವೃತ್ತದಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಬೃಹತ್ ಪ್ರತಿಭಟನಾ ಜಾಥಾ ನಡೆಸಲು ಸಮಿತಿ ನಿರ್ಧರಿಸಿತ್ತು. ಇದಕ್ಕೆ ಅವಕಾಶ ನಿರಾಕರಿಸಿದ್ದ ಪೊಲೀಸರು ಗನ್‌ಹೌಸ್ ವೃತ್ತದಲ್ಲಿ ಯಾವುದೇ ಸಭೆ, ಪ್ರತಿಭಟನೆ ನಡೆಯದಂತೆ ಬಿಗಿ ಭದ್ರತೆ ಏರ್ಪಡಿಸಿದ್ದರು. ಇದನ್ನು ಪ್ರಶ್ನಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ಹೈಕೋರ್ಟ್ ಮೆಟ್ಟಿಲೇರಿತ್ತು. ಮಧ್ಯಾಹ್ನದ ವೇಳೆಗೆ 300 ಸದಸ್ಯರಿಗೆ ಸೀಮಿತವಾಗಿ ಪ್ರತಿಭಟನಾ ಸಭೆ ನಡೆಸಲು ಹೈಕೋರ್ಟ್ ಅನುಮತಿ ನೀಡಿತ್ತು.

ಹೈಕೋರ್ಟ್ ನಿರ್ದೇಶನದಂತೆ ಮೈಸೂರು ವಿವಿಯ ಫುಟ್ಬಾಲ್ ಮೈದಾನದಲ್ಲಿ ಮಧ್ಯಾಹ್ನ 3 ಗಂಟೆಯ ಬಳಿಕ ಸಭೆ ನಡೆಸಿದ ನಾಯಕರು, ಬಂಧಿತರ ವಿರುದ್ಧ ಯುಎಪಿಎ ಕಾಯಿದೆಯಡಿ ಪ್ರಕರಣ ದಾಖಲಿಸಬೇಕು. ಪ್ರಕರಣವನ್ನು ಎನ್‌ಐಎ ತನಿಖೆಗೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸಭೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಸಮಿತಿಯ ಸಂಚಾಲಕ ಮಹೇಶ ಕಡಗದಾಳು, ಬಿಜೆಪಿ ಮತ್ತು ಆರೆಸ್ಸೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ಷರತ್ತಿನ ಅನುಮತಿ

ಪ್ರತಿಭಟನೆ ನಡೆಸುವುದು ನಮ್ಮ ಹಕ್ಕು ಎಂದು ಸಮಿತಿಯ ಸದಸ್ಯರು ಬೆಳಗ್ಗೆಯೇ ಹೈಕೋರ್ಟ್ ಮೊರೆ ಹೋಗಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ಹೈಕೋರ್ಟ್ ಒಂದು ಲಕ್ಷ ರು. ಬಾಂಡ್ ಠೇವಣಿ ಇಟ್ಟು, ಪ್ರಚೋದನಾಕಾರಿ ಹೇಳಿಕೆ ನೀಡಬಾರದು, 300ಕ್ಕೂ ಹೆಚ್ಚು ಮಂದಿ ಸೇರಬಾರದು ಎಂಬ ಷರತ್ತಿನ ಮೇರೆಗೆ ಅನುಮತಿ ನೀಡಿತ್ತು.

ಉದಯಗಿರಿಯಲ್ಲಿ ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಿದವರಿಗೆ ಬಲಿ ಹಾಕಬೇಕು. ಮೂಟೆಯಲ್ಲಿ ಕಲ್ಲು ತುಂಬಿ ತಂದು ಹಲ್ಲೆ ನಡೆಸುತ್ತಾರೆ. ಇದನ್ನು ಸಹಿಸಿಕೊಂಡು ಇರುತ್ತೀರಾ? ಈಗ ವಾಹನಕ್ಕೆ ಕಲ್ಲು ಹೊಡೆದಿದ್ದಾರೆ. ಮುಂದೆ ಮನೆಗೆ ನುಗ್ಗುತ್ತಾರೆ, ಅಂತಹ ಪರಿಸ್ಥಿತಿ ಬರುತ್ತದೆ.
- ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಗ್ರೇಟರ್ ಬೆಂಗಳೂರು ವಿಧೇಯಕದ ಪರಿಶೀಲನಾ ವರದಿ ಸಲ್ಲಿಕೆ

ಬಿಬಿಎಂಪಿ 7 ಹೋಳು

ಬೆಂಗಳೂರು: ದಿನದಿಂದ ದಿನಕ್ಕೆ ಬೆಳೆಯುತ್ತಿರುವ ರಾಜಧಾನಿ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯವನ್ನು ಗಮನದಲ್ಲಿರಿಸಿಕೊಂಡು ಈಗಿರುವ ಬಿಬಿಎಂಪಿಯನ್ನು ವಿಭಜಿಸಿ, ಅದಕ್ಕೆ ಅಕ್ಕಪಕ್ಕದ ಗ್ರಾಮಗಳನ್ನು ಸೇರಿಸಿ ಗ್ರೇಟರ್ ಬೆಂಗಳೂರು ಮಾಡುವ ಜತೆಜತೆಗೆ ಗರಿಷ್ಠ ಏಳು ಪಾಲಿಕೆಗಳನ್ನು ಸ್ಥಾಪಿಸಬೇಕು ಎನ್ನುವ ಮಹತ್ವದ ಶಿಫಾರಸ್ಸನ್ನು ಗ್ರೇಟರ್ ಬೆಂಗಳೂರು ವಿಧೇಯಕದ ಪರಿಶೀಲನಾ ವರದಿ ಸಲ್ಲಿಕೆಯಾಗಿದೆ.

ಕಳೆದ ವರ್ಷ ಗ್ರೇಟರ್ ಬೆಂಗಳೂರು ವಿಧೇಯಕವನ್ನು ಮಂಡಿಸಿದಾಗ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಆದ್ದರಿಂದ ವಿಧೇಯಕದ ಸಾಧಕ-ಬಾಧಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸಿದ್ದರು. ಈ ಸಮಿತಿಗೆ ಆಡಳಿತ ಪಕ್ಷದ ಶಾಸಕ ರಿಜ್ವಾನ್ ಅರ್ಷದ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಇದೀಗ ಈ ಸಮಿತಿ ಸೋಮವಾರ ವರದಿ ಸಲ್ಲಿಸಿದ್ದು, ಮುಂಬರುವ ಅಧಿವೇಶನದಲ್ಲಿ ಮಂಡನೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಮುಖ್ಯಾಂಶಗಳು

- 100-125 ವಾರ್ಡ್ ರಚನೆ
- ಮೇಯರ್ ಕಾಲಾವಧಿ 30 ತಿಂಗಳು
- 5 ವರ್ಷದಲ್ಲಿ ಇಬ್ಬರೇ ಮೇಯರ್
- ಕಾಲಮಿತಿಯಲ್ಲೇ ಚುನಾವಣೆ

ಬಿಬಿಎಂಪಿಯನ್ನು ಏಳು ಸಣ್ಣ ಸಣ್ಣ ಪಾಲಿಕೆಯನ್ನಾಗಿ ವಿಭಜನೆ ಮಾಡಲು ಅವಕಾಶ ಕಲ್ಪಿಸಿ ಶಿಫಾರಸ್ಸು ಮಾಡಲಾಗಿದೆ. ಎಷ್ಟು ಪಾಲಿಕೆ ರಚನೆ ಮಾಡಬೇಕು ಎಂಬುದನ್ನು ಸರಕಾರದ ನಿರ್ಧಾರಕ್ಕೆ ಬಿಡಲಾಗಿದೆ. ಇದರಿಂದ ನಿರ್ವಹಣೆ ಸುಲಭ ಹಾಗೂ ಗ್ರೇಟರ್ ಬೆಂಗಳೂರಿನ ಮೂಲಕ ಸಂವಹನ ಸಾಧಿಸಲು ಶಿಫಾರಸು ಮಾಡಲಾಗಿದೆ.
- ರಿಜ್ವಾನ್ ಅರ್ಷದ್, ಶಾಸಕ

ಮೈಕ್ರೋ ಫೈನಾನ್ಸ್ ಕಿರುಕುಳ: ಮತ್ತೆ ಮೂವರ ಬಲಿ

ಮಂಡ್ಯ: ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿ ಕಿರುಕುಳ ತಡೆಗೆ ರಾಜ್ಯ ಸರಕಾರ ಸುಗ್ರೀವಾಜ್ಞೆ ಜಾರಿ ಮಾಡಿದರೂ ಸಾವಿನ ಸರಣಿ ನಿಲ್ಲುತ್ತಿಲ್ಲ. ಮಂಡ್ಯ ಜಿಲ್ಲೆಯ ಯಲಿಯೂರು ಬಳಿಯ ವಿಸಿ ನಾಲೆಗೆ ಹಾರಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಶ್ರೀರಂಗಪಟ್ಟಣ ತಾಲೂಕಿನ ಗಂಜಾಂ ನಿವಾಸಿಗಳಾದ ಮಾಸ್ತಪ್ಪ (65), ಪತ್ನಿ ರತ್ನಮ್ಮ (45), ಮಗಳು ಲಕ್ಷ್ಮಿ (18) ಸಾವಿಗೆ ಶರಣಾದವರು. ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೊಂಪಾದ ಪುಟಗಳು

ಬಹುಮತ ಬಂದಾಗಲೇ ಕೈನಲ್ಲಿ ಕೊಸರಾಟ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
6

ಕಾಲದ ಲೆಕ್ಕಾಚಾರ ತಪ್ಪಿದ್ದೆಲ್ಲಿ..?
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
7

ದಾರಿದೀಪೋಕ್ತಿ

ಸಿಟ್ಟು ಬಂದಾಗ ಕೆಟ್ಟ ಪದಗಳನ್ನು ಪ್ರಯೋಗಿಸಲೇಬಾರದು. ಕೆಲಕ್ಷಣಗಳ ಬಳಿಕ ಸಿಟ್ಟು ಇಳಿದು ವಾತಾವರಣ ತಿಳಿಯಾಗುತ್ತದೆ. ಆದರೆ ಆ ಪದಗಳು ಮಾತ್ರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಬಿಡುತ್ತವೆ. ಅಂಥ ಸಂದರ್ಭಗಳಲ್ಲಿ ಸಾಧ್ಯವಾದಷ್ಟು ಮೌನವಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ವಕ್ರತುಂಡೋಕ್ತಿ

ಯಾರಾದರೂ ನಿಮ್ಮ ಕನಸಿನ ಉದ್ಯೋಗ ಯಾವುದು ಎಂದು ಕೇಳಿದರೆ, ಮಲಗಿ ಕನಸು ಕಾಣುವುದು ಎಂದು ಹೇಳಬಹುದು.

ಪಿಎಂ ತಂಡದಲ್ಲಿ ಸುಧಾಮೂರ್ತಿ

ದೆಹಲಿ: ಬೊಜ್ಜಿನ ಸಮಸ್ಯೆ ವಿರುದ್ಧ ಸಮರ ಸಾರಲು ಹಾಗೂ ಅದರ ಬಗ್ಗೆ ಜಾಗೃತಿ ಮೂಡಿಸಲು ಪ್ರಧಾನಿ ಮೋದಿ ಅವರು 10 ಜನರ ವಿಶೇಷ ತಂಡ ರಚಿಸಿದ್ದಾರೆ. ತಂಡದಲ್ಲಿ ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ, ಉದ್ಯಮಿಗಳಾದ ಆನಂದ್ ಮಹೀಂದ್ರಾ, ನಂದನ್ ನೀಲಕಣಿ, ಶೂಟರ್ ಮನು ಬಾಕರ್, ವೇಟ್ ಲಿಫ್ಟರ್ ಮಿರಾಬಾಯಿ ಚಾನು, ಜಮ್ಮು ಕಾಶ್ಮೀರ ಸಿಎಂ ಓಮರ್ ಅಬ್ದುಲ್ಲಾ, ಸಂಸದ ಮೋಹನಲಾಲ್, ಬಿಜೆಪಿ ನಾಯಕ ದಿನೇಶ್ ಲಾಲ್ ಯಾದವ್, ನಟ ಮಾಧವನ್ ಹಾಗೂ ಗಾಯಕಿ ಶ್ರೇಯಾ ಘೋಷಾಲ್ ಇದ್ದಾರೆ.

ಚಾಂಪಿಯನ್ಸ್ ಟ್ರೋಫಿ ಬಾಂಗ್ಲಾ-ಪಾಕ್ ಔಟ್

ರಾವಲ್ಪಿಂಡಿ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ನ್ಯೂಜಿಲೆಂಡ್ ತಂಡವು ಬಾಂಗ್ಲಾ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಬಾಂಗ್ಲಾ ಮತ್ತು ಪಾಕಿಸ್ತಾನ ಟೂರ್ನಿಯಿಂದ ಹೊರಬಿದ್ದಿವೆ.

Karnataka INTERNATIONAL TRAVEL EXPO 2025

ಪ್ರವಾಸೋದ್ಯಮದ ಮೇಲೆಯೇ ಬದುಕುತ್ತಿರುವ ಅದೆಷ್ಟೋ ದೇಶಗಳಲ್ಲಿರುವ ಪ್ರವಾಸಿತಾಣಗಳಿಗಿಂತ ಅತ್ಯುತ್ತಮ ಎನಿಸುವ ಪ್ರವಾಸಿ ತಾಣಗಳು ನಮ್ಮಲ್ಲಿವೆ. ಆದರೆ ಅದನ್ನು ವಿಶ್ವದ ಮುಂದೆ ಪ್ರದರ್ಶನ ಮಾಡುವ ಕೆಲಸವಾಗಬೇಕಿದೆ ಎಂದು **ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್** ಅಭಿಪ್ರಾಯಪಟ್ಟಿದ್ದಾರೆ. ಕೈಟ್ ಎಕ್ಸ್‌ಪೋದ ಹಿನ್ನೆಲೆಯಲ್ಲಿ ವಿಶ್ವವಾಣಿಗೆ ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

ವಿಶ್ವಕ್ಕೆ ಕರ್ನಾಟಕ ದರ್ಶನವೇ ಕೈಟ್ ಉದ್ದೇಶ

- ಈ ಸಮಾವೇಶನದಲ್ಲಿ 107 ದೇಶಗಳ ಪ್ರತಿನಿಧಿಗಳು, ವಿವಿಧ ರಾಜ್ಯಗಳ 400ಕ್ಕೂ ಮಂದಿ ಭಾಗಿ
- ಸಮಾವೇಶದಿಂದ ರಾಜ್ಯಕ್ಕೆ ಸುಮಾರು 2700 ಕೋಟಿ ರು.ಗೂ ಹೆಚ್ಚು ಆದಾಯ ಬರುವ ಸಾಧ್ಯತೆ
- ಪ್ರವಾಸಿ ತಾಣದ ಅಭಿವೃದ್ಧಿಗೆ ಸಾರಿಗೆ, ಸಂವಹನ, ವಾಸ್ತವ್ಯ ಸೇರಿ ಮೂಲಸೌಕರ್ಯ ವೃದ್ಧಿಗೆ ಕ್ರಮ

ಸಂದರ್ಶನ: ರಂಜಿತ್ ಎಚ್. ಅಶ್ವತ್ಥ

ಎಲ್ಲ ಅನುದಾನವನ್ನು ಸರಕಾರದಿಂದ ನಿರೀಕ್ಷೆ ಮಾಡುವುದು ಕಷ್ಟ. ಆದ್ದರಿಂದ ಖಾಸಗಿ ಸಹಭಾಗಿತ್ವದಲ್ಲಿ ಬಂಡವಾಳ ಸಂಗ್ರಹಣೆಗೆ ಚಿಂತನೆ ನಡೆಸಲಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿರುವ 25 ಸಾವಿರಕ್ಕೂ ಹೆಚ್ಚು ಸ್ಮಾರಕಗಳನ್ನು ದತ್ತು ಪಡೆಯಲು ಖಾಸಗಿಯವರಿಗೆ ಅವಕಾಶ ನೀಡಲಾಗಿದೆ. ಈ ಪ್ರಕ್ರಿಯೆಯಿಂದ ಸ್ಮಾರಕಗಳು ಉಳಿಯುವುದರೊಂದಿಗೆ ಪ್ರವಾಸಿಗರ ಸಂಖ್ಯೆಯೂ ಹೆಚ್ಚಳವಾಗಲಿದೆ.
- ಎಂ.ಶ್ರೀನಿವಾಸ್
ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಅಧ್ಯಕ್ಷ



- **ಕೈಟ್ ಸಮಾವೇಶದ ಉದ್ದೇಶವೇನು?**
ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋ ಪ್ರಮುಖ ಉದ್ದೇಶವೇ ವಿಶ್ವದ ಮುಂದೆ ಕರ್ನಾಟಕ ಪ್ರವಾಸೋದ್ಯಮವನ್ನು ಪ್ರಸ್ತುತಪಡಿಸುವುದಾಗಿದೆ. ಕರ್ನಾಟಕದಲ್ಲಿ ಮರುಭೂಮಿ ಪ್ರವಾಸೋದ್ಯಮ ಹೊರತುಪಡಿಸಿ ಎಲ್ಲ ರೀತಿಯ ಪ್ರವಾಸೋದ್ಯಮವೂ ಇದೆ. ಅದಷ್ಟೇ ಅಲ್ಲದೇ, ಕರ್ನಾಟಕ ಸಂಗೀತ, ಕಲೆ, ಸಂಸ್ಕೃತಿ, ಇತಿಹಾಸವನ್ನು ಜಗತ್ತಿಗೆ ತೋರಿಸಬೇಕಿದೆ. ಅನೇಕ ದೇಶಗಳು ಸಣ್ಣ ಸಣ್ಣ ವಿಷಯವನ್ನು ಇಡೀ ವಿಶ್ವದ ಬಹುದೊಡ್ಡ ಪ್ರಮಾಣದಲ್ಲಿ ತೋರಿಸುತ್ತವೆ. ಆದರೆ ಕರ್ನಾಟಕದಲ್ಲಿರುವ ಅಪಾರ ಪ್ರವಾಸಿ ಸಂಪತ್ತನ್ನು ಇನ್ನಷ್ಟು ದೊಡ್ಡ ಮಟ್ಟಿಗೆ ತೋರಿಸುವ ಕೆಲಸವಾಗಬೇಕಿದೆ. ಆದ್ದರಿಂದ ಕೈಟ್ ಸಮಾವೇಶವನ್ನು ಆಯೋಜಿಸಿ, ವಿದೇಶಿ ಹಾಗೂ ಅಂತಾರಾಜ್ಯ ಪ್ರವಾಸಿ ಕ್ಷೇತ್ರದ ಉದ್ಯಮಿಗಳನ್ನು ಆಹ್ವಾನಿಸಲಾಗಿದೆ.
- **ಅಂತಾರಾಷ್ಟ್ರೀಯ ಪ್ರವಾಸಿಗರು ಕಡಿಮೆಯಾಗಿದ್ದಾರೆಯೇ?**
ಈ ಹಿಂದೆ ಕರ್ನಾಟಕಕ್ಕೆ 60 ಲಕ್ಷ ವಿದೇಶಿ ಪ್ರವಾಸಿಗರು ಬರುತ್ತಿದ್ದರು. ಆದರೆ ಕರೋನಾ ಬಳಿಕ ಇದರ ಸಂಖ್ಯೆ 30ಕ್ಕೆ ಕುಸಿದಿದೆ. ಕರೋನಾ ಬಳಿಕವೂ ಈ ಹೊಡೆತದಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಇದೀಗ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿಯೇ ಕೈಟ್ ಎಕ್ಸ್‌ಪೋ ಮಾಡುತ್ತಿದ್ದೇವೆ. ವಿದೇಶದಿಂದ ಬಂದಿರುವ ಗಣ್ಯರಿಗೆ ಈಗಾಗಲೇ ಫ್ಯಾಮ್ ಟೂರ್ ಮಾಡಿಸುತ್ತಿದ್ದೇವೆ. ಕರಾವಳಿ ಕರ್ನಾಟಕ, ಹೆರಿಟೇಜ್ ಕರ್ನಾಟಕ ಸೇರಿದಂತೆ ಕರ್ನಾಟಕದ ವಿವಿಧ ಪ್ರವಾಸಿ ತಾಣಗಳನ್ನು ತೋರಿಸಲಾಗುತ್ತಿದೆ. ಅವರೆಲ್ಲ ವಾಪಸು ಬರುವ ವೇಳೆಗೆ, ರಾಜ್ಯ ಚಿತ್ರಣ ಸಿಗಲಿದೆ. ಇದು ಭವಿಷ್ಯದಲ್ಲಿ ನಮಗೆ ಸಹಾಯವಾಗಲಿದೆ.

ಸಂದರ್ಶನದ ಪೂರ್ಣಪಾಠ → 5



ಸಮಾಚಾರ ಸಣ್ಣದಲ್ಲ

ರಂಜಾನ್ ಚಿತ್ರ ಯಶಸ್ವಿ ಪ್ರದರ್ಶನ

ಬೆಂಗಳೂರು: ದುಬೈನಲ್ಲಿ ನಡೆದ 14ನೇ ಯುಎಫ್‌ಎಂಸಿ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಕನ್ನಡ ರಂಜಾನ್ ಚಿತ್ರ ಪ್ರದರ್ಶನ ಕಂಡಿದ್ದು, ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಶನಿವಾರ ಹಾಗೂ ಭಾನುವಾರ ನಡೆದ ಈ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ರಂಜಾನ್ ಚಿತ್ರದಲ್ಲಿ ಹಿರಿಯ ನಟ ಸಂಗಮೇಶ್ ಉಪಾಸೆ ಸೇರಿದಂತೆ ಹಲವು ನಟರು ಅಭಿನಯಿಸಿದ್ದು, ಚಿತ್ರದ ನಿರ್ದೇಶನವನ್ನು ಪಂಚಾಕ್ಷರಿ ಅವರು ನಿರ್ದೇಶನ ಮಾಡಿದ್ದಾರೆ. ಚಿತ್ರದ ಗೀತೆಗಳನ್ನು ಸಂಗಮೇಶ್ ಉಪಾಸೆ ಬರೆದಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನೀರಿನ ಘಟಕಗಳ ನಿರ್ವಹಣೆ ಹೊಣೆ ಜಲಮಂಡಳಿಗೆ

ಬೆಂಗಳೂರು: ನಗರದ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಜಲಮಂಡಳಿಗೆ ಹಸ್ತಾಂತರಿಸುವಂತೆ ಡಿಸಿಎಂ ಡಿ.ಕೆ ಶಿವಕುಮಾರ್ ಆದೇಶಿಸಿದ್ದಾರೆ. ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಅವರು, ಬೆಂಗಳೂರು ನಗರದ ನಾಗರಿಕರಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿಯನ್ನು ಬೆಂಗಳೂರು ಜಲಮಂಡಳಿ ನಿರ್ವಹಿಸುತ್ತದೆ. ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಬಿಬಿಎಂಪಿ ನಿರ್ವಹಣೆ ಮಾಡುತ್ತಿದೆ. ಒಂದು ವೇಳೆ ಕೊಳವೆ ಬಾವಿಗಳು ಬತ್ತಿ ಹೋದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಜಲಮಂಡಳಿ ಮುಖಾಂತರವೇ ನೀರು ಪೂರೈಸಬೇಕಾಗುತ್ತದೆ. ಈ ಸಮಯದಲ್ಲಿ ಸಮನ್ವಯತೆ ಕೊರತೆ ಉಂಟಾಗಿ ನಾಗರಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ನೀರು ಸರಬರಾಜು ನಿರ್ವಹಣೆಯನ್ನು ನಿಭಾಯಿಸುತ್ತಿರುವ ಜಲಮಂಡಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ವಹಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಫೆಬ್ರವರಿ 27 ರಿಂದ ಮಾರ್ಚ್ 3 ರವರೆಗೆ ಪುಸ್ತಕ ಮೇಳ | ಮಾರ್ಚ್ 2 ರವರೆಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ

ವಿಧಾನಸೌಧದ ಮುಂಭಾಗದಲ್ಲಿ ಪುಸ್ತಕ ಮೇಳ: ಯು.ಟಿ.ಖಾದರ್

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ವಿಧಾನಸೌಧ ಮುಂಭಾಗದಲ್ಲಿ ಪ್ರಪ್ರಥಮ ಬಾರಿಗೆ ಫೆಬ್ರವರಿ 27 ರಿಂದ ಮಾರ್ಚ್ 3 ರವರೆಗೆ ಪುಸ್ತಕ ಮೇಳ ಆಯೋಜಿಸಲಾಗುತ್ತಿದ್ದು, ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ.ಖಾದರ್ ತಿಳಿಸಿದರು.

ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರವರಿ 27 ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಸ್ತಕ ಮೇಳ ಉದ್ಘಾಟನೆ ಮಾಡಲಿದ್ದು, ಈ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ, ಸಚಿವರು, ಶಾಸಕರು, ರಾಜ್ಯದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ ಹಾಗೂ ಗೋವಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದಾಮೋದರ್ ಮೌಜೊ ಅವರು ಭಾಗವಹಿಸಲಿದ್ದಾರೆ. ಪ್ರತಿ ದಿನ ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಮಾರ್ಚ್ 2 ರಂದು ಸಂಜೆ ಸಾಧುಕೋಕಿಲ ಅವರಿಂದ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಪ್ರತಿ ದಿನ ಕವಿಗೋಷ್ಠಿಗಳು ನಡೆಯಲಿವೆ ಎಂದರು.

ಮಾರ್ಚ್ 1 ರಂದು ಬೆಳಗ್ಗೆ 11 ಕ್ಕೆ ಅ.ನ.ಯಲ್ಲಪ್ಪರೆಡ್ಡಿ, ಸುರೇಶ್ ಹೆಬ್ಳಿಕರ್, ಶಿವಾನಂದ ಕಳವೆ ಅವರಿಂದ ಪರಿಸರ ಅಳಿವು–ಉಳಿವು ಕುರಿತು ಡಾ.ನ್ಯಾ.ನಾಗಮೋಹನದಾಸ್, ಕೆ.ಪಿ.ಬಾಲಸುಬ್ರಮಣ್ಯ ಕಂಜರ್ಪಣೆ, ಶಶಿಕಲ ಗುರುಪುರ್ ಅವರಿಂದ ಸಂವಿಧಾನ ಹಿರಿಮೆ ಗರಿಮೆ ಹಾಗೂ ಅರಿವು ಕುರಿತು, ಮಧ್ಯಾಹ್ನ 3 ಗಂಟೆಗೆ ಜೋಸೆಫ್ ಹೂವರ್, ಮಾಲತಿ ಹೊಳ್ಳ, ಪೊನ್ನಪ್ಪ, ಅರ್ಜುನ್ ದೇವಯ್ಯ, ಚಂದ್ರಮೌಳಿ ಕಣವಿ ಅವರಿಂದ ಕ್ರೀಡೆ ಮತ್ತು ಸಾಹಿತ್ಯ ಕುರಿತು, ಡಾ.ಅನಂತಪ್ರಭು, ಡಾ.ಪ್ರಣಬ್ ಮೊಹಾಂತಿ, ಡಾ.ರಮೇಶ್ ನಿಂಬೆಮರದಳ್ಳಿ ಅವರಿಂದ ಕೃತಕ ಬುದ್ಧಿಮತ್ತೆ / ಸೈಬರ್ ಸೆಕ್ಯುರಿಟಿ ಕುರಿತು ಸಂವಾದ ನಡೆಯಲಿದೆ ಎಂದು ವಿವರಿಸಿದರು.

ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿದರು.

ಮಾರ್ಚ್ 2 ರ ಬೆಳಗ್ಗೆ 11 ಬಾನು ಮುಷ್ತಾಕ್, ಡಾ.ಮಹೇಶ ಜೋಶಿ, ಡಾ.ಡಿ.ಡೊಮಿನಿಕ್ ಅವರಿಂದ ಕನ್ನಡ ಸಾಹಿತ್ಯದಲ್ಲಿ ಸರ್ವಸಮಭಾವದ ಚಿಂತನೆಗಳು ಕುರಿತು ಉದಯಗಾಂವ್ಕರ್, ಪ್ರೊ.ಬಿಳಿಗೆರೆ ಕೃಷ್ಣಮೂರ್ತಿ, ಲಲಿತಾ ಹೊಸಪೇಟಿ ಅವರಿಂದ ಮಕ್ಕಳ ಸಾಹಿತ್ಯ ಕುರಿತು ಸಂವಾದ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 1 ರಿಂದ 2.30 ಗಂಟೆಯವರೆಗೆ ಡಾ. ಮಹಾಂತೇಶ್ ರಾಮಣ್ಣವರ್, ಡಾ.ಆಶಿಶ್ ಸೀತನಾಡಿ, ಡಾ.ಸುನೀತಾರಾವ್ ಅವರಿಂದ ಅಂಗಾಂಗ ದಾನದ ಅರಿವು ಕುರಿತು, 3 ಗಂಟೆಗೆ ದೊಡ್ಡರಂಗೇಗೌಡ, ಟಿ.ಎನ್.ಸೀತಾರಾಮ್, ಪ್ರೊ.ಎನ್.ಎಸ್. ಶ್ರೀಧರಮೂರ್ತಿ, ಪಿ.ಶೇಷಾದ್ರಿ, ಅವರಿಂದ ಸಾಹಿತ್ಯ ಮತ್ತು ಚಲನಚಿತ್ರ ಕುರಿತು ನರಹಳ್ಳಿ ಬಾಲಸುಬ್ರಮಣ್ಯಂ, ಎಚ್.ಎಲ್.ಪುಷ್ಪ, ಡಾ.ಸಿದ್ದನಗೌಡ ಪಾಟೀಲ್ ಅವರಿಂದ ಓದಿನ ಸುಖ ಕುರಿತು ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ವಿಧಾಸೌಧದ ಸಭಾಂಗಣ ವೀಕ್ಷಣೆಗೆ ಅವಕಾಶ

ಪ್ರತಿ ಭಾಷಾ ಅಕಾಡೆಮಿಗಳಿಗೆ ಪ್ರತ್ಯೇಕ ಕೌಂಟರ್ ನೀಡಲಾಗುವುದು. ಹೊಸದಾಗಿ ಪುಸ್ತಕಗಳನ್ನು ಬರೆದವರಿಗೆ ಹೊಸ ಸ್ಟಾಲ್ ನೀಡಲಾಗುವುದು. ಪುಸ್ತಕ ಮೇಳ ವೀಕ್ಷಿಸಲು ಬರುವ ಶಾಲಾ ವಿದ್ಯಾರ್ಥಿಗಳಿಗೆ ವಿಧಾಸೌಧದ ಸಭಾಂಗಣ ವೀಕ್ಷಣೆಗೂ ಸಹ ಅವಕಾಶ ಕಲ್ಪಿಸಲಾಗುವುದು. ಶಾಸಕರು ತಮ್ಮ ನಿಧಿಯಿಂದ 2 ಲಕ್ಷ ರು.ಗಳವರೆಗೆ ಪುಸ್ತಕಗಳನ್ನು ಖರೀದಿಸಿ ತಮ್ಮ ಕ್ಷೇತ್ರದ ಸಾರ್ವಜನಿಕ ಗ್ರಂಥಾಲಯ ಹಾಗೂ ಶಾಲೆಗಳಿಗೆ ಪೂರೈಸಲು ಅವಕಾಶವಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯುವಜನರನ್ನು ಸಜ್ಜುಗೊಳಿಸಲು ಅಗತ್ಯವಿರುವ ಪಠ್ಯಪುಸ್ತಕಗಳು ಇರಲಿವೆ. ಪುಸ್ತಕ ಖರೀದಿದಾರರಿಗೆ ರಿಯಾಯಿತಿ ದರದಲ್ಲಿ ಪುಸ್ತಕ ನೀಡಲು ಸೂಚನೆ ನೀಡಲಾಗುವುದು. ಮಾರ್ಚ್ 3 ರಂದು ಶಾಸಕರುಗಳಿಗೆ ಸಚಿವಾಲಯದ ಸಾಹಿತ್ಯಾಸಕ್ತರು, ಪ್ರಕಾಶಕರು, ಓದುಗರು, ಶಾಸಕರು, ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳು ಒಂದೆಡೆ ಬೃಹತ್ ಪುಸ್ತಕ ಮೇಳಕ್ಕೆ ಸಾಕ್ಷಿಯಾಗಲಿದ್ದಾರೆ. ಸುಮಾರು 150 ಪುಸ್ತಕ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಅದರಲ್ಲಿ 25 ಸರಕಾರಿ ಸ್ಟಾಲ್‌ಗಳು ಹಾಗೂ ಉಳಿದಂತೆ 125 ಸ್ಟಾಲ್‌ಗಳನ್ನು ಖಾಸಗಿಯವರಿಗೆ ಒದಗಿಸಲಾಗುವುದು ಎಂದರು.

ಸಮಕಾಲೀನ ಕ್ಷೇತ್ರದ ಸವಾಲುಗಳ ಸಂವಾದ

ವಿವಿಧ ಲೇಖಕರ ಪುಸ್ತಕಗಳ ಬಿಡುಗಡೆಗೆ ಅವಕಾಶ ಕಲ್ಪಿಸಲಾಗಿದ್ದು, ಹಲವು ವಿಷಯಗಳ ಕುರಿತು ಸಂವಾದ ಸಹ ನಡೆಯಲಿದೆ. ಫೆ.28 ರಂದು ಬೆಳಗ್ಗೆ 11ಕ್ಕೆ 'ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಜವಾಬ್ದಾರಿ' ವಿಷಯ ಕುರಿತು ರವೀಂದ್ರ ಭಟ್, ಪ್ರಮೋದ್ ಶಾಸ್ತ್ರಿ, ಹರಿಪ್ರಸಾದ್ ಅವರಿಂದ ಸಂವಾದ. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸಾವಣ್ಣ ಪ್ರಕಾಶನದ ಪ್ರಕಾಶಕರಾದ ಕರೀಂ ಹಾಗೂ ಆಕೃತಿ ಪುಸ್ತಕ ಸಂಸ್ಥೆಯ ಬಿ.ಎಂ.ಗುರುಪ್ರಸಾದ್ ಅವರು 'ಸಮಕಾಲೀನ ಪ್ರಕಾಶನ ಕ್ಷೇತ್ರದ ಸವಾಲುಗಳು' ಕುರಿತು ಸಂವಾದ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕ್ಯಾಪ್ಟನ್ ಗೋಪಿನಾಥ್, ಬಡಗಲಪುರ ನಾಗೇಂದ್ರ, ಚಿದಾನಂದ ಪಟೇಲ್ ಅವರಿಂದ 'ನಾಯಕತ್ವ ಇಂದು ಮತ್ತು ನಾಳೆ' ಕುರಿತು ಕೃಷಿ ಸಂಶೋಧಕರಾದ ಕೆ.ಎನ್.ಗಣೇಶಯ್ಯ, ಶ್ರೀಮತಿ ಹರಿಪ್ರಸಾದ್, ಕಿರಣ್‌ಕುಮಾರ್ ಅವರಿಂದ 'ನೆಲದ ಮೂಲ ದಿಂದ ಅಂತರಿಕ್ಷದವರೆಗೆ' ಕುರಿತು ಸಂವಾದ ನಡೆಯಲಿದೆ.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅನ್ವೇಷಣೆ ಕೇಂದ್ರದ ಉದ್ಘಾಟನೆ

ಅನ್ವೇಷಣೆ ಅನುಷ್ಠಾನದಲ್ಲಿ ಭಾರತ ಹಿಂದಿದೆ: ಆಶುತೋಷ್ ದತ್ತ ಶರ್ಮ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ನವೀನ ತಂತ್ರಜ್ಞಾನದ ಅನ್ವೇಷಣೆ ಕುರಿತಂತೆ ಸಂಶೋಧನಾ ಪ್ರಬಂಧಗಳನ್ನು ವಿಶ್ವವಿಖ್ಯಾತ ತಾಂತ್ರಿಕ ನಿಯತಕಾಲಿಕೆಗಳಲ್ಲಿ ಪ್ರಕಟಿಸುವಲ್ಲಿ ಇಡೀ ವಿಶ್ವದಲ್ಲಿಯೇ ಭಾರತ ಮೂರನೇ ಸ್ಥಾನದಲ್ಲಿದೆ. ಆದರೆ ಅನ್ವೇಷಣೆಗಳನ್ನು ಅನುಷ್ಠಾನಗೊಳಿಸಿ ಸಂಬಂಧಿತ ಉತ್ಪನ್ನ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಹೊರತರುವಲ್ಲಿ ಬಹಳ ಹಿಂದಿದೆ ಎಂದು ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನೂತನ ಸಹ ಅನ್ವೇಷಣೆ ಕೇಂದ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಐ ಹಬ್ ಫೌಂಡೇಶನ್ ಫಾರ್ ಕೊಬೋಟಿಕ್ಸ್‌ನ ಸಿಇಒ ಆಶುತೋಷ್ ದತ್ತ ಶರ್ಮ ಅಭಿಪ್ರಾಯ ಪಟ್ಟಿದ್ದಾರೆ. ಈ ಸಹ ಅನ್ವೇಷಣಾ ಕೇಂದ್ರಗಳು ಪ್ರಮುಖವಾಗಿ ವೈದ್ಯಕೀಯ, ಕೃಷಿ, ಕೈಗಾರಿಕೆ ಹಾಗೂ ರಕ್ಷಣೆ ಸ್ಟಾರ್ಟ್‌ಅಪ್ ಸಂಸ್ಥಾಪನೆಗೆ ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡಲಿವೆ. ಅಲ್ಲದೆ ಕೌಶಲ್ಯವರ್ಧನೆಗೆ ಮತ್ತು ಅಂತಾರಾಷ್ಟ್ರೀಯ ಒಡಂಬಡಿಕೆಗಳಿಗೆ ವೇದಿಕೆ ಕಲ್ಪಿಸಿವೆ ಎಂದರು.

ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಮೈಗೂಡಿಸಿ: ನಿಟ್ಟೆ ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ ಮಾತನಾಡಿ, ಶಿಕ್ಷಕರು ಕೇವಲ ಜ್ಞಾನದ ಬೋಧನೆ ಮಾತ್ರ ಮಾಡದೆ, ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಅಳವಡಿಸಲು ಸ್ವತಃ ತಾವೇ ಉದ್ಯಮಶೀಲತೆ ಮೈಗೂಡಿಸಿಕೊಳ್ಳಬೇಕು. ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಸಹ ಅನ್ವೇಷಣಾ ಕೇಂದ್ರ ವಿದ್ಯಾರ್ಥಿಗಳ ಹಾಗೂ ತಂತ್ರಜ್ಞಾನದ ಹೊಸ ಪದವೀಧರರ ಔದ್ಯಮಿಕ ಕನಸುಗಳನ್ನು ನನಸಾಗಿಸಲು ವೇದಿಕೆ ಕಲ್ಪಿಸಲು ಶ್ರಮಿಸಲಿದೆ ಎಂದು ಆಶ್ವಾಸನೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಎಚ್.ಸಿ. ನಾಗರಾಜ್, ಅಮೆರಿಕಾದ ಪೆನ್ ಸ್ಟೇಟ್ ಯೂನಿವರ್ಸಿಟಿ ಅಂತಾರಾಷ್ಟ್ರೀಯ ವ್ಯವಹಾರಗಳ ನಿರ್ದೇಶಕ ಡಾ.ಓಮಿದ್ ಅನ್ಸಾರಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಐ ಹಬ್ ಫೌಂಡೇಶನ್ ಫಾರ್ ಕೊಬೋಟಿಕ್ಸ್‌ನ ಕ್ಯಾಂಪಸ್ ಸಲಹೆಗಾರ ಡಾ.ಆಕಾಶ್ ಸೊಂದಿ, ಡಾ.ಸಂದೀಪ್ ಶಾಸ್ತ್ರಿ, ಆಡಳಿತಾಧಿಕಾರಿ ರೋಹಿತ್ ಪೂಂಜ, ಸಂಸ್ಥೆಯ ಡೀನ್‌ಗಳು, ವಿಭಾಗಗಳ ಮುಖ್ಯಸ್ಥರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಿಟ್ಟೆ ಮೀನಾಕ್ಷಿ ವಿವಿಯ ಸಹ ಅನ್ವೇಷಣೆ ಕೇಂದ್ರವನ್ನು ಐ ಹಬ್ ಫೌಂಡೇಶನ್ ಫಾರ್ ಕೊಬೋಟಿಕ್ಸ್‌ನ ಸಿಇಒ ಆಶುತೋಷ್ ದತ್ತ ಶರ್ಮ ಉದ್ಘಾಟಿಸಿದರು.

ಕಿರುಕುಳ ಆರೋಪ: ಬಿಬಿಎಂಪಿ ಸಿಬ್ಬಂದಿ ಆತ್ಮಹತ್ಯೆ

ಬೆಂಗಳೂರು: ಬಿಬಿಎಂಪಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಚಾಮರಾಜಪೇಟೆ ಯಲ್ಲಿ ನಡೆದಿದೆ. ನಂದಿನಿ (32) ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಭಾನುವಾರ ರಾತ್ರಿ 9:30ರ ವೇಳೆಗೆ ಘಟನೆ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದು ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದನ್ನು ನೋಡಿ ಪೊಲೀಸರು ಬರುವ ಮುನ್ನವೇ ಕುಟುಂಬಸ್ಥರು ಮೃತದೇಹ ಕೆಳಗೆ ಇಳಿಸಿದ್ದಾರೆ.

ಬಿಬಿಎಂಪಿ ಕಚೇರಿಯಲ್ಲಿ ಕೆಲಸ ಮಾಡಿಕೊಂಡಿದ್ದ ನಂದಿನಿ, 8 ವರ್ಷಗಳ ಹಿಂದೆ ಸೂರ್ಯ ಎಂಬಾತನೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ದಂಪತಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇದೆ.

ನಂದಿನಿಗೆ ವ್ಯಕ್ತಿಯೊಬ್ಬ ಆಗಾಗ್ಗೆ ಫೋನ್ ಮಾಡಿ ಕಿರುಕುಳ ನೀಡುತ್ತಿದ್ದ ಎಂಬ ಆರೋಪ ಕೇಳಿಬಂದಿದೆ. ಇದರಿಂದಾಗಿ ಪತಿ–ಪತ್ನಿ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು.

ವ್ಯಕ್ತಿಯ ನಿರಂತರ ಕಿರುಕುಳದಿಂದ ಮನನೊಂದಿದ್ದ ನಂದಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮಹಿಳೆಗೆ ಫೋನ್ ಮಾಡಿ ಮಾನಸಿಕ ಕಿರುಕುಳ ನೀಡುತ್ತಿದ್ದ ವ್ಯಕ್ತಿಯ ಬಗ್ಗೆ ಚಾಮರಾಜಪೇಟೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೊಮ್ಮನಹಳ್ಳಿ ಠಾಣೆಯ ಪೇದೆ ಸೇರಿ ಇಬ್ಬರ ಬಂಧನ

ದೂರು ನೀಡಲು ಬಂದ ಸಂತ್ರಸ್ತೆ ಮೇಲೆ ಅತ್ಯಾಚಾರ

ಬೆಂಗಳೂರು: ದೂರು ನೀಡಲು ಠಾಣೆಗೆ ಹೋದ ಅತ್ಯಾಚಾರಕ್ಕೊಳಗಾದ ಬಾಲಕಿಗೆ ನೆರವಾಗುವ ಸೋಗಿನಲ್ಲಿ ರೇಪ್ ಮಾಡಿದ ಆರೋಪದ ಮೇಲೆ ಕಾನ್ಸ್‌ಟೇಬಲ್ ಸೇರಿ ಇಬ್ಬರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಪ್ರಾಪ್ತೆಯ ತಾಯಿ ನೀಡಿದ ದೂರಿನ ಮೇರೆಗೆ ಬೊಮ್ಮನಹಳ್ಳಿ ಠಾಣೆಯಲ್ಲಿ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅರುಣ್ ಹಾಗೂ ಸಂತ್ರಸ್ತೆಯ ಸ್ನೇಹಿತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 17 ವರ್ಷದ ಸಂತ್ರಸ್ತೆ ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನೆಲೆಸಿದ್ದಳು. ಈ ವೇಳೆ ನೆರೆಮನೆ ನಿವಾಸಿ, ವಿವಾಹಿತನಾಗಿದ್ದ ವ್ಯಕ್ತಿಯ ಪರಿಚಯ ವಾಗಿದೆ. ಆರೋಪಿಯು ಪ್ರೀತಿಸಿ ಮದುವೆ ಮಾಡಿಕೊಳ್ಳುವುದಾಗಿ ಪುಸಲಾಯಿಸಿ, ಬಾಲಕಿಯ ಮೇಲೆ ನಿರಂತರ ಅತ್ಯಾಚಾರವೆಸಗಿ ಹಲ್ಲೆ ಮಾಡಿದ್ದಾನೆ. ಈ ಬಗ್ಗೆ ನೊಂದ ಬಾಲಕಿ ತಾಯಿ ಬಳಿ ಹೇಳಿಕೊಂಡಿದ್ದಳು ಎಂದು ಬೊಮ್ಮನಹಳ್ಳಿ ಪೊಲೀಸರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನ್ಯಾಯ ಕೊಡಿಸುವುದಾಗಿ ವಂಚನೆ: ಆದರೆ, ದೂರು ನೀಡಲು ಹೋದ ಸಂತ್ರಸ್ತೆಯನ್ನು ಕಾನ್ಸ್‌ಟೇಬಲ್ ಅರುಣ್ ಪರಿಚಯಿಸಿಕೊಂಡು ನ್ಯಾಯ ಕೊಡಿಸುವುದಾಗಿ ಭರವಸೆ ನೀಡಿದ್ದರು. ಅಲ್ಲದೆ, ಕೆಲಸ ಕೊಡಿಸುವುದಾಗಿ ನಂಬಿಸಿದ್ದ. ಕಳೆದ ಡಿಸೆಂಬರ್‌ನಲ್ಲಿ ಬಿಟಿಎಂ ಲೇಔಟ್‌ನ ಓಯೋ ರೂಮಿಗೆ ಬಾಲಕಿಯನ್ನು ಕರೆಸಿಕೊಂಡ ಕಾನ್ಸ್‌ಟೇಬಲ್ ಮದ್ಯದಲ್ಲಿ ಪ್ರಜ್ಞೆ ತಪ್ಪುವ ಔಷಧಿ ಬೆರೆಸಿ ಕುಡಿಸಿ ಆಕೆ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂದು ದೂರಲಾಗಿದೆ. ಅಲ್ಲದೆ, ಈ ಬಗ್ಗೆ ಯಾರಿಗಾದರೂ ತಿಳಿಸಿದರೆ ತನ್ನ ಬಳಿ ಖಾಸಗಿ ವಿಡಿಯೋಗಳಿದ್ದು, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದಾಗಿ ಸಂತ್ರಸ್ತೆಯ ತಾಯಿ ದೂರಿನಲ್ಲಿ ಆರೋಪಿಸಿದ್ದಾರೆ. ಇಬ್ಬರ ವಿರುದ್ಧ ಪೋಕ್ಸೊ ಹಾಗೂ ಬಿಎನ್‌ಎಸ್ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡಿರುವ ಮೈಕೋ ಲೇಔಟ್ ಪೊಲೀಸರು ಕೃತ್ಯ ನಡೆದ ಸ್ಥಳ ಆಧರಿಸಿ ಬೊಮ್ಮನಹಳ್ಳಿ ಠಾಣೆಗೆ ಪ್ರಕರಣ ವರ್ಗಾಯಿಸಿದ್ದರು. ಈ ಸಂಬಂಧ ತನಿಖೆ ನಡೆಸಿ, ಇಬ್ಬರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿರುವುದಾಗಿ ಬೊಮ್ಮನಹಳ್ಳಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಾಣಿವಧೆ, ಮಾಂಸ ಮಾರಾಟ ನಿಷೇಧ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಫೆ.26ರಂದು ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಪ್ರಾಣಿವಧೆ ಹಾಗೂ ಮಾಂಸ ಮಾರಾಟವನ್ನು ನಿಷೇಧಿಸಿದೆ. ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಚಾಕುವಿನಿಂದ ಇರಿದು ವ್ಯಕ್ತಿ ಕೊಲೆ

ಬೆಂಗಳೂರು: ಕ್ಷುಲ್ಲಕ ವಿಚಾರಕ್ಕೆ ಜಗಳವಾಡಿ ಇಸ್ತ್ರಿ ಮಾಡುವ ವ್ಯಕ್ತಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ ಘಟನೆ ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಅನಂತಪುರದ ಸುಬ್ರಮಣಿ (23) ಕೊಲೆಯಾದವರು. ಸುಬ್ರಮಣಿ ಭಾನುವಾರ ರಾತ್ರಿ ತನ್ನ ಸ್ನೇಹಿತರೊಂದಿಗೆ ಮನೆಗೆ ಸಮೀಪದ ಬೇರೆ ಮನೆಯೊಂದರ ಬಳಿ ಇಬ್ಬರನ್ನು ಹುಡುಕಿಕೊಂಡು ಹೋದಾಗ ಅವರು ಇಲ್ಲವೆಂದು ಹೇಳಿದ್ದಾರೆ. ಆ ವೇಳೆ ಸ್ಥಳದಲ್ಲಿ ಇದ್ದವರು ಹಾಗೂ ಇವರ ಮಧ್ಯೆ ಜಗಳವಾಗಿದ್ದು, ಆ ವೇಳೆ ಚಾಕುವಿನಿಂದ ಸುಬ್ರಮಣಿ ಅವರಿಗೆ ಚಾಕುವಿನಿಂದ ಎದೆ, ಹೊಟ್ಟೆ, ಇನ್ನಿತರ ಕಡೆ ಇರಿದು ಆರೋಪಿಗಳು ಪರಾರಿಯಾ ಗಿದ್ದಾರೆ. ಗಂಭೀರ ಗಾಯಗೊಂಡಿದ್ದ ಸುಬ್ರಮಣಿ ಅವರು ಚಿಕಿತ್ಸೆ ಫಲಿಸದೆ ಸೋಮವಾರ ಬೆಳಗಿನಜಾವ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಯಲಹಂಕ ನ್ಯೂಟೌನ್ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

standard chartered ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ಇ–ಹರಾಜು ಮಾರಾಟ ಪ್ರಕಟಣೆಯ ಸಾರ್ವಜನಿಕ ಸೂಚನೆ

ಕೆಳಸಹಿದಾರರು, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ತನ್ನ ವ್ಯವಹಾರವನ್ನು ನಂ. 26–27, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001 (ಇನ್ನು ಮುಂದೆ ಬ್ಯಾಂಕ್ ಎಂದು ಕರೆಯಲಾಗುವುದು) ಇಲ್ಲಿ ಹೊಂದಿದೆ.

ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 (ಕಾಯಿದೆ) ಮತ್ತು ಸೆಕ್ಷನ್ 13(2)ರ ನಿಯಮ 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ, 2002 (ನಿಯಮಗಳು)ರ ಅಡಿ ಯಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 03.11.2021ರಂದು ಈ ಕೆಳಗಿನ ಸಾಲಗಾರರಾದ ಎಸ್. ಪಿ. ಶ್ರೀಶ ಮತ್ತು ಶ್ರೀಮತಿ ಪದ್ಮಜ್ಯೋತಿ ಶ್ರೀಶ ವಾಸ: ನಂ.31, ಎಸ್ 1, 1ನೇ ಮುಖ್ಯ ರಸ್ತೆ, ಎಸ್‌ಬಿಎಂ ಮೇಲ್ಬಾಗ, ವಿನಾಯಕ ಲೇಔಟ್, ವಿಜಯ ನಗರ, ಬೆಂಗಳೂರು–560104 (ಸಾಲಗರರು / ಸಹ–ಸಾಲಗಾರರು) ಇವರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸಿನಲ್ಲಿ ತಿಳಿಸಿರುವ ಮೊತ್ತ ರೂ.7,23,88,589.14 (ಏಳು ಕೋಟಿ ಇಪ್ಪತ್ಮೂರು ಲಕ್ಷ ಎಂಭತ್ತೆಂಟು ಸಾವಿರದ ಐನೂರ ಎಂಭತ್ತೊಂಬತ್ತು ರೂಪಾಯಿಗಳು ಹಾಗು ಪೈಸೆ ಹದಿನಾಲ್ಕು ಮಾತ್ರ) ವನ್ನು ಹಾಗೂ ಅದರೊಂದಿಗೆ ಬಾಕಿ ಹಣ ಸಂಪೂರ್ಣವಾಗಿ ಮರುಪಾವತಿಯಾಗುವವರೆಗೆ ಬಡ್ಡಿ ಮತ್ತು ಪೀನಲ್ ಬಡ್ಡಿ ಮತ್ತು /ಅಥವಾ ಇತರೆ ದರಗಳನ್ನು ಈ ನೋಟೀಸ್ ನೀಡಿದ 60ದಿನಗಳ ಒಳಗೆ ಮರುಪಾವತಿಸುವಂತೆ ಸೂಚನೆ ನೀಡಲಾಗಿತ್ತು. ಒಂದು ವೇಳೆ ಪಾವತಿಸಲು ವಿಫಲವಾದರೆ, ಬ್ಯಾಂಕ್ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲಿದೆ.

ಸಾಲಗಾರ/ರು ಹಣವನ್ನು ಮರುಪಾವತಿಸಲು ವಿಫಲರಾದುದರಿಂದ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೆಳಸಹಿದಾರರು ಬ್ಯಾಂಕ್‌ಗೆ ಅಡಮಾನ ಮಾಡಿರುವ ಈ ಕೆಳಗಿನ ಸ್ಥಿರಾಸ್ತಿಯನ್ನು ಬರಬೇಕಾದ ಬಾಕಿ ಹಣಕ್ಕಾಗಿ ಸೆಕ್ಷನ್ 13(4)ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ 29.08.2022 ರಂದು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಇದೀಗ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಹೇಳಲಾಗುವ ಆಸ್ತಿಯ ಇ–ಹರಾಜನ್ನು 18.03.2025ರಂದು ಇ–ಹರಾಜು ಫ್ಲ್ಯಾಟ್‌ಫಾರಂ ಮೂಲಕ ಒದಗಿಸಲಾದ ವೆಬ್‌ಪೋರ್ಟಲ್ www.matexauctions.com ಮೂಲಕ ನಡೆಸಲಾಗುವುದು ಹಾಗೂ ಬಿಡ್ಡಿಂಗ್ ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್ ಮೂಲಕ ಈ ಕೆಳಗೆ ನೀಡಲಾದ ನಿಯಮ ಮತ್ತು ನಿಬಂಧನೆಗಳ ಅನುಸಾರ ನಡೆಯಲಿದೆ.

ಆಸ್ತಿಯ ಮೀಸಲು ಬೆಲೆ: ರೂ.7,20,00,000/– (ಏಳು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ). ಅರ್ನೆಸ್ಟ್ ಠೇವಣಿ ಹಣ: ರೂ.7200000/– (ಎಪ್ಪತ್ತೆರಡು ಲಕ್ಷ ರೂಪಾಯಿಗಳು ಮಾತ್ರ)

ಬಿಡ್ ಆಹ್ವಾನದ ಮೂಲಕ ನಡೆಯುವ ಬಹಿರಂಗ ಹರಾಜಿನ ವಿಧಾನ, ನಿಯಮ ಮತ್ತು ನಿಬಂಧನೆಗಳು.

1. ನಿಯಮ ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಟೆಂಡರ್/ಬಿಡ್ ಅರ್ಜಿಗಳನ್ನು ಆನ್‌ಲೈನ್ ಜಾಲತಾಣ http://www.matexauctions.com ನಿಂದ ಪಡೆದುಕೊಳ್ಳಬಹುದು. ಟೆಂಡರ್ ಅರ್ಜಿ ಹಾಗೂ ನಿಯಮ ಮತ್ತು ನಿಬಂಧನೆಗಳು ಜಾಲತಾಣದಲ್ಲಿ 25ನೇ ಫೆಬ್ರವರಿ 2025ರಿಂದ 17 ಮಾರ್ಚ್ 2025ರಂದು ಸಂಜೆ 5.00 ಗಂಟೆಯವರೆಗೆ ಲಭ್ಯವಿರುತ್ತದೆ. ಟೆಂಡರ್/ಬಿಡ್ ಗಳನ್ನು ಅಗತ್ಯವಿರುವ ಎಲ್ಲಾ ದಾಖಲೆ ಹಾಗೂ ಇಎಂಡಿ ಮೊತ್ತ ರೂ.72,00,000/– ನ್ನು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಪರವಾಗಿ ಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮಾರ್ಟ್‌ಗೇಜ್ ಸಸ್ಪೆನ್ಸ್ ಖಾತಾ ನಂ. 42705095742; IFSC: SCBL0036078 ಕ್ಕೆ ಪಾವತಿಮಾಡಿರುವುದಕ್ಕೆ ಸಾಕ್ಷಿ ಸಹಿತ ಸಲ್ಲಿಸಬೇಕು. ಅರ್ನೆಸ್ಟ್ ಠೇವಣಿ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
2. ಅರ್ನೆಸ್ಟ್ ಠೇವಣಿ ಹಣದೊಂದಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 17ನೇ ಮಾರ್ಚ್ 2025 ಸಂಜೆ 5.00 ಗಂಟೆ
3. ಬಿಡ್ ಅರ್ಜಿಯ ಜೊತೆ ಆತ/ಅವಳು ತನ್ನ ಗುರುತಿನ ಚೀಟಿ, ವಾಸದ ಪುರಾವೆಗಳಾದಂತಹ ಪಾಸ್‌ಪೋರ್ಟ್, ಚುನಾವಣಾ ಗುರುತಿನ ಚೀಟಿ, ರೇಷನ್ ಕಾರ್ಡ್, ಚಾಲನಾ ಪರವಾನಿಗೆ ಇತ್ಯಾದಿಗಳ ಪ್ರತಿ ಹಾಗೂ ಭಾರತೀಯ ಆದಾಯ ತೆರಿಗೆ ಇಲಾಖೆಯಿಂದ ನೀಡಲಾದ ಪ್ಯಾನ್ ಕಾರ್ಡ್‌ನ ಪ್ರತಿಯನ್ನು ಸಲ್ಲಿಸಬೇಕು.
4. ಬಿಡ್ಡುದಾರರು ಸಂಬಂಧಿಸಿದ ಪ್ರಾಧಿಕಾರದಿಂದ ನೀಡಲ್ಪಟ್ಟ ಸೂಕ್ತವಾದ ಡಿಜಿಟಲ್ ಸಹಿ ಪ್ರಮಾಣಪತ್ರ ಹಾಗೂ ಇ–ಮೇಲ್ ವಿಳಾಸವನ್ನು ಹೊಂದಿರಬೇಕು (ಇ–ಮೇಲ್ ವಿಳಾಸವು ಆಸಕ್ತ ಬಿಡ್ಡುದಾರರಿಗೆ ಅತೀ ಅಗತ್ಯವಾಗಿದ್ದು ಎಲ್ಲಾ ಮಾಹಿತಿಗಳನ್ನು ಮತ್ತು ಐಡಿ ಹಾಗು ಪಾಸ್‌ವರ್ಡ್ ಹಂಚಿಕೆ ಮಾಹಿತಿಯನ್ನು ಮೆ॥ ಮೇಟೆಕ್ಸ್ ನೆಟ್ ಪ್ರೈ.ಲಿ. ಇ–ಮೇಲ್ ಮೂಲಕವೇ ನಡೆಸಲಿದೆ.
5. ಹರಾಜಿನ ದಿನಾಂಕದಂದು ಸ್ವೀಕೃತವಾದ ಎಲ್ಲಾ ಬಿಡ್‌ಗಳನ್ನು ತೆರೆದು, ಅದರಲ್ಲಿ ಮೀಸಲು ಬೆಲೆಗಿಂತ ಅತೀ ಹೆಚ್ಚು ಬಿಡ್ ಮಾಡಿರುವ ಬಿಡ್‌ದಾರರ ಬಿಡ್‌ನ್ನು ಬ್ಯಾಂಕ್ ಸ್ವೀಕರಿಸಲಿದೆ. ಯಾವುದೇ ಸಂದರ್ಭದಲ್ಲೂ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. ಆದರೂ ಬಿಡ್‌ದಾರರು ಹರಾಜಿನ ಸಮಯದಲ್ಲಿ ಹಾಜರಿದ್ದು ತಮ್ಮ ಬಿಡ್ ಮೌಲ್ಯದ ಕನಿಷ್ಠ ಮೊತ್ತವನ್ನು ರೂ.50,000/– ವರೆಗೆ ಹೆಚ್ಚಿಸಬಹುದು ಹಾಗೂ ಇದರಲ್ಲಿ ಅತೀ ಹೆಚ್ಚು ಮೊತ್ತವನ್ನು ಬ್ಯಾಂಕ್ ಸ್ವೀಕರಿಸುವ ಅಧಿಕಾರವನ್ನು ಹೊಂದಿದೆ. ಪ್ರತೀ ಬಿಡ್‌ನ ನಂತರ ಮತ್ತೊಂದು ಬಿಡ್ ನ ಮಧ್ಯೆ 5 ನಿಮಿಷಗಳ ಅಂತರವಿರುವುದು. ಹರಾಜು 120 ನಿಮಿಷಗಳ ಕಾಲ ಅಂದರೆ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ. ಒಂದು ವೇಳೆ ಇ–ಹರಾಜು ಮುಕ್ತಾಯದ 5 ನಿಮಿಷಗಳ ಮೊದಲು ಬಿಡ್ ಸ್ವೀಕೃತವಾದರೆ ಹರಾಜಿನ ಮುಕ್ತಾಯವು ಸ್ವಯಂಚಾಲಿತವಾಗಿ 5 ನಿಮಿಷಗಳ ಕಾಲ ವಿಸ್ತರಣೆಯಾಗಲಿದೆ.
6. ತದನಂತರ ಬ್ಯಾಂಕ್ ಮಾರಾಟ ದೃಢೀಕರಿಸಿದ ಮೇಲೆ ಇಎಂಡಿಗೆ ಹೊಂದಿಕೆಯಾಗುವಂತೆ ಖರೀದಿದಾರರು 25% (ಶೇಕಡಾ ಇಪ್ಪತ್ತೈದು) ಮಾರಾಟ ಬೆಲೆಯನ್ನು ಕೂಡಲೇ ಕೆಳಸಹಿದಾರರಿಗೆ ಪಾವತಿಸಬೇಕು. ಬಾಕಿ ಉಳಿದ ಮೊತ್ತವನ್ನು ಖರೀದಿದಾರರು ಕೆಳಸಹಿದಾರರಿಗೆ ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗಾಗಿ ಪಾವತಿಸಬೇಕು ಅಥವಾ ಒಂದು ವೇಳೆ ಸಮಯಾವಕಾಶ ವಿಸ್ತರಿಸಬೇಕಾದಲ್ಲಿ ಅದನ್ನು ಲಿಖಿತ ರೂಪದಲ್ಲಿ ಇಬ್ಬರ ಮಧ್ಯೆ ಒಪ್ಪಂದ ಮಾಡಿಕೊಳ್ಳಬೇಕು. ಹೇಳಿದ ಸಮಯಾವಕಾಶದಲ್ಲಿ ಹಣ ಪವಾತಿಸಲು ವಿಫಲವಾದಲ್ಲಿ, ಬ್ಯಾಂಕ್ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಸ್ವತ್ತನ್ನು ಮರುಹರಾಜು ನಡೆಸುವ ಅಧಿಕಾರವನ್ನು ಹೊಂದಿದೆ. ಉಪೇಕ್ಷಿತ ಖರೀದಿದಾರರಿಗೆ ಆಸ್ತಿಯ ಮೇಲಿನ ಅಥವಾ ಮಾರಾಟ ನಡೆಸುವ ಆಸ್ತಿಯ ಮೊತ್ತದ ಮೇಲಿರುವ ಎಲ್ಲಾ ಕ್ಲೈಮುಗಳನ್ನು ಮುಟ್ಟುಗೋಲು ಹಾಕಲಾಗುವುದು.
7. ಖರೀದಿದಾರರು ಎಲ್ಲಾ ಪಾವತಿಗಳನ್ನುಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮಾರ್ಟ್‌ಗೇಜ್ ಸಸ್ಪೆನ್ಸ್ ಖಾತಾ ನಂ. 42705095742; IFSC: SCBL0036078 ಕ್ಕೆ ಠೇವಣಿಯಿಡಬೇಕು.
8. ಮಾರಾಟ ಬೆಲೆಯು ಸಂಪೂರ್ಣಗೊಂಡ ನಂತರ ಬ್ಯಾಂಕ್ ಖರೀದಿದಾರರ ಪರವಾಗಿ ಮಾರಾಟ ಪ್ರಮಾಣಪತ್ರವನ್ನು ನೀಡಿ ಆಸ್ತಿಯ ಸ್ವಾಧೀನತೆಯನ್ನು ಖರೀದಿದಾರರಿಗೆ ನೀಡುತ್ತದೆ.
9. ಹೇಳಲಾದ ಆಸ್ತಿಯ ಶೆಡ್ಯೂಲ್ ಈ ಕೆಳಗೆ ನೀಡಲಾಗಿದ್ದು, ಕೆಳಸಹಿದಾರರಾದ ಅಧಿಕೃತ ಅಧಿಕಾರಿಗಳು ಮರಾಟ ಪ್ರಮಾಣಪತ್ರ ನೀಡಿದ ನಂತರ ಬೆಂಕಿ, ಕಳ್ಳತನ ಇತ್ಯಾದಿ ಯಾವುದೇ ರೀತಿಯಲ್ಲಿ ಹಾನಿ ಸಂಭವಿಸಿದಲ್ಲಿ ಅದಕ್ಕೆ ಖರೀದಿದಾರರೇ ಹೊಣೆಯಾಗಿರುತ್ತಾರೆ. ಖರೀದಿದಾರ ಯಾವುದೇ ಆಧಾರದ ಮೇಲೆ ಮಾರಾಟವನ್ನು ರದ್ದುಗೊಳಿಸಲು ಅರ್ಹನಾಗಿರುವುದಿಲ್ಲ.
10. ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಹಣವನ್ನು ಅವರು ಬಿಡ್ ಅರ್ಜಿಯಲ್ಲಿ ನೀಡಿದ್ದ ಖಾತೆಗೆ ಡಿಡಿ/ಪಿಒ/ಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿ ಇ–ಮೇಲ್ ಮಾಹಿತಿ ನೀಡಲಾಗುವುದು.
11. ಎಲ್ಲಾ ಉದ್ದೇಶಗಳಿಂದ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಬ್ಯಾಂಕಿಗೆ ತಿಳಿದಿರುವ ಮಟ್ಟಿಗೆ ಈ ಆಸ್ತಿಗೆ ಯಾವುದೇ ಪರಭಾರೆ ಇರುವುದಿಲ್ಲ.
12. ಮೇಲಿನ ಆಸ್ತಿಯ ಎಲ್ಲಾ ವೆಚ್ಚಗಳಾದ ನೊಂದಣಿ ಶುಲ್ಕ, ಮುದ್ರಾಂಕ ಶುಲ್ಕ, ವರ್ಗಾವಣೆ ದರ ಹಾಗೂ ಇನ್ನಿತರ ಯಾವುದೇ ಶಾಸನಬದ್ಧ ಶುಲ್ಕಗಳಾದ ಆಸ್ತಿ ತೆರಿಗೆ, ವಿದ್ಯುತ್ ದರ ಮತ್ತು ನೀರಿನ ಶುಲ್ಕಗಳನ್ನು ಖರೀದಿದಾರರೇ ಪಾವತಿಸಬೇಕು.
13. ಅಧಿಕೃತ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
14. ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಆಸ್ತಿಗಳ ವಿವರಗಳು ಅಧಿಕೃತ ಅಧಿಕಾರಿಯವರಿಗೆ ತಿಳಿದ ಅತ್ಯುತ್ತಮ ಮಾಹಿತಿಯಾಗಿರುತ್ತದೆ. ಇ ಘೋಷಣೆಯಲ್ಲಿ ಯಾವುದೇ ಲೋಪ, ಬಿಟ್ಟುಹೋಗಿರುವಿಕೆ ಅಥವಾ ತಪ್ಪುಹೇಳಿಕೆಗಳು ಇತ್ಯಾದಿಗಳಿಗೆ ಅವರು ಉತ್ತರಿಸಬೇಕಾಗಿರುವುದಿಲ್ಲ. ಆದಾಗ್ಯೂ, ನೋಂದಾಯಿತ ಡೀಡ್ ಸಂ. ವೈಪಿಆರ್–1–00771–2021–22 ಹೊರತಾಗಿ ಬ್ಯಾಂಕ್‌ಗೆ ಈ ಭದ್ರತಾ ಸ್ವತ್ತಿನ ಮೇಲಿನ ಯಾವುದೇ ಇತರೆ ಪರಭಾರೆ ಬಗ್ಗೆ ತಿಳಿದಿರುವುದಿಲ್ಲ. ಹಾಗೂ ಈ ಸೂಚನೆಯನ್ನು 1.ಎಸ್. ಪಿ. ಶ್ರೀಶ ಮತ್ತು ಶ್ರೀಮತಿ ಪದ್ಮಜ್ಯೋತಿ ಶ್ರೀಶ ವಾಸ: ನಂ.31, ಎಸ್ 1, 1ನೇ ಮುಖ್ಯ ರಸ್ತೆ, ಎಸ್‌ಬಿಎಂ ಮೇಲ್ಬಾಗ, ವಿನಾಯಕ ಲೇಔಟ್, ವಿಜಯ ನಗರ, ಬೆಂಗಳೂರು–560 560 040 ಹಾಗೂ: ನಂ.213, 2ನೇ ಮಹಡಿ, 5ನೇ ಮುಖ್ಯ ರಸ್ತೆ, ಹಂಪಿನಗರ, ಆರ್‌ಪಿಸಿ ಲೇಔಟ್, ವಿಜಯನಗರ, ಬೆಂಗಳೂರು–560104, ಬಿಐಎ ಎದುರು ಇವರಿಗೆ ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ನೀಡಲಾಗಿದೆ.

ಶೆಡ್ಯೂಲ್ "ಎ" ಆಸ್ತಿ
(ಹೇಳಲಾದ ಆಸ್ತಿ ವಿವರ)
ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಆಸ್ತಿಯ ಮುನ್ಸಿಪಲ್ ನಂ. 994, ಡಬ್ಲ್ಯುಒಸಿ ಸರ್ವಿಸ್ ರಸ್ತೆ, ಆರ್‌ಪಿಸಿ ಲೇಔಟ್, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ಇಲ್ಲಿದ್ದು, ವಿಸ್ತೀರ್ಣ 60ಅಡಿx90ಅಡಿ, ಒಟ್ಟು ವಿಸ್ತೀರ್ಣ 5400ಚದರ ಅಡಿ ಅಥವಾ 18.39ಮೀಟರ್ ಥ 27.44 ಮೀಟರ್ , ಒಟ್ಟು 501.9 ಚದರ ಮೀಟರ್‌ಗಳ ಚಕ್ಕುಬಂದಿ
ಪೂರ್ವಕ್ಕೆ: 1019 ನಂಬರಿನ ಸೈಟ್ ಪಶ್ಚಿಮಕ್ಕೆ: ಡಬ್ಲ್ಯುಒಸಿ ರಸ್ತೆ
ಉತ್ತರಕ್ಕೆ: 995 ನಂಬರಿನ ಸಂಖ್ಯೆ ಸೈಟ್ ದಕ್ಷಿಣಕ್ಕೆ: 993 ನಂಬರಿನ ಸೈಟ್
ಶೆಡ್ಯೂಲ್ "ಬಿ" ಆಸ್ತಿ
ವಾಸಯೋಗ್ಯ ಮನೆಯ ನಂ. 994, "ಪ್ರಭುಧಾಮ್", ಡಬ್ಲ್ಯುಒಸಿ ಸರ್ವಿಸ್ ರಸ್ತೆ, ಆರ್‌ಪಿಸಿ ಲೇಔಟ್, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ಇಲ್ಲಿದ್ದು, ವಿಸ್ತೀರ್ಣ 3000ಚದರ ಅಥವಾ 278.8ಚದರ ಮೀಟರ್ ಇದರಲ್ಲಿ 4 ಬೆಡ್ ರೂಂಗಳು, 1 ಅಡುಗೆಮನೆಗೆ ಸೇರಿದಂತೆ ಸ್ಟೋರ್ ರೂಮ್, 3 ಬಾತ್‌ರೂಂ, ಒಂದು ಡ್ರಾಯಿಂಗ್ ಹಾಲ್ ಮತ್ತು ಒಂದು ಗ್ಯಾಲರಿ 2 ಫ್ಲಾರ್‌ಗಳು, ಒಂದು ಪೂಜಾ ರೂಂ, ಒಂದು ಡೈನಿಂಗ್ ಹಾಲ್, ತಳಮಹಡಿ ಮತ್ತು ಸರ್ವೆಂಟ್ ಬಾತ್ ರೂಮ್(ಷೆಡ್ಯೂಲ್ ಆಸ್ತಿಯನ್ನು ಕಾನೂನುಬಾಹಿರವಾಗಿ ನೀವು ಕೆಡವಿರುವುದರಿಂದ ಅನುಬಂಧ 9, 2ರ ಸಾಲದ ಒಪ್ಪಂದದ ಪ್ರಕಾರ ನಿಮ್ಮ ಮೇಲೆ ಮೇಲಿನ ಕಾನೂನುಬಾಹಿರ ಕೆಡವುವಿಕೆಗಾಗಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ).

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಶ್ರೀ ಸೋಮನಾಥ್ ದತ್ತ, ದೂ: 080–30626228, ಇ–ಮೇಲ್: somnath.dutta@sc.com, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ https://www.sc.com/in/important-information/public-sale-notice-of-properties-under-the-possession-of-bank ನ್ನು ಆಧಾರ ಮಾಡಿಕೊಳ್ಳಿ.

ದಿನಾಂಕ: 25.02.2025
ಸ್ಥಳ: ಬೆಂಗಳೂರು
ಸಹಿ/–
ಅಧಿಕೃತ ಅಧಿಕಾರಿಗಳು
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

बैंक ऑफ़ बड़ौदा Bank of Baroda
ಜಯನಗರ 5ನೇ ಬ್ಲಾಕ್ ಶಾಖೆ
#180, 5ನೇ ಮೇನ್, ಜಯನಗರ 4ನೇ ಬ್ಲಾಕ್, ಎದುರು ರಾಷ್ಟ್ರಕವಿ ಕುವೆಂಪು ಉದ್ಯಾನವನ, ಬೆಂಗಳೂರು – 560011.

ಲಾಕರ್ ಓಪನ್ ನೋಟಿಸ್

ಈ ಕೆಳಗಿನ ಬ್ಯಾಂಕ್ ಆಫ್ ಬರೋಡಾ, ಜಯನಗರ 5ನೇ ಬ್ಲಾಕ್ ಶಾಖೆ, ಬೆಂಗಳೂರಿನಲ್ಲಿ ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಜಯನಗರ 5ನೇ ಬ್ಲಾಕ್ ಶಾಖೆ,

ಲಾಕರ್ ಹೊಂದಿರುವವರ ಹೆಸರು	ಲಾಕರ್ ಪ್ರಕಾರ	ಲಾಕರ್ ಸಂಖ್ಯೆ	ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
ಚನ್ನಪ್ಪ ಎಂ ಎಸ್ ಶೆಟ್ಟಿ	Small	7271AX0045	ರೂ. 15,812	12.03.2025 ಬೆಳಗ್ಗೆ 10.30

ದಿನಾಂಕ: 24.02.2025
ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:674/ 2024

ಅರ್ಜಿದಾರರು: 1. ಶ್ರೀ . ಜೋಗಿಗೌಡ ಬಿನ್ ಲೇಟ್ ಚಿಕ್ಕಪುಟ್ಟೇಗೌಡ ವಯಸ್ಸು 48 ವರ್ಷ, ವಾಸ:– ಸೋರೆಕಾಯಿದೊಡ್ಡಿ ಗ್ರಾಮ, ಅತ್ತಿಹಳ್ಳಿ ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ, ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಾಯಿಯವರಾದ ಪುಟ್ಟಮಹಾದೇವಮ್ಮ ಉ ಪುಟ್ಟದೇವಮ್ಮ ಕೋಂ ಲೇಟ್ ಚಿಕ್ಕಪುಟ್ಟೇಗೌಡ ರವರು ಸೋರೇಕಾಯಿದೊಡ್ಡಿ ಗ್ರಾಮ , ಸಾತನೂರು ಹೋಬಳಿ ,ಕನಕಪುರ ತಾಲ್ಲೂಕು , ರಾಮನಗರ ಜಿಲ್ಲೆ , ಇಲ್ಲಿ ದಿನಾಂಕ:25.01.1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 29.03.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2025 ರ ಪೆಬ್ರವರಿ 20 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ವಿ.ವೀರಭದ್ರಸ್ವಾಮಿ
ವಕೀಲರು, ಕನಕಪುರ
ಸ್ಥಳ: ಕನಕಪುರ
ದಿನಾಂಕ: 20.02.2025

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಕ್ರಿಮಿನಲ್.ಮಿಸ್. ನಂ:38/ 2025

ಅರ್ಜಿದಾರರು: 1. ಶ್ರೀಮತಿ ಮಣಿಯಮ್ಮ ಸುಮಾರು 71 ವರ್ಷ ವಯಸ್ಸು ಬಿನ್ ಲೇ॥ ಶಿವರಾಮಯ್ಯ ಮತ್ತು ಲೇ॥ ವಿಜಯಲಕ್ಷ್ಮಿ, ಕೋಂ ಅಪ್ಪಾಸ್ವಾಮಿ, ವಾಸ:– ನಂ.287/11, 4ನೇ ಕ್ರಾಸ್, ಜಯನಗರ, ಮೈಸೂರು ನಗರ, ಮೈಸೂರು ಜಿಲ್ಲೆ–570025 ಮತ್ತು ಇತರರು
ವಿರುದ್ಧ
ಎದುದಾರರು: 1. ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾದಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ತೋಟಹಳ್ಳಿ ಗ್ರಾಮ, ಅಚ್ಚಲು ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರುಗಳ ತಂದೆಯಾದ ಲೇ॥ ಶಿವರಾಮಯ್ಯ ಬಿನ್ ಲೇ॥ ಸೂರಪ್ಪ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ತೋಟಹಳ್ಳಿ ಗ್ರಾಮದ ದಿನಾಂಕ:31.05.1982 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 29.03.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2025 ರ ಪೆಬ್ರವರಿ 24 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜಿ.ವಿ.ಶ್ರೀನಿವಾಸ
ಶ್ವೇತ, ವಕೀಲರು, ಕನಕಪುರ
ನಂ.13/1, 1ನೇ ಮಹಡಿ 8ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು
ಕನಕಪುರ
ಸ್ಥಳ: ಕನಕಪುರ

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಕ್ರಿಮಿನಲ್.ಮಿಸ್. ನಂ:37/ 2025

ಅರ್ಜಿದಾರರು: 1. ಶ್ರೀಮತಿ ಮಣಿಯಮ್ಮ ಸುಮಾರು 71 ವರ್ಷ ವಯಸ್ಸು ಬಿನ್ ಲೇ॥ ಶಿವರಾಮಯ್ಯ ಮತ್ತು ಲೇ॥ ವಿಜಯಲಕ್ಷ್ಮಿ, ಕೋಂ ಅಪ್ಪಾಸ್ವಾಮಿ, ವಾಸ:– ನಂ.287/11, 4ನೇ ಕ್ರಾಸ್, ಜಯನಗರ, ಮೈಸೂರು ನಗರ, ಮೈಸೂರು ಜಿಲ್ಲೆ–570025 ಮತ್ತು ಇತರರು
ವಿರುದ್ಧ
ಎದುದಾರರು: 1. ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾದಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು, ತೋಟಹಳ್ಳಿ ಗ್ರಾಮ, ಅಚ್ಚಲು ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು.
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರುಗಳ ತಾಯಿಯಾದ ಲೇ॥ ವಿಜಯಲಕ್ಷ್ಮೀ ಕೋಂ ಲೇ॥ ಶಿವರಾಮಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ತೋಟಹಳ್ಳಿ ಗ್ರಾಮದ ದಿನಾಂಕ:25.06.2001 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 03.05.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2025 ರ ಪೆಬ್ರವರಿ 24 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಜಿ.ವಿ.ಶ್ರೀನಿವಾಸ
ಶ್ವೇತ, ವಕೀಲರು, ಕನಕಪುರ
ನಂ.13/1, 1ನೇ ಮಹಡಿ 8ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು
ಕನಕಪುರ
ಸ್ಥಳ: ಕನಕಪುರ

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:104/ 2025

ಅರ್ಜಿದಾರರು: 1. ಶ್ರೀಮತಿ.ಕೆಂಪಮ್ಮ ಬಿನ್ ಲೇಟ್ ಪುಟ್ಟಸ್ವಾಮಿ ವಯಸ್ಸು 45 ವರ್ಷ, ವಾಸ:– ಕಂಚನಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ , ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, ಮತ್ತು ಇನೊಬ್ಬರು
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ,2 ಮತ್ತು 3ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ. ಬೋರಮ್ಮ ಬಿನ್ ಲೇಟ್ ಪುಟ್ಟಸ್ವಾಮಿ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಂಚನಹಳ್ಳಿ ಗ್ರಾಮದಲ್ಲಿ ದಿನಾಂಕ:24.06.2006 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 15.03.2025 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
2025 ರ ಪೆಬ್ರವರಿ 10 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಸಾಗರ್.ಟಿ.ಎಸ್
ವಕೀಲರು, ಕನಕಪುರ
ದಿನಾಂಕ:10.02.2025
ಸ್ಥಳ: ಕನಕಪುರ.

ಬಿಬಿಎಂಪಿ ಏಳು ವಿಭಾಗ: ಸದನ ಸಮಿತಿ ಶಿಫಾರಸು

ಈಗಿರುವ ಬಿಬಿಎಂಪಿ ಬದಲಿಗೆ ಗರಿಷ್ಠ ಏಳು ಪಾಲಿಕೆ ಸ್ಥಾಪಿಸಲು ಸಲಹೆ । ಗ್ರೇಟರ್ ಬೆಂಗಳೂರು ವಿಧೇಯಕಕ್ಕೆ ಬಿಜೆಪಿಯಿಂದಲೂ ಬೆಂಬಲ । ಬಜೆಟ್ ಅಧಿವೇಶನದಲ್ಲಿ ಗ್ರೇಟರ್ ಬೆಂಗಳೂರು ಮಸೂದೆ ಮಂಡನೆ

ಬೆಂಗಳೂರು: ದಿನದಿಂದ ದಿನಕ್ಕೆ ಬೆಳೆಯುತ್ತಿರುವ ರಾಜಧಾನಿ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯವನ್ನು ಗಮನದಲ್ಲಿರಿಸಿ ಈಗಿರುವ ಬಿಬಿಎಂಪಿಯನ್ನು ವಿಭಜಿಸಿ, ಅದಕ್ಕೆ ಅಕ್ಕಪಕ್ಕದ ಗ್ರಾಮಗಳನ್ನು ಸೇರಿಸಿ ಗ್ರೇಟರ್ ಬೆಂಗಳೂರು ಮಾಡುವ ಜತೆಗೆ ಗರಿಷ್ಠ ಏಳು ಪಾಲಿಕೆಗಳನ್ನು ಸ್ಥಾಪಿಸಬೇಕು ಎನ್ನುವ ಮಹತ್ವದ ಶಿಫಾರಸನ್ನು ಗ್ರೇಟರ್ ಬೆಂಗಳೂರು ವಿಧೇಯಕದ ಪರಿಶೀಲನಾ ವರದಿ ಸಲ್ಲಿಸಿದೆ.

ಕಳೆದ ವರ್ಷ ಗ್ರೇಟರ್ ಬೆಂಗಳೂರು ವಿಧೇಯಕವನ್ನು ಮಂಡಿಸಿದಾಗ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಆದ್ದರಿಂದ ವಿಧೇಯಕದ ಸಾಧಕ-ಬಾಧಕಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸಿದ್ದರು. ಈ ಸಮಿತಿಗೆ ಶಾಸಕ ರಿಜ್ವಾನ್ ಅರ್ಷದ್ ಅವರನ್ನು ಅಧ್ಯಕ್ಷರಾಗಿ ಮಾಡಲಾಗಿತ್ತು. ಇದೀಗ ಈ ಸಮಿತಿ ಸೋಮವಾರ ವರದಿ ಸಲ್ಲಿಸಿದ್ದು, ಮುಂಬರುವ ಅಧಿವೇಶನದಲ್ಲಿ ಮಂಡನೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೆಲ ಪ್ರದೇಶ ನಗರ ಸೇರ್ಪಡೆ: ಸಮಿತಿ ಸಲ್ಲಿಸಿರುವ ವರದಿಯಲ್ಲಿ ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಣೆ ಮಾಡಬೇಕು. ಇದರೊಂದಿಗೆ ಟೆಕ್ ಕಾರಿಡಾರ್‌ನ ಪ್ರಮುಖ ಕೇಂದ್ರವಾಗಿರುವ ಎಲೆಕ್ಟ್ರಾನಿಕ್ ಸಿಟಿ ಪ್ರದೇಶ, ಕುಂಬಳಗೋಡು ಪಟ್ಟಣ ಪುರಸಭೆ ಮತ್ತು ಪಾಲಿಕೆ ಗಡಿಯ ಪಕ್ಕದಲ್ಲಿರುವ ಕೆಲವು ಭಾಗಗಳನ್ನು ಬೆಂಗಳೂರಿಗೆ ಸೇರಿಸಬೇಕು. ಒಬ್ಬ ಮೇಯರ್ ಮತ್ತು ಆಯುಕ್ತರು ಪ್ರಸ್ತುತ ಬಿಬಿಎಂಪಿ ಆಡಳಿತ ನಡೆಸಲು ಸಾಧ್ಯವಿಲ್ಲ ಎಂದು ಎಲ್ಲ ಪಕ್ಷಗಳ ಅಭಿಪ್ರಾಯವಾಗಿದೆ. ಆದ್ದರಿಂದ ಗರಿಷ್ಠ ಏಳು ಪಾಲಿಕೆ ರಚಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಈ ಸಮಿತಿಯಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪ್ರತಿನಿಧಿಗಳು ಇದ್ದಿದ್ದರಿಂದ ಬಹುತೇಕ ಶಿಫಾರಸುಗಳನ್ನು ಒಪ್ಪಲಾಗಿದೆ. ಆದ್ದರಿಂದ ಮುಂದಿನ ಅಧಿವೇಶನದಲ್ಲಿಯೇ ಮಂಡಿಸಿ ಅನುಮೋದನೆ ಪಡೆಯುವ ಸಾಧ್ಯತೆಯಿದೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್‌ಗೆ ವರದಿ ಸಲ್ಲಿಸುವ ವೇಳೆ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್, ಕಾಂಗ್ರೆಸ್ ಶಾಸಕ ನಾರಾಯಣಸ್ವಾಮಿ, ಪ್ರಿಯಕೃಷ್ಣ ಇದ್ದರು.

ಬಿಬಿಎಂಪಿ ವಿಭಜನೆ ಕುರಿತು ಶಾಸಕ ರಿಜ್ವಾನ್ ಅರ್ಷದ್ ಸಮಿತಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್‌ಗೆ ವರದಿ ಸಲ್ಲಿಸಿದೆ. ಶಾಸಕರಾದ ಎಸ್.ಟಿ.ಸೋಮಶೇಖರ್, ಪ್ರಿಯಕೃಷ್ಣ ಇದ್ದರು.

- ಬಿಬಿಎಂಪಿ ವ್ಯಾಪ್ತಿಗೆ ಇನ್ನಷ್ಟು ಗ್ರಾಮಗಳನ್ನು ಸೇರಿಸಿ ಗ್ರೇಟರ್ ಬೆಂಗಳೂರು ರೂಪಿಸಬೇಕು
- ಈಗಿರುವ ಬಿಬಿಎಂಪಿಯನ್ನು ಏಳು ಸಣ್ಣ ಪಾಲಿಕೆಗಳನ್ನಾಗಿ ವಿಭಜಿಸಿ, ಒಂದೊಂದು ಪಾಲಿಕೆಯಲ್ಲಿ ನೂರು ವಾರ್ಡಿಗೆ ಅವಕಾಶ ಕಲ್ಪಿಸಬೇಕು
- ಮೇಯರ್ ಅವಧಿಯನ್ನು ವರ್ಷದ ಬದಲಿಗೆ 30 ತಿಂಗಳಿಗೆ ಹೆಚ್ಚಿಸಬೇಕು
- ಪಾಲಿಕೆ ವಿಂಗಡಣೆ ಮಾಡುವಾಗ ಆದಾಯ ಸಂಗ್ರಹ ಗಮನದಲ್ಲಿರಿಸಿಕೊಂಡು ಮಾಡಬೇಕು
- ನಗರದ ವಿವಿಧ ಮೂಲಸೌಕರ್ಯ ಏಜೆನ್ಸಿಗಳ ನಡುವೆ ಸಮನ್ವಯ ಸಾಧಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಬೇಕು

ಗ್ರೇಟರ್ ಬೆಂಗಳೂರು ಬಿಲ್ ಕಳೆದ ಜುಲೈ ವೇಳೆ ಅಧಿವೇಶನದಲ್ಲಿ ಮಂಡನೆಯಾಗಿತ್ತು. ಅಲ್ಲಿ ಸಮಗ್ರ ಚರ್ಚೆಯಾಗಿ, ವಿಧೇಯಕದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸುವ ಅಗತ್ಯವಿದೆ. ಹೀಗಾಗಿ, ಎಲ್ಲಾ ಸದಸ್ಯರು ಜಂಟಿ ಸದನ ಸಮಿತಿ ರಚನೆಗೆ ಮನವಿ ಮಾಡಿದ್ದರು. ಬಳಿಕ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಜಂಟಿ ಸಮಿತಿ ರಚನೆ ಮಾಡಲಾಗಿದೆ. ಜಂಟಿ ಸದನ ಸಮಿತಿ ಇದೀಗ ವರದಿ ಸಲ್ಲಿಕೆ ಮಾಡಿದೆ. ವರದಿಯನ್ನು ಮುಂದಿನ ಅಧಿವೇಶನದಲ್ಲಿ ಮಂಡನೆ ಮಾಡಲಾಗುತ್ತದೆ.

- ಯು.ಟಿ. ಖಾದರ್ ವಿಧಾನಸಭಾಧ್ಯಕ್ಷ

ಒಂದೇ ಪಾಲಿಕೆಯಿಂದ ನಿರ್ವಹಣೆ ಕಷ್ಟ: ವರದಿ ಸಲ್ಲಿಸಿದ ಬಳಿಕ ಮಾತನಾಡಿದ ಶಾಸಕ ರಿಜ್ವಾನ್ ಅರ್ಷದ್, ಜಂಟಿ ಸದನ ಸಮಿತಿಯು 20 ಸಭೆಗಳನ್ನು ನಡೆಸಿದೆ. ಸಾವಿರಾರು ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹ ಮಾಡಿದ್ದೇವೆ. ಐದು ತಿಂಗಳಲ್ಲಿ ಈ ಮಸೂದೆ ಸಂಬಂಧ ಸಭೆ ನಡೆಸಿದ್ದೇವೆ. ಕಾನೂನು ತಜ್ಞರು, ಬೆಂಗಳೂರು ತಜ್ಞರು ಹಾಗೂ ಸಾರ್ವಜನಿಕರ ಜೊತೆ ಸಭೆ ಮಾಡಿದ್ದೇವೆ. ಇದೀಗ ಸಮಗ್ರ ವರದಿ ಸಿದ್ಧಪಡಿಸಿ ಸಲ್ಲಿಕೆ ಮಾಡಿದ್ದೇವೆ. ಮುಂದಿನ ಅಧಿವೇಶನದಲ್ಲಿ ವರದಿ ಮಂಡನೆ ಆಗಲಿದೆ ಎಂದರು.

ಬೆಂಗಳೂರು ನಗರ ದೇಶದ ಆರ್ಥಿಕತೆಗೆ ಕೇಂದ್ರ ಬಿಂದುವಾಗಿದೆ. 400 ಫಾರ್ಚೂನ್ ಕಂಪನಿಗಳು ಬೆಂಗಳೂರಲ್ಲಿವೆ. ಬೆಂಗಳೂರು ಎಲ್ಲರ ಕನಸಿನ ನಗರವಾಗಿದೆ. ಅದಕ್ಕೆ ಪೂರಕವಾಗಿ ಆಡಳಿತ ಶಕ್ತಿ, ಅಭಿವೃದ್ಧಿ, ಜನರಿಗೆ ಬೇಕಾದ ಸೌಲತ್ತು ಒದಗಿಸುವ ಆಡಳಿತಾತ್ಮಕ ರಚನೆ ಸಿದ್ಧಮಾಡಬೇಕಿತ್ತು. ಹಾಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಜನರಿಗೆ ಸಹಾಯ ಆಗುತ್ತಿದೆಯಾ ಎಂದು ಕೇಳಿದಾಗ, ಸಾರ್ವಜನಿಕರು ಪರ್ಯಾಯ ವ್ಯವಸ್ಥೆ ಆಗಬೇಕು ಎಂದು ಸಲಹೆ ನೀಡಿದ್ದಾರೆ. ಒಂದೇ ಪಾಲಿಕೆಯಿಂದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದರು ಎಂದರು.

100-125 ವಾರ್ಡ್ ರಚನೆ

ಪಾಲಿಕೆ ವಿಂಗಡನೆ ಮಾಡುವಾಗ ಆದಾಯ ಸಂಗ್ರಹವನ್ನು ಗಮದಲ್ಲಿಟ್ಟುಕೊಂಡು ಪಾಲಿಕೆ ರಚನೆ ಮಾಡುವಂತೆ ಸಲಹೆ ನೀಡಿದ್ದೇವೆ. ಹೀಗಾಗಿ, ಆದಾಯ ಕೊರತೆ ಆಗದಂತೆ ಪಾಲಿಕೆ ರಚಿಸಲು ಸಲಹೆ ನೀಡಿದ್ದೇವೆ.

ಸದ್ಯದ ಸ್ಥಿತಿಯಲ್ಲಿ ಪಾರದರ್ಶಕತೆ ಇಲ್ಲ. ಹೀಗಾಗಿ, ಹೆಚ್ಚಿನ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಪಾಲಿಕೆ ವಿಂಗಡನೆ ಆಗಬೇಕು. ಪ್ರತಿ ಪಾಲಿಕೆಗೆ 100-125 ವಾರ್ಡ್‌ಗಳು ಇರಬೇಕು ಎಂದು ಸಲಹೆ ನೀಡಿದ್ದೇವೆ. ಪ್ರತಿ ಪಾಲಿಕೆಗೆ ಸಂಪೂರ್ಣ ಸ್ವಾಯತ್ತತೆ ಇರಲಿದೆ. ಹೊಸ ಪಾಲಿಕೆಗಳಿಗೆ ಬೆಂಗಳೂರು ದಕ್ಷಿಣ, ಪೂರ್ವ, ಪಶ್ಚಿಮ ಎಂಬ ಹೆಸರೇ ಇರಬೇಕು. ಬೇರೆ ಹೆಸರು ಇಡಬಾರದು ಎಂದು ವರದಿಯಲ್ಲಿ ತಿಳಿಸಲಾಗಿದೆ. ಆದಾಯ ಸಂಗ್ರಹದ ಮಾನದಂಡದ ಮೇಲೆ ಪಾಲಿಕೆ ರಚನೆ ಮಾಡಬೇಕು ಎಂದು ಸಲಹೆ ನೀಡಲಾಗಿದೆ. ಸಂಪೂರ್ಣ ಅಭಿವೃದ್ಧಿ ಹೊಂದಿರುವ ಗ್ರಾಮಗಳನ್ನು ಪಾಲಿಕೆಗೆ ಸೇರಿಸಬಹುದು ಎಂದೂ ಸಲಹೆ ನೀಡಲಾಗಿದೆ ಎಂದು ರಿಜ್ವಾನ್ ಅರ್ಷದ್ ವಿವರಿಸಿದರು.

ಸಮನ್ವಯತೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಬೆಂಗಳೂರಿನ ವಿವಿಧ ನಗರ ಮೂಲಸೌಕರ್ಯ ಏಜೆನ್ಸಿಗಳ ಮಧ್ಯೆ ಸಮನ್ವಯತೆ ಇಲ್ಲ. ಜಲಮಂಡಳಿ, ಬೆಸ್ಕಾಂ, ಬಿಡಿಎ ಸೇರಿದಂತೆ ನಗರ ಮೂಲಸೌಕರ್ಯ ಅಭಿವೃದ್ಧಿ ಏಜೆನ್ಸಿಗಳ ನಡುವೆ ಸಮನ್ವಯತೆ ಸಾಧಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಬೇಕು ಎಂದು ಸಲಹೆ ನೀಡಿದ್ದೇವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಿಎಂ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ನಗರಾಭಿವೃದ್ಧಿ ಸಚಿವರು ಪ್ರಾಧಿಕಾರದ ಉಪಾಧ್ಯಕ್ಷರಾಗಿರುತ್ತಾರೆ ಎಂದರು.

ಬಿಬಿಎಂಪಿ ಮೇಯರ್ ಕಾಲಾವಧಿ 30 ತಿಂಗಳು

ಸದ್ಯ ಬಿಬಿಎಂಪಿ ಮೇಯರ್ ಕಾಲಾವಧಿ 11 ತಿಂಗಳಿದೆ. ಆದರೆ ಇದೀಗ ಇದನ್ನು 30 ತಿಂಗಳಿಗೆ ವಿಸ್ತರಣೆ ಮಾಡಲು ಜಂಟಿ ಸದನ ಸಮಿತಿ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಮೇಯರ್ ಕಾಲಾವಧಿ 30 ತಿಂಗಳು ಇರಬೇಕು. ಐದು ವರ್ಷದಲ್ಲಿ ಇಬ್ಬರೇ ಮೇಯರ್ ಇರಬೇಕು. ಇದರೊಂದಿಗೆ ಕಾಲಮಿತಿಯಲ್ಲೇ ಚುನಾವಣೆ ಆಗಬೇಕು. ಕೇಂದ್ರ ಸರಕಾರದ ನಿರ್ದೇಶನದ ಮೇರೆಗೆ ವಾರ್ಡ್ ಬೌಂಡರಿ ನಿಗದಿ ಮಾಡಬೇಕು. ಜೂನ್ ಒಳಗೆ ವಾರ್ಡ್ ಬೌಂಡರಿ ನಿಗದಿ ಮಾಡಬೇಕು. ಜುಲೈ-ಆಗಸ್ಟ್ ವೇಳೆಗೆ ಈ ಮಸೂದೆ ಪ್ರಕಾರ ಚುನಾವಣೆ ನಡೆಸಬಹುದು ಎಂದರು.

ಸಣ್ಣಪಾಲಿಕೆಗಳ ಅಗತ್ಯ: ಸದ್ಯ ಬಿಬಿಎಂಪಿ 870 ಚ ಕಿ.ಮೀ. ವ್ಯಾಪ್ತಿಯಿದೆ. ಹೀಗಾಗಿ, ಸಣ್ಣ ಪಾಲಿಕೆಗಳ ರಚನೆ ಅಗತ್ಯವಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 1.51 ಕೋಟಿ ಜನಸಂಖ್ಯೆ ಇದೆ. ಹೀಗಾಗಿ, ಸಣ್ಣ ಪಾಲಿಕೆಗಳಾಗಿ ವಿಂಗಡಿಸಬೇಕು ಎಂಬ ಸಲಹೆ ನೀಡಿದ್ದೇವೆ. ಗರಿಷ್ಠ ಏಳು ಪಾಲಿಕೆ ರಚನೆ ಮಾಡುವ ಅವಕಾಶ ನೀಡಿದ್ದೇವೆ. ಒಂದೇ ಬಾರಿಗೆ ಏಳು ಪಾಲಿಕೆ ರಚನೆ ಮಾಡಬೇಕು ಎಂದಿಲ್ಲ, ಮುಂದಿನ ದಿನಗಳಲ್ಲಿ ಪಾಲಿಕೆಗಳ ವಿಂಗಡನೆ ಮಾಡಲು ಸಲಹೆ ನೀಡಿದ್ದೇವೆ. ಸಂದರ್ಭಕ್ಕನುಸಾರ ಪಾಲಿಕೆಗಳ ರಚನೆ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುವ ಶಿಫಾರಸು ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.

ಸಮಾಚಾರ ಸಣ್ಣದಲ್ಲ

ಕಾಮಗಾರಿ: ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ 66/11ಕೆವಿ ಸುಬ್ರಹ್ಮಣ್ಯಪುರ ಉಪಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ಕಾಮಗಾರಿ ಹಿನ್ನೆಲೆ ಮಂಗಳವಾರ ಬೆಳಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ನಗರದ ಗುಬ್ಬಲಾಲ, ಉತ್ತರಹಳ್ಳಿ ಬಾಗಶ, ಇಸ್ರೋ ಲೇಔಟ್, ಇಂಡಸ್ಟ್ರೀಯಲ್ ಏರಿಯಾ, ಆದರ್ಶ ಅಪಾರ್ಟ್ ಮೆಂಟ್, 1ನೇ 2ನೇ ಮಂತ್ರಿ ಟ್ರಾನ್ ಕ್ವಿಲ್ ಅಪಾರ್ಟ್ ಮೆಂಟ್, ಮಾರುತಿ ಲೇಔಟ್, ಭಾರತ್ ಲೇಔಟ್, ದೊಡ್ಡಕಲ್ಲಸಂದ್ರ ಇಂಡಸ್ಟ್ರಿಯಲ್ ಏರಿಯಾ, ಆಗರ, ಕುಮಾರಸ್ವಾಮಿ ಲೇಔಟ್, ವಿಠಲ ನಗರ, ಯದಲಂ ನಗರ, ಮಾರುತಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮ ಮಾ.2ಕ್ಕೆ

ಬೆಂಗಳೂರು: ನಗರದ ಬಿ.ಎಂಶ್ರೀ ಪ್ರತಿಷ್ಠಾನದಲ್ಲಿ ಮಾ.2ರಂದು ಬೆಳಗ್ಗೆ 10.30 ಗಂಟೆಗೆ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾರ್ವತಿ ಜಿ ಐತಾಳ ಅವರ ಅಂತರಂಗದ ಸ್ವಗತ,ಎಚ್. ಡುಂಡೀರಾಜ್ ಅವರತ ಹದಿನಾಲ್ಕು ಕಿರು ಹಾಸ್ಯ ನಾಟಕಗಳು ಹಾಗೂ ರಘುನಾಥ ಚ.ಹ ಅವರ ಇಳಿಸಲಾಗದ ಶಿಲುಬೆ ಅಂಕಣ ಬರಹಗಳು ಹಾಗೂ ಇಲ್ಲಿಂದ ಮುಂದೆಲ್ಲ ಕಥೆ ಪುಸ್ತಕಗಳು ಲೋಕಾರ್ಪಣೆಯಾಗಲಿದ್ದು, ಸಾಹಿತಿ ಅಗ್ರಹಾರ ಕೃಷ್ಣ ಮೂರ್ತಿ ಮೂರು ಪುಸ್ತಕಗಳ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೇಖಕ ಡಾ. ಎಚ್.ಎಸ್ ಸತ್ಯನಾರಾಯಣ ಹಾಗೂ ಬರಹಗಾರ ಡಾ. ರವಿಕುಮಾರ್ ನೀಹ ಆಗಮಿಸಲಿದ್ದಾರೆ.

ಹುತ್ತದಲ್ಲಿ ಹುತ್ತ ನಾಟಕ ಮಾ.1ಕ್ಕೆ

ಬೆಂಗಳೂರು: ಹುತ್ತದಲ್ಲಿ ಹುತ್ತ ನಾಟಕ ಮಾ.1 ರಂದು ಸಂಜೆ 4:30 ಕ್ಕೆ ಇಂಡಿಯನ್ ಇನ್‌ಸ್ಟಿಟ್ಯೂಟ್

ಆಫ್ ವರ್ಲ್ಡ್ ಕಲ್ಚರ್ ನಲ್ಲಿ ಹಾಗೂ ಮಾ.2 ರಂದು ಸಂಜೆ 7:15ಕ್ಕೆ ಜೆಪಿ ನಗರದ ವ್ಯೋಮ ರಂಗ ಮಂದಿರದಲ್ಲಿ ಪ್ರದರ್ಶನ ಕಾಣಲಿದೆ. ಅಂತರಂಗ ನಾಟಕ ತಂಡ ಕೈಲಾಸಂ ಅವರ ಹುತ್ತದಲ್ಲಿ ಹುತ್ತ ನಾಟಕ ಈವರೆಗೂ 57 ಪ್ರದರ್ಶನ ಯಶಸ್ವಿಯಾಗಿ ನೀಡಿದೆ. ಈಗ 58, 59 ನೇ ಪ್ರದರ್ಶನ ಕಾಣಲು ಸಿದ್ಧವಾಗಿದೆ. ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರದರ್ಶನ ಯಶಸ್ವಿಗೊಳಿಸಲು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ - 9880914509, 9986911321.

ಮಾ.12 ಕ್ಕೆ ದೃಶ್ಯೋತ್ಸವ

ಬೆಂಗಳೂರು: ಸೌಂದರ್ಯ ವಿದ್ಯಾಸಂಸ್ಥೆಯ ಸೌಂದರ್ಯ ಫಿಲಂ ಕ್ಲಬ್(ಎಸ್‌ಎಫ್‌ಸಿ) ಆಯೋಜಿಸಿರುವ 'ದೃಶ್ಯೋತ್ಸವ' ಕಿರು ಚಿತ್ರ ಸ್ಪರ್ಧೆ ಮಾ.12 ರಂದು ಸಿಮ್ ಆವರಣದಲ್ಲಿ ನಡೆಯಲಿದೆ. ಸ್ಪರ್ಧೆಯಲ್ಲಿ ಪ್ರೊಫೆಷನಲ್ ಮತ್ತು ಅಮೆಚ್ಯೂರ್ ಎಂಬ ಎರಡು ವಿಭಾಗಗಳಿವೆ. ವಿಜೇತ ಚಿತ್ರಗಳಿಗೆ ಪ್ರತ್ಯೇಕ ನಗದು ಬಹುಮಾನ ಹಾಗೂ ಪಾರಿತೋಷಕ ನೀಡಲಾಗುವುದು. ಭಾಗವಹಿಸಿದ ಎಲ್ಲಾ ಸಿನಿಮಾಗಳಲ್ಲಿ ಉತ್ತಮ ನಿರ್ದೇಶಕ, ಉತ್ತಮ ಛಾಯಾ ಛಾಯಾಗ್ರಾಹಕ, ಉತ್ತಮ ನಟ, ಉತ್ತಮ ನಟಿ ಪ್ರಶಸ್ತಿ ನೀಡಲಾವುದು. ಕಿರು ಚಿತ್ರೋತ್ಸವದಲ್ಲಿ ನಿರ್ದೇಶಕ ಜಯತೀರ್ಥ, ನಿರ್ದೇಶಕ ಗೊಮ್ಮಟೇಶ್ ಉಪಧ್ಯಾಯ ಮತ್ತು ಶ್ರೀ ಕ್ರೇಜಿ ಮೈಂಡ್ಸ್ ವತಿಯಿಂದ ಚಿತ್ರ ನಿರ್ದೇಶನ ಹಾಗೂ ಎಡಿಟಿಂಗ್ ಕುರಿತಂತೆ ಕಾರ್ಯಾಗಾರ ನಡೆಯುವುದು. ಭಾಗವಹಿಸಲಿಚ್ಚಿಸುವ ತಂಡಗಳು drishyotsava@soundaryainstitutions.in ಮೂಲಕ ನೋಂದಣಿ ಮಾಡಿಕೊಳ್ಳಲು ಮಾ.10 ಕೊನೆಯ ದಿನಾಂಕ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ - 9448846247, 9353365416.

ಬೆಳಗಾವಿ ಘಟನೆ ಬಗ್ಗೆ ಡಾ.ಜೋಶಿ ಖಂಡನೆ

ಬೆಂಗಳೂರು: ಮರಾಠಿ ಬೇಡ, ಕನ್ನಡದಲ್ಲಿ ಮಾತನಾಡಿ ಎಂದು ಹೇಳಿದ್ದಕ್ಕೆ ಬೆಳಗಾವಿಯಲ್ಲಿ ಬಸ್ ನಿರ್ವಾಹಕ ಮಹದೇವ ಮಲ್ಲಪ್ಪ ಹುಕ್ಕೇರಿ

ಮೇಲೆ ನಡೆದಿರುವ ಹಲ್ಲೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ತೀವ್ರವಾಗಿ ಖಂಡಿಸಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡ ಮಾತನಾಡಿ, ಎಂದರೆ ಹಲ್ಲೆಯಾಗುತ್ತದೆ ಎನ್ನುವ ಸಂಗತಿಯೇ ಆಘಾತ ಮತ್ತು ಆತಂಕ ತರುವಂತಹದು. ಬೆಳಗಾವಿಯಲ್ಲಿ ಇಂತಹ ಘಟನೆಗಳು ಮತ್ತೆ ಮತ್ತೆ ನಡೆಯುತ್ತಿರುವ ಬಗ್ಗೆ ವರದಿ ಬರುತ್ತಿದ್ದು ಕರ್ನಾಟಕ ಸರಕಾರ ಈ ಕುರಿತು ತೀವ್ರ ಗಮನ ಹರಿಸಿ ಕನ್ನಡಿಗರ ರಕ್ಷಣೆಗೆ ಸಂಪೂರ್ಣ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿಯುಳ್ಳ ಕನ್ನಡ ರಾಮಯ್ಯ ಎಂದೇ ಹೆಸರಾಗಿರುವ ಮುಖ್ಯಮಂತ್ರಿಗಳು ಬೆಳಗಾವಿ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಸಾರ್ವಜನಿಕ ಸೇವೆಯಲ್ಲಿರುವ ಸಾರಿಗೆ ಸಿಬ್ಬಂದಿಗೆ ಸೂಕ್ತ ರಕ್ಷಣಾ ನೀಡಬೇಕು. ಬೆಳಗಾವಿಯಂತಹ ಗಡಿ ಭಾಗದಲ್ಲಿ ಕನ್ನಡ ಪರ ವಾತಾವರಣ ಉಂಟಾಗುವಂತೆ ಮಾಡಬೇಕು ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ತಿಳಿಸಿದ್ದಾರೆ.

ಮರಾಠಿ ಪುಂಡರ ಮೇಲೆ ಕಾನೂನು ಕ್ರಮಕ್ಕೆ ಆಗ್ರಹ

ಬೆಂಗಳೂರು: ಬೆಳಗಾವಿ ತಾಲೂಕಿನ ಸಣ್ಣ ಬಾಳೆಕುಂದ್ರಿಯಲ್ಲಿ ಸಾರಿಗೆ ಸಂಸ್ಥೆ ನಿರ್ವಾಹಕನ ಮೇಲೆ ಎಂಇಎಸ್ ಪುಂಡರು ನಡೆಸಿದ ಪುಂಡಾಟಿಕೆಯಿಂದಾಗಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಕೂಡಲೇ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ ಆಗ್ರಹಿಸಿದ್ದಾರೆ. ಎಂಇಎಸ್ ಪುಂಡರ ಹಾವಳಿ ಹೆಚ್ಚಾಗಲು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರಣರಾಗಿದ್ದು, ಮತಬ್ಯಾಂಕ್ ರಾಜಕಾರಣಕ್ಕಾಗಿ ಓಲೈಕೆ ರಾಜಕೀಯದಲ್ಲಿ ತೊಡಗಿರುವ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಕನ್ನಡಿಗರ ರಕ್ಷಣೆ ಮಾಡಲು ಸಾಧ್ಯವಾಗದಿದ್ದರೆ ಬೆಳಗಾವಿ ಮತ್ತು ಬೆಂಗಳೂರಿನಲ್ಲಿರುವ ಲಕ್ಷ್ಮೀ ಹೆಬ್ಬಾಳ್ಕರ್ ನಿವಾಸಕ್ಕೆ ಮುತ್ತಿಗೆ ಹಾಕುತ್ತೇವೆ. ರಾಜ್ಯದಲ್ಲಿ ಸಚಿವರು ಸಂಚರಿಸಲು ಸಾಧ್ಯವಾಗದಂತೆ ಎಲ್ಲೆಡೆ ಘೇರಾವ್ ಹಾಕುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಮನವಿ ಸಲ್ಲಿಸಿರುವ ಅವರು, ಈ ಘಟನೆಯಿಂದ ಸರಕು ಸಾಗಣೆ, ವಾಣಿಜ್ಯ ವಾಹನಗಳ ಚಾಲಕರು ಭೀತಿಯಲ್ಲಿದ್ದಾರೆ. ಕಾನೂನು ಸುವ್ಯವಸ್ಥೆ ಹಾಳಾಗಿದ್ದು, ಮಹಿಳೆಯರು ಮತ್ತು ಮಕ್ಕಳ ರಕ್ಷಣೆ ಮಾಡುವುದು ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರಕಾರ, ಅಲ್ಲಿನ ಸಾರಿಗೆ ಮತ್ತು ಪೊಲೀಸ್ ಇಲಾಖೆಗೆ ರಾಜ್ಯ ಸರಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿ ದ್ದಾರೆ. ಕನ್ನಡಿಗರ ಮೇಲೆ ಪರಭಾಷಿಕರ ದಬ್ಬಾಳಿಕೆ ನಿರಂತರವಾಗಿ ನಡೆಯುತ್ತಿದೆ. ಕನ್ನಡ ಪರ ಸಂಘಟನೆಗಳು ಮರಾಠಿ ಪುಂಡರ ವಿರುದ್ಧ ಹಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಿದ್ದು, ಸರಕಾರಿ ನೌಕರನ ಮೇಲೆ ಹಲ್ಲೆ ಮಾಡುವ ಹಂತಕ್ಕೆ ಅವರು ತಲುಪಿರುವುದು ಖಂಡನೀಯ. ಕರ್ನಾಟಕ ಸುವರ್ಣ ಮಹೋತ್ಸವದಲ್ಲಿದೆ, ಇಂತಹ ಸಂದರ್ಭದಲ್ಲಿ ಕನ್ನಡಿಗರ ಸ್ವಾಭಿಮಾನ ಕೆಣಕುವ ಪ್ರಯತ್ನ ಮುಂದುವರೆಸಿದರೆ ತಕ್ಕ ಶಾಸ್ತಿ ಮಾಡುತ್ತೇವೆ ಎಂದು ಗಂಡಸಿ ಸದಾನಂದ ಸ್ವಾಮಿ ಹೇಳಿದ್ದಾರೆ.

ಕೋವಿಡ್ ಹಗರಣ, ಏಕಾಏಕಿ ಕ್ರಮ ಸಾಧ್ಯವಿಲ್ಲ

ವರದಿ ಬಂದ ಬಳಿಕ ಮುಂದಿನ ಕ್ರಮ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಬೆಂಗಳೂರು: ಕರೋನಾ ಹಗರಣದಲ್ಲಿ ಏಕಾಏಕಿ ಕ್ರಮ ಸಾಧ್ಯವಿಲ್ಲ. ವರದಿ ಬಂದ ಬಳಿಕ ಮುಂದಿನ ಕ್ರಮವಹಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ಹಗರಣದ ವಿಚಾರವಾಗಿ ನ್ಯಾ. ಮೈಕಲ್ ಕುನ್ಹಾ ಅವರ ಸಮಿತಿ ವರದಿ ನೀಡಿತ್ತು. ಅದರ ಆಧಾರದ ಮೇಲೆ ಕೆಲವು ಕಂಪನಿಗಳಿಗೆ ಹಾಗೂ ತಪ್ಪಿತಸ್ಥರಿಗೆ ನೋಟಿಸ್ ನೀಡಲಾಗಿತ್ತು. ಕೋವಿಡ್ ಹಗರಣದ ಕುರಿತಂತೆ ಏಕಾಏಕಿ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ, ಕಾನೂನು ರೀತಿ ಮುನ್ನಡೆಯಬೇಕಾಗುತ್ತದೆ. ಈ ಕಾರಣಕ್ಕೆ ಇಲಾಖೆಯಿಂದ ಹಾಗೂ ಸಿಐಡಿಯಿಂದ ತನಿಖೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ಸಾಕಷ್ಟು ವ್ಯವಹಾರಗಳು ಸಂಶಯಾಸ್ಪದವಾಗಿವೆ. ಎಲ್ಲವನ್ನೂ ಪರಿಶೀಲನೆ ನಡೆಸುತ್ತಿದ್ದೇವೆ ಎಂದು ಹೇಳಿದರು.

ಕಳಪೆ ಗುಣಮಟ್ಟದ ಔಷಧಿಗಳಿಂದ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವ ಜತೆಗೆ ಜೀವ ಅಪಾಯವಾಗುವ ಸಾಧ್ಯತೆ ಇರುವುದರಿಂದ ಔಷಧಿ ಕಂಪನಿಗಳು ಗುಣಮಟ್ಟ ಕಾಯ್ದುಕೊಳ್ಳಬೇಕು. ಕಳಪೆ ಔಷಧಿಗಳ ಬಗ್ಗೆ ಹೆಚ್ಚು ಗಮನ ನೀಡಲಾಗುತ್ತಿದೆ. ಕೇಂದ್ರ ಸರಕಾರಕ್ಕೆ ಪತ್ರ ಬರೆದು ಔಷಧಿಗಳ ಗುಣಮಟ್ಟದ ಬಗ್ಗೆ ಗಮನ ಸೆಳೆದಿದ್ದೆ. ಅಲ್ಲಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ, ಇದು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕಾದ ವಿಚಾರ, ರಾಜ್ಯದ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿದಾಗ ಕೆಲವು ಔಷಧಿಗಳಲ್ಲಿ ಕಳಪೆ ಗುಣಮಟ್ಟ ಕಂಡುಬಂದಿದೆ. ಅದನ್ನು ಬೇರೆ ರಾಜ್ಯಗಳಿಗೂ ತಿಳಿಸುವುದು ನಮ್ಮ ಪತ್ರದ ಉದ್ದೇಶವಾಗಿತ್ತು ಎಂದರು.

ಕೆಲವು ಕಂಪನಿಗಳು ಗುಣಮಟ್ಟದ ಔಷಧಿಗಳನ್ನು ಪೂರೈಸುತ್ತವೆ. ಇನ್ನೂ ಕೆಲವು ಕಂಪನಿಗಳು ಗುಣಮಟ್ಟ ಕಾಯ್ದುಕೊಳ್ಳುತ್ತಿಲ್ಲ, ಅಂತಹ ಔಷಧಿಗಳನ್ನು ಈಗಾಗಲೇ ನಿಷೇಧ ಮಾಡಲಾಗಿದೆ. ರಾಜ್ಯದಲ್ಲಿ ಬಾಣಂತಿಯರ ಸಾವಿಗೆ ಕಾರಣವಾದ ಐವಿ ದ್ರಾವಣ ತಯಾರಿಸಿದ ಪಶ್ಚಿಮ ಬಂಗಾಳದ ಕಂಪನಿ ಮುಚ್ಚಿದೆ. ಅವರು ಹಲವು ಬಗೆಯ ಔಷಧಿಗಳನ್ನು ತಯಾರಿಸುತ್ತಿದ್ದರು. ನಮ್ಮ ಅಧಿಕಾರಿಗಳ ತಂಡ ಅಲ್ಲಿಗೆ ತೆರಳ ಪರಿಶೀಲನೆ ನಡೆಸಿದಾಗ ಈಗ ಉತ್ಪಾದನೆಯನ್ನು ಸ್ಥಗಿತಗೊಳಿಸುವುದು ಸ್ಪಷ್ಟವಾಗಿದೆ ಎಂದರು.

26ಕ್ಕೆ ವಿಶೇಷ ಕಾರ್ಯಕ್ರಮ

ಮಹಾಶಿವರಾತ್ರಿ ಅಂಗವಾಗಿ ಜಾಣ-ಜಾಣೆಯರ ನಗೆ ಜಾಗರಣೆ ಕಾರ್ಯಕ್ರಮವನ್ನು ಫೆ.26 ರಂದು ಗಾಂಧಿನಗರ ವಿಧಾನಸಭಾ ಕ್ಷೇತ್ರದ ತುಳಸಿತೋಟದಲ್ಲಿ ಆಯೋಜಿಸಲಾಗಿದೆ. ಕಲಾವಿದರಾದ ಎಂ.ಎಸ್.ನರಸಿಂಹಮೂರ್ತಿ, ಮಿಮಿಕ್ರಿ ದಯಾನಂದ ಗೋಪಿ, ಆಶಾ ನಾಯಕ್ ಮತ್ತಿತರರು ಪಾಲ್ಗೊಳ್ಳುತ್ತಿದ್ದಾರೆ. ಈ ಬಾರಿ ಅಂಬಾರಿ ಉತ್ಸವವನ್ನು ನಡೆಸಲಾಗುವುದು, ಆನಂದ ಗುರೂಜಿ, ಅಘೋರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಕಾರ್ಯಕ್ರಮ ಆಯೋಜಿಸುವುದು ಮೊದಲಿನಿಂದಲೂ ನಡೆದುಬಂದಿದೆ. ಇದು ಮೃದು ಹಿಂದುತ್ವ ಎಂಬ ವ್ಯಾಖ್ಯಾನ ಸರಿ ಅಲ್ಲ, ಧಾರ್ಮಿಕ ಕಾರ್ಯಕ್ರಮಗಳಿಗೆ ರಾಜಕೀಯ ಸಂಬಂಧ ಕಲ್ಪಿಸುವುದು ಒಳ್ಳೆಯದಲ್ಲ. ನಾನು ಬಹಳಷ್ಟು ದೇವಸ್ಥಾನಗಳನ್ನು ನಿರ್ಮಿಸಿದ್ದೇನೆ ಎಂದು ಹೇಳಿದರು.

ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಅಪಘಾತ ಹಾಗೂ ತುರ್ತು ಕೇಂದ್ರಕ್ಕೆ 38.16 ಲಕ್ಷ ಮೌಲ್ಯದ 4 ವಿದ್ಯುತ್ ಚಾಲಿತ ವಾಹನ ದೇಣಿಗೆ ನೀಡಲಾಯಿತು. ಪ್ರಧಾನ ವ್ಯವಸ್ಥಾಪಕ ಸುಶೀಲ್ ಕುಮಾರ್ ಸಿಂಗ್, ಡಾ.ಆಶೀಮಾ ಬಾನು, ಡಾ.ಬಾಲಾಜಿ.ಎಸ್.ಪೈ ಉಪಸ್ಥಿತರಿದ್ದರು.

ಮೆಟ್ರೋ ಚಾಲಕರಹಿತ ರೈಲು ಪರೀಕ್ಷಾರ್ಥ ಸಂಚಾರ ಯಶಸ್ವಿ

ಬೆಂಗಳೂರು: ಬೆಂಗಳೂರಿನ ಆರ್‌ವಿ ರಸ್ತೆ-ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಚಾಲಕರಹಿತ ಮೆಟ್ರೋ ರೈಲಿನ ಪರೀಕ್ಷಾರ್ಥ ಸಂಚಾರ ನಡೆಯಿತು. ಬೆಂಗಳೂರಿನಲ್ಲಿ ಹಲವು ದಿನಗಳಿಂದ ಭಾರೀ ನಿರೀಕ್ಷೆ ಹುಟ್ಟಿಸಿರುವ ಆರ್‌ವಿ ರಸ್ತೆ-ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಮೆಟ್ರೋ ಸಂಚಾರ ಶೀಘ್ರವೇ ಆರಂಭವಾಗಲಿದ್ದು, ಸೋಮವಾರ (ಫೆ.24) ಮಧ್ಯಾಹ್ನ ಚೀನಾದಿಂದ ಇತ್ತೀಚೆಗೆ ತರಿಸಲಾದ ಚಾಲಕ ರಹಿತ ಮೆಟ್ರೋ ರೈಲಿನ ಪರೀಕ್ಷೆಯನ್ನು ಮೆಟ್ರೋ ರೈಲು ಸುರಕ್ಷತಾ ಆಯುಕ್ತರ ತಂಡವು ನಡೆಸಿತು.

ಸುರಕ್ಷತಾ ಆಯುಕ್ತರ ನೇತೃತ್ವದಲ್ಲಿ ಪರೀಕ್ಷೆ: ಈ ಕುರಿತು ಮಾಹಿತಿ ನೀಡಿದ ನಮ್ಮ ಮೆಟ್ರೋ, ಹಳದಿಮಾರ್ಗದಲ್ಲಿ ಸೋಮವಾರ ದಂದು ಮೆಟ್ರೋ ರೈಲು ಸುರಕ್ಷತಾ ಆಯುಕ್ತ ಎ.ಎಂ. ಚೌಧರಿ ನೇತೃತ್ವದ ತಂಡದಿಂದ ಆರ್‌ವಿ ರಸ್ತೆ ಮತ್ತು ಬೊಮ್ಮಸಂದ್ರ ನಡುವಣ ಹಳದಿಮಾರ್ಗದಲ್ಲಿ ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್‌ನಿಂದ ತರಿಸಲಾದ ಚಾಲಕ ರಹಿತ ರೈಲುಗಳ ಶಾಸನಬದ್ಧ ಪರೀಕ್ಷಾರ್ಥ ತಪಾಸಣೆ ನಡೆಸಲಾಯಿತು. ಹೊಸ ರೋಲಿಂಗ್ ಸ್ಟಾಕ್/ರೈಲಿನ ಅನುಮೋದನೆಗಾಗಿ ರೈಲ್ವೆ ಸಚಿವಾಲಯವನ್ನು ಸಂಪರ್ಕಿಸುವ ಮೊದಲು ಇದು ಕಡ್ಡಾಯ ಅವಶ್ಯಕತೆಯಾಗಿದೆ ಎಂದರು.

ರೋಲಿಂಗ್ ಸ್ಟಾಕ್,ರೈಲು ಅನುಮೋದನೆ ಯನ್ನು ರೈಲ್ವೆ ಮಂಡಳಿ ಸ್ವೀಕರಿಸಿದ ಬಳಿಕ ಈ ಮಾರ್ಗದಲ್ಲಿ ಸಿಗ್ನಲಿಂಗ್ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಸಿಗ್ನಲಿಂಗ್ ಪರೀಕ್ಷೆ ಯಶಸ್ವಿಯಾದ ನಂತರ ಸಂಪೂರ್ಣ ಹಳದಿಮಾರ್ಗ ಆರ್-5 ವಿಭಾಗದ ಪರಿಶೀಲನೆಗಾಗಿ ಮತ್ತೊಮ್ಮೆ ಮೆಟ್ರೋ ರೈಲು ಸುರಕ್ಷತಾ ಆಯುಕ್ತರನ್ನು ಬೆಂಗಳೂರಿಗೆ ಕರೆಸಲಾಗುತ್ತದೆ. ಅವರು ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಈ ಮಾರ್ಗವನ್ನು ವಾಣಿಜ್ಯ ಸೇವೆ ಕಾರ್ಯಾಚರಣೆಗೆ ಮುಕ್ತಗೊಳಿಸಲಾಗುತ್ತದೆ.



ನಗರದ ಆರ್‌ವಿ ರಸ್ತೆ-ಬೊಮ್ಮಸಂದ್ರ ನಡುವಣ ಹಳದಿ ಮಾರ್ಗದಲ್ಲಿ ಚಾಲಕರಹಿತ ಮೆಟ್ರೋ ರೈಲಿನ ಪರೀಕ್ಷಾರ್ಥ ಸಂಚಾರ ಸೋಮವಾರ ನಡೆಯಿತು.

ಮಹಾ ಶಿವರಾತ್ರಿಗೆ ಜ್ಯೋತಿರ್ಲಿಂಗ ದರ್ಶನ

ಬೆಂಗಳೂರು: ಮಹಾ ಶಿವರಾತ್ರಿ ಉತ್ಸವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಆಚರಿಸಲಾಗುತ್ತಿದೆ. ರವಿಶಂಕರ ಗುರೂಜಿ ಅವರ ಸಾನ್ನಿಧ್ಯದಲ್ಲಿ ನಡೆಯುತ್ತಿರುವ ಉತ್ಸವದಲ್ಲಿ ಪುರಾತನ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಅವಕಾಶ ನೀಡಲಾಗಿದೆ.

ಕ್ರಿ.ಶ.1025 ರಲ್ಲಿ ಮಹ್ಮದ್ ಘಜ್ನಿ ಸೋಮನಾಥ ದೇವಾಲಯ ಧ್ವಂಸಗೊಳಿಸಿದಾಗ, ಜ್ಯೋತಿರ್ಲಿಂಗ ಸಂಪೂರ್ಣ ನಾಶವಾಗಿರಲಿಲ್ಲ. ಈ ಲಿಂಗ ಒಂದು ವಿಶೇಷವಾದ ಶಿಲೆಯಿಂದ ಮಾಡಲ್ಪಟ್ಟಿದ್ದು, ಅಗ್ನಿಹೋತ್ರಿ ಬ್ರಾಹ್ಮಣರು ಈ ಜ್ಯೋತಿರ್ಲಿಂಗದ ತುಂಡುಗಳನ್ನು ಕೊಂಡೊಯ್ದು, ದಕ್ಷಿಣ ಭಾರತದಲ್ಲಿ ರಹಸ್ಯವಾಗಿ ಆರಾಧನೆ ಮುಂದುವರೆಸಿದರು. ಪೀಳಿಗೆಯಿಂದ ಪೀಳಿಗೆಗೆ ಪ್ರಸಾರವಾಗಿ, ಅಂತಿಮವಾಗಿ ಸೀತಾರಾಮ ಶಾಸ್ತ್ರಿಗಳ ಕೈಗೆ ಬಂದವು. ಇವರು ಕಳೆದ 20 ವರ್ಷಗಳಿಂದ ಇದರ ಪುನಃ ಪ್ರತಿಷ್ಠಾಪನೆಯ ಸಂದರ್ಭದ ನಿರೀಕ್ಷೆಯಲ್ಲಿ ಇದ್ದರು. ಸಂತ ಪ್ರಣವೇಂದ್ರ ಸರಸ್ವತಿಯವರು 1924ರಲ್ಲಿ ಈ ಪವಿತ್ರ ಜ್ಯೋತಿರ್ಲಿಂಗದ ತುಂಡುಗಳನ್ನು ಕಂಚಿ ಶಂಕರಾಚಾರ್ಯ ಸ್ವಾಮಿ ಚಂದ್ರಶೇಖರೇಂದ್ರ ಸರಸ್ವತಿಯವರಿಗೆ ಅರ್ಪಿಸಿದಾಗ, ಅವರು ಇದನ್ನು ಪ್ರತಿಷ್ಠಾಪಿಸಲು ಇನ್ನೂ 100 ವರ್ಷಗಳು ಬೇಕಾಗುತ್ತದೆ ಎಂದು ಭವಿಷ್ಯವಾಣಿ ನುಡಿದಿದ್ದರು. ಈಗಿನ ಕಂಚಿ ಶಂಕರಾಚಾರ್ಯರ ಆಶೀರ್ವಾದ ಪಡೆದು, ಈ ಪವಿತ್ರ ಲಿಂಗವನ್ನು ರವಿಶಂಕರರ ಬಳಿಗೆ ತರಲು ನಿರ್ಧರಿಸಲಾಯಿತು.

ವೈಜ್ಞಾನಿಕ ಅಧ್ಯಯನ ಅದ್ಭುತ ಕಾಂತೀಯ ಗುಣಗಳು

2007ರಲ್ಲಿ ನಡೆಸಿದ ಭೌಗೋಳಿಕ ಅಧ್ಯಯನದಲ್ಲಿ, ಈ ಲಿಂಗದಲ್ಲಿ ಸಾಮಾನ್ಯ ಭೌತಿಕಶಾಸ್ತ್ರಕ್ಕೆ ನಿಲುಕದ, ವಿಶೇಷ ಚುಂಬಕೀಯ ಶಕ್ತಿಯ ಗುಣಗಳು ಇವೆ ಎಂಬುದು ಪತ್ತೆಯಾಗಿತ್ತು. ಇದರಲ್ಲಿ ಇರುವ ಲೋಹದ ಅಂಶವು ಅಯಸ್ಕಾಂತತೆಗೆ ಸಾಕಷ್ಟು ಕಡಿಮೆಯಾಗಿದ್ದು, ಈ ರಹಸ್ಯವನ್ನು ಅರ್ಥೈಸಲು ವಿಜ್ಞಾನಿಗಳು ಈಗಲೂ ಪ್ರಯತ್ನಿಸುತ್ತಿದ್ದಾರೆ. ಈ ಮಹಾ ಶಿವರಾತ್ರಿಯಂದು ಫೆ.26ರ ಸಂಜೆ 6:30 ಕ್ಕೆ ಮಹಾ ರುದ್ರಾಭಿಷೇಕ ಮತ್ತು ಮಹಾ ಸತ್ಸಂಗದೊಂದಿಗೆ ಪ್ರಾರಂಭವಾಗುವ ಉತ್ಸವ, ಫೆ.27ರ ಮುಂಜಾನೆ 4:00 ಗಂಟೆಗೆ ಮಹಾ ರುದ್ರ ಹೋಮದೊಂದಿಗೆ ಭಕ್ತಿಯ ಮೆರುಗು ನೀಡಲಿದೆ. ಈ ಐತಿಹಾಸಿಕ ಕ್ಷಣದಲ್ಲಿ ಭಾಗಿಯಾಗಲು ಎಲ್ಲಾ ಭಕ್ತರಿಗೂ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ಶತಮಾನೋತ್ಸವ ಅಭಿಯಾನದ ಅಂಗವಾಗಿ ಮಾಜಿ ಸಚಿವ ರಾಮಚಂದ್ರ ಗೌಡ ರವರಿಗೆ ಗೌರವ ಸಮರ್ಪಿಸಲಾಯಿತು. ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ, ಸಂಸದ ಪಿ.ಸಿ. ಮೋಹನ್, ಅಭಿಯಾನದ ರಾಜ್ಯ ಪ್ರಮುಖ ಡಾ.ಶಿವಯೋಗಿಸ್ವಾಮಿ, ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ, ಸದಸ್ಯರಾದ ಸದಾಶಿವ, ನರಸಿಂಹಮೂರ್ತಿ, ಸದಾಶಿವಯ್ಯ, ಮಮತಾ ಉದಯ, ಜಿಲ್ಲಾ ಅಧ್ಯಕ್ಷ ಹರೀಶ್ ಪಕ್ಷದ ಮುಖಂಡರು ಇದ್ದರು.

ದೇಗುಲ ಜೀರ್ಣೋದ್ಧಾರಕ್ಕೆ ಹತ್ತು ಲಕ್ಷ ರು. ದೇಣಿಗೆ

ಪುನರೂರಿನ ವಿಶ್ವನಾಥ ದೇವಸ್ಥಾನದ ಜೀರ್ಣೋದ್ಧಾರ ನಿಧಿಗೆ ಪ್ರಸಿದ್ಧ ಧಾರ್ಮಿಕ ಗುರು ಚಂದ್ರಶೇಖರ ಸ್ವಾಮೀಜಿಯವರು 10 ಲಕ್ಷ ರು.ಗಳ ದೇಣಿಗೆಯನ್ನು ಸಲ್ಲಿಸಿದರು. ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಪಟೇಲ್ ವಾಸುದೇವರಾವ್ ಪುನರೂರು, ವಿಶ್ವನಾಥ ಭಟ್, ರಜನಿ ಸಿ. ಭಟ್, ರಾಹುಲ್ ಸಿ. ಭಟ್, ರಾಘವ ಸೂರ್ಯ, ರೋಶನಿ ಸಿ. ಭಟ್, ದೇವಪ್ರಸಾದ್ ಪುನರೂರು ಮೊದಲಾದವರು ಇದ್ದರು.

ಮೂಲ್ಕಿ: ಪವಿತ್ರ ಸಂಸ್ಕೃತಿಯನ್ನು ಆಧ್ಯಾತ್ಮಿಕವಾಗಿ ಪ್ರಸಾರ ಮಾಡುವ ಇತಿಹಾಸ ಪ್ರಸಿದ್ಧ ಗ್ರಾಮೀಣ ದೇವಳದ ಪ್ರಗತಿಗೆ ಮುಕ್ತವಾಗಿ ಟ್ರಸ್ಟ್ ಮೂಲಕ ನೆರವು ನೀಡಲಾಗುತ್ತಿದೆ. ಜನರ ನಂಬಿಕೆಗಳ ಕ್ಷೇತ್ರವಾಗಿರುವ ಧಾರ್ಮಿಕ ಕ್ಷೇತ್ರಗಳು ಬೆಳಗಿದಲ್ಲಿ ಗ್ರಾಮದ ಪ್ರಗತಿ ಜತೆಗೆ ಜನರಲ್ಲಿ ಧಾರ್ಮಿಕತೆಯ ಮೂಲನಂಬಿಕೆಯಲ್ಲಿ ವಿಶ್ವಾಸ ಹೊಂದುತ್ತಾರೆ ಎಂದು ಬೆಂಗಳೂರಿನ ಅಧ್ಯಾತ್ಮಿಕ ಗುರು ಹಾಗೂ ಅಂತಾರಾಷ್ಟ್ರೀಯ ವಾಸ್ತುತಜ್ಞ ಚಂದ್ರಶೇಖರ ಸ್ವಾಮೀಜಿ ಹೇಳಿದ್ದಾರೆ.

ಅವರು ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ಬಳಿಯ ಪುನರೂರಿನ ವಿಶ್ವನಾಥ ದೇವಸ್ಥಾನದ ಜೀರ್ಣೋದ್ಧಾರದ ವಿಶೇಷ ಕೈಂಕರ್ಯದ ನಿಧಿಗೆ 10 ಲಕ್ಷ ರು. ದೇಣಿಗೆಯನ್ನು ಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದ ಟ್ರಸ್ಟ್ ಮೂಲಕ ಹಸ್ತಾಂತರಿಸಿ ಮಾತನಾಡಿದರು.

ಸ್ವಾಮೀಜಿ ಸೇವೆ ತೆರೆದ ಪುಸ್ತಕದಂತೆ: ಕ್ಷೇತ್ರದ ಜೀರ್ಣೋದ್ಧಾರ ಸಮಿತಿಯ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಮಾತನಾಡಿ, ಹುಟ್ಟೂರಿನ ಅಭಿಮಾನದಿಂದ ಸಾಮಾಜಿಕ ಕ್ಷೇತ್ರದೊಂದಿಗೆ ಧಾರ್ಮಿಕ ಕ್ಷೇತ್ರಕ್ಕೂ ನಿರಂತರ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ, ಇಂತಹ ಮನಸ್ಸು ಎಲ್ಲರಲ್ಲೂ ಇರುವುದಿಲ್ಲ. ಚಂದ್ರಶೇಖರ ಸ್ವಾಮೀಜಿ ಯವರ ಸೇವೆ ತೆರೆದ ಪುಸ್ತಕದಂತೆ ಇಂತಹ ಸಮಾಜ ಸೇವೆಯು ನಿರಂತರವಾಗಿರಲಿ ಎಂದರು.

ಈ ಸಂದರ್ಭದಲ್ಲಿ ದೇವಳದ ಆಡಳಿತ ಮೊಕ್ತೇಸರ ಪಟೇಲ್ ವಾಸುದೇವರಾವ್ ಪುನರೂರು ಚಂದ್ರಶೇಖರ ಸ್ವಾಮೀಜಿಯವರನ್ನು ಸನ್ಮಾನಿಸಿದರು. ಜ್ಯೋತಿಷಿ ವಿಶ್ವನಾಥ ಭಟ್, ಆಶ್ರಮದ ನಿರ್ದೇಶಕಿ ರಜನಿ ಸಿ. ಭಟ್, ರಾಹುಲ್ ಸಿ. ಭಟ್, ರಾಘವ ಸೂರ್ಯ, ರೋಶನಿ ಸಿ. ಭಟ್, ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು, ಉಷಾರಾಣಿ, ಪಟೇಲ್ ವಿಶ್ವನಾಥ ರಾವ್, ಗೋಪಿನಾಥ ರಾವ್, ಪದ್ಮಶಾಲಿ ಮಹಾಸಭಾದ ಅಧ್ಯಕ್ಷ ಪುರಂದರ ಶೆಟ್ಟಿಗಾರ್ ಪುನೀತ್ ಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

ದೇಗುಲಗಳು ಸಂಸ್ಕೃತಿಯ ಉತ್ಥಾನದ ಪ್ರತೀಕ

ವಿಶ್ವಮಟ್ಟದಲ್ಲಿ ನಮ್ಮ ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಪ್ರಾಪಂಚಿಕವಾಗಿ ಸಾರುವ ದೇಗುಲಗಳಲ್ಲಿ ಕರಾವಳಿ ತೀರದ ಅನೇಕ ಇತಿಹಾಸ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳ ಉತ್ಥಾನಕ್ಕೆ ನಮ್ಮ ಸೇವಾಶ್ರಮ ಸದಾ ಪ್ರಯತ್ನಿಸುತ್ತಿದೆ. ಧಾರ್ಮಿಕತೆಯ ಸದ್ಭಕ್ತಿಯೊಂದಿಗೆ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪುವ ಭಕ್ತಿ-ಶ್ರದ್ಧೆ ಯಿಂದ ದೇವಸ್ಥಾನಗಳಲ್ಲಿ ಸತ್ಸಂಗಕ್ಕೆ ಆದ್ಯತೆ ನೀಡಿ, ಭಕ್ತರು ಸನ್ಮಾರ್ಗದಲ್ಲಿ ಸಾಗಲು ದೇಗುಲಗಳು ಸ್ಫೂರ್ತಿಯ ಕೇಂದ್ರಗಳಾಗಬೇಕು. ನಮ್ಮ ಸೇವಾ ಶ್ರಮವು ನಿತ್ಯ ನಿರಂತರವಾಗಿ ಧಾರ್ಮಿಕ ಚಿಂತನೆಗೆ ವೇದಿಕೆಯಾಗಿದೆ ಎಂದು ಚಂದ್ರಶೇಖರ ಸ್ವಾಮೀಜಿ ಪ್ರತಿಪಾದಿಸಿದರು.

ಸುಳ್ಳು ಪೋಕ್ಸೊ ಪ್ರಕರಣಕ್ಕೆ ಖಂಡನೆ

ಹಲ್ಲೆಗೊಳಗಾದ ಬಸ್ ನಿರ್ವಾಹಕನಿಗೆ ಸಚಿವರ ಸಾಂತ್ವನ | ಗೃಹ ಸಚಿವರ ಜತೆ ಮಾತನಾಡುವೆ: ರಾಮಲಿಂಗಾರೆಡ್ಡಿ

ಬೆಳಗಾವಿ: ಬಸ್ ಕಂಡಕ್ಟರ್ ಮೇಲೆ ಸುಳ್ಳು ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ. ಈ ಕುರಿತು ಗೃಹ ಸಚಿವರ ಜತೆ ಮಾತನಾಡುತ್ತೇನೆ. ಹಲ್ಲೆಗೊಳಗಾದ ನಿರ್ವಾಹಕ ಮಹಾದೇವ ಹುಕ್ಕೇರಿ ಜತೆ ನಮ್ಮ ಇಲಾಖೆ ಇದೆ ಎಂದು ಸೋಮವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಮರಾಠಿ ಭಾಷೆ ಮಾತನಾಡಲು ಒತ್ತಾಯಿಸಿದ ಪುಂಡರಿಂದ ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾರಿಗೆ ಬಸ್ ಕಂಡಕ್ಟರ್ ಆರೋಗ್ಯ ವಿಚಾರಿಸಿ ಮಾತನಾಡಿ, ಪ್ರಕರಣದ ದಿಕ್ಕುತಪ್ಪಿಸಲು ಉದ್ದೇಶಪೂರ್ವಕವಾಗಿ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ. ಕಳೆದ 65 ವರ್ಷಗಳಿಂದ ಈ ರೀತಿಯ ಘಟನೆ ನಡೆದಿರಲಿಲ್ಲ, ಗಲಾಟೆ ನಂತರ ಪ್ರಕರಣ ದಾಖಲಾಗಿದ್ದಕ್ಕೆ ಗಾಬರಿಯಾಗಿರುವ ನಿರ್ವಾಹಕರ ಬೆಂಬಲವಾಗಿ ಸಾರಿಗೆ ಇಲಾಖೆ ಇದೆ ಎಂದು ರಾಮಲಿಂಗಾರೆಡ್ಡಿ ಧೈರ್ಯ ತುಂಬಿದರು.

ತಮ್ಮ ಮೇಲೆ ನಡೆದ ಹಲ್ಲೆಯನ್ನು ಸಚಿವರಿಗೆ ನಿರ್ವಾಹಕ ವಿವರಿಸಿ ಕಣ್ಣೀರು ಹಾಕಿದರು. ಗಡಿಯಲ್ಲಿ ಪುಂಡಾಟ ಮೆರೆಯುವ ಎಂಇಎಸ್ ವಿರುದ್ಧ ಸರಕಾರ ಕ್ರಮ ಜರುಗಿಸಲಿದೆ ಎಂದು ಸಚಿವರು ಎಚ್ಚರಿಕೆ ನೀಡಿದರು.

ಗಡಿಯಲ್ಲಿ ನಿಲ್ಲದ ಪುಂಡಾಟ: ಗಡಿ ಭಾಗದಲ್ಲಿ ಮರಾಠಿ ಭಾಷಿಕರ ಪುಂಡಾಟ ಮುಂದುವರಿದಿದ್ದು ಕರವೇ ಉಪಾಧ್ಯಕ್ಷ ಮೇಲೆ ಹಲ್ಲೆ ನಡೆಸಲಾಗಿದೆ. ಕರ್ನಾಟಕ ರಕ್ಷಣಾ ವೇದಿಕೆ ಖಾನಾಪುರ ತಾಲೂಕು ಉಪಾಧ್ಯಕ್ಷ ಜಯವಂತ್ ಅಜ್ಜಪ್ಪ ನಿಡಗಲ್ಕರ್ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಸಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದ್ದು ಪೊಲೀಸರು ಮುಂಜಾಗ್ರತಾ ಕ್ರಮವಹಿಸಿದ್ದಾರೆ.

ಮರಾಠಿ ಭಾಷಿಕರಿಂದ ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಂಡಕ್ಟರ್ ಮಹಾದೇವ ಹುಕ್ಕೇರಿ

ಮಹಾರಾಷ್ಟ್ರ ಹಾಗೂ ಕರ್ನಾಟಕ ಬಸ್‌ಗಳಿಗೆ ಮಸಿ ಬಳಿಯುವುದರಿಂದ ಉಭಯ ರಾಜ್ಯಗಳ ಸಂಸ್ಥೆಗಳಿಗೆ ತೊಂದರೆ. ಈ ಕುರಿತು ಮಂಗಳವಾರ ಸೊಲ್ಲಾಪುರ ಜಿಲ್ಲೆಯ ಅಧಿಕಾರಿಗಳ ಸಭೆ ನಡೆಯಲಿದೆ. ಪರಿಸ್ಥಿತಿ ಸರಿಹೋಗದಿದ್ದರೆ ನಾನೇ ಮಹಾರಾಷ್ಟ್ರದ ಸರಕಾರದೊಂದಿಗೆ ಮಾತನಾಡುವೆ. ಅವರ ಬಸ್ಸಿಗೆ ನಾವು, ನಮ್ಮ ಬಸ್ಸಿಗೆ ಅವರು ಮಸಿ ಬಳಿಯುವುದರಲ್ಲಿ ಅರ್ಥವಿಲ್ಲ. ಮಹಾರಾಷ್ಟ್ರದವರು ಇಲ್ಲಿ ಬರಬೇಕು, ನಮ್ಮವರು ಅಲ್ಲಿಗೆ ಹೋಗಬೇಕು.

- ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ಇನ್‌ಸ್ಪೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹ

ಕಂಡಕ್ಟರ್ ಮೇಲಿನ ಹಲ್ಲೆ ಘಟನೆಗೆ ಸಂಭಂಧಿಸಿದಂತೆ ಮಾರಿಹಾಳ ಪೊಲೀಸ್ ಠಾಣೆ ಇನ್ಸ್ ಪೆಕ್ಟರ್ ಕಲ್ಯಾಣಶೆಟ್ಟಿ ಕರ್ತವ್ಯಲೋಪ ಎಸಗಿದ್ದಾರೆ ಎಂಬ ಆರೋಪವಿದೆ. ಈ ಬಗ್ಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಮಾಜಿ ಸಚಿವೆ ಉಮಾಶ್ರೀ ಆಕ್ರೋಶ ಹೊರಹಾಕಿದ್ದಾರೆ. ಆಸ್ಪತ್ರೆಯಲ್ಲಿ ಕಂಡಕ್ಟರ್ ಮಹಾದೇವ ಹುಕ್ಕೇರಿ ಆರೋಗ್ಯ ವಿಚಾರಿಸಿದ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಇನ್ಸ್‌ಪೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ. ಜನರಿಂದ ತುಂಬಿರುವ ಬಸ್ ನಲ್ಲಿ ಯುವತಿಗೆ ಲೈಂಗಿಕ ಕಿರುಕುಳ ನೀಡುವುದು ಅಸಾಧ್ಯ. ಆದರೆ ಪೊಲೀಸ್ ಅಧಿಕಾರಿ ಬೇರೆ ಯಾರನ್ನೋ ರಕ್ಷಣೆ ಮಾಡುವ ಉದ್ದೇಶದಿಂದ ಪ್ರಕರಣ ದಾಖಲಿಸಿರುವ ಶಂಕೆ ವ್ಯಕ್ತವಾಗಿದ್ದು ತನಿಖೆ ನಡೆಸಿ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ. ಕೆಳಹಂತದ ಅಧಿಕಾರಿಗಳಿಂದ ಕೆಲವು ತಪ್ಪುಗಳಾಗಿವೆ. ಈ ಸಂಬಂಧ ನಾನು ಈಗಾಗಲೇ ಗೃಹ ಸಚಿವರು, ಡಿಐಜಿ ಅವರೊಂದಿಗೆ ಮಾತನಾಡಿದ್ದು, ಸೂಕ್ತ ರೀತಿಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿರುವೆ.

-ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಎರಡು ಬಸ್‌ಗಳಿಗೆ ಮಸಿ ಬಳಿದ ಮಹಾ ಪುಂಡರು

ಬಾಗಲಕೋಟೆ: ಮಹಾರಾಷ್ಟ್ರಕ್ಕೆ ತೆರಳಿದ್ದ ಜಿಲ್ಲೆಯ ಎರಡು ಬಸ್ ಗಳಿಗೆ ಸೋಲಾಪುರದಲ್ಲಿ ಮಸಿ ಬಳೆಯಲಾಗಿದೆ. ಜಿಲ್ಲೆಯ ಇಳಕಲ್ ಡಿಪೋಗೆ ಸೇರಿದ ಎರಡು ಬಸ್ ಗೂ ಸೋಲಾಪುರಗೆ ತೆರಳಿದ್ದವು. ಸೋಮವಾರ ಬೆಳಗ್ಗೆ ಹಾಗೂ ಮಧ್ಯಾಹ್ನ ಬಸ್‌ಗಳ ಬೋರ್ಡ್ ಗಳಿಗೆ ಮಸಿ ಬಳಿಯಲಾಗಿದೆ. ಆದರೆ, ಬೇರೆ ಯಾವುದೇ ಹಾನಿಯಾಗಿಲ್ಲ. ಬೋರ್ಡ್ ಗೆ ಮಸಿ ಬಳಿದು ಜೈ ಮಹಾರಾಷ್ಟ್ರ ಅಂತ ನಮ್ಮ ಚಾಲಕರ ಹತ್ತಿರ ಹೇಳಿಸಿ ಎಚ್ಚರಿಕೆ ಕೊಟ್ಟಿದ್ದಾರೆ. ಬಸ್ ಸುರಕ್ಷಿತವಾಗಿ ಅಲ್ಲಿಂದ ವಾಪಸ್ ಬಂದಿದೆ.. ನಾವು ನಮ್ಮ ವಿಭಾಗದಿಂದ ಪರಿಸ್ಥಿತಿ ತಿಳಿಯಾಗುವವರೆಗೂ ಸೊಲ್ಲಾಪುರಕ್ಕೆ ಬಸ್ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದೇವೆ. ಬೆಳಗ್ಗೆ ಹತ್ತರಿಂದ ಮಿರಜ್ ಹೋಗುವ ಬಸ್ ಬಂದ್ ಮಾಡಲಾಗಿತ್ತು. ನಂತರ ಅಲ್ಲಿಯ ಪೊಲೀಸರು ಕಂಟ್ರೋಲರ್ ಮಾಹಿತಿ ಮೇರೆಗೆ. ಬಂದೋಬಸ್ತ್ ಮಾಡಿದ್ದೇವೆ. ಯಾವುದೇ ತೊಂದರೆಯಾಗೋದಿಲ್ಲ ಅಂತ ಹೇಳಿದ್ದಕ್ಕೆ ಮತ್ತೆ ಮೀರಜ್ ಸಂಚಾರ ಶುರು ಮಾಡಿದ್ದೇವೆ ಎಂದು ವಿಭಾಗೀಯ ಸಾರಿಗೆ ಅಧಿಕಾರಿ ಕೆ.ಕೆ.ಲಮಾಣಿ ತಿಳಿಸಿದರು.

ಕಾಸರಗೋಡು: ಬೋನಿಗೆ ಬಿದ್ದ ಚಿರತೆ

ಕಾಸರಗೋಡು: ಕೊಳತ್ತೂರು ನಡುವೊಟ್ಟ್ ಎಂಬಲ್ಲಿನ ಎಂ.ಜನಾರ್ದನನ್ ಎಂಬುವರ ರಬ್ಬರ್ ತೋಟದಲ್ಲಿ ಇರಿಸಿದ್ದ ಬೋನಿನಲ್ಲಿ 5 ವರ್ಷದ ಚಿರತೆ ಸೆರೆಯಾಗಿದೆ. ಕಣ್ಣೂರಿನಿಂದ ಬಂದಿದ್ದ ಉತ್ತರ ವಲಯ ಪಶುವೈದ್ಯ ಡಾ.ಬಿ.ಇಲ್ಯಾಸ್ ರಾವುತ್ತರ್ ತಪಾಸಣೆ ನಡೆಸಿ, ಚಿಕಿತ್ಸೆ ನೀಡಿದ ಬಳಿಕ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗೆ ಬಿಟ್ಟಿದ್ದಾರೆ. ನಾಯಿ ಬೊಗಳುವುದನ್ನು ಕೇಳಿದ ಜನ ಬಂದು ನೋಡಿದಾಗ ಚಿರತೆ ಸೆರೆಯಾಗಿರುವುದು ಗೊತ್ತಾಗಿತ್ತು. ಜಿಲ್ಲೆಯ ಒಡೆಯಂಚಾಲ್ ಚೆಕ್ಕಟ್ಟಡ್ಕದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ಇಲ್ಲಿನ ವಟ್ಟಕುಳಂ ಜಾರ್ಜ್ ಎಂಬುವರ ಮನೆಯ ಮೇಕೆಯೊಂದನ್ನು ಕೊಂದು ಹಾಕಿದೆ. ಮನೆಯಿಂದ ಸುಮಾರು 200 ಮೀಟರ್ ದೂರದಲ್ಲಿ ಮೇಕೆಯ ಕಳೇಬರ ಪತ್ತೆಯಾಗಿದೆ. ಹುಲಿಯ ಚಲನವಲನ ಪತ್ತೆಗೆ ಈ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಿದ್ದಾರೆ.

ಚಲೋಗೆ ನಕಾರ, ಸಮಾವೇಶಕ್ಕೆ ಸೈ

ಬೆಂಗಳೂರು: ಮೈಸೂರು ಚಲೋ ನಡೆಸಲು ಅನುಮತಿ ನಿರಾಕರಿಸಿದ್ದ ಮೈಸೂರು ಪೊಲೀಸ್ ಆಯುಕ್ತರ ಕ್ರಮ ಪ್ರಶ್ನಿಸಿ ರಾಷ್ಟ್ರೀಯ ಸುರಕ್ಷಾ ಜನಾಂದೋಲನಾ ಸಮಿತಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾಯಮೂರ್ತಿ ಆರ್.ದೇವದಾಸ್ ಅವರ ಏಕಸದಸ್ಯ ಪೀಠ, ಮೈಸೂರು ಚಲೋ ನಡೆಸಲು ನಿರಾಕರಿಸಿತು. ಅಲ್ಲದೆ, ಫುಟ್ಬಾಲ್ ಕ್ರೀಡಾಂಗಣದಲ್ಲಿ ಒಂದೂವರೆ ತಾಸು ಮಾತ್ರ ಸಮಾವೇಶ ನಡೆಸಲು ಅನುಮತಿ ನೀಡಿತು. ಪ್ರಚೋದನಾಕಾರಿ ಭಾಷಣ ಮಾಡದಂತೆಯೂ ಕಟ್ಟಪ್ಪಣೆ ವಿಧಿಸಿತು.

ಮೈಸೂರಿನ ಫುಟ್ಬಾಲ್ ಕ್ರೀಡಾಂಗಣದ ವ್ಯಾಪ್ತಿಯಲ್ಲಿ ಅರ್ಜಿದಾರರು ಸಭೆ, ಸಮಾವೇಶ ನಡೆಸಬಹುದಾಗಿದೆ. ಇದಕ್ಕೆ ಒಂದು ಲಕ್ಷ ಮೌಲ್ಯದ ಬಾಂಡ್ ಅನ್ನು ಮೈಸೂರು ಪೊಲೀಸ್ ಆಯುಕ್ತರಿಗೆ ಒದಗಿಸಬೇಕು. ಸಮಾವೇಶದಲ್ಲಿ ಭಾಗಿಯಾಗುವ ಯಾರೂ ಪ್ರಚೋದನಾಕಾರಿ ಭಾಷಣ ಮಾಡದಂತೆ ಅರ್ಜಿದಾರರು ಖಾತರಿ ವಹಿಸಬೇಕು. ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದರೆ ಅರ್ಜಿದಾರರನ್ನು ಹೊಣೆಗಾರರನ್ನಾಗಿ ಸಲಾಗುವುದು. ಸೋಮವಾರ ಮಧ್ಯಾಹ್ನ 3:30ರ ಬಳಿಕ ಒಂದೂವರೆ ತಾಸು ಮಾತ್ರ ಸಭೆ ನಡೆಸಲು ಅನುಮತಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ. ಅಲ್ಲದೇ, ಮೈಸೂರು ಪೊಲೀಸ್ ಆಯುಕ್ತರು ಫುಟ್ಬಾಲ್ ಕ್ರೀಡಾಂಗಣ ವ್ಯಾಪ್ತಿಯಲ್ಲಿ ಅಗತ್ಯ ಬಂದೋಬಸ್ತ್ ಮಾಡಬೇಕು. ಇಡೀ ಸಭೆಯಯನ್ನು ವಿಡಿಯೊ ಚಿತ್ರೀಕರಣ ಮಾಡಬೇಕು. ಸೀಮಿತ ಅವಧಿಗೆ ನಿಷೇಧಾಜ್ಞೆ ಹಿಂಪಡೆಯಬೇಕು ಎಂದು ನ್ಯಾಯಾಲಯವು ನಿರ್ದೇಶಿಸಿ, ಅರ್ಜಿ ಇತ್ಯರ್ಥಪಡಿಸಿತು.

ಸಿಎಂ, ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಚರ್ಚೆ ಇಲ್ಲ

ಬಳ್ಳಾರಿ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರದ ಬಗ್ಗೆ ಮಾತನಾಡದಂತೆ ಹೈಕಮಾಂಡ್ ಸ್ಪಷ್ಟ ಸಂದೇಶ ನೀಡಿದೆ. ಸಿಎಂ ಬದಲಾವಣೆ, ಅಧ್ಯಕ್ಷರ ಬದಲಾವಣೆ ಪ್ರಸ್ತಾಪ ವರಿಷ್ಠರ ಮುಂದಿಲ್ಲ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಪುನರುಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬದಲಾವಣೆಯ ಚರ್ಚೆ ಇಲ್ಲವೆಂದು ಸ್ವತಃ ಎಐಸಿಸಿ ಅಧ್ಯಕ್ಷ ಖರ್ಗೆಯವರೇ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೇನಾದರೂ ಬದಲಾವಣೆ ಇದ್ದರೆ ತಿಳಿಸುತ್ತೇವೆ ಎಂದಿದ್ದಾರೆ ಎಂದರು.

ಕಲ್ಪಿತ ಸುದ್ದಿಗಳು: ಬದಲಾವಣೆ ಬಗ್ಗೆ ಪತ್ರಿಕೆಯವರು ಕಪೋಲಕಲ್ಪಿತ ಅನಿಸಿಕೆಗಳು ಬರುತ್ತಿವೆ. ಈ ಬಗ್ಗೆ ಯಾರೂ ಮಾತಾಡಬೇಡಿ ಎಂದು ಸೂಚನೆಯಿದೆ. ಖರ್ಗೆ ಹೇಳಿದ ಮೇಲೆ ಸಚಿವ ರಾಜಣ್ಣ ಕೂಡ ಸುಮ್ಮನಾಗಿದ್ದಾರೆ. ದೆಹಲಿಗೆ ಹೋಗುವವರು ಬೇರೆ ಬೇರೆ ಕೆಲಸಗಳಿಗೆ ಹೋಗುತ್ತಾರೆ. ಸಿಎಂ ಬದಲಾವಣೆ, ಅಧ್ಯಕ್ಷರ ಬದಲಾವಣೆ ಬಗ್ಗೆ ಶಿಸ್ತಿನ ಕಾಂಗ್ರೆಸ್ ನಾಯಕರು ಯಾರೂ ಮಾತಾಡಬಾರದು ಎಂದು ಸೂಚಿಸಲಾಗಿದೆ.ನಾವು ಶಿಸ್ತಿನ ಪಕ್ಷದವರು ಪಕ್ಷದ ಸೂಚನೆ ಪಾಲಿಸುತ್ತೇವೆ ಎಂದು ಸಚಿವ ಪಾಟೀಲ್ ವಿವರಣೆ ಕೊಟ್ಟರು.

ಗ್ಯಾರಂಟಿಯಿಂದ ಹೊರೆಯಾಗುವುದು ಬೇರೆ ವಿಚಾರ. ಆದರೆ 58 ಸಾವಿರ ಕೋಟಿ ರು. ಅಂದರೆ ಸಣ್ಣ ಮೊತ್ತವಲ್ಲ. ಜನರಿಗಾಗಿ ಗ್ಯಾರಂಟಿ ಪ್ರಾರಂಭ ಮಾಡಿದ್ದೇವೆ, ನಮಗೆ ಬದ್ಧತೆಯಿದೆ, ಮುಂದುವರಿಸುತ್ತೇವೆ. ನಮ್ಮ ಪಕ್ಷದ ಯಾವುದೇ ಶಾಸಕರೂ ಗ್ಯಾರಂಟಿ ವಿರುದ್ಧ ಇಲ್ಲ. ಯಾರೂ ಕಡಿತ ಮಾಡಿ ಎಂದು ಹೇಳಿಲ್ಲ ಎಂದು ಎಚ್.ಕೆ.ಪಾಟೀಲ್ ಹೇಳಿದರು.

ಗ್ಯಾರಂಟಿಗಳಿಗೆ ತೊಂದರೆಯಿಲ್ಲ

ಗೃಹಜ್ಯೋತಿ ಸಬ್ಸಿಡಿ ಹಣ ಸರಕಾರದಿಂದ ಎಸ್ಕಾಂಗಳಿಗೆ ಪಾವತಿಯಾಗದ ವಿಚಾರಕ್ಕೆ ಮಾತನಾಡಿದ ಸಚಿವರು, ಗೃಹಜ್ಯೋತಿ ಹಣ, ಗೃಹಲಕ್ಷ್ಮಿ ಹಣ ಬಿಡುಗಡೆ ಮಾಡುತ್ತೇವೆ. ಗ್ಯಾರಂಟಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಪಾವತಿಯಾಗದ ಗೃಹ ಜ್ಯೋತಿ ಹಣ ಬಿಡುಗಡೆ ಮಾಡುತ್ತೇವೆ. ಈಗಿರುವ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಆಗದು. ಯಾವ ಗ್ರಾಹಕರಿಗೂ ತೊಂದರೆಯಾಗದ ಹಾಗೆ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ಕೊಟ್ಟರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಇಇ(ಐಡಿ)/ಟಿಇಎನ್/ಎಸ್‌ಇ0059/2024-2025 ದಿನಾಂಕ: 24.02.2025

ಅಲ್ಪಾವಧಿ ಟೆಂಡರ್‌ಗಳಿಗೆ ಆಹ್ವಾನ

ಆಯುಕ್ತರು, ಬಿಡಿಎ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬಿಡಿಎ, ಬೆಂಗಳೂರು, ಇವರು ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. **ಕಾಮಗಾರಿಯ ಹೆಸರು : ಒಂದು ವರ್ಷದ ಅವಧಿಗೆ (12 ತಿಂಗಳು) ಬಿಡಿಎ ಕೇಂದ್ರ ಕಚೇರಿಗೆ ಸ್ವಚ್ಛತೆ ಮತ್ತು ನಿರ್ವಹಣಾ ಸೇವೆಗಳ ಪೂರೈಕೆ.** ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.116.23 ಲಕ್ಷಗಳು.** ಇಎಂಡಿ: **ರೂ.2.00 ಲಕ್ಷಗಳು.**

ವೇಳಾಪಟ್ಟಿ: (1) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **03.03.2025, ಸಂಜೆ 4.00 ಗಂಟೆವರೆಗೆ. (2)** ಪ್ರೀ-ಟೆಂಡರ್ ಸಭೆಯ ದಿನಾಂಕ ಮತ್ತು ಸಮಯ: **05.03.2025, ಬೆಳಿಗ್ಗೆ 11.00 ಗಂಟೆಗೆ. (3)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14.03.2025, ಸಂಜೆ 4.00 ಗಂಟೆವರೆಗೆ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಅಥವಾ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಮೂಲಸೌಲಭ್ಯ ವಿಭಾಗ, ಕೊಠಡಿ ಸಂಖ್ಯೆ 413, 'ಬಿ' ಬ್ಲಾಕ್, 3ನೇ ಮಹಡಿ, ಬಿಡಿಎ, ಬೆಂಗಳೂರು, ಇವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬಿಡಿಎ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬಸವನಗುಡಿ ವಿಭಾಗ,
ಬಿಬಿಎಂಪಿ ಕಟ್ಟಡ, ಚನ್ನಮ್ಮನಕೆರೆ ಅಚ್ಚುಕಟ್ಟು, ವಿದ್ಯಾಪೀಠ,
ಬಿಎಸ್‌ಕೆ 3ನೇ ಹಂತ, ಬೆಂಗಳೂರು-560085

ಸಂಖ್ಯೆ: ಕಾಪಾಅ(ಬಗು)/ಇ-ಪ್ರೊಕ್/11/2024-25 ದಿನಾಂಕ: 24.02.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬಸವನಗುಡಿ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಪ್ಯಾಕೇಜ್‌ಗಳ ಹೆಸರು
1.	ಬಸವನಗುಡಿ ಕ್ಷೇತ್ರದಲ್ಲಿರುವ ಎಲ್ಲಾ ಬೃ.ಬೆಂ.ಮ.ಪಾಲಿಕೆ ಕಚೇರಿ ಕಟ್ಟಡಗಳಿಗೆ ಭದ್ರತಾ ಸೇವೆಗಳನ್ನು ಒದಗಿಸುವುದು. (ತಂತ್ರಜ್ಞಾನ ಆಧಾರಿತ ಹೈಬ್ರಿಡ್ ಭದ್ರತೆ ವ್ಯವಸ್ಥೆ) (ದ್ವಿಲಕೋಟೆ ಪದ್ಧತಿ) ಟೆಂಡರಿಗಿಟ್ಟ ಮೊತ್ತ : ₹.76.21 ಲಕ್ಷಗಳು ಇಎಂಡಿ : ₹.1,53,000/-
2.	ಬಸವನಗುಡಿ ಕ್ಷೇತ್ರದಲ್ಲಿರುವ ಎಲ್ಲಾ ಬೃ.ಬೆಂ.ಮ.ಪಾಲಿಕೆ ಕಚೇರಿ ಕಟ್ಟಡಗಳಿಗೆ ಸ್ವಚ್ಛತೆ ಸೇವೆಗಳನ್ನು ಒದಗಿಸುವುದು. (ಏಕಲಕೋಟೆ ಪದ್ಧತಿ) ಟೆಂಡರಿಗಿಟ್ಟ ಮೊತ್ತ: ₹.20.50 ಲಕ್ಷಗಳು ಇಎಂಡಿ : ₹.51,000/-
3.	ಬಸವನಗುಡಿ ಕ್ಷೇತ್ರದಲ್ಲಿರುವ ಬೃ.ಬೆಂ.ಮ.ಪಾಲಿಕೆ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಒದಗಿಸುವುದು. (ಏಕಲಕೋಟೆ ಪದ್ಧತಿ) ಟೆಂಡರಿಗಿಟ್ಟ ಮೊತ್ತ: ₹.5.74 ಲಕ್ಷಗಳು ಇಎಂಡಿ : ₹.15,000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **28.02.2025**ರ ಮಧ್ಯಾಹ್ನ **3:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **10.03.2025**ರ ಸಂಜೆ **5.00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **04.03.2025**ರ ಸಂಜೆ **4.00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು ದಿನಾಂಕ **12.03.2025**ರ ಬೆಳಿಗ್ಗೆ **10:15** ಗಂಟೆಗೆ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಬಸವನಗುಡಿ ವಿಭಾಗ

ಕರ್ನಾಟಕ ಸರ್ಕಾರ

ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್ ಅಂಬೇಡ್ಕರ್ ಭವನ, ಹಾಸನ

ದೂರವಾಣಿ:08172-268960,
email:dswohassan@gmail.com

ಸಂ/ಉನಿಸಕಇಹಾ/ಡಿ3/ಸಿಬ್ಬಂದಿ/ಸಿಆರ್36/2024-25
ದಿನಾಂಕ:21.02.2025

ಟೆಂಡರ್ ಪ್ರಕಟಣೆ

2025-26ನೇ ಸಾಲಿನಲ್ಲಿ ಹಾಸನ ಜಿಲ್ಲೆ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ವ್ಯಾಪ್ತಿಯ ಕಛೇರಿ/ವಿದ್ಯಾರ್ಥಿ ನಿಲಯಗಳು/ಆಶ್ರಮ/ವಸತಿ ಶಾಲೆಗಳು ಮತ್ತು ಮೊರಾರ್ಜಿ ದೇಸಾಯಿ/ಕಿ.ರಾ.ಚನ್ನಮ್ಮ/ಡಾ.ಬಿ.ಆರ್.ಅಂಬೇಡ್ಕರ್/ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಮಾನವಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.1089.66 ಲಕ್ಷ ಟೆಂಡರ್ ಪ್ರಕಟಣೆ ದಿನಾಂಕ:24-2-2025 ಫ್ರೀ ಬಿಡ್ ಮೀಟಿಂಗ್: ದಿನಾಂಕ 3-3-2025 ರಂದು ಬೆಳಗ್ಗೆ 11.00 ಗಂಟೆಗೆ ಸ್ಥಳ:-ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 10-3-2025 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: www.eproc.karnataka.gov.in ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ ದೂರವಾಣಿ ಸಂ: 08172-268960

ಸಹಿ/-ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ

ವಾಸಾಸಂಇ/ಹಿಸನಿ/ಹಾಸನ/988/ಕೆಎಸ್‌ಎಂಸಿಎ/2024-25

ಪುರಸಭೆ ಕಾರ್ಯಾಲಯ, ಬಸವನ ಬಾಗೇವಾಡಿ

ಕ್ರ.ಸಂ:ಪುಸಬಬಾ/ಲೋ.ವಿ/2024-25 ದಿನಾಂಕ:00.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಬಸವನ ಬಾಗೇವಾಡಿ ಪುರಸಭೆ ವ್ಯಾಪ್ತಿಯಲ್ಲಿ ಸನ್ 2024-25 ನೇ ಸಾಲಿನ ರಾಜೀವ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಶನ್ ಲಿಮಿಟೆಡ್ ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್ **at https://kppp.karnataka.gov.in** ಠೇವಣಿ (ಇಎಂಡಿ) ಮತ್ತು ಟೆಂಡರ್ ಫೀಯನ್ನು ಕೆ.ಪಿ..ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಇಂಡೆಂಟ್ ಈ ಕೆಳಗಿನಂತಿವೆ.

1) DMA/2024-24/WS/WORK_INDENT33461/CALL-2

1) ಟೆಂಡರ್ ಕುರಿತು ಆಕ್ಷೇಪಣೆಗಾಗಿ ಕೊನೆಯ ದಿನಾಂಕ: 27.02.2025 ರ ಸಂಜೆ 4.00 ಗಂಟೆವರೆಗೆ

2)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28.02.2025 ರ ಸಂಜೆ 4.30 ಗಂಟೆವರೆಗೆ.

3) ಟೆಂಡರ್ ತಾಂತ್ರಿಕವಾಗಿ ತೆರೆಯುವ ದಿನಾಂಕ: 01.03.2025 ರ ಸಂಜೆ 5.00 ಗಂಟೆವರೆಗೆ ನಿಗಧಿಪಡಿಸಲಾಗಿದೆ.

4) ಟೆಂಡರ್ ಆರ್ಥಿಕವಾಗಿ ತೆರೆಯುವ ದಿನಾಂಕ: 03.03.2025 ರ ಬೆಳಿಗ್ಗೆ 11.00 ಗಂಟೆವರೆಗೆ ನಿಗಧಿಪಡಿಸಲಾಗಿದೆ.

ಸಹಿ/- ಮುಖ್ಯಾಧಿಕಾರಿ, ಪುರಸಭೆ ಬಸವನಬಾಗೇವಾಡಿ
ಸಹಿ/- ಆಡಳಿತಾಧಿಕಾರಿಗಳು, ಪುರಸಭೆ ಬಸವನಬಾಗೇವಾಡಿ

ವಾಸಾಸಂಇ/ವಿಜಯಪುರ/716/ಕೆಎಸ್‌ಎಂಸಿಎ/2024-25

ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಉದ್ಧಾರವಾಗಲ್ಲ

ಸರಕಾರ ದಿವಾಳಿಯಾಗಿದೆ ಎಂದರೆ ದಾಖಲೆ ನೀಡಿ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ: ಬಿಜೆಪಿಗರು ಸುಮ್ಮನೆ ನಮ್ಮ ಸರಕಾರ ಪಾಪರ್ ಆಗಿದೆ. ದಿವಾಳಿ ಆಗಿದೆ ಎನ್ನುತ್ತಿದ್ದಾರೆ. ಈ ಕುರಿತು ದಾಖಲೆ ಇದ್ದರೆ ತೆಗೆದುಕೊಂಡು ಬರಲಿ ಚರ್ಚೆ ಮಾಡೋಣ ಎಂದು ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ನಾಯಕರಿಗೆ ಸವಾಲೆಸೆದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ ವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಅವರಿಗೆ ನಮ್ಮ ಕಲ್ಯಾಣ ಪಥ ರಸ್ತೆ ಯೋಜನೆಯ ಅಡಿಗಲ್ಲು ಸಮಾರಂಭಕ್ಕೆ ನಾನೇ ಆಹ್ವಾನ ಮಾಡುತ್ತೇನೆ. ಅದಾದ ಮೇಲೆ 5 ಸಾವಿರ ಕೋಟಿ ಪ್ರಗತಿ ಪಥ ಯೋಜನೆಗೆ ಚಾಲನೆ ನೀಡುತ್ತಿದ್ದೇವೆ. ಅವರ ಕ್ಷೇತ್ರಕ್ಕೂ ಯೋಜನೆಯ ಹಣ ಹೋಗುತ್ತೆ. ಸುಮ್ಮನೆ ದಿವಾಳಿ, ದಿವಾಳಿ ಅಂದರೆ ಹೇಗೆ?. ದಿವಾಳಿಯಾಗಿರುವುದು ಬಿಜೆಪಿ ಪಕ್ಷ. ವಿಜಯೇಂದ್ರ ಅವರ ನಾಯಕತ್ವದಲ್ಲಿ ಬಿಜೆಪಿ ಉದ್ಧಾರ ಆಗಲ್ಲ ಎಂದು ಟಾಂಗ್ ನೀಡಿದರು.

ಮೈಸೂರು ನಗರದಲ್ಲಿ 144ಸೆಕ್ಷನ್ ಜಾರಿಗೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಿಜೆಪಿಯ ಯಾವ ಬಣದವರು ಪ್ರತಿಭಟನೆ ಮಾಡುತ್ತಿದ್ದಾರೆ ಎನ್ನುವುದು ಮೊದಲು ತಿಳಿಸಲಿ. ಬಿಜೆಪಿಯವರು ಯಾವುದಾದರು, ಒಳ್ಳೆಯ ಉದ್ದೇಶದಿಂದ ಪ್ರತಿಭಟನೆ ಮಾಡಿದ್ದಾರಾ?. ಪ್ರತಾಪ್ ಸಿಂಹ ಮೇಲೆ ಏಕೆ ಕೇಸ್ ಆಗಿದೆ. ಇವಾಗ ಬಿಜೆಪಿಗರು ಅಲ್ಲಿಗೆ ಹೋಗಿ ಏನ್ ಮಾಡುತ್ತಾರೆ ಎಂದು ಬಿಜೆಪಿ ಪ್ರತಿಭಟನೆಗೆ ಕೆಂಡಾಮಂಡಲರಾದರು.

ನಮ್ಮ ಕಂಡಕ್ಟರ್ ಮೇಲೆ ಮಹಾರಾಷ್ಟ್ರದವರು ಹಲ್ಲೆ ಮಾಡಿದ್ದು ತಪ್ಪು. ನಾನು ಅದನ್ನ ಖಂಡಿಸುತ್ತೇನೆ. ಮಹಾರಾಷ್ಟ್ರ ಹಾಗೂ ಕೇಂದ್ರದಲ್ಲಿ ಬಿಜೆಪಿ ಸರಕಾರವಿದೆ. ಡಬಲ್ ಎಂಜಿನ್ ಸರಕಾರ ಸಮಸ್ಯೆ ಬಗೆಹರಿಸಲಿ. ನಾನು ನಮ್ಮ ನೆಲ, ಜಲ, ಗಡಿ ವಿಷಯದಲ್ಲಿ ಬದ್ಧರಾಗಿದ್ದೇವೆ.

- ಪ್ರಿಯಾಂಕ್ ಖರ್ಗೆ ಸಚಿವ

ಪ್ರಯಾಗಕ್ಕೆ ತೆರಳಿದವರ ಪಯಣ ಅಂತ್ಯ

ಮಧ್ಯಪ್ರದೇಶದ ಜಬಲಪುರದಲ್ಲಿ ಭೀಕರ ಅಪಘಾತ | ರಾಜ್ಯದ ಆರು ಮಂದಿ ದಾರುಣ ಸಾವು

ಬೆಳಗಾವಿ: ವಾರದ ಹಿಂದೆಯಷ್ಟೇ ಪ್ರಯಾಗ್‌ರಾಜ್‌ನ ಕುಂಭಮೇಳಕ್ಕೆ ತೆರಳಿದ್ದ ಗೋಕಾಕ್‌ನ ನಾಲ್ವರು ಸೇರಿ 6 ಮಂದಿ ಭೀಕರ ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೀಡಾದ ಘಟನೆ ಮಧ್ಯಪ್ರದೇಶದ ಜಬಲಪುರ ಜಿಲ್ಲೆಯಲ್ಲಿ ನಡೆದಿದೆ.

ಪ್ರಯಾಗ್‌ರಾಜ್‌ದಿಂದ ಕ್ರೂಸರ್ ವಾಹನದಲ್ಲಿ ಜಬಲಪುರಕ್ಕೆ ತೆರಳುವಾಗ ಸೋಮವಾರ ಬೆಳಗ್ಗೆ 6 ಗಂಟೆಗೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಈ ದುರ್ಘಟನೆ ನಡೆದಿದೆ. ಘಟನೆಯಲ್ಲಿ ಆರು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗೋಕಾಕ್‌ನ ಬಾಲಚಂದ್ರ ಗೌಡರ್(50), ವಿರೂಪಾಕ್ಷ ಗುಮತಿ(61), ಬಸವರಾಜ್ ಕುರಟ್ಟಿ(63), ಬಸವರಾಜ್ ದೊಡಮನಿ(49), ಹುಕ್ಕೇರಿ ತಾಲೂಕಿನ ಆನಂದಪುರದ ಸುನೀಲ್ ಶೇಡಶ್ಯಾಳೆ(45) ಮತ್ತು ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಈರಣ್ಣ ಶೇಬಿನಕಟ್ಟಿ(27) ಮೃತಪಟ್ಟ ದುರ್ದೈವಿಗಳು. ಗಂಭೀರ ಗಾಯಗೊಂಡ ಮುಷ್ತಾಕ್ ಕಿಲ್ಲೇದಾರ, ಸದಾಶಿವ ಉಪದಲಿ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಸಕ ರಮೇಶ ಜಾರಕಿಹೊಳಿ, ಮಧ್ಯಪ್ರದೇಶದ ಪೊಲೀಸ್ ಅಧಿಕಾರಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ಮೃತರ ಶವಪರೀಕ್ಷೆ ನಡೆಸಿ ಆದಷ್ಟು ಬೇಗ ಬೆಳಗಾವಿಗೆ ಕಳುಹಿಸಲು ವ್ಯವಸ್ಥೆ ಮಾಡುವಂತೆ ಮನವಿ ಮಾಡಿದ್ದಾರೆ. ಮಂಗಳವಾರ ಸಂಜೆ ಮೃತರ ಪಾರ್ಥಿವ ಶರೀರಗಳು ಗೋಕಾಕ್‌ಗೆ ಆಗಮಿಸಲಿವೆ. ಮೃತರ ಕುಟುಂಬಕ್ಕೆ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸಾಂತ್ವನ ಹೇಳಿದ್ದು, ಮೃತರಿಗೆ ಸಂತಾಪ ಸೂಚಿಸಿದ್ದಾರೆ.

ಅಪಘಾತದಲ್ಲಿ ಸಾವನ್ನಪ್ಪಿದ ಆರು ಜನರ ಚಿತ್ರ.

ರಸ್ತೆ ಅಪಘಾತದಲ್ಲಿ ನುಜ್ಜಾಗಿರುವ ತೂಫಾನ್ ವಾಹನ.

ಕುಟುಂಬದ ಜತೆ ಮಾತನಾಡಿದ್ದರು

ಪ್ರಯಾಗರಾಜ್‌ನ ಕುಂಭಮೇಳದಲ್ಲಿ ಭಾಗವಹಿಸಲು ಎಂಟು ಜನರ ತಂಡ ಫೆ.18 ರಂದು ತೆರಳಿತ್ತು. ಭಾನುವಾರ ತಮ್ಮ ಕುಟುಂಬದವರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿ, ಸೋಮವಾರ ಕುಂಭಮೇಳದಲ್ಲಿ ತೀರ್ಥಸ್ನಾನ ಮಾಡಿ ಮರಳುವುದಾಗಿ ತಿಳಿಸಿದ್ದರು. ಮುಷ್ತಾಕ್ ಕಿಲ್ಲೇದಾರ ಹೊರತುಪಡಿಸಿ ಇತರ ಎಲ್ಲ ಏಳು ಜನರೂ ಸಂಬಂಧಿಕರು.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಕೊಟ್ಟ ಮಾತಿನಂತೆ ನಮ್ಮ ಸರಕಾರ ಬಾಕಿ ಇರುವ ಗ್ಯಾರಂಟಿ ಹಣವನ್ನು ಫಲಾನುಭವಿಗಳ ಖಾತೆಗೆ ನಿಶ್ಚಿತವಾಗಿಯೂ ಹಾಕುತ್ತದೆ. ಆದರೆ ಬಿಜೆಪಿ ಕೊಟ್ಟ ಮಾತಿನಂತೆ ಜನರ ಖಾತೆಗೆ 15 ಲಕ್ಷ ರು. ಹಾಕುವುದು ಯಾವಾಗ..?(ಸಚಿವ ಸಂತೋಷ್ ಮಾತು ಉಲ್ಲೇಖಿಸಿ ಹೇಳಿಕೆ)

ಓಂ(ಬಿಎಲ್ ಪಾಟೀಲ್), ಬೆಂಗಳೂರು

ಯಾಕೆ ಲೇಟ್ ಆಗಿದೆ ಹೇಳಿ ಲಾಡ್ ಸಾಹೇಬರೇ..?ಅವರ ಮೇಲೆ ಇವರ ಮೇಲೆ ಗೂಬೆ ಕೂಡಿಸೋದು ಬಿಟ್ಟು, ನಿಮ್ಮ ಮೇಲೆ ಕುಳಿತಿರುವ ಗೂಬೆ ಓಡಿಸಿಕೊಳ್ಳಿ. ರಾಜ್ಯದಲ್ಲಿ ಜನಜೀವನ ಅಸ್ತವ್ಯಸ್ತ ಆಗಿದೆ. ಬೆಲೆಗಳು ಗಗನಕ್ಕೆ ಏರಿವೆ. ದರ ಏರಿಕೆ ಮಾಡಿ ಸಾಮಾನ್ಯರ ಜೇಬಿಗೆ ಕತ್ತರಿ ಹಾಕಿ, ಯೋಜನೆಗಳನ್ನು ಪೂರೈಸುತ್ತಿಲ್ಲ ನೀವು. ಇಂತಹ ಭಂಡ ಬಾಳು ಬೇಕಾ ನಿಮಗೆ..?

ವಿಶ್ವವಾಣಿ ಕ್ಲಬ್ ಹೌಸ್
25.02.2025
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ಸತ್ಯೇಶ್ ಎನ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕೊಪ್ಪಳ**

ಸಮಸ್ಯೆಯೇನು..?

- ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಜೀರಾಳ ಪಂಚಾಯಿತಿಯ ಹಳೇ ಜೀರಾಳ ಕಲ್ಗುಡಿ ಗ್ರಾಮದಲ್ಲಿ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕ್ ದುರಸ್ತಿಗೊಂಡಿರುವುದು.
- **ಪರಿಹಾರ:** ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಜೀರಾಳ ಪಂಚಾಯಿತಿಯ ಹಳೇ ಜೀರಾಳ ಕಲ್ಗುಡಿ ಗ್ರಾಮದಲ್ಲಿ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕ್ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಶೀಘ್ರ ನೀರಿನ ಟ್ಯಾಂಕ್ ದುರಸ್ತಿ ಕಾರ್ಯ ಮುಗಿಸುತ್ತೇನೆ ಎಂದು ತಿಳಿಸಿದ್ದಾರೆ.

ಕರ್ನಾಟಕವೇ ಒಂದು ಜಗತ್ತು; ಅದನ್ನು ವಿಶ್ವಕ್ಕೆ ತೋರಿಸಬೇಕಿದೆ

ಕರ್ನಾಟಕದ ಒಡಲಿನಲ್ಲಿ ಮರುಭೂಮಿ ಎನ್ನುವುದನ್ನು ಬಿಟ್ಟು ಎಲ್ಲ ರೀತಿಯ ಪ್ರೇಕ್ಷಣೀಯ ಸ್ಥಳಗಳೂ ತುಂಬಿವೆ. ಇಂತಹ ವೈಶಿಷ್ಟ್ಯ, ಅಪರೂಪದ ನಾಡನ್ನು ವಿಶ್ವಕ್ಕೆ ಪರಿಚಯಿಸಬೇಕಾಗಿರುವುದು ನಮ್ಮೆಲ್ಲರ ಹೊಣೆ. ಈ ಕಾರಣಕ್ಕಾಗಿಯೇ ಕೈಟ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಅಭಿಪ್ರಾಯಪಟ್ಟಿದ್ದಾರೆ. ಬುಧವಾರ ಆರಂಭವಾಗಲಿರುವ ಕೈಟ್ ಎಕ್ಸ್‌ಪೋದ ಹಿನ್ನೆಲೆಯಲ್ಲಿ ವಿಶ್ವವಾಣಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಕೈಟ್ ಸಮಾವೇಶದ ಉದ್ದೇಶ, ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕಿರುವ ಅವಕಾಶ, ಕೆಎಸ್‌ಟಿಡಿಸಿಯ ನೂತನ ಯೋಜನೆ ಸೇರಿದಂತೆ ವಿವಿಧ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ
ರಂಜಿತ್ ಎಚ್. ಅಶ್ವತ್ಥ

- **ಕೈಟ್ ಸಮಾವೇಶದ ಉದ್ದೇಶವೇನು?**

ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋ ಪ್ರಮುಖ ಉದ್ದೇಶವೇ ವಿಶ್ವದ ಮುಂದೆ ಕರ್ನಾಟಕ ಪ್ರವಾಸೋದ್ಯಮವನ್ನು ಪ್ರಸ್ತುತಪಡಿಸುವುದಾಗಿದೆ. ಕರ್ನಾಟಕದಲ್ಲಿ ಮರುಭೂಮಿ ಪ್ರವಾಸೋದ್ಯಮ ಹೊರತುಪಡಿಸಿ ಎಲ್ಲ ರೀತಿಯ ಪ್ರವಾಸೋದ್ಯಮವೂ ಇದೆ. ಅದಷ್ಟೇ ಅಲ್ಲದೇ, ಕರ್ನಾಟಕ ಸಂಗೀತ, ಕಲೆ, ಸಂಸ್ಕೃತಿ, ಇತಿಹಾಸವನ್ನು ಜಗತ್ತಿಗೆ ತೋರಿಸಬೇಕಿದೆ. ಅನೇಕ ದೇಶಗಳು ಸಣ್ಣ ಸಣ್ಣ ವಿಷಯವನ್ನು ಇಡೀ ವಿಶ್ವದ ಬಹುದೊಡ್ಡ ಪ್ರಮಾಣದಲ್ಲಿ ತೋರಿಸುತ್ತವೆ. ಆದರೆ ಕರ್ನಾಟಕದಲ್ಲಿರುವ ಅಪಾರ ಪ್ರವಾಸಿ ಸಂಪತ್ತನ್ನು ಇನ್ನಷ್ಟು ದೊಡ್ಡಮಟ್ಟಿಗೆ ತೋರಿಸುವ ಕೆಲಸವಾಗಬೇಕಿದೆ. ಆದ್ದರಿಂದ ಕೈಟ್ ಸಮಾವೇಶ ಆಯೋಜಿಸಿ, ವಿದೇಶಿ ಹಾಗೂ ಅಂತಾರಾಜ್ಯ ಪ್ರವಾಸಿ ಕ್ಷೇತ್ರದ ಉದ್ಯಮಿಗಳನ್ನು ಆಹ್ವಾನಿಸಲಾಗಿದೆ.

- **ಸಮಾವೇಶದಲ್ಲಿ ಎಷ್ಟು ಮಂದಿ ಭಾಗವಹಿಸುವ ನಿರೀಕ್ಷೆ ಇದೆ?**

ಕರ್ನಾಟಕವನ್ನು ವಿಶ್ವಕ್ಕೆ ಪರಿಚಯಿಸಿರುವ ಈ ಎಕ್ಸ್‌ಪೋದಲ್ಲಿ ಭಾಗವಹಿಸುವಂತೆ 120 ದೇಶಗಳಿಗೆ ಆಹ್ವಾನ ನೀಡಲಾಗಿತ್ತು. ಇದರಲ್ಲಿ ಅಮೆರಿಕ, ಫ್ರಾನ್ಸ್, ಜರ್ಮನಿ, ಅಬುಧಾಬಿ, ಪೋಲೆಂಡ್ ಸೇರಿದಂತೆ 107 ದೇಶಗಳ ಪ್ರತಿನಿಧಿಗಳು ಆಗಮಿಸಿದ್ದಾರೆ. ಇದರಲ್ಲಿ ವಿವಿಧ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕ್ಷೇತ್ರದ ಸಂಸ್ಥೆಗಳ ಪ್ರತಿನಿಧಿಗಳು ಆಗಮಿಸುತ್ತಿದ್ದಾರೆ. ಇದರೊಂದಿಗೆ ಭಾರತದ ವಿವಿಧ ರಾಜ್ಯಗಳ 400ಕ್ಕೂ ಮಂದಿ ಭಾಗವಹಿಸುತ್ತಿದ್ದಾರೆ. ಇವಿಷ್ಟೇ ಅಲ್ಲದೇ, 17 ಅಂತಾರಾಷ್ಟ್ರೀಯ ಮಾಧ್ಯಮ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. 26ರಂದು ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ ಬಳಿಕ 27, 28ರಂದು ಸುಮಾರು ಸಾವಿರಾರು ಬಿ2ಬಿ ಸಭೆಗಳಿಗೆ ಅವಕಾಶ ನೀಡಲಾಗಿದೆ. ಈಗಲೇ 14ಸಾವಿರಕ್ಕೂ ಹೆಚ್ಚು ಬಿ2ಬಿ ಸಭೆಗೆ ಸಮಯ ನಿಗದಿಯಾಗಿದೆ.

- **ಹಾಗಾದರೆ, ಇಡೀ ಎಕ್ಸ್‌ಪೋದಿಂದ ನಿಮ್ಮ ನಿರೀಕ್ಷೆ ಏನು?**

ಈ ಸಮಾವೇಶದಲ್ಲಿ ಭಾಗವಹಿಸಲು ವಿದೇಶದಿಂದ ಕನಿಷ್ಠ ಒಂದು ಲಕ್ಷ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಅವರೆಲ್ಲ ಕನಿಷ್ಠ 10ರಿಂದ 12 ದಿನ ಇಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ. ಇದರೊಂದಿಗೆ ಲಕ್ಷಾಂತರ ದೇಶಿಯ ಪ್ರವಾಸಿಗರು ಈ ಸಮಾವೇಶದಲ್ಲಿ ಭಾಗವಹಿಸಲು ಬರುವ ನಿರೀಕ್ಷೆಯಿದೆ. ಸಂಶೋಧನೆಗಳ ಪ್ರಕಾರ, ಯಾವುದೇ ವಿದೇಶಿ ಪ್ರವಾಸಿಗ ಬಂದರೂ ಸರಾಸರಿ ಕನಿಷ್ಠ 2700 ಡಾಲರ್ ಖರ್ಚು ಮಾಡುತ್ತಾರೆ. ಅಂದರೆ, ಒಂದು ಲಕ್ಷ ಜನರಿಂದ ಅಂದರೆ ಕನಿಷ್ಠ 2700 ಕೋಟಿ ರು. ವ್ಯವಹಾರ ನೇರ ಅಥವಾ ಪರೋಕ್ಷವಾಗಿ ಆಗಲಿದೆ. ಇದರೊಂದಿಗೆ ಹೂಡಿಕೆ, ಒಪ್ಪಂದ ಸೇರಿದಂತೆ ಇನ್ನಷ್ಟು ಆದಾಯ ರಾಜ್ಯದ ಬೊಕ್ಕಸಕ್ಕೆ ಸಿಗುವ ನಿರೀಕ್ಷೆಯಿದೆ.

ಈ ಹಿಂದೆ ನಾನು ಪ್ಯಾರಿಸ್, ಲಂಡನ್ ಪ್ರವಾಸಿ ಎಕ್ಸ್‌ಪೋಗಳಲ್ಲಿ ಭಾಗವಹಿಸಿದ್ದೆ. ಅಲ್ಲಿ ನಾನು ಗಮನಿಸಿದ ಸಂಗತಿ ಅಂದರೆ, ಪ್ರವಾಸೋದ್ಯಮದಲ್ಲಿ ನೂರು ರುಪಾಯಿ ಖರ್ಚು ಮಾಡಿದರೆ 300 ರುಪಾಯಿ ಲಾಭ ಮಾಡಬಹುದು. ಕರ್ನಾಟಕದಂತ ವಿಶಿಷ್ಟ ಪೂರ್ಣರಾಜ್ಯದಲ್ಲಿ ಇನ್ನಷ್ಟು ಲಾಭಕ್ಕೆ ಅವಕಾಶವಿದೆ. ವಿದೇಶಿ ವಿನಿಮಯ ಹೆಚ್ಚಾಗುವುದರಿಂದ, ರಾಜ್ಯದ ಬೊಕ್ಕಸಕ್ಕೆ ತೆರಿಗೆ ಬರುವುದಷ್ಟೇ ಅಲ್ಲದೇ, ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತದೆ. ಈ ಕಾರಣಕ್ಕೆ ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಇನ್ನಷ್ಟು ಒತ್ತು ನೀಡಬೇಕಾಗಿದೆ. ಕರ್ನಾಟಕದಂತಹ ವಿಭಿನ್ನ ಪ್ರವಾಸೋದ್ಯಮವಿಲ್ಲದ ಅನೇಕ ರಾಷ್ಟ್ರಗಳು ಪ್ರವಾಸೋದ್ಯಮದ ಮೇಲೆಯೇ ನಿಂತಿದೆ. ಮರುಭೂಮಿ ಹೊರತು ಎಲ್ಲ ರೀತಿಯ ಪ್ರವಾಸಿ ತಾಣಗಳಿರುವ ಕರ್ನಾಟಕವನ್ನು ಜಗತ್ತಿಗೆ ಪ್ರದರ್ಶನ ಮಾಡಬೇಕಿದೆ. ಈ ಕೆಲಸವಾದರೆ, ರಾಜ್ಯಕ್ಕೆ ಭಾರಿ ಲಾಭವಾಗುತ್ತದೆ.

> ನಮ್ಮ ನೆರೆ ರಾಜ್ಯವಾಗಿರುವ ಕೇರಳ ಈಗಾಗಲೇ 12 ಬಾರಿ ಅಂತಾರಾಷ್ಟ್ರೀಯ ಎಕ್ಸ್‌ಪೋ ಮಾಡಿದ್ದಾರೆ. ಆದರೆ ನಾವು ಎರಡು ಬಾರಿ ಮಾಡಿದ್ದೇನೆ. ಪ್ರವಾಸೋದ್ಯಮಕ್ಕೆ ಅಂತಹ ಪುಟ್ಟ ರಾಜ್ಯ ನೀಡುತ್ತಿರುವ ಕೊಡುಗೆಯನ್ನು ಗಮನಿಸಿ, ನಮ್ಮಲ್ಲಿಯೂ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶ ನೀಡಬೇಕು. ಇದಕ್ಕೆ ಸರಕಾರ ಮಾತ್ರವಲ್ಲದೇ, ಖಾಸಗಿಯವರೂ ಉತ್ತೇಜನ ನೀಡಬೇಕು.
>
> – ಎಂ. ಶ್ರೀನಿವಾಸ್, ಅಧ್ಯಕ್ಷರು, ಕೆಎಸ್‌ಟಿಡಿಸಿ

★ **ನಿಮ್ಮ ಪ್ರಕಾರ ಪ್ರವಾಸೋದ್ಯಮ ವೃದ್ಧಿಗೆ ಏನು ಮಾಡಬೇಕು?**

ಯಾವುದೇ ಒಂದು ಪ್ರವಾಸಿ ತಾಣ ಅಭಿವೃದ್ಧಿಯಾಗಬೇಕು ಎಂದರೆ ಪ್ರಮುಖವಾಗಿ ಅದಕ್ಕೆ ಸಾರಿಗೆ, ಸಂವಹನ ಹಾಗೂ ವಾಸ್ತವ್ಯಕ್ಕೆ ಸೂಕ್ತ ವ್ಯವಸ್ಥೆ ಇರಬೇಕು. ಸಾವಿರಾರು ವರ್ಷಗಳ ಇತಿಹಾಸವಿರುವ ಕರ್ನಾಟಕ ಅನೇಕ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯವನ್ನು ನೀಡಬೇಕಿದೆ. ಇದರೊಂದಿಗೆ ಪ್ರವಾಸಿ ತಾಣಗಳನ್ನು ಜಗತ್ತಿಗೆ ಪರಿಚಯಿಸಬೇಕು. ವೈಯಕ್ತಿಕವಾಗಿ 40ರಿಂದ 50 ದೇಶಗಳನ್ನು ಸುತ್ತಿರುವ ನನಗೆ, ಕರ್ನಾಟಕದಲ್ಲಿರುವಷ್ಟು ಪರಂಪರೆ ಎಲ್ಲಿಯೂ ಸಿಕ್ಕಿಲ್ಲ. ಹಂಪಿ, ಐಹೊಳೆ, ಬೇಲೂರು, ಹಳೇಬೀಡಿನಲ್ಲಿರುವ ವೈಭವ ಯಾವ ದೇಶದಲ್ಲಿದೆ ಹೇಳಿ? ಆದರೆ ಪ್ರವಾಸಿಗರಿಗೆ ಈ ಕ್ಷೇತ್ರವನ್ನು ಪರಿಚಯಿಸಲು ಮೂಲಸೌಕರ್ಯವನ್ನು ವೃದ್ಧಿಸಬೇಕಿದೆ. ಆದ್ದರಿಂದ ನಮ್ಮ ಸರಕಾರವನ್ನು ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಕೇಳುತ್ತಿದ್ದು, ಸೂಕ್ತ ಅನುದಾನ ಸಿಗುವ ನಿರೀಕ್ಷೆಯಿದೆ.

- **ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಏನೆಲ್ಲ ಕಾರ್ಯ ಮಾಡುತ್ತಿದೆ?**

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಪ್ರಮುಖವಾಗಿ ಎರಡು ಚಟುವಟಿಕೆಯಲ್ಲಿ ತೊಡಗಿದೆ. ಒಂದು ಪ್ರವಾಸಿ ಪ್ಯಾಕೇಜ್‌ಗಳ ಮೂಲಕ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ರಾಜ್ಯದ ವಿವಿಧ ಪ್ರವಾಸಿ ತಾಣಗಳಿಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ವಾಪಸು ಕರೆದುಕೊಂಡು ಬರುವುದು. ಇನ್ನೊಂದು ಹೋಟೆಲ್‌ಗಳನ್ನು ನಡೆಸುವುದು. ಸದ್ಯ ರಾಜ್ಯದಲ್ಲಿ 28 ಹೋಟೆಲ್‌ಗಳು ಕೆಎಸ್‌ಟಿಡಿಸಿ ನಡೆಸುತ್ತಿದೆ. ಇತ್ತೀಚಿನ ದಿನದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹೋಟೆಲ್‌ಗಳಿಗೆ ವಿದೇಶಿ ಪ್ರವಾಸಿಗರು ಆಗಮಿಸುತ್ತಿರುವುದರಿಂದ, ಹೋಟೆಲ್‌ಗಳನ್ನು ಮೇಲ್ದರ್ಜೆಗೆ ಏರಿಸಬೇಕಿದೆ. ಇದರೊಂದಿಗೆ ಇನ್ನಷ್ಟು ಬಸ್‌ಗಳನ್ನು ಖರೀದಿಸಿ, ಪ್ರವಾಸಿ ಪ್ಯಾಕೇಜ್‌ಗಳನ್ನು ಹೆಚ್ಚಿಸಬೇಕಿದೆ. ಈ ನಿಟ್ಟಿನಲ್ಲಿ ಸರಕಾರದಿಂದ ಅನುದಾನ ಕೇಳಿದ್ದೂ, ಸಕಾರಾತ್ಮಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಂದಿಸಿದ್ದಾರೆ.

- **ಪ್ರಸ್ತುತ ಯಾವ ಪ್ಯಾಕೇಜ್‌ಗಳಿವೆ? ದರ ಎಷ್ಟಿದೆ?**

ಬೆಂಗಳೂರು-ಮೈಸೂರಿನಿಂದ ಹಿಡಿದು ಅಂತಾರಾಜ್ಯ ಪ್ರವಾಸವನ್ನು ನಾವು ನಿರ್ವಹಿಸುತ್ತಿದ್ದೇವೆ. ನಮ್ಮದು ಸರಕಾರಿ ಉದ್ದಿಮೆಯಾಗಿರುವುದರಿಂದ ಲಾಭಕ್ಕಾಗಿ ಮಾಡಲು ಆಗುವುದಿಲ್ಲ. ಟೂರಿಸ್ಟ್ ಪ್ಯಾಕೇಜ್‌ನಲ್ಲಿ ಭಾರಿ ಪೈಪೋಟಿ ಇರುವುದರಿಂದ ಹೆಚ್ಚು ಬೆಲೆ ನಿಗದಿಪಡಿಸುವುದಿಲ್ಲ. ಬೇರೆಯವರು ನೂರು ರುಪಾಯಿ ನಿಗದಿಪಡಿಸಿದ್ದರೆ, ನಾವು 90 ರುಪಾಯಿಗೆ ನಿಗದಿಪಡಿಬಹುದು. ಬೇರೆ ಖಾಸಗಿ ಏಜೆನ್ಸಿಗಳಿಗೆ ಹೋಲಿಸಿದರೆ ನಮ್ಮಲ್ಲಿ ಕಡಿಮೆ ಇರುತ್ತದೆ ಎನ್ನುವುದು ಸ್ಪಷ್ಟ. ಆದರೆ ಅದಕ್ಕೂ ಮುಖ್ಯವಾಗಿ ಸುರಕ್ಷಿತವಾಗಿ ಕರೆದುಕೊಂಡು ಹೋಗಿ, ವಾಪಸು ಕರೆದುಕೊಂಡು ಬರುವುದು ನಮ್ಮ ಉದ್ದೇಶ.

- **ತಿರುಪತಿ ಪ್ಯಾಕೇಜ್‌ಗೆ ಬೇಡಿಕೆ ಹೇಗಿದೆ?**

ನಿತ್ಯ ಬೆಂಗಳೂರಿನಿಂದ ತಿರುಪತಿಗೆ ಐದು ಬಸ್‌ಗಳನ್ನು ಓಡಿಸಲಾಗುತ್ತದೆ. ಅಂದರೆ ನಿತ್ಯ 250 ಮಂದಿ ಪ್ರವಾಸಿಗರು ತಿರುಪತಿ ದರ್ಶನ ಪಡೆಯುತ್ತಾರೆ. ಈ ಹಿಂದೆ 250 ವಿಶೇಷ ದರ್ಶನಕ್ಕೆ ಟಿಟಿಡಿ ಅವಕಾಶ ನೀಡಿತ್ತು. ಆದರೀಗ, ವಿಶೇಷ ದರ್ಶನವನ್ನು ರದ್ದುಪಡಿಸಲಾಗಿದೆ. ಆದರೂ ಜನರು ಕೆಎಸ್‌ಟಿಡಿಸಿ ಪ್ಯಾಕೇಜ್‌ಗೆ ಒಲವು ತೋರುತ್ತಿದ್ದಾರೆ. ತಿರುಪತಿಯಲ್ಲಿ ವಿಶೇಷ ದರ್ಶನವಿಲ್ಲವೆಂದರೂ, ತಾಸುಗಟ್ಟಲೇ ನಿಲ್ಲಲು ಸಿದ್ಧವೆಂದು ನಮ್ಮ ನಿಗಮದ ಪ್ಯಾಕೇಜ್‌ನಲ್ಲಿ ಬರುತ್ತಿದ್ದಾರೆ. ವಿಶೇಷ ದರ್ಶನ ರದ್ದುಪಡಿಸಿರುವ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಂಧ್ರಪ್ರದೇಶ ಸರಕಾರಕ್ಕೆ ಪತ್ರ ಬರೆದಿದ್ದು, ರದ್ದುಪಡಿಸಿರುವ 250 ದರ್ಶನದೊಂದಿಗೆ ಹೆಚ್ಚುವರಿ 250 ವಿಶೇಷ ದರ್ಶನಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಒಂದು ವೇಳೆ 500 ಮಂದಿಗೆ ಅವಕಾಶ ನೀಡಿದರೆ, ಹೆಚ್ಚುವರಿ ಐದು ಬಸ್‌ಗಳನ್ನು ಓಡಿಸಲು ನಾವು ಸಿದ್ಧ.

- **ಅಂತಾರಾಷ್ಟ್ರೀಯ ಪ್ರವಾಸಿಗರು ಕಡಿಮೆಯಾಗಿದೆಯೇ?**

ಈ ಹಿಂದೆ ಕರ್ನಾಟಕಕ್ಕೆ 60 ಲಕ್ಷ ವಿದೇಶಿ ಪ್ರವಾಸಿಗರು ಬರುತ್ತಿದ್ದರು. ಆದರೆ ಕರೋನಾ ಬಳಿಕ ಇದರ ಸಂಖ್ಯೆ 30ಕ್ಕೆ ಕುಸಿದಿದೆ. ಕರೋನಾ ಬಳಿಕವೂ ಈ ಹೊಡೆತದಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಇದೀಗ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿಯೇ ಕೈಟ್ ಎಕ್ಸ್‌ಪೋ ಮಾಡುತ್ತಿದ್ದೇವೆ. ವಿದೇಶದಿಂದ ಬಂದಿರುವ ಗಣ್ಯರಿಗೆ ಈಗಾಗಲೇ ಫ್ಯಾಮ್ ಟೂರ್ ಮಾಡಿಸುತ್ತಿದ್ದೇವೆ. ಕರಾವಳಿ ಕರ್ನಾಟಕ, ಹೆರಿಟೇಜ್ ಕರ್ನಾಟಕ ಸೇರಿದಂತೆ ಕರ್ನಾಟಕದ ವಿವಿಧ ಪ್ರವಾಸಿ ತಾಣಗಳನ್ನು ತೋರಿಸಲಾಗುತ್ತಿದೆ. ಅವರೆಲ್ಲ ವಾಪಸು ಬರುವ ವೇಳೆಗೆ, ರಾಜ್ಯ ಚಿತ್ರಣ ಸಿಗಲಿದೆ. ಇದು ಭವಿಷ್ಯದಲ್ಲಿ ನಮಗೆ ಸಹಾಯವಾಗಲಿದೆ. ಇನ್ನು ಅಂತಾರಾಷ್ಟ್ರೀಯ ಪ್ರಯಾಣಿಕರು ಕಡಿಮೆಯಾಗಲು ಮತ್ತೊಂದು ಕಾರಣ ವೈಯಕ್ತಿಕವಾಗಿ ಹೇಳುವುದಾದರೆ, ಕರ್ನಾಟಕದಲ್ಲಿರುವ ಹೋಟೆಲ್‌ಗಳು ಅದರಲ್ಲಿಯೂ ಪಂಚತಾರಾ ಹೋಟೆಲ್‌ಗಳ ಬೆಲೆ ಕೊಂಚ ಹೆಚ್ಚು ಎನಿಸುತ್ತದೆ. ಅಂಡಮಾನ್ ನಿಕೋಬಾರ್, ಬ್ಯಾಂಕಾಕ್ ಸೇರಿದಂತೆ ಹಲವು ದೇಶಗಳಲ್ಲಿರುವ ಪಂಚತಾರಾ ಹೋಟೆಲ್‌ಗಳ ದರ ಕಡಿಮೆಯಿರುವುದರಿಂದ, ಅನೇಕ ವಿದೇಶಿ ಪ್ರವಾಸಿಗರು ಆ ಕಡೆ ಮುಖ ಮಾಡುತ್ತಾರೆ. ಈ ನಿಟ್ಟಿನಲ್ಲಿ ಹೋಟೆಲ್‌ನವರು ಆಲೋಚನೆ ಮಾಡಬೇಕಿದೆ.

- **ನಿಗಮ ನೂತನ ಯೋಜನೆಗಳೇನು?**

ಸದ್ಯ ನಾಲ್ಕು ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಪ್ರಮುಖವಾಗಿ ಚಿಕ್ಕಮಗಳೂರಿನಲ್ಲಿ ಭದ್ರಾ ಹಿನ್ನೀರಿನಲ್ಲಿ ರೆಸಾರ್ಟ್ ಮಾಡಬೇಕು ಎನ್ನುವ ಆಲೋಚನೆಯಿದೆ. ಅದೇ ರೀತಿ ಮುಳ್ಳಯನ ಗಿರಿ ಬೆಟ್ಟದಲ್ಲಿ, ಕೊಡಗಿನಲ್ಲಿ ಹೊಸ ರೆಸಾರ್ಟ್ ಆರಂಭಿಸುವ ಆಲೋಚನೆಯಿದೆ. ಇದೇ ರೀತಿ ರೋರಿಚ್ ಎಸ್ಟೇಟ್‌ನಲ್ಲಿ ಇಡೀ ರಾಜ್ಯ ಪ್ರವಾಸಿ ಥೀಮ್‌ಪಾರ್ಕ್ ಮಾಡಬೇಕು ಎನ್ನುವ ಆಲೋಚನೆಯಿದೆ. ಈ ಎಲ್ಲದಕ್ಕೂ ಅನುದಾನ ಅಗತ್ಯವಿದೆ. ರೋರಿಚ್ ಎಸ್ಟೇಟ್‌ನಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಬಹುದು. ಆದರೆ ಇನ್ನುಳಿದ ಭಾಗದಲ್ಲಿ ಅಭಿವೃದ್ಧಿಪಡಿಸಲು ಅನುದಾನ ಕೇಳಿದ್ದರೂ, ಅನುದಾನದ ಆಧಾರದಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗುವುದು.

ಸೀ ಪ್ಲೇನ್ ಎಂದರೇನು? ಯಾವುದೇ ಆತಂಕವಿಲ್ಲವೇ?



ರಾಜ್ಯದ ಅನೇಕ ಪ್ರೇಕ್ಷಣೀಯ ಸ್ಥಳದಲ್ಲಿ ವಿಮಾನ ನಿಲ್ದಾಣಗಳಿಲ್ಲದೇ ಇರುವುದರಿಂದ ಅಂತಾರಾಷ್ಟ್ರೀಯ ಪ್ರಯಾಣಿಕರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಈಗಾಗಲೇ ಹಲವು ದೇಶದಲ್ಲಿರುವ ಸೀಪ್ಲೇನ್ ಗಳನ್ನು ಕರ್ನಾಟಕದಲ್ಲಿ ಪರಿಚಯಿಸುವ ಆಲೋಚನೆಯಿದೆ. ಸೀ ಪ್ಲೇನ್‌ಗಳೆಂದರೆ, ಸಮುದ್ರ ಅಥವಾ ನೀರಿನ ಮೇಲೆ ನಿಲ್ಲುವ ವಿಮಾನಗಳು ಎಂದರ್ಥ. ಸೀ ಪ್ಲೇನ್‌ಗಳು ಅತ್ಯಂತ ಸುರಕ್ಷಿತ. ಈ ವಿಮಾನಗಳು ಹೆಚ್ಚು ಭಾರವಿಲ್ಲದೇ ಇರುವುದರಿಂದ, ಅಕ್ಕಪಕ್ಕದ ಕಟ್ಟಡ, ಅಣೆಕಟ್ಟೆಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಆದ್ದರಿಂದ ಕಬಿನಿ, ಆಲಮಟ್ಟಿ ಸೇರಿದಂತೆ ವಿವಿಧ ಭಾಗದಲ್ಲಿ ಪರಿಚಯಿಸಬಹುದೇ ಎಂದು ಆಲೋಚಿಸಲಾಗುತ್ತಿದೆ. ಇದಕ್ಕೆ ಖಾಸಗಿಯವರೂ ಉತ್ಸುಕತೆ ತೋರಿದ್ದಾರೆ. ಆದರೆ ಯಾವೆಲ್ಲ ಸ್ಥಳದಲ್ಲಿ ಎನ್ನುವ ಬಗ್ಗೆ ಇನ್ನಷ್ಟೇ ತೀರ್ಮಾನವಾಗಬೇಕಿದೆ.

ರಾಷ್ಟ್ರೀಯ ಸರಸ್ ಮೇಳಕ್ಕೆ ಚಾಲನೆ | ಸಚಿವ ಶರಣಪ್ರಕಾಶ್ ಪಾಟೀಲ್ ಹೇಳಿಕೆ

ಮಹಿಳೆಯರ ಬಲವರ್ಧನೆಗೆ ಸರಕಾರ ಬದ್ಧ

ಕಲಬುರಗಿ: ಮಹಿಳೆಯರ ಆರ್ಥಿಕ ಬಲವರ್ಧನೆಗಾಗಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಇಲಾಖೆ, ಜಿಲ್ಲಾಡಳಿತ, ಜಿ.ಪಂ. ಮತ್ತು ಮಹಾನಗರ ಪಾಲಿಕೆ ಸಹಯೋಗದಲ್ಲಿ ಕಲಬುರಗಿಯಲ್ಲಿ 10 ದಿನಗಳ ನಮ್ಮ ಸರಸ್ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೌಶಲ್ಯಾಭಿವೃದ್ಧಿ- ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಸೋಮವಾರ ಚಾಲನೆ ನೀಡಿದರು.

ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಸರಸ್ ಮೇಳ ನಡೆದಿದ್ದು, ಕರ್ನಾಟಕ, ಕಾಶ್ಮೀರ, ಪಂಜಾಬ್, ಸಿಕ್ಕಿಂ, ಕೇರಳ, ತಮಿಳುನಾಡು ಸೇರಿ 9 ರಾಜ್ಯಗಳ ಸ್ವಸಹಾಯ ಸಂಘಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ. 2,000 ಹೆಚ್ಚು ಸ್ವಸಹಾಯ ಸಂಘದ ಮಹಿಳೆಯರು ಭಾಗವಹಿಸಿದ್ದಾರೆ.

ರಾಜ್ಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಪಿ.ಐ.ಶ್ರೀವಿದ್ಯಾ, ಶಾಸಕರಾದ ಅಲ್ಲಮಪ್ರಭು ಪಾಟೀಲ ಮತ್ತು ಎಂ.ವೈ.ಪಾಟೀಲ, ಸಂಸದ ರಾಧಾಕೃಷ್ಣ ದೊಡ್ಡಮನಿ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ,ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಕಲಬುರಗಿ ಮೇಯರ್ ಯಲ್ಲಪ್ಪ ನಾಯ್ಕೋಡಿ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಮೊದಲಾದ ಗಣ್ಯರು ಇದ್ದರು.

ಕಲಬುರಗಿಯಲ್ಲಿ 10 ದಿನಗಳ ಸರಸ್ ಮೇಳಕ್ಕೆ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಡಾ.ಶರಣಪ್ರಕಾಶ್ ಪಾಟೀಲ್ ಚಾಲನೆ ನೀಡಿದರು. ಸಂಸದ ರಾಧಾಕೃಷ್ಣ ದೊಡ್ಡಮನಿ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಅಲ್ಲಮಪ್ರಭು ಪಾಟೀಲ, ಎಂ.ವೈ.ಪಾಟೀಲ ಮೊದಲಾದ ಗಣ್ಯರು ಇದ್ದರು.

ರಾಜ್ಯಾದ್ಯಂತ 2,500 ಕಡೆ ಕಾಫಿ ಕಿಯೋಸ್ಕ್ ಸ್ಥಾಪನೆ

ಸಮಾರಂಭದಲ್ಲಿ ಮಾತನಾಡಿದ ಸಚಿವ ಶರಣಪ್ರಕಾಶ್ ಪಾಟೀಲ್, ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಮಹಿಳಾ ಕೇಂದ್ರಿತ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಮಹಿಳೆಗೆ ಹಣ ನೀಡಿದರೆ ಅದನ್ನು ಕುಟುಂಬಕ್ಕೆ ಸರಿಯಾದ ರೀತಿಯಲ್ಲಿ ವಿನಿಯೋಗಿಸುತ್ತಾಳೆ ಎಂಬುವ ನಂಬಿಕೆ ನಮ್ಮದು ಎಂದರು.

ರಾಜ್ಯದಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲ

ಮೈಸೂರು: ಬೆಳಗಾವಿಯಲ್ಲಿ ಸರಕಾರಿ ಬಸ್‌ನ ನಿರ್ವಾಹಕರ ಮೇಲೆ ಮರಾಠಿ ಪುಂಡರು ನಡೆಸಿದ ಹಲ್ಲೆಯ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಸರಕಾರ ಯಾರಿಗೆ ರಕ್ಷಣೆ ಕೊಡುತ್ತದೆ? ಮಂತ್ರಿಗಳೊಬ್ಬರು ಮರಾಠಿಯಲ್ಲೇ ಭಾಷಣ ಮಾಡಿದ್ದಾರೆ. 2006-07ರಲ್ಲಿ ನಾನು ಸಿಎಂ ಆಗಿದ್ದಾಗ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಪ್ರಯತ್ನ ಮಾಡಿದರು. ಆದರೆ, ನಾನು ಅದಕ್ಕೆ ಅವಕಾಶ ಕೊಡದೆ ಬೆಳಗಾವಿಯನ್ನು ರಾಜ್ಯದ ಎರಡನೇ ರಾಜಧಾನಿ ಮಾಡಿ, ಅಲ್ಲಿ ಸುವರ್ಣ ವಿಧಾನಸೌಧಕ್ಕೆ ಅಡಿಗಲ್ಲು ಹಾಕಿದೆ. ಈಗ ಬೆಳಗಾವಿ ಪರಿಸ್ಥಿತಿ ಗೊಂದಲಮಯವಾಗಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಪರಂಗೆ ರಾಜಕೀಯ ವೈರಾಗ್ಯ: ಹೆಚ್.ಡಿ.ಕೆ

ಡಾ. ಜಿ.ಪರಮೇಶ್ವರಗೆ ರಾಜಕೀಯ ವೈರಾಗ್ಯ ಬಂದ ಹಾಗಿದೆ. ರಾಜೀನಾಮೆ ಬಗ್ಗೆ ಮಾತನಾಡುತ್ತಿದ್ದಾರೆ. ರಾಜಕೀಯ ದಲ್ಲಿ ಮರ್ಯಾದಸ್ಥರು ಇರುವುದು ಒಳ್ಳೆಯದಲ್ಲ ಎಂದು ಅನಿಸಿರಬೇಕು. 136 ಕ್ಷೇತ್ರಗಳನ್ನು ಗೆದ್ದಿರುವ ಈ ಸರಕಾರಕ್ಕೆ ಜನರ ಕಾಳಜಿ ಇಲ್ಲ. ಮಹದೇವಪ್ಪ ಸಿಎಂ ದಾಖಲೆ ಮಾಡಬೇಕು ಎನ್ನುತ್ತಾರೆ. ಮಹದೇವಪ್ಪ ಅವರೇ, ಎಷ್ಟು ವರ್ಷ ಆಡಳಿತ ನಡೆಸಿದಿರಿ ಎನ್ನುವುದು ಮುಖ್ಯವಲ್ಲ. ಜನರ ಎಷ್ಟು ಸಮಸ್ಯೆ ಬಗೆಹರಿಸಿದಿರಿ ಎನ್ನುವುದು ಮುಖ್ಯ ಎಂದು ಎಚ್‌ಡಿಕೆ ತಿರುಗೇಟು ಕೊಟ್ಟರು.

ಸಮಾಚಾರ ಸಣ್ಣದಲ್ಲ

ಮರಾಠಿಗರ ಪುಂಡಾಟ ನಿಗ್ರಹಿಸಿ

ಮೈಸೂರು: ರಾಜ್ಯ ಸರಕಾರ ಕೂಡಲೇ ಮರಾಠಿಗರ ಪುಂಡಾಟ ನಿಲ್ಲಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡಿಗರು ಗಲಾಟೆ ಮಾಡಿದರೆ ಅವರಿಗಿಂತ ಜೋರಾಗಿ ಗಲಾಟೆ

ಮಾಡುತ್ತೇವೆ. ನಮಗೆ ಪುಂಡಾಟಿಕೆ ಇಷ್ಟ ಇಲ್ಲ ಅಷ್ಟೇ. ರಾಜ್ಯದ ಭಂಡ ಸರಕಾರ ಕನ್ನಡಿಗರ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ ಎಂದುಕೊಂಡಿದ್ದೇನೆ. ಮರಾಠಿ ಪುಂಡರಿಗೆ ತಕ್ಕ ಪಾಠ ಕಲಿಸಿ ಎಂದು ಒತ್ತಾಯಿಸಿದರು. ವಿದ್ಯುತ್ ಇಲಾಖೆಗೆ ಹಣ ಡೆಪಾಸಿಟ್ ಮಾಡದ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯ ಸರಕಾರ ಗ್ಯಾರಂಟಿ ಹೆಸರಿನಲ್ಲಿ ಜನರ ಕಿವಿಗೆ ಹೂ ಮುಡಿಸುತ್ತಿದೆ. ಒಂದು ಗ್ಯಾರಂಟಿ ಯೋಜನೆಯೂ ಫಲಾನುಭವಿಗಳಿಗೆ ಸರಿಯಾಗಿ ತಲುಪಿಲ್ಲ. ಸುಮ್ಮನೆ ಗ್ಯಾರಂಟಿ ಎಂದು ಓಡಾಡುತ್ತಿದ್ದಾರೆ. ಈಗ ವಿದ್ಯುತ್ ನಿಗಮವನ್ನೂ ಹಾಳು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಸಿಎಂ ವಿರುದ್ಧ ದನಿ ಎತ್ತಿದ್ದಕ್ಕೆ ಪ್ರಕರಣ

ಮೈಸೂರು: ಸಿಎಂ ವಿರುದ್ಧ ನಾನೊಬ್ಬನೇ ದನಿ ಎತ್ತುತ್ತಿದ್ದೇನೆ, ಆ ಕಾರಣಕ್ಕೆ ನಾನು ಟಾರ್ಗೆಟ್ ಆಗಿದ್ದೇನೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ

ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ವರುಣಾ, ಶಿಗ್ಗಾವಿ, ಬಸವೇಶ್ವರನಗರ, ಮಾಗಡಿ ಸೇರಿದಂತೆ ಎಲ್ಲಾ ಕಡೆ ನನ್ನ ವಿರುದ್ಧ ಎಫ್ ಐಆರ್ ಆಗುತ್ತಿದೆ. ನನ್ನ ಆತ್ಮಸ್ಥೈರ್ಯ ಕುಗ್ಗಿಸುವ ಯತ್ನ ಮಾಡುತ್ತಿದ್ದಾರೆ. ಠಾಣೆ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದರು ಆ ಘಟನೆಗೆ ಸಂಬಂಧಿಸಿದಂತೆ ನಾವು ಧೈರ್ಯ ತುಂಬುವ ಕೆಲಸ ಮಾಡಿದ್ದೇವೆ. ಅದಕ್ಕೆ ನನ್ನ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದರು.

ಸರಕಾರದಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

ಕಾಂಗ್ರೆಸ್‌ನಿಂದ ಮುಸ್ಲಿಮರ ಓಲೈಕೆ: ಅಶೋಕ್

ಮೈಸೂರು: ಮುಸ್ಲಿಮರ ಮತಕ್ಕಾಗಿ ಕಾಂಗ್ರೆಸ್ ಯಾವ ಹಂತಕ್ಕೆ ಬೇಕಾದರೂ ಇಳಿಯುತ್ತದೆ. ಅವರ ಓಲೈಕೆಯಷ್ಟೇ ಕಾಂಗ್ರೆಸ್ ಉದ್ದೇಶ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮಗೆ ಮತಹಾಕಿ ನೀವು ಏನು ಬೇಕಾದರೂ ಮಾಡಿ. ಇದು ಕಾಂಗ್ರೆಸ್ ಸರಕಾರದ ಘೋಷಣೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುತ್ತದೆ. ನಮ್ಮ ಹೋರಾಟ ಹತ್ತಿಕ್ಕಲು ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ನಾವು ಯಾವುದಕ್ಕೂ ಹೆದರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಖಾಕಿ ಕಂಡರೆ ಎಲ್ಲರಿಗೂ ಭಯ: ಉದಯಗಿರಿಯಲ್ಲಿ ಇಡೀ ರಾಜ್ಯವೇ ಬೆಚ್ಚಿ ಬೀಳಿಸುವ ಘಟನೆ ನಡೆದಿದೆ. ಖಾಕಿ ಕಂಡರೆ ನಟರು, ರಾಜಕಾರಣಿಗಳೇ ಭಯ ಬೀಳುತ್ತಾರೆ. ದೊಡ್ಡ ದೊಡ್ಡ ನಟರು, ರಾಜಕಾರಣಿಗಳೇ ಭಯ ಪಡುತ್ತಾರೆ. ಈ ಪುಂಡ ಮುಸ್ಲಿಮರು ಕಲ್ಲು ತೂರಿದ್ದಾರೆ. ಪೊಲೀಸರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ನಾವು ಮಾಡಿದ್ದೇವೆ. ಆದರೆ, ಇವರು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದರು. ಗೃಹ ಸಚಿವರು ಬಂದು ಹೋದ ಬಳಿಕ ಯಾರನ್ನೂ ಬಂಧಿಸಿಲ್ಲ. ಇದುವರೆಗೆ 16 ಜನರನ್ನಷ್ಟೇ ಬಂಧಿಸಲಾಗಿದೆ ಎಂದು ಕಿಡಿಕಾರಿದರು.

ಪ್ರತಾಪ್ ಸಿಂಹಗೆ ಎಫ್‌ಐಆರ್ ಹೊಸದಲ್ಲ

ಮಾಜಿ ಸಂಸದ ಪ್ರತಾಪ್‌ಸಿಂಹಗೆ ಎಫ್ ಐಆರ್‌ಗಳು ಹೊಸದಲ್ಲ. ದಿನನಿತ್ಯ ಕೇಸ್ ಹಾಕ್ತಾರೆ. ನಾನು ಗೃಹಮಂತ್ರಿಯಾಗಿದ್ದಾಗ ಪ್ರತಾಪ್ ಸಿಂಹ ವಿರುದ್ಧ ಸುಪಾರಿ ಕೊಟ್ಟಿದ್ದರು. ಆಗ ಪ್ರತಾಪ್‌ಸಿಂಹ ಅಂಕಣಕಾರರಾಗಿದ್ದರು. ಆ ಸಂದರ್ಭದಲ್ಲಿ ನಾನೇ ಕರೆದು ಮಾತನಾಡಿದೆ. ಸುಫಾರಿ ಕೊಟ್ಟಾಗಲೇ ಪಿಸ್ತೂಲ್‌ಗೆ ಭಯ ಬಿದ್ದಿಲ್ಲ, ಈ ಎಫ್‌ಐಆರ್‌ಗೆ ಭಯ ಬೀಳುತ್ತಾರಾ ಎಂದು ಪ್ರತಿಪಕ್ಷ ನಾಯಕ ಅಶೋಕ್ ಹೇಳಿದರು.

ಉದಯಗಿರಿ ಗಲಾಟೆ: ಬಿಜೆಪಿ ರಾಜಕೀಯ ಅಸ್ತ್ರ

ತುಮಕೂರು: ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ನಡೆದ ಗಲಾಟೆ ಸಂಬಂಧ ಪೊಲೀಸರು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಆದರೆ, ಪ್ರಕರಣವನ್ನು ಬಿಜೆಪಿ ರಾಜಕೀಯ ಅಸ್ತ್ರವಾಗಿ ಉಪಯೋಗಿಸಿಕೊಳ್ಳುತ್ತಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಉದಯಗಿರಿ ಗಲಾಟೆಗೆ ಯಾರು ಕಾರಣರಾದವರನ್ನು ಪೊಲೀಸರು ಬಂಧಿಸಿದ್ದಾರೆ. ತನಿಖೆ ಮುಂದುವರಿದಿದೆ. ಈ ಸಂದರ್ಭದಲ್ಲೇ ಬಿಜೆಪಿಯವರು ಘಟನೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ರಾಜಕೀಯದ ವಿಚಾರ ಕೊರಟಗೆರೆ ಜನತೆಗೆ ಬಿಟ್ಟಿದ್ದೇನೆ: ಸಚಿವ ಸ್ಥಾನಕ್ಕೆ ರಾಜೀನಾಮೆ ಹೇಳಿಕೆಯ ಕುರಿತು ಪ್ರತಿಕ್ರಿಯಿಸಿದ ಅವರು, ಕೊರಟಗೆರೆಯಲ್ಲಿ ಕಾರ್ಯಕರ್ತರೊಂದಿಗೆ ಮಾತನಾಡುವಾಗ ಅವರ ಅನಿಸಿಕೆ ಆಧಾರದ ಮೇಲೆ ಮಾತನಾಡಿದ್ದೇನೆ. ಅದಕ್ಕೆ ಅಷ್ಟೊಂದು ಮಹತ್ವ ಕೊಡುವ ಅಗತ್ಯತೆ ಇಲ್ಲ. ಇದರಿಂದ ಯಾವ ಸಂಚಲನ ಮಾಡಬೇಕಾದ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

> ಪ್ರತಿಸಲ ಗಡಿಭಾಗದಲ್ಲಿ ಭಾಷಾ ಆಧಾರದ ಮೇಲೆ ಆಗುವ ಗಲಾಟೆ ವೇಳೆ ಬಹಳ ಎಚ್ಚರಿಕೆಯಿಂದ ಮಹಾರಾಷ್ಟ್ರದವರು ನಡೆದುಕೊಳ್ಳಬೇಕು. ನಮ್ಮಲ್ಲಿ ಅಂತಹ ಪ್ರಕರಣ ಆದಾಗ ಕ್ರಮ ತೆಗೆದುಕೊಳ್ಳಲಾಗುತ್ತದೆ. ಮಹಾರಾಷ್ಟ್ರದವರು ಕಾನೂನಿಗೆ ವಿರುದವಾಗಿ ನಡೆದುಕೊಳ್ಳುವುದು ಸರಿಯಲ್ಲ.
>
> ಪರಮೇಶ್ವರ್, ಗೃಹ ಸಚಿವ

ಭಕ್ತರ ಬದುಕಿಗಾಗಿ ಹೋರಾಟಕ್ಕೆ ಬಂದಿದ್ದೇನೆ: ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿಕೆ

ಬಲ್ದೋಟಾ ಕಾರ್ಖಾನೆ ವಿಸ್ತರಣೆಗೆ ವಿರೋಧ

ಕೊಪ್ಪಳ: ಭಕ್ತರ ಹಿತಕ್ಕಾಗಿ ನನ್ನ ಎಲ್ಲ ಇತಿ ಮಿತಿ ಬದಿಗಿಟ್ಟು ಹೋರಾಟಕ್ಕೆ ಬಂದಿದ್ದೇನೆ. ನಮ್ಮ ಸಮಸ್ಯೆಯನ್ನು ತಾತ್ವಿಕವಾಗಿ, ಸಾತ್ವಿಕವಾಗಿ ಹಾಗೂ ಪ್ರೇಮದಿಂದ ಸರಕಾರಕ್ಕೆ ತಿಳಿಸುವುದು ನನ್ನ ಕರ್ತವ್ಯ. ಅದನ್ನು ನಾನು ಮಾಡಿದ್ದೇನೆ. ಜತೆಗೆ ಮುಂದೆ ಏನು ಮಾಡಬೇಕು ಎಂಬುದೂ ನನಗೆ ಗೊತ್ತಿದೆ. ಗವಿಸಿದ್ದೇಶ್ವರನ ಇಚ್ಛೆಯಂತೆ ನಾನು ಮುಂದುವರಿಯುತ್ತೇನೆ ಎಂದು ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ನಗರದ ತಾಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ ಬಂದ್ ಹಿನ್ನೆಲೆ ನಡೆದ ಬಹಿರಂಗ ಸಮಾವೇಶದಲ್ಲಿ ಸೋಮವಾರ ಮಾತನಾಡಿದರು. ಮಠದ ಜಾತ್ರೆ, ದಾಸೋಹ ಭಕ್ತರಿಂದಲೇ ನಡೆಯುತ್ತದೆ. ಇಂಥ ಭಕ್ತರು ಸಮಸ್ಯೆಗೆ ಸಿಲುಕಿದ್ದರಿಂದ ನಾನು ಹೊರಗೆ ಬರಲೇಬೇಕಾಯ್ತು. ನನ್ನ ಆತ್ಮಸಾಕ್ಷಿ ಕೇಳಿ ಹೋರಾಟಕ್ಕೆ ಬಂದಿದ್ದೇನೆ. ನಮ್ಮ ಮಕ್ಕಳ ಭವಿಷ್ಯಕ್ಕಾಗಿ ನಾನು ನನ್ನ ಎಲ್ಲ ಬಾರ್ಡರ್ ಕ್ರಾಸ್ ಮಾಡಿ, ಇಲ್ಲಿಗೆ ಬಂದಿದ್ದೇನೆ. ಈಗಲೂ ನಾನು ಜಾತ್ರೆಯಲ್ಲಿ ಹೇಳಿದ ಮಾತಿಗೆ ಬದ್ಧವಾಗಿದ್ದೇನೆ. ನಾನು ಯಾವುದೇ ಕಾರಣಕ್ಕೂ ನೇತೃತ್ವ ವಹಿಸುವುದಿಲ್ಲ. ಇದು ನನ್ನ ಮೊದಲ ಮತ್ತು ಕೊನೆಯ ಹೋರಾಟ ಎಂದು ಸ್ಪಷ್ಟಪಡಿಸಿದರು.

ಸರಕಾರದ ವಿರುದ್ಧ ನಾವು ಧ್ವನಿ ಎತ್ತಿದ್ದೇವೆ. ನಾನು ಮುಂದೆ ಎಲ್ಲೂ ಬರುವುದಿಲ್ಲ. ಸರಕಾರ ನಮಗೆ ತಾಯಿ ಇದ್ದಂತೆ. ನಮಗೆ ಆರೋಗ್ಯಯುತ ಕೊಪ್ಪಳ ಕೊಡಿ ಎಂದು ಕೇಳಿಕೊಳ್ಳುತ್ತೇವೆ ಅಷ್ಟೇ. ಇದರ ಹೊರತಾಗಿ ದುಡಿವುದನ್ನು ಬಿಟ್ಟು ಹೊಡೆದಾಡುವುದನ್ನು ನಾನು ಕಲಿಸುವುದಿಲ್ಲ. ನಾವು ಯಾವ ಸರಕಾರದ ವಿರುದ್ಧವೂ ಗುಡುಗುವುದಿಲ್ಲ. ನಮ್ಮೂರು ಜಪಾನ್ ಮಾಡುವುದು ಬೇಡ. ನಮ್ಮನ್ನು ಜೋಪಾನ ಮಾಡಿ ಅಂತಾ ನಾನು ಕೇಳಿಕೊಳ್ಳಬಲ್ಲೆ ಎಂದು ಮುಂದಿನ ಹೋರಾಟದಿಂದ ವಿಮುಕ್ತರಾದರು.

ಗೆದ್ದಾಗಲೆಲ್ಲ ಸಚಿವರಾದ ಶಿವರಾಜ ತಂಗಡಗಿ, ಸೋಲಿಲ್ಲದ ಸರದಾರ ರಾಘವೇಂದ್ರ ಹಿಟ್ನಾಳ, ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಕೊಪ್ಪಳ ಜಿಲ್ಲೆಯವರು. ಜತೆಗೆ ಸಂಸದ ರಾಜಶೇಖರ ಹಿಟ್ನಾಳ ಕೂಡ ಇದ್ದಾರೆ. ನಿಮ್ಮ ಒಂದು ಲೆಟರ್ ಇಲ್ಲದೆ ಒಬ್ಬ ಸಣ್ಣ ಆಫೀಸರ್ ಕೂಡ ಬದಲಾಗುವುದಿಲ್ಲ. ಆದರೆ, ಇಂಥ ದೊಡ್ಡ ಫ್ಯಾಕ್ಟರಿ ಬಂದರೂ ಸುಮ್ಮನೇ ಕೂತಿರುವುದು ಸರಿಯಲ್ಲ. ನೀವು ಮೂವರು ಕೂಡಿ ಏನ್ ಮಾಡುತ್ತೀರಿ ಗೊತ್ತಿಲ್ಲ. ಕಾರ್ಖಾನೆ ಆರಂಭ ರದ್ದತಿ ಆದೇಶ ತೆಗೆದುಕೊಂಡೇ ಕೊಪ್ಪಳಕ್ಕೆ ಬರಬೇಕು ಎಂದು ರಾಘವೇಂದ್ರ ಹಿಟ್ನಾಳ, ರಾಜಶೇಖರ ಹಿಟ್ನಾಳ್ ಸೇರಿ ಆಡಳಿತ ಪಕ್ಷದ ಜನಪ್ರತಿನಿಧಿಗಳಿಗೆ ತಾಕೀತು ಮಾಡಿದರು. ಇನ್ನು ಉಳಿದವರೆಲ್ಲ ಅವರಿಗೆ ಸಹಕಾರ ನೀಡಬೇಕು ಎಂದು ಸೂಚಿಸಿದರು.

ಗವಿಸಿದ್ದೇಶ್ವರ ಸ್ವಾಮೀಜಿ ಕೊಪ್ಪಳ ಬಂದ್‌ಗೆ ಚಾಲನೆ ನೀಡಿ ಮಾತನಾಡಿದರು.

> ಕಾರ್ಖಾನೆ ವಿಸ್ತರಣೆಗೆ ಮುಂದಾಗಿರುವ ಬಲ್ದೋಟಾ ಸಂಸ್ಥೆ, ಜರ್ಮನ್ ಟೆಕ್ನಾಲಜಿ ಬಳಸಿಕೊಂಡು ಕಾರ್ಖಾನೆ ಆರಂಭಿಸುತ್ತೇನೆ ಎನ್ನುತ್ತಿದೆ. ಕೈಗಾರಿಕೆ ಶುರು ಮಾಡುವಾಗ ಇಂಡಿಯನ್ ಟೆಕ್ನಾಲಜಿ ಬಳಸಿಕೊಂಡು ಕಾರ್ಖಾನೆ ಆರಂಭಿಸುತ್ತಾರೆ. ನಂತರ ಕೆಲವರಿಗೆ ಕುಡಿಸಿ, ಗಲಾಟೆ ಮಾಡುವ ಮೂಲಕ ಪ್ರಶ್ನೆ ಮಾಡುವ ಜನರ ಮೇಲೆ ದೌರ್ಜನ್ಯ ಮಾಡಿಸುವ ಮೂಲಕ ಲೋಕಲ್ ಟೆಕ್ನಾಲಜಿ ಬಳಸಿಕೊಂಡು ಸ್ಥಳೀಯರನ್ನು ನಿಯಂತ್ರಣ ಮಾಡುತ್ತಿರುವುದು ಬೇಸರದ ವಿಚಾರ. ಇದು ಕಾರ್ಖಾನೆಗಳ ಮಾಫಿಯಾ. ನಾನು ಬಂದ್ ಮಾಡಿ, ಕಲ್ಲು ಹೊಡೆದು ಹೋರಾಟ ಮಾಡಲು ಹೇಳುವುದಿಲ್ಲ. ಯಾರೂ ಹೋರಾಟ ಮಾಡುವುದೂ ಬೇಡ. ಮುಂದೆ ಏನು ಮಾಡಬೇಕು ಎಂಬುದು ನನಗೆ ಗೊತ್ತು.
>
> -ಗವಿಸಿದ್ದೇಶ್ವರ ಸ್ವಾಮೀಜಿ, ಗವಿಮಠ

ವಿಶ್ವವಾಣಿ

ಸಂಪಾದಕೀಯ

ಭಾಷಾ ವಿದ್ವೇಷಕ್ಕೆ ಅವಕಾಶ ಬೇಡ

ಮರಾಠಿ ಭಾಷೆ ಮಾತನಾಡಲು ಬರುವುದಿಲ್ಲ ಎಂದ ವಾಯವ್ಯ ಸಾರಿಗೆ ಸಂಸ್ಥೆಯ ಬಸ್ ಡ್ರೈವರ್ ಮತ್ತು ಕಂಡಕ್ಟರ್ ಮೇಲೆ ಬೆಳಗಾವಿಯ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಮರಾಠಿ ಭಾಷಿಕರು ಹಲ್ಲೆ ಮಾಡಿದ ಘಟನೆ ಕರ್ನಾಟಕ ಹಾಗೂ ಮಹಾರಾಷ್ಟ್ರದ ನಡುವೆ ತ್ವೇಷಮಯ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣವಾಗಿದೆ. ಘಟನೆ ಬಳಿಕ ಎರಡೂ ರಾಜ್ಯಗಳ ನಡುವೆ ಬಸ್ ಸಂಚಾರ ಬಹುತೇಕ ಸ್ಥಗಿತಗೊಂಡಿದೆ. ಉಭಯ ರಾಜ್ಯಗಳ ಬಸ್‌ಗಳ ಮೇಲೆ ದಾಳಿ ಮಾಡಲಾಗುತ್ತಿದ್ದು, ಅಮಾಯಕ ಚಾಲಕ, ನಿರ್ವಾಹಕರ ಮುಖಕ್ಕೆ ಮಸಿ ಬಳಿದು ಹಲ್ಲೆ ನಡೆಸಲಾಗುತ್ತಿದೆ. ಬಾಳೇಕುಂದ್ರಿ ಘಟನೆಯನ್ನು ಮರಾಠಿ- ಕನ್ನಡ ಎಂಬ ನೆಲೆಯಲ್ಲಿ ನೋಡದೆ, ಕೆಲವು ಕಿಡಿಗೇಡಿಗಳ ದುಷ್ಕೃತ್ಯವೆಂದು ಪರಿಗಣಿಸಬೇಕು.ಅವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ಉಭಯ ರಾಜ್ಯಗಳು ಸಮ್ಮತಿ ನೀಡಬೇಕು. ಇಲ್ಲಿನ ನಡೆದ ಘಟನೆ ವೈಯಕ್ತಿಕ ಸ್ವರೂಪದ್ದಾಗಿದ್ದು, ಕಂಡಕ್ಟರ್ ಬಳಿ ಅನುಚಿತ ವರ್ತನೆ ತೋರಿದ ಮಹಿಳಾ ಪ್ರಯಾಣಿಕರೊಬ್ಬರು ತನ್ನ ರಕ್ಷಣೆಗೆ ಭಾಷಾ ದ್ವೇಷವನ್ನು ಗುರಾಣಿಯಾಗಿ ಬಳಸಿರುವುದು ಸ್ಪಷ್ಟ. ದೂರು ನೀಡಿದ ನಿರ್ವಾಹಕನ ವಿರುದ್ಧವೇ ಪೋಕ್ಸೋ ಪ್ರಕರಣ ದಾಖಲಿಸಿರುವುದು ಮಹಿಳೆಯ ದುರುದ್ದೇಶಕ್ಕೆ ಸಾಕ್ಷಿಯಾಗಿದೆ. ಈ ಘಟನೆಯನ್ನು ಮುಂದಿಟ್ಟುಕೊಂಡು ಪ್ರತಿಭಟನೆಗಿಳಿದ ಕನ್ನಡ ಪರ ಹೋರಾಟಗಾರರು, ತಪ್ಪಿತಸ್ಥ ಪ್ರಯಾಣಿಕರು ಮತ್ತು ಹಲ್ಲೆ ನಡೆಸಿದ ಗ್ರಾಮಸ್ಥರ ಮೇಲೆ ಕ್ರಮಕ್ಕೆ ಆಗ್ರಹಿಸಬೇಕಿತ್ತು. ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಮೇಲೆ ಕಲ್ಲುತೂರುವ, ಮಸಿ ಬಳಿಯುವ ಕೃತ್ಯಕ್ಕೆ ಇಳಿಯಬಾರದಿತ್ತು. ಇದೇ ವೇಳೆ ಗಡಿಯಲ್ಲಿ ವಿನಾಕಾರಣ ಪುಂಡಾಟ ನಡೆಸದಂತೆ ಎಂಇಎಸ್ ಮತ್ತು ಶಿವಸೇನೆ ಕಾರ್ಯಕರ್ತರಿಗೆ ಆ ಪಕ್ಷಗಳ ನಾಯಕರು ಎಚ್ಚರಿಕೆ ನೀಡಬೇಕಿತ್ತು. ಇಂತಹ ಸಂದರ್ಭಗಳಲ್ಲಿ ನಾಯಕರೆನಿಸಿ ಕೊಂಡವರು ಸಾಕಷ್ಟು ವಿವೇಕ ಮತ್ತು ವಿವೇಚನೆಯಿಂದ ತಕ್ಷಣವೇ ಸಮಸ್ಯೆ ಬಗೆಹರಿಸಲು ಮುಂದಾಗಬೇಕು. ಇಲ್ಲದೇ ಹೋದರೆ ಎರಡೂ ರಾಜ್ಯಗಳ ನಡುವಣ ಅಪನಂಬಿಕೆ ಮತ್ತು ಒಡಕು ಮತ್ತಷ್ಟೂ ವಿಸ್ತರಿಸುವ ಸಾಧ್ಯತೆ ಇದೆ. ಹಲ್ಲೆ ಪ್ರಕರಣವು ರಾಜಕೀಯ ಮತ್ತು ಭಾಷಾ ವಿದ್ವೇಷಕ್ಕೆ ಕಾರಣವಾಗದಂತೆ ನೋಡಿಕೊಳ್ಳುವುದು ಭಾರತೀಯ ಸಂವಿಧಾನದಡಿ ಕಾರ್ಯ ನಿರ್ವಹಿಸುವ ಉಭಯ ರಾಜ್ಯಗಳ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ.

ಸೊಂಪಾದಕೀಯ

ನಾನು ಹೇಳಿದ್ದು ಹಂಗಲ್ಲ!

ಸಾಮಾನ್ಯವಾಗಿ ರಾಜಕೀಯ ನಾಯಕರು ಒಂದು ಹೇಳಿಕೆ ಕೊಡೋದು, ನಾಳೆ ಅದಕ್ಕೆ ವಿರೋಧ ವ್ಯಕ್ತ ಆದಾಗ, 'ನಾನು ಹೇಳಿದ್ದು ಹಂಗಲ್ಲ, ನನ್ನ ಹೇಳಿಕೆಯನ್ನ ತಿರುಚಲಾಗಿದೆ' ಅಂತ ಸ್ಪಷ್ಟನೆ ಕೊಡೋದು ಕಾಮನ್. ಆದ್ರೆ ಇದು ತೀರಾ ಅಂಥ ಕೇಸಲ್ಲ. ಆದರೆ ನಮ್ಮ ರಾಜ್ಯದ ಗೃಹಮಂತ್ರಿ ಪರಮೇಶ್ವರ್ ಅವರು ಬಾಯಿತಪ್ಪಿ ಹೇಳಿದ ಮಾತೊಂದು ಈಗ ಸದ್ದು ಮಾಡುತ್ತಿದೆ. 'ನಾನು ಗೃಹಮಂತ್ರಿ ಪದವಿಗೆ ರಾಜೀನಾಮೆ ನೀಡುತ್ತೇನೆ' ಅಂತ ಅವರು ಹೇಳಿರುವ ವಿಡಿಯೋ ಒಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇದಕ್ಕೆ ಕಾರಣವೂ ಇದೆ. ರಾಜ್ಯದಲ್ಲಿ ಮೊದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರ್ಚಿ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ನಾಯಕರು ಹಲವರು. ಅದರಲ್ಲಿ ಪರಮೇಶ್ವರ್ ಕೂಡಾ ಒಬ್ಬರು. 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೆ ನಾನು ಮುಖ್ಯಮಂತ್ರಿ ಆಗೋಕೆ ಸಿದ್ಧ' ಅನ್ನೋ ನಾಯಕರ ಪಟ್ಟಿಯಲ್ಲಿ ಅವರೂ ಇದ್ದಾರೆ. ಹಾಗಾಗಿ ಅವರ ಈ ಹೇಳಿಕೆ ಈಗ ಮಹತ್ವ ಪಡೆದಿದೆ. ಆದರೆ ಪರಮೇಶ್ವರ್ ಅವರು ಕೊಟ್ಟಿರುವ ಈ ಹೇಳಿಕೆಗೆ ಅಂಥ ಮಹತ್ವ ಇಲ್ಲ ಅನ್ನೋದು ಸತ್ಯ. ಯಾಕಂದ್ರೆ ಈ ಹೇಳಿಕೆಯನ್ನ ಅವರು ಕೊಟ್ಟಿರೋದು ಕಾರ್ಯಕರ್ತರ ಸಮ್ಮುಖದಲ್ಲಿ. ಸ್ವಕ್ಷೇತ್ರವಾದ ಕೊರಟಗೆರೆಯಲ್ಲಿ ಅವರು ಕಾರ್ಯಕರ್ತರೊಂದಿಗೆ ಮಾತನಾಡುವಾಗ ಅಲ್ಲಿ ಕೆಲವರು 'ನೀವು ಕ್ಷೇತ್ರದ ಕಡೆ ಗಮನ ಕೊಡುತ್ತಿಲ್ಲ' ಅಂತ ಕ್ಯಾತೆ ತೆಗೆದಿದ್ದಾರೆ. ಅದಕ್ಕೆ ಪರಮೇಶ್ವರ್ ಅವರು 'ನನಗೆ ಗೃಹಮಂತ್ರಿಯ ಖಾತೆಯ ಜವಾಬ್ದಾರಿ ಇದೆ. ನೀವು ಹೇಳಿದ್ರೆ ಅದಕ್ಕೆ ರಾಜೀನಾಮೆ ಕೊಟ್ಟು ನಿಮ್ ಜತೆಯಲ್ಲೇ ಇದ್ದುಬಿಡ್ತೀನಿ' ಅಂತ ಹೇಳಿದ್ದಾರೆ. ಇದೊಂಥರಾ ಮನೆಯಲ್ಲಿ ಗಂಡ ಹೆಂಡಿರ ಜಗಳದಲ್ಲಿ, ಹೆಂಡತಿ ಗಂಡನಿಗೆ 'ನೀವು ಮನೆಯಲ್ಲಿ ಇರೋದೇ ಇಲ್ಲ, ಯಾವಾಗ್ಲೂ ಹೊರಗೇ ತಿರುಗಾಡ್ತೀರಿ' ಅಂತ ಹೇಳಿದಾಗ, ಗಂಡ, 'ಆಯ್ತು ಬಿಡು ಇನ್ಮೇಲೆ ಕೆಲಸ ಬಿಟ್ಟು ಮನೆಯಲ್ಲೇ ಇದ್ದು ನಿನ್ನ ಮುಖ ನೋಡ್ಕಂಡ್ ಇರ್ತೀನಿ' ಅಂತ ಹೇಳ್ತಾನಲ್ಲ ಆ ರೀತಿಯ ಉತ್ತರ. ಆದರೆ ರಾಜ್ಯ ರಾಜಕೀಯದ ಸದ್ಯದ ಪರಿಸ್ಥಿತಿಯಿಂದಾಗಿ ಈ ಹೇಳಿಕೆಗೆ ಭಾರಿ ಮಹತ್ವ ಬಂದಿದೆ ಅಷ್ಟೇ. ಆದರೆ, 'ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ' ಎನ್ನುವಂತೆ ಇದು ಕಾರ್ಯಕರ್ತರ ಜತೆಗಿನ ಮಾತಿಗೆ ಮಾತ್ರ ಸೀಮಿತ ಅನ್ನೋದು ಸತ್ಯ.

ಸಂಪಾದಕರ ಸದ್ಯಶೋಧನೆ

ಟೋಟೋ ಮತ್ತು ಟಾಯ್ಲೆಟ್

'ಮುಂದಿನ ವಾರ ಜಪಾನಿಗೆ ಹೋಗ್ತಾ ಇದ್ದೇನೆ' ಎಂದು ಹೇಳಿದಾಗ, ಆ ದೇಶದಲ್ಲಿ ಸುಮಾರು 6 ವರ್ಷಗಳ ಕಾಲ ನೆಲೆಸಿದ್ದ ಸ್ನೇಹಿತರೊಬ್ಬರು, "ಜಪಾನಿನ ಫುಕುವೋಕಾ ಪ್ರಾಂತ್ಯದಲ್ಲಿ ಕಿಟಾಕ್ಯುಷು ಎಂಬ ನಗರವಿದೆ. ಅಲ್ಲೊಂದು ವಿಶಿಷ್ಟ ಮ್ಯೂಸಿಯಂ ಇದೆ. ಸಾಧ್ಯವಾದರೆ ಅಲ್ಲಿಗೆ ಹೋಗಿ ಬನ್ನಿ" ಎಂಬ ಸಲಹೆ ನೀಡಿದರು. ನಾನು ಕುತೂಹಲ ತಾಳಲಾರದೇ, "ಅದ್ಯಾವ ಮ್ಯೂಸಿಯಂ? ಏನದರ ವಿಶೇಷ?" ಎಂದು ಕೇಳಿದೆ. ಅದಕ್ಕೆ ಅವರು, "ಟಾಯ್ಲೆಟ್‌ಗಾಗಿಯೇ ಒಂದು ಮ್ಯೂಸಿಯಂ ಇರುವುದನ್ನು ಕೇಳಿದ್ದೀರಾ? ಬಾತ್‌ರೂಮ್ ಫಿಟಿಂಗ್ಸ್‌ಗೆ ಜಗತ್ತಿನಲ್ಲಿಯೇ ಹೆಸರುವಾಸಿಯಾದ ಟೋಟೋ ಕಂಪನಿ ಟಾಯ್ಲೆಟ್ ಮ್ಯೂಸಿಯಂ ಅನ್ನು ಅಲ್ಲಿ ಸ್ಥಾಪಿಸಿದೆ. ನೀವು ಸುಂದರವಾದ ಟಾಯ್ಲೆಟ್‌ಗಳ ಪ್ರಿಯರು ಅಂತ ನಿಮ್ಮ ಬರಹಗಳಿಂದ ಬಲ್ಲೆ. ಹೀಗಾಗಿ ಹೇಳಿದೆ" ಎಂದು ತಿಳಿಸಿದರು. ನಮ್ಮ ಪ್ರವಾಸದಲ್ಲಿ ಫುಕುವೋಕಾ ಭೇಟಿ ಇರಲಿಲ್ಲ. ಆದರೆ ನಾನು ಅಲ್ಲಿ ಗಮನಿಸಿದ್ದೇನೆಂದರೆ, ನೀವು ನಿಮ್ಮ ಹೋಟೆಲ್ ಟಾಯ್ಲೆಟ್‌ನಿಂದ, ಸಾರ್ವಜನಿಕ ಟಾಯ್ಲೆಟ್‌ಗೆ ಅಥವಾ ಯಾರದೇ ಮನೆಯ ಟಾಯ್ಲೆಟ್‌ಗೆ ಹೋದರೂ ಅಲ್ಲಿ ಕಾಣುವುದು ಟೋಟೋ ಕಂಪನಿಯ ಬಾತ್‌ರೂಮ್ ಫಿಟಿಂಗ್‌ಗಳೇ. ಟೋಟೋ ಇಡೀ ಜಪಾನ್ ಅನ್ನು ಆವರಿಸಿಬಿಟ್ಟಿದೆ. ಅಷ್ಟೇ ಅಲ್ಲ, ಜಪಾನಿನ ಟಾಯ್ಲೆಟ್‌ನಲ್ಲಿ ಇವು ಅದ್ಭುತವಾದ ಕ್ರಾಂತಿಯನ್ನೇ ಮಾಡಿವೆ. ಪ್ರಾಯಶಃ ಟೋಟೋ ಬಿಟ್ಟರೆ ಬೇರೆ ಕಂಪನಿಯ ಫಿಟಿಂಗ್‌ಗಳನ್ನು ಕಾಣಲು ಸಾಧ್ಯವೇ ಇಲ್ಲವೇನೋ ಎಂಬಂತೆ ಅದು ಏಕಸ್ವಾಮ್ಯವನ್ನು ಸಾಧಿಸಿದೆ. ಟೋಟೋ ಕಂಪನಿಯು ಜಪಾನಿನ ಪ್ರಸಿದ್ಧ ಶೌಚಾಲಯ ಉಪಕರಣಗಳ ತಯಾರಕ ಸಂಸ್ಥೆಯಾಗಿದ್ದು, ತನ್ನ ಉನ್ನತ ತಂತ್ರಜ್ಞಾನ ಮತ್ತು ವಿನ್ಯಾಸಕ್ಕಾಗಿ ವಿಶ್ವದಾದ್ಯಂತ ಪ್ರಸಿದ್ಧವಾಗಿದೆ. ಕಂಪನಿಯು ಶೌಚಾಲಯ ಅನುಭವವನ್ನು ಸುಧಾರಿಸಲು ವಿವಿಧ ನಾವೀನ್ಯಗಳನ್ನು ಪರಿಚಯಿಸಿದೆ, ವಿಶೇಷವಾಗಿ ಅದರ ವಾಶ್ಲೆಟ್ (Washlet) ಶ್ರೇಣಿಯ ಉತ್ಪನ್ನಗಳು ಬಹಳ ಜನಪ್ರಿಯ. ಟೋಟೋ ಕಂಪನಿಯು 1917ರಲ್ಲಿ ಸ್ಥಾಪಿತವಾದ ಆರಂಭದಲ್ಲಿ, ಸೆರಾಮಿಕ್ ಶೌಚಾಲಯ ಉಪಕರಣಗಳನ್ನು ತಯಾರಿಸುತ್ತಿತ್ತು. ಕಾಲಕ್ರಮೇಣ, ತನ್ನ ಉತ್ಪನ್ನ ಶ್ರೇಣಿಯನ್ನು ವಿಸ್ತರಿಸಿ, ಶೌಚಾಲಯ ಉಪಕರಣಗಳಲ್ಲಿ ತಂತ್ರಜ್ಞಾನವನ್ನು ಸಂಯೋಜಿಸಿ, ವಿಶ್ವದ ಗಮನ ಸೆಳೆಯಿತು. 'ವಾಶ್ಲೆಟ್' ಆ ಕಂಪನಿಯ ಪ್ರಮುಖ ಉತ್ಪನ್ನಗಳಲ್ಲಿ ಒಂದಾಗಿದೆ. ಇದು ಶೌಚಾಲಯ ಕುರ್ಚಿಯೊಂದಿಗೆ ಸಂಯೋಜಿತವಾದ ಇಲೆಕ್ಟ್ರಾನಿಕ್ ಬಿಡೆಟ್ ವ್ಯವಸ್ಥೆಯಾಗಿದ್ದು, ಬಳಕೆದಾರರಿಗೆ ಹೆಚ್ಚಿನ ಸ್ವಚ್ಛತೆ ಮತ್ತು ಆರಾಮವನ್ನು ಒದಗಿಸುತ್ತದೆ. ವಾಶ್ಲೆಟ್‌ಗಳಲ್ಲಿ ಹೀಟೆಡ್ ಸೀಟ್, ಸ್ವಯಂ ಸ್ವಚ್ಛತೆ, ಬಿಸಿನೀರಿನ ಸಿಂಪಡಣೆ ಮತ್ತು ಬಿಸಿಗಾಳಿಯಿಂದ ಪೃಷ್ಠ ಭಾಗವನ್ನು ಒಣಗಿಸುವ ವ್ಯವಸ್ಥೆ ಸೇರಿದಂತೆ ಅನೇಕ ವೈಶಿಷ್ಟ್ಯಗಳಿವೆ. ಇವು ವಿಶಿಷ್ಟ ಮತ್ತು ಹಿತವಾದ ಟಾಯ್ಲೆಟ್ ಅನುಭವವನ್ನೇ ನೀಡುತ್ತವೆ. ಟೋಟೋ ಸಂಸ್ಥೆ ತಾನು ನೂರು ವರ್ಷ ಪೂರ್ಣಗೊಳಿಸಿದ (2017) ಸಂದರ್ಭದಲ್ಲಿ ಈ ಟಾಯ್ಲೆಟ್ ಮ್ಯೂಸಿಯಂ ಅನ್ನು ಸ್ಥಾಪಿಸಿತು. ಇದರಲ್ಲಿ ಟಾಯ್ಲೆಟ್ ಬೆಳೆದು ಬಂದ ದಾರಿಯನ್ನು ಪ್ರಾತ್ಯಕ್ಷಿಕೆಗಳ ಮೂಲಕ ಚಿತ್ರಿಸಲಾಗಿದೆ. ಮನುಷ್ಯನ ನಾಗರಿಕತೆ ಮೊದಲು ಆರಂಭವಾದದ್ದೇ ಶೌಚಾಲಯದಲ್ಲಿ. ಅದು ಮನುಷ್ಯನ ದೇಹದ ಮಲಿನಗಳನ್ನು ಸ್ವಚ್ಛಗೊಳಿಸುವ ತಾಣವಾಗಿರುವುದರಿಂದ, ಅದನ್ನು ಅತ್ಯಂತ ಪವಿತ್ರ ಸ್ಥಳ ಎಂಬ ಭಾವನೆ ಮೂಡುವಂತೆ ರೂಪಿಸಿರುವುದು ವಿಶೇಷ. ಪುರಾತನ ಶೌಚಾಲಯ, ಮಧ್ಯಯುಗದ ಶೌಚಾಲಯ ಮತ್ತು ಆಧುನಿಕ ಶೌಚಾಲಯಗಳು ಹೇಗೆ ಕಾಲಾಂತರಗಳಲ್ಲಿ ರೂಪುಗೊಂಡವು ಎಂಬುದನ್ನು ಅಲ್ಲಿ ಪ್ರದರ್ಶಿಸಲಾಗಿದೆ. 19ನೇ ಶತಮಾನದಲ್ಲಿ ಆರಂಭವಾದ ಪ್ಲಂಬಿಂಗ್ ತಂತ್ರಜ್ಞಾನವು ಶೌಚಾಲಯದ ಸ್ವರೂಪವನ್ನೇ ಬದಲಿಸಿತು. ಶೌಚಾಲಯಗಳ ವಿನ್ಯಾಸದ ಪರಿವರ್ತನೆಯ ದ್ಯೋತಕವಾಗಿ ಪ್ರಾಚೀನ ಶೌಚಾಲಯಗಳಿಂದ ಹಿಡಿದು ಇಂದಿನ ಟೆಕ್-ಸಾವಿ ಟಾಯ್ಲೆಟ್‌ಗಳವರೆಗೆ, ವಿವಿಧ ಶೌಚಾಲಯ ಮಾದರಿಗಳನ್ನು ಅಲ್ಲಿ ನೋಡಬಹುದು. ಶೌಚಾಲಯ ಅಂದ್ರೆ ಸ್ನಾನ, ಬಹಿರ್ದೆಸೆಗಷ್ಟೇ ಸೀಮಿತವಾದ ಸ್ಥಳವಲ್ಲ, ಅದು ಆರೋಗ್ಯ, ಸಂಸ್ಕೃತಿ, ಉನ್ನತ ಜೀವನಪದ್ಧತಿ ಪಾಲಿಸುವ, ಪರಿಸರ-ಸ್ನೇಹಿ ಜೀವನಶೈಲಿಯ ಭಾಗ ಎಂಬುದನ್ನು ಅಲ್ಲಿ ಗ್ರಹಿಸಬಹುದು.

ಬಹುಮತ ಬಂದಾಗಲೇ ಕೈನಲ್ಲಿ ಕೊಸರಾಟ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಅತಂತ್ರ' ಸರಕಾರ ರಚನೆಯಾಗುವುದು ಯಾವುದೋ ಒಂದು ಪಕ್ಷ 'ಮ್ಯಾಜಿಕ್ ಸಂಖ್ಯೆ'ಯಷ್ಟು ಬಹುಮತವನ್ನು ಮುಟ್ಟದೇ ಇದ್ದಾಗ. ಈ ರೀತಿ ಸರಳ ಬಹುಮತ ಬಾರದಿದ್ದಾಗ ಅನಿವಾರ್ಯವಾಗಿ ಇತರೆ ಪಕ್ಷಗಳ ಸಹಾಯ ಅಥವಾ ಮೈತ್ರಿಯೊಂದಿಗೆ ಸರಕಾರ ರಚಿಸುವುದು ಸಾಮಾನ್ಯ. ಆದರೆ ಈ ರೀತಿ ಚುನಾವಣೋತ್ತರ ಮೈತ್ರಿಗಳು ಬಹುತೇಕ ಸಮಯದಲ್ಲಿ 'ಅರ್ಧ'ಕ್ಕೆ ಬಿದ್ದಿರುವ ಅಥವಾ ಹತ್ತಾರು ಗೊಂದಲಗಳೊಂದಿಗೆ ನಡೆಯುವ ಹತ್ತಾರು ನಿದರ್ಶನಗಳಿವೆ. ಈ ಕಾರಣಕ್ಕೆ ಬಿಜೆಪಿಗರು ಆಧುನಿಕ ತಂತ್ರಗಾರಿಕೆಯ ಭಾಗವಾಗಿ ಮೈತ್ರಿಯ ಬದಲು 'ಆಪರೇಷನ್' ಮೂಲಕ, ಸಿಗದ ಬಹುಮತವನ್ನು ಪಡೆದುಕೊಳ್ಳುವ ಪ್ರಯತ್ನವನ್ನು ಹಲವೆಡೆ ಮಾಡಿದ್ದಾರೆ.

ಬಹುಮತದ ಕೊರತೆಯಿದ್ದಾಗ ಅಥವಾ ಬಹುಮತದ ಸರಕಾರಗಳನ್ನೂ ಉರುಳಿಸುವಾಗ, ಆಧುನಿಕ 'ತಂತ್ರ' ಎಂದೇ ಹೇಳಲಾಗುವ 'ಆಪರೇಷನ್ ಕಮಲ'ವನ್ನು ಮೊದಲ ಬಾರಿಗೆ ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದೇ ಕರ್ನಾಟಕ ದಲ್ಲಿ ಎನ್ನುವುದು ಬೇರೆ ಮಾತು. ಈ ರೀತಿಯ ಆಪರೇಷನ್‌ಗಳು ಆರಂಭಗೊಂಡ ಬಳಿಕ, ಸ್ಥಿರ ಸರಕಾರ ಸ್ಥಾಪನೆಗೆ ಕೇವಲ ಸರಳ ಬಹುಮತ ಮಾತ್ರವಲ್ಲದೇ, ಭರ್ಜರಿ ಬಹುಮತದ ಅಗತ್ಯವಿದೆ ಎನ್ನುವ ಲೆಕ್ಕಾಚಾರಗಳು ಶುರುವಾದವು. ಅಂದರೆ ಆಪರೇಷನ್ ಮಾಡಿದರೂ, ಬಹುಮತ ಕುಸಿಯದಷ್ಟು ಬಲ ಪಡೆಯಬೇಕು ಎನ್ನುವುದು. ಈ ರಾಜಕೀಯ ಪಲ್ಲಟಗಳನ್ನು ಗಮನಿಸಿಯೇ, ರಾಜ್ಯದ ಜನರು 'ಯಾವುದೇ ಸರಕಾರವಿರಲಿ, ಸ್ಥಿರ ಸರಕಾರ ಬೇಕು' ಎನ್ನುವ ಮನಸ್ಥಿತಿಗೆ ಬಂದಿದ್ದರು. ಈ ಎಲ್ಲದರ ಫಲವಾಗಿ 2024ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 'ಐತಿಹಾಸಿಕ' ಬಹುಮತದೊಂದಿಗೆ ಅಧಿಕಾರದ ಗದ್ದುಗೆಯನ್ನು ಏರಿತ್ತು.

ಹಾಗೆ ನೋಡಿದರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರಕಾರ ನೀಡಿದ್ದ ಗ್ಯಾರಂಟಿ ಯೋಜನೆಗಳೊಂದಿಗೆ, ಬಿಜೆಪಿ ಸರಕಾರದ ಭ್ರಷ್ಟಾಚಾರದ ವಿರುದ್ಧ ರಾಜ್ಯದ ಮತದಾರರಿದ್ದರೂ, 136 ಸೀಟುಗಳು ಕಾಂಗ್ರೆಸ್‌ಗೆ ಸಿಗಲಿದೆ ಎಂದು ಸ್ವತಃ ಕಾಂಗ್ರೆಸ್ಸಿಗರೂ ನಿರೀಕ್ಷೆ ಮಾಡಿರಲಿಲ್ಲ. ಆದರೆ ಸ್ಥಿರ ಸರಕಾರದ ನಿರೀಕ್ಷೆಯಲ್ಲಿದ್ದ ರಾಜ್ಯದ ಮತದಾರರು ಕಾಂಗ್ರೆಸ್ ಪರ ಒಲವು ತೋರಿದ್ದರು. ಆದರೆ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆಯುವಷ್ಟರಲ್ಲಿ ರಾಜ್ಯ ಕಾಂಗ್ರೆಸ್ ನಾಯಕರ ನಡುವಿನ ಬಣ ಬಡಿದಾಟವನ್ನು ನೋಡಿದ ಅನೇಕರಿಗೆ, ಈ ಪ್ರಮಾಣದ ಬಹುಮತ ಕೊಟ್ಟರೂ ಬಂಡಾಯಕ್ಕೆ ಕೊನೆಯಿಲ್ಲವೇ ಎಂದು ಅನಿಸಿದ್ದು ಸುಳ್ಳಲ್ಲ.

ಐದು ವರ್ಷದ ಸ್ಥಿರ ಸರಕಾರ ರಾಜ್ಯಕ್ಕೆ ಸಿಗಲಿ ಎನ್ನುವ ಕಾರಣಕ್ಕೆ ಜನರು ಕಾಂಗ್ರೆಸ್‌ಗೆ ಭಾರಿ ಬಹುಮತವನ್ನು ನೀಡಿದ್ದರು. ಆದರೆ ಈ ಪ್ರಮಾಣದಲ್ಲಿ ಬಹುಮತ ನೀಡಿದರೂ, ಅಧಿಕಾರ ಹಂಚಿಕೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ವಿವಿಧ ಕಾರಣಕ್ಕೆ ಕಳೆದ ಕೆಲ ತಿಂಗಳಿನಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕಿತ್ತಾಟಕ್ಕೆ ಸ್ವತಃ ಪಕ್ಷದ ಕಾರ್ಯಕರ್ತರೇ ಬೇಸರ ವ್ಯಕ್ತಪಡಿಸಿದ್ದಾರೆ. ಆದರೆ ರಾಜ್ಯ ಕಾಂಗ್ರೆಸ್‌ನ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ರೀತಿ ಸ್ಪಷ್ಟ ಬಹುಮತ ಬಂದಾಗಲೇ ಕಾಂಗ್ರೆಸ್‌ನಲ್ಲಿ ಅತಿಹೆಚ್ಚು ಗೊಂದಲಗಳು ಕಾಣಿಸಿಕೊಂಡಿವೆ ಎನ್ನುವುದು ಸ್ಪಷ್ಟ.

ಹೌದು, ಸ್ವಾತಂತ್ರ್ಯ ನಂತರ ಕರ್ನಾಟಕವನ್ನು ಅತಿಹೆಚ್ಚು ವರ್ಷಗಳ ಕಾಲ ಆಳಿರುವ ಪಕ್ಷವೆಂದರೆ ಕಾಂಗ್ರೆಸ್. ಆದರೆ ಐದು ವರ್ಷದ ಅವಧಿಯನ್ನು ಪೂರ್ಣಪ್ರಮಾಣದಲ್ಲಿ ಮುಖ್ಯಮಂತ್ರಿಯಾಗಿ ಮುಗಿಸಿರುವುದು ಮಾತ್ರ ಕೆಲವೇ ಕೆಲವು ನಾಯಕರು ಎನ್ನುವುದು ಸತ್ಯ. ಅದರಲ್ಲಿಯೂ 1989ರ ವಿಧಾನಸಭಾ ಚುನಾವಣೆಯ ಬಳಿಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರದಲ್ಲಿ, ಐದು ವರ್ಷದ ಅವಧಿಯಲ್ಲಿ ವೀರೇಂದ್ರ ಪಾಟೀಲ್, ಎಸ್.ಬಂಗಾರಪ್ಪ, ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದರು. ಇದಕ್ಕೂ ಮೊದಲು 1967ರಲ್ಲಿ ಎಸ್.ನಿಜಲಿಂಗಪ್ಪ, ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಗಳಾಗಿ, ಬಳಿಕ ಒಂದು ವರ್ಷ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿದ ಇತಿಹಾಸವಿದೆ. 1978ರಲ್ಲಿ ದೇವರಾಜ ಅರಸು ಹಾಗೂ ಗುಂಡೂರಾವ್ ಅವರು ಮುಖ್ಯಮಂತ್ರಿ ಸ್ಥಾನವನ್ನು ಹಂಚಿಕೊಂಡಿದ್ದರು. ಇದು ಕೇವಲ ಕಾಂಗ್ರೆಸ್‌ನಲ್ಲಿ ಮಾತ್ರವಲ್ಲ, ರಾಜ್ಯದಲ್ಲಿ ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಎರಡು, ಮೂರು ಮುಖ್ಯಮಂತ್ರಿಗಳನ್ನು ಐದು ವರ್ಷದ ಅವಧಿಯಲ್ಲಿ ನೋಡಿರುವ ಅನೇಕ ನಿದರ್ಶನಗಳಿವೆ. ಇನ್ನು ಅನೇಕ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯಾಗದಿದ್ದರೂ, ಬಂಡಾಯದ ಬಾವುಟವಂತೂ ಹಾರಿದ್ದ ಉದಾಹರಣೆಯಿದೆ.

ಆದರೆ ಕರ್ನಾಟಕದಲ್ಲಿ ಐದು ವರ್ಷಕ್ಕೆ ಒಬ್ಬರೇ ಮುಖ್ಯಮಂತ್ರಿ ಎನ್ನುವ ಸ್ಥಿತಿ ಮರಳಿ ಸ್ಥಾಪಿತವಾಗಿದ್ದು ಎಸ್.ಎಂ.ಕೃಷ್ಣರ ಅವಧಿಯಲ್ಲಿ. ಕಾಂಗ್ರೆಸ್ ಹೈಕಮಾಂಡ್ ಜತೆ ಉತ್ತಮ ಒಡನಾಟ ಹೊಂದಿದ್ದ ಕೃಷ್ಣ ಅವರು 132 ಶಾಸಕರ ಬಲದೊಂದಿಗೆ ಐದು ವರ್ಷ ಅಧಿಕಾರ ನಡೆಸಿದ್ದರು. ಇದಾದ ಬಳಿಕ ಸಿದ್ದರಾಮಯ್ಯ ಅವರು 2013ರಿಂದ 2018ರವರೆಗೆ 122 ಶಾಸಕರ ಬಲದೊಂದಿಗೆ ಅಧಿಕಾರ ಪೂರ್ಣಗೊಳಿಸಿದ್ದರು. ಆದರೆ 2024ರಲ್ಲಿ ಈ ಎರಡು ಬಾರಿಗಿಂತ ಹೆಚ್ಚು ಸ್ಥಾನವನ್ನು ಪಡೆದಿದ್ದರೂ, ಪಕ್ಷದ ಆಂತರಿಕ ಸಮಸ್ಯೆಗೆ ಕೊನೆಯಿಲ್ಲವಾಗಿದೆ. ಪಕ್ಷದ ಹೈಕಮಾಂಡ್‌ನ ಸ್ಪಷ್ಟ ಎಚ್ಚರಿಕೆಯ ನಡುವೆಯೂ, ಬಣ ಬಡಿದಾಟದ ಮಾತುಗಳಿಗೆ ಮಾತ್ರ ಕೊನೆಯಿಲ್ಲವಾಗಿದೆ.

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿದಾಗಲೆಲ್ಲ ನಡೆದಿರುವ ಹೈಡ್ರಾಮಾಗಳು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ನಡೆಸಿದ ಸಮಯದಲ್ಲಿ ನಡೆದಿಲ್ಲ. ಸ್ವಾತಂತ್ರ್ಯ ಪಡೆದ ಬಳಿಕ ದೇಶವನ್ನು ಅತಿಹೆಚ್ಚು ವರ್ಷ ಮುನ್ನಡೆಸಿರುವ ಕಾಂಗ್ರೆಸ್‌ನಲ್ಲಿ ಹಲವು ಭಿನ್ನಾಭಿಪ್ರಾಯ, ಬಂಡಾಯ ಕಾಣಿಸಿಕೊಂಡು ಅನೇಕರು ಪಕ್ಷದಿಂದ ಹೊರನಡೆದಿರುವ ಘಟನೆಗಳು ನಡೆದಿದ್ದರೂ, ಆಡಳಿತ ಪಕ್ಷದಲ್ಲಿದ್ದುಕೊಂಡೇ ನಾಯಕರ ವಿರುದ್ಧ ಮಾತನಾಡಿರುವ ಘಟನೆಗಳು ತೀರಾ ಕಡಿಮೆ. ಈ ರೀತಿಯಾಗಲು ಕಾರಣವೂ ಸ್ಪಷ್ಟವಾಗಿದೆ. ಅದೇನೆಂದರೆ, 1947ರಲ್ಲಿ ಸ್ವಾತಂತ್ರ್ಯದ ಬಳಿಕ ನೆಹರು ಅವರೇ ಮೊದಲ ಪ್ರಧಾನಿಯಾಗಿದ್ದರು. ಬಳಿಕ 16 ವರ್ಷ ನೆಹರು ಅವರೇ ಪ್ರಧಾನಿಯಾಗಿ ಮುಂದುವರಿದರು. ಅವರ ನಿಧನ ಬಳಿಕ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನಿಯಾಗಿದ್ದರು. ಶಾಸ್ತ್ರಿ ನಿಧನದ ಬಳಿಕ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಇಂದಿರಾ ಗಾಂಧಿ, ಇಂದಿರಾ ಅವರ ಬಳಿಕ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದರು. ಗಾಂಧಿ ಕುಟುಂಬವನ್ನು ಎದುರುಹಾಕಿಕೊಂಡು ರಾಜಕೀಯ ಮಾಡುವ ಅಥವಾ ಕಾಂಗ್ರೆಸ್‌ನಲ್ಲಿ ಉಳಿದುಕೊಳ್ಳುವ ಶಕ್ತಿ ಕಾಂಗ್ರೆಸ್‌ನ ಯಾವ ನಾಯಕರಿಗೂ ಇಲ್ಲದ ಕಾರಣ, ಅಧಿಕಾರ ಹಂಚಿಕೆಯ ವಿವಾದ ಸೃಷ್ಟಿಯಾಗಲಿಲ್ಲ. ರಾಜೀವ್ ಗಾಂಧಿ ಹತ್ಯೆ ಬಳಿಕ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಪಿ.ವಿ.ನರಸಿಂಹ ರಾವ್ ಒಂದು ಅವಧಿಗೆ ಪ್ರಧಾನಿಯಾಗಿದ್ದರು. ಆದರೆ ಅ ಸಮಯದಲ್ಲಿ ಕಾಂಗ್ರೆಸ್‌ನಿಂದ ಹಾಗೂ ಸಕ್ರಿಯ ರಾಜಕೀಯದಿಂದ ಗಾಂಧಿ ಕುಟುಂಬ ಅಂತರ ಕಾಯ್ದುಕೊಂಡಿತ್ತು. ಆದರೂ ನರಸಿಂಹರಾಯರು ಸೋನಿಯಾ ಗಾಂಧಿ ಅವರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಇದಾದ ಬಳಿಕ 2004ರಿಂದ 2014ರವರೆಗೆ ಅಧಿಕಾರದಲ್ಲಿದ್ದ ಮನಮೋಹನ್ ಸಿಂಗ್ ಅವರಿಗೆ ಗಾಂಧಿ ಕುಟುಂಬದ 'ಕೃಪಾಕಟಾಕ್ಷ' ಪೂರ್ಣ ಪ್ರಮಾಣದಲ್ಲಿದ್ದುದರಿಂದ ಮೈತ್ರಿ ಆಡಳಿತವಿದ್ದರೂ ಸಮಸ್ಯೆಯಾಗದ ರೀತಿಯಲ್ಲಿ 10 ವರ್ಷದ ಅಧಿಕಾರಾವಧಿಯನ್ನು ಅವರು ಪೂರ್ಣಗೊಳಿಸಿದ್ದರು.

ಹಾಗೆ ನೋಡಿದರೆ, ಕರ್ನಾಟಕದಲ್ಲಿನ ಪರಿಸ್ಥಿತಿಯು ಸಾಮಾನ್ಯ ರಾಜಕೀಯ ಸ್ಥಿತಿಗಿಂತ ಭಿನ್ನವಾಗಿರುವುದು ಸುಳ್ಳಲ್ಲ. ಒಂದೆಡೆ ಪ್ರತಿಪಕ್ಷ ಸ್ಥಾನದಲ್ಲಿದ್ದು, ಸಮಯದಲ್ಲಿ ಕೂಡಿ ಬಾಳೋಣ ಎನ್ನುವ ಮನಸ್ಥಿತಿಯಲ್ಲಿ ಎಲ್ಲ ಪಕ್ಷಗಳಿದ್ದರೆ, ಕರ್ನಾಟಕದಲ್ಲಿ ಮಾತ್ರ ಬಿಜೆಪಿಗರು ಹಾದಿ-ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿದ್ದಾರೆ. ಪ್ರತಿಪಕ್ಷದವರಾಗಿದ್ದುಕೊಂಡು ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿಹಿಡಿಯುವುದಕ್ಕಿಂತ ಮಿಗಿಲಾಗಿ, ತಮ್ಮ ಪಕ್ಷದೊಳಗಿನ ಸಮಸ್ಯೆಗಳನ್ನು ಬಹಿರಂಗಗೊಳಿಸುವಲ್ಲಿಯೇ ನಿರತರಾಗಿದ್ದಾರೆ. ಇನ್ನೊಂದೆಡೆ ಸ್ಪಷ್ಟ ಬಹುಮತದೊಂದಿಗೆ ಆಡಳಿತದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ನಾಯಕರು, ಸಿಕ್ಕಿರುವ ಐದು ವರ್ಷದಲ್ಲಿ 'ಜನಮೆಚ್ಚುವ ಕಾರ್ಯಕ್ರಮ'ಗಳನ್ನು ನೀಡುವ ಬದಲು 'ಆಗದ-ಹೋಗದ' ವಿಷಯವನ್ನು ಮುಂದಿಟ್ಟುಕೊಂಡು ಹೋರಾಟ ಮಾಡುವ ಮೂಲಕ, ಜನರಲ್ಲಿ ಪ್ರತಿಪಕ್ಷ ಬಿಜೆಪಿ ಮೂಡಿಸದ 'ಆಡಳಿತ ವಿರೋಧಿ' ಅಲೆಯನ್ನು ಸ್ವತಃ ಸೃಷ್ಟಿಸುತ್ತಿದ್ದಾರೆ. ಕಾಂಗ್ರೆಸ್ ನಲ್ಲಾಗುತ್ತಿರುವ ಈ ಎಲ್ಲ ಬೆಳವಣಿಗೆಗಳು, ಗೊಂದಲಮಯ ಹೇಳಿಕೆಗಳಿಂದಾಗಿ ಪಕ್ಷದಲ್ಲಿ ಬದಲಾವಣೆಯಾಗುವುದಿಲ್ಲ ಎನ್ನುವ ಅರಿವಿದ್ದರೂ, 'ಲೈಮ್ ಲೈಟ್'ನಲ್ಲಿರಬೇಕು ಎನ್ನುವ ಕಾರಣಕ್ಕೆ ಕೆಲ ನಾಯಕರು ನಿತ್ಯ ಮುಂಜಾನೆ ಹೇಳಿಕೆ ನೀಡುವ ಕೆಲಸ ಮಾಡುತ್ತಿದ್ದಾರೆ.

ಇಂದಿನ ರಾಷ್ಟ್ರ ರಾಜಕಾರಣದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ಹೊರತುಪಡಿಸಿ ಇನ್ಯಾವುದೇ ರಾಜ್ಯಗಳಲ್ಲಿ ಹೇಳಿಕೊಳ್ಳುವ ಮಟ್ಟದಲ್ಲಿ ಶಕ್ತಿಶಾಲಿಯಾಗಿಲ್ಲ. ಕರ್ನಾಟಕ ರಾಜ್ಯವು ಸಂಪನ್ಮೂಲ ಭರಿತವಾಗಿರುವುದಷ್ಟೇ ಅಲ್ಲದೆ, ರಾಜ್ಯ ಕಾಂಗ್ರೆಸ್‌ನಲ್ಲಿರುವ ನಾಯಕತ್ವವೂ ಎಲ್ಲ ರೀತಿಯಲ್ಲಿಯೂ 'ಬಲಶಾಲಿ'ಯಾಗಿರುವುದು ಸ್ಪಷ್ಟ. ರಾಷ್ಟ್ರದ ಕಾಂಗ್ರೆಸ್ ಸಂಘಟನೆಯಲ್ಲಿನ ಈ ಸಮಸ್ಯೆಯ ಕಾರಣಕ್ಕಾಗಿಯೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಎಚ್ಚರಿಕೆಯನ್ನೂ ಮೀರಿ ರಾಜ್ಯ ನಾಯಕರು ಅಧಿಕಾರ ಹಂಚಿಕೆಯ ವಿಷಯದಲ್ಲಿ ತಮ್ಮ ತಮ್ಮ ವಾದವನ್ನು ಸ್ವಚ್ಛಂದವಾಗಿ ಮಂಡಿಸುತ್ತ ಓಡಾಡುತ್ತಿದ್ದಾರೆ. ಈ ರೀತಿಯ ವರ್ತನೆಯಿಂದ ರಾಜ್ಯದಲ್ಲಿ ಕಳೆದುಹೋಗಿದ್ದ ಕೆಲ ಭದ್ರಕೋಟೆಯನ್ನು ಮರಳಿ ಪಡೆಯುವ ನಿಟ್ಟಿನ ಪ್ರಯತ್ನಗಳು ವಿಫಲವಾಗುವ ಆತಂಕವಿದೆ. ಆದರೆ ಆಡಳಿತ ಪಕ್ಷದಲ್ಲಿರುವ ಈ ಹುಳುಕನ್ನು ಬಳಸಿಕೊಂಡು ವಿರೋಧಿಸುವ ಬದಲು ತಮ್ಮ ಸಂಘಟನೆಯನ್ನು ತಾವೇ ಹಾಳುಮಾಡುವ ನಿಟ್ಟಿನಲ್ಲಿ ಬಿಜೆಪಿಗರು ಹೋರಾಡುತ್ತಿರುವುದರಿಂದ ಸದ್ಯ, ಕಾಂಗ್ರೆಸ್‌ನ ಈ ಗೊಂದಲದಿಂದ ಮತ್ತೊಬ್ಬರಿಗೆ ಲಾಭವಾಗಿಲ್ಲ. ಕಾಂಗ್ರೆಸ್ ನಾಯಕರು ಇನ್ನಾದರೂ ತಮ್ಮಲ್ಲಿರುವ ಗೊಂದಲವನ್ನು ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಬೇಕಿದೆ ಅಥವಾ ಗೊಂದಲವು ಬಹಿರಂಗವಾಗಿ ಕಾಣಿಸಿಕೊಳ್ಳದಂತೆ ಕಸರತ್ತು ಮಾಡಬೇಕಿದೆ. ಇಲ್ಲದಿದ್ದರೆ, ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ, ಮತದಾರರೇ ಉತ್ತರ ಕೊಡಲಿದ್ದಾರೆ!

ಗಲಭೆಗಳಿಗೆ ಕುಮ್ಮಕ್ಕು ನೀಡುವ ವಿಕ್ಷಿಪ್ತರು

ಗಲಭೆಗಳ ಕಾರಣಕರ್ತರು ಯಾರೆಂಬುದು ಗೊತ್ತಿದ್ದರೂ ನಮ್ಮ ಕೆಲ ರಾಜಕಾರಣಿಗಳು ವೋಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಗಲಭೆಕೋರರನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ, ದೇಶದ ಸುರಕ್ಷತೆ ಮತ್ತು ಸಾಮಾಜಿಕ ಸ್ವಾಸ್ಥ್ಯದ ವಿಚಾರ ಬಂದಾಗಲೆಲ್ಲಾ ಜನನಾಯಕರು ಹೀಗೆ ಗಲಭೆಕೋರರ ಪರ ವಹಿಸದೆ, ವಸ್ತುನಿಷ್ಠವಾಗಿ ನಡೆದುಕೊಳ್ಳಬೇಕು ಎಂಬುದು ಜನರ ಅಪೇಕ್ಷೆ ಮತ್ತು ನಿರೀಕ್ಷೆಯಾಗಿರುತ್ತದೆ.

ಅಭಿಮತ

ಆದರ್ಶ್ ಶೆಟ್ಟಿ, ಉಪ್ಪಿನಂಗಡಿ
vveditoped@gmail.com

ನಮ್ಮ ದೇಶದಲ್ಲಿ ಈ ಹಿಂದೆ ಹಲವಾರು ಕೋಮುಗಲಭೆ, ದಳ್ಳುರಿ, ಹಿಂಸಾಚಾರಗಳು ಸಂಭವಿಸಿವೆ. ಇವುಗಳಿಂದಾಗಿ ಪ್ರಾಣಹಾನಿ, ಸ್ವತ್ತುನಷ್ಟ, ಸಾರ್ವಜನಿಕ ಆಸ್ತಿಗಳಿಗೆ ಹಾನಿ, ಗಲಭೆಕೋರರ ಮತ್ತು ಗಲಭೆಯಲ್ಲಿ ಭಾಗಿಯಾಗದ ಅಮಾಯಕರ ಕೋರ್ಟ್ ಅಲೆದಾಟ, ಕೇಸು, ಜೈಲುವಾಸ ಮುಂತಾದವೆಲ್ಲ ಆದದ್ದೂ ಇದೆ. ಇಂಥ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳ ಹೆಡೆಮುರಿ ಕಟ್ಟಿ ಜೈಲಿಗಟ್ಟಿದರೆ ಮಿಕ್ಕ ಸಮಾಜಘಾತುಕ ಶಕ್ತಿಗಳಿಗೆ ಅದು ಪಾಠವಾಗಿ ಪರಿಣಮಿಸುತ್ತದೆ. ಆದರೆ, ಅಮಾಯಕರ ಬಂಧನವಾಗಿ, ಗೂಂಡಾ ಕಾಯ್ದೆಯನ್ವಯ ಅವರ ಮೇಲೆ ರೌಡಿಶೀಟ್ ತೆರೆದರೆ, ಅದರ ಹಿಂದೆ ರಾಜಕೀಯ ಪ್ರೇರಿತ ಷಡ್ಯಂತ್ರ ಅಥವಾ ವೈಯಕ್ತಿಕ ದ್ವೇಷದ ಕೈವಾಡದ ಸಾಧ್ಯತೆಯಿದೆ ಎನ್ನಬೇಕಾಗುತ್ತದೆ.

ಒಂದು ಕಾಲದಲ್ಲಿ, ತಿಳಿದೋ ತಿಳಿಯದೆಯೋ ಇಂಥ ಗಲಭೆಗಳಲ್ಲಿ ಭಾಗಿಯಾದವರು ಒಂದಷ್ಟು ಶಿಕ್ಷೆ ಅನುಭವಿಸಿ, ಹತ್ತಾರು ಮೊಕದ್ದಮೆಗಳನ್ನು ಜಡಿಸಿಕೊಂಡು, ತಮ್ಮ ಅರ್ಧಜೀವನವನ್ನು ಕೋರ್ಟು-ಕೇಸುಗಳಲ್ಲೇ ಸವೆಸಿದ ನಿದರ್ಶನಗಳಿವೆ. ಹಾಗೆ ಅಲೆದಾಡುತ್ತಿರುವವರು ಈಗಲೂ ಸಾಕಷ್ಟು ಕಾಣಸಿಗುತ್ತಾರೆ. ಇಂಥ ಗಲಭೆ ಮತ್ತು ದಳ್ಳುರಿಗೆ, ಅವುಗಳಲ್ಲಿ ಭಾಗಿಯಾದವರು ತಮ್ಮ ತಲೆಯಲ್ಲಿ ತುಂಬಿಕೊಂಡ ಮತಾಂಧತೆ ಒಂದು ಕಾರಣವಾದರೆ, ಮತ್ತೊಬ್ಬರ ಕುಮ್ಮಕ್ಕು ಅಥವಾ ಬಾಹ್ಯ ಪ್ರಚೋದನೆಯು ಮತ್ತೊಂದು ಕಾರಣವಾಗಿರುತ್ತದೆ ಎಂಬುದು ಗಮನಿಸಬೇಕಾದ ಸಂಗತಿ.

ಹೀಗೆ ಪ್ರಚೋದನೆಗೆ ಒಳಗಾಗುವವರಲ್ಲಿ ಅನಕ್ಷರಸ್ಥರು, ಬೀದಿ ಬದಿಯಲ್ಲಿ, ಬಸ್ ನಿಲ್ದಾಣಗಳಲ್ಲಿ, ಮಾರುಕಟ್ಟೆಗಳಲ್ಲಿ ಅಬ್ಬೇಪಾರಿಗಳಂತೆ ತಿರುಗುವವರು, ಅಮಲು ಪದಾರ್ಥಗಳ ವ್ಯಸನಿಗಳಾಗಿರುವವರು, ಮೈಮುರಿದು ದುಡಿದು ತಿನ್ನದೆ ಕಳ್ಳತನ-ದರೋಡೆಯಂಥ ಕೃತ್ಯಗಳಲ್ಲಿ ತೊಡಗಿಸಿಕೊಂಡವರು ಕೂಡ ಸೇರಿರುತ್ತಾರೆ. ಮತಾಂಧತೆಯ ಅಮಲನ್ನು ತಲೆಗೇರಿಸಿಕೊಂಡ ಇಂಥವರು ಮಾನವೀಯತೆಯನ್ನು ಮರೆತು ಮೃಗಗಳಂತೆ ವರ್ತಿಸುವುದು, ಮಕ್ಕಳು-ವೃದ್ಧರು-ಮಹಿಳೆಯರೆನ್ನದೆ ಸಿಕ್ಕಸಿಕ್ಕವರ ಮೇಲೆ ಹಲ್ಲೆಗೈಯುವುದು, ವಾಹನಗಳಿಗೆ ಬೆಂಕಿ ಹಚ್ಚುವುದು, ಪೊಲೀಸ್ ಠಾಣೆಗಳಿಗೆ ಕಲ್ಲೆಸೆಯುವುದು ವಾಡಿಕೆ. ಇಂಥ ಸಂದರ್ಭದಲ್ಲಿ ಪೊಲೀಸರು ಕೂಡ ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿ ಕೆಲವೊಮ್ಮೆ ಕೈಚೆಲ್ಲುವುದುಂಟು.

ಕೆಲ ವರ್ಷಗಳ ಹಿಂದೆ ಸಮುದಾಯವೊಂದು ಮಂಗಳೂರಿನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧದ ಬೃಹತ್ ಪ್ರತಿಭಟನಾ ಸಭೆಯನ್ನು ಆಯೋಜಿಸಿತ್ತು. ಈ ಸಂದರ್ಭದಲ್ಲಿ ಗಲಭೆ ನಡೆಸಲೆಂದೇ ನೆರೆಯ ಕೇರಳ ಸೇರಿದಂತೆ ವಿವಿಧ ಭಾಗಗಳಿಗೆ ಸೇರಿದ ನಿಷೇಧಿತ ಪಿಎಫ್‌ಐ ಸಂಘಟನೆಯ ಕಾರ್ಯಕರ್ತರು ಜಮಾವಣೆಗೊಂಡಿದ್ದಾರೆಂಬ ವರ್ತಮಾನ ಪೊಲೀಸ್ ಇಲಾಖೆಗೆ ಲಭಿಸಿತ್ತು. ಇದರ ಮುಂದುವರಿದ ಭಾಗವೆಂಬಂತೆ, ಪೊಲೀಸರು ಆ ಸಭೆಗೆ ತಡೆಯೊಡ್ಡುವ ಸಂದರ್ಭದಲ್ಲಿ ಉಂಟಾದ ಗಲಭೆಯಲ್ಲಿ ಕೆಲವರ ಪುಂಡಾಟದಿಂದಾಗಿ ಅದೆಷ್ಟೋ ಆಸ್ತಿಪಾಸ್ತಿಗಳಿಗೆ ಅಪಾರ ಪ್ರಮಾಣದಲ್ಲಿ ನಷ್ಟವಾಯಿತು. ಪೊಲೀಸರು ಕೊಂಚವೇ ಮೈಮರೆತಿದ್ದರೂ ಪರಿಸ್ಥಿತಿ ಕೈಮೀರಿ ಹೋಗುತ್ತಿತ್ತು.

ಇನ್ನು, ಸಾಮಾಜಿಕ ಜಾಲತಾಣವೊಂದರಲ್ಲಿ ಕಂಡುಬಂದ ಆಕ್ಷೇಪಾರ್ಹ ಬರಹದ ನೆಪವೊಡ್ಡಿ ಬೆಂಗಳೂರಿನ ಡಿ.ಜೆ.ಹಳ್ಳಿ ಮತ್ತು ಕೆ.ಜೆ.ಹಳ್ಳಿಯಲ್ಲಿ ನಡೆದ ಗಲಭೆಯ ವಿಷಯಕ್ಕೆ ಬರೋಣ. ಈ ವೇಳೆ, ಕಂಡ ಕಂಡ ಮನೆ-ವಾಹನಗಳಿಗೆ ಕಲ್ಲು ತೂರಿ, ಬೆಂಕಿ ಹಚ್ಚುವವರೆಗೆ ಮುಂದುವರಿದ ಪುಂಡರ ಅಟ್ಟಹಾಸವು, ತರುವಾಯದಲ್ಲಿ ಪೊಲೀಸರ ವಿರುದ್ಧವೇ ಬಲಪ್ರದರ್ಶನಕ್ಕೆ ಮುಂದಾಗಿತ್ತು. ಸಾಲದೆಂಬಂತೆ, ಶಾಸಕರೊಬ್ಬರ ಮನೆಯೂ ಈ ಗಲಭೆಯಲ್ಲಿ ಬೆಂಕಿಗೆ ಆಹುತಿಯಾಯಿತು. ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಮತ್ತು ಇತ್ತೀಚೆಗೆ ಉದಯಗಿರಿಯಲ್ಲಿ ನಡೆದ ಗಲಭೆಗಳು ಕೂಡ ಇಂಥದೇ ವೈಪರೀತ್ಯವನ್ನು ಹೊಂದಿದ್ದವು.

ಇಂಥ ಗಲಭೆಗಳ ಸಂದರ್ಭದಲ್ಲಿ ಕಾರಣಕರ್ತರು ಯಾರೆಂಬುದು ಗೊತ್ತಿದ್ದರೂ ಮತ್ತು ಆ ಗಲಭೆಗಳಿಂದಾದ ಸ್ವತ್ತುನಷ್ಟವು ಪರಮಾವಧಿ ಮಟ್ಟಕ್ಕೇರಿದ್ದರೂ ನಮ್ಮ ಕೆಲ ರಾಜಕಾರಣಿಗಳು ವೋಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಗಲಭೆಕೋರರನ್ನು ಸಮರ್ಥಿಸಿಕೊಳ್ಳುವುದನ್ನು ಕಾಣಬಹುದು. ಆದರೆ, ದೇಶದ ಸುರಕ್ಷತೆಯ ವಿಷಯ ಮತ್ತು ಸಾಮಾಜಿಕ ಸ್ವಾಸ್ಥ್ಯದ ವಿಚಾರಗಳು ಬಂದಾಗಲೆಲ್ಲಾ ಜನನಾಯಕರೆನಿಸಿಕೊಂಡವರು ಹೀಗೆ ಗಲಭೆಕೋರರ ಪರ ವಹಿಸದೆ, ವಸ್ತುನಿಷ್ಠವಾಗಿ ನಡೆದುಕೊಳ್ಳಬೇಕು ಎಂಬುದು ಜನರ ಅಪೇಕ್ಷೆ ಮತ್ತು ನಿರೀಕ್ಷೆಯಾಗಿರುತ್ತದೆ. ಜನನಾಯಕರು ಆಳುವ ಪಕ್ಷಕ್ಕೆ ಸೇರಿದವರಿರಲಿ ಅಥವಾ ಪ್ರತಿಪಕ್ಷದವರೇ ಆಗಿರಲಿ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜದ ಹಿತರಕ್ಷಣೆಯ ಹೊಣೆ ಹೊತ್ತವರೇ ಆಗಿರುತ್ತಾರೆ. ಇದನ್ನು ಅವರು ಮರೆಯಬಾರದು. ಸಮಾಜದಲ್ಲಿ ಅನಾಗರಿಕವಾಗಿ ನಡೆದುಕೊಳ್ಳುವ ಅಥವಾ ಭೀತಿಯ ವಾತಾವರಣ ಸೃಷ್ಟಿಸುವ ಗಲಭೆಕೋರರನ್ನು ಹಾಗೆ ಸಮರ್ಥಿಸಿಕೊಂಡರೆ, ಪುಂಡು-ಪೋಕರಿಗಳಿಗೆ ಪರೋಕ್ಷವಾಗಿ ನೈತಿಕ ಬೆಂಬಲ ನೀಡಿದಂತಾಗುವುದಿಲ್ಲವೇ? ಆದ್ದರಿಂದ, ರಾಜಕಾರಣದಲ್ಲಿ ಸ್ಥಾನಮಾನದ ಅಪೇಕ್ಷೆಯುಳ್ಳ ಅಥವಾ ನಿರ್ದಿಷ್ಟ ಸಮುದಾಯದ ಮತಗಳಿಕೆಯ ಗುಪ್ತ ಕಾರ್ಯಸೂಚಿಯನ್ನುಳ್ಳ ಜನನಾಯಕರು ಗಲಭೆಕೋರರನ್ನು ಬೆಂಬಲಿಸುವುದನ್ನು ಕೈಬಿಟ್ಟು, ನಮ್ಮ ಸಮಾಜದ ಮತ್ತು ದೇಶದ ಭವಿಷ್ಯದ ರಕ್ಷಣೆಗೆ ಕಟಿಬದ್ಧರಾಗಬೇಕಾದ ಅಗತ್ಯವಿದೆ.

ಗಲಭೆಗಳಲ್ಲಿ ಭಾಗಿಯಾಗಿ ಶಿಕ್ಷೆಗೊಳಗಾದ ಪುಂಡರು ಜನನಾಯಕರ ಬೆಂಬಲ ಅಥವಾ ಒತ್ತಡದಿಂದಾಗಿ ಕೆಲವೇ ತಿಂಗಳಲ್ಲಿ ಜಾಮೀನು ಪಡೆದು ಹೊರಬರುವಂತಾದಲ್ಲಿ, ಅಂಥ ಮತ್ತಷ್ಟು ಕೃತ್ಯಗಳಲ್ಲಿ ಮತ್ತೆ ಪಾಲ್ಗೊಳ್ಳಲು ಅವರು ಹಿಂದು-ಮುಂದು ನೋಡುವುದಿಲ್ಲ. ಆದ್ದರಿಂದ, ಗಲಭೆ, ಸಾರ್ವಜನಿಕ ಸ್ವತ್ತಿಗೆ ಹಾನಿ ಮತ್ತು ಸಮಾಜದಲ್ಲಿ ಕ್ಷೋಭೆಯ ಸೃಷ್ಟಿಗೆ ಮುಂದಾಗುವ ಪುಂಡರ ಮೇಲೆ ಗೂಂಡಾ ಕಾಯ್ದೆ ಪ್ರಯೋಗ, ರೌಡಿ ಶೀಟ್ ತೆರೆಯುವಿಕೆ, ಗಡಿಪಾರು ಮಾಡುವಿಕೆ ಮುಂತಾದ ನಿಷ್ಠುರ ಕ್ರಮಗಳನ್ನು ತೆಗೆದುಕೊಳ್ಳುವಂತಾಗಬೇಕು. ಜಾಮೀನು ಸಿಗದಂಥ ಮೊಕದ್ದಮೆಗಳು ಅವರ ಮೇಲೆ ದಾಖಲಾಗಬೇಕು. ಒಂದು ಬಾರಿ ಇಂಥ ಗಲಭೆ/ಪುಂಡಾಟಿಕೆಯ ಪ್ರಕರಣಗಳಲ್ಲಿ ಆರೋಪಿಗಳು ತೊಡಗಿದ ನಂತರ, ಅಂಥವರ ಮೇಲೆ ಪೊಲೀಸರು ಕಣ್ಗಾವಲು ಇಡುವಂತಾಗಬೇಕು, ಆರೋಪಿಗಳು ನಿಯತ ಕಾಲದಲ್ಲಿ ಪೊಲೀಸ್ ಠಾಣೆಗೆ ಹಾಜರಾಗಿ ಸಹಿ ಹಾಕುವಂತಾಗಬೇಕು.

ಮಿಕ್ಕಂತೆ, ಮಾನವೀಯತೆ ಮರೆತು ಮೃಗೀಯ ವರ್ತನೆ ತೋರುವ ಪುಂಡ-ಪೋಕರಿಗಳಿಗೆ ಬುದ್ಧಿಮಾತು ಹೇಳಿ ಸರಿದಾರಿಗೆ ತರುವ ಕೆಲಸವನ್ನು ಆಯಾ ಸಮುದಾಯದ ಪ್ರಮುಖರೂ ಮಾಡಬೇಕಿದೆ. ಹಿಂಸಾಕೃತ್ಯಗಳಿಗೆ ಪ್ರಚೋದಿಸದೆ, ಪುಂಡರ ಕೃತ್ಯಗಳನ್ನು ಸಮರ್ಥಿಸದೆ, ಹೊಣೆಯರಿತು ಕೆಲಸ ಮಾಡುವುದಕ್ಕೆ ಕೆಲ ರಾಜಕಾರಣಿಗಳೂ ಮುಂದಾಗಬೇಕಿದೆ. ಅಂತೆಯೇ, ಸಾಮಾಜಿಕ ಜಾಲತಾಣಗಳಲ್ಲಿ ಕಾಣಬರುವ ಒಂದಷ್ಟು ಅವಹೇಳನಕಾರಿ ಮತ್ತು ನಿಂದನಾತ್ಮಕ ಬರಹಗಳು, ನಮ್ಮ ಸಾಮಾಜಿಕ ಸೌಹಾರ್ದ ಮತ್ತು ನೆಮ್ಮದಿಯನ್ನು ಹಾಳುಗೆಡಹುತ್ತವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ದೈವ/ದೇವರು ಮತ್ತು ಧರ್ಮದ ನಿಂದನೆ ಎಲ್ಲವೂ ಈ ಮಾಧ್ಯಮಗಳ ಮೂಲಕ ನಡೆಯುತ್ತಿದೆ. ನಕಲಿ ಜಾಲತಾಣಗಳ ಸೃಷ್ಟಿಯ ಮೂಲಕ ವ್ಯಕ್ತಿಯನ್ನು, ಸಮುದಾಯವನ್ನು, ಸಮಾಜವನ್ನು ನಿಂದಿಸುವ ಕೆಲಸಗಳು ನಿರಂತರವಾಗಿ ನಡೆಯುತ್ತಲೇ ಇವೆ. ಹೀಗೆ ಕುಮ್ಮಕ್ಕು ನೀಡುವ ಸಾಮಾಜಿಕ ಮಾಧ್ಯಮಗಳಿಗೂ, ಅವುಗಳಿಂದ ಪ್ರಚೋದನೆಗೊಂಡು ಕಾನೂನನ್ನು ಕೈಗೆತ್ತಿಕೊಂಡು ಸಮಾಜದಲ್ಲಿ ಅಶಾಂತಿಯ ವಾತಾವರಣವನ್ನು ಸೃಷ್ಟಿಸುವವರಿಗೂ ಪೊಲೀಸರು ಲಗಾಮು ಹಾಕಬೇಕಿದೆ, ಅವರ ಮೇಲೆ ಹದ್ದಿನ ಕಣ್ಣು ಇಡುವ ಅಗತ್ಯವಿದೆ.

ಮಾತ್ರವಲ್ಲ, ಗಲಭೆಗಳು ಮತ್ತು ಗುಂಪು ಘರ್ಷಣೆಗಳ ಸಂದರ್ಭದಲ್ಲಿ ಸಮಾಜದ ಶಾಂತಿಭಂಗಕ್ಕೆ ಕಾರಣರಾಗುವ, ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯುಂಟುಮಾಡುವ, ಭೀತಿಯ ವಾತಾವರಣವನ್ನು ಸೃಷ್ಟಿಸುವ ಪುಂಡರುಗಳಿಂದಲೇ ಎಲ್ಲ ನಷ್ಟವನ್ನೂ ವಸೂಲು ಮಾಡುವಂತಾಗಬೇಕು. ಜತೆಗೆ ಅಂಥವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತಾಗಬೇಕು. ಆಗ ಮಾತ್ರವೇ ಇಂಥ ಸಮಾಜಘಾತುಕ ಶಕ್ತಿಗಳಿಗೆ ಎಚ್ಚರಿಕೆಯ ಸಂದೇಶ ರವಾನೆಯಾದಂತಾಗುತ್ತದೆ. ಸಮಾಜದಲ್ಲಿ ಶಾಂತಿ-ನೆಮ್ಮದಿಯ ವಾತಾವರಣವು ರೂಪುಗೊಳ್ಳಬೇಕೆಂದರೆ, ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಹುನ್ನಾರಗಳಿಗೆ ಇತಿಶ್ರೀ ಹಾಡಬೇಕೆಂದರೆ, ಪೊಲೀಸ್ ಇಲಾಖೆ ಇಂಥ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಬೇಕಾದ ಅನಿವಾರ್ಯತೆಯಿದೆ ಹಾಗೂ ರಾಜಕೀಯ ಪಕ್ಷಗಳ ನಾಯಕರು 'ಪಕ್ಷಾತೀತವಾಗಿ' ಆಲೋಚಿಸಬೇಕಾದ ಅಗತ್ಯವಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಭವಿಷ್ಯಕ್ಕೆ ಅನುಕೂಲ

ಇತ್ತೀಚೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಪ್ರಶ್ನೆಪತ್ರಿಕೆಗಳ ಸೋರಿಕೆಯಾಗುತ್ತಿದೆ, ಅವುಗಳಲ್ಲಿನ ಒಂದಷ್ಟು ಪ್ರಶ್ನೆಗಳು ಪರೀಕ್ಷಾರ್ಥಿಗಳಿಗೆ ಗೊಂದಲವನ್ನು ಉಂಟುಮಾಡುತ್ತಿವೆ. ಇದರಿಂದಾಗಿ ದಿನ ಬೆಳಗಾದರೆ ಸಮಾಜದ ವಿವಿಧ ವಲಯಗಳಿಂದ ಹುಯಿಲು ಹೊಮ್ಮುವಂತಾಗಿದೆ. ಇನ್ನು ಮಾರ್ಚ್ ಎಂದಾಕ್ಷಣ 'ಪರೀಕ್ಷೆಯ ತಿಂಗಳು' ಎಂಬುದೇ ಎಲ್ಲರ ಮನದಲ್ಲಿ ಮೂಡುವ ಚಿತ್ರ. ಈ ತಿಂಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ನಡೆಯುತ್ತವೆ. ಇವಕ್ಕೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವವರು ವಿದ್ಯಾರ್ಥಿಗಳಲ್ಲಿ ಯಾವುದೇ ತೆರನಾದ ಗೊಂದಲಗಳನ್ನು ಮೂಡಿಸದಿರಲಿ. ಸರಳವಾಗಿರುವ ಮತ್ತು ನೇರವಾಗಿರುವ ಶೈಲಿಯಲ್ಲಿ ಪ್ರಶ್ನೆಗಳನ್ನು ಸಜ್ಜುಗೊಳಿಸಲಿ. ಇನ್ನು ಆಳುಗ ವ್ಯವಸ್ಥೆಯು ಕೂಡ ಈ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗದಂತೆ ಮುಂಜಾಗ್ರತೆ ವಹಿಸಿದರೆ, ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಅನುಕೂಲವಾಗುತ್ತದೆ.

– **ಅಂಬಿಕಾ ಬಿ.ಟಿ.**, ಹಾಸನ

ಎಲ್ಲಿದೆ ಹೊಣೆಗಾರಿಕೆ?

ರಾಜಕೀಯ ಪಕ್ಷಗಳಲ್ಲಿ ಕಾಣಬರುವ 'ಹೈಕಮಾಂಡ್' ಎಂಬ ವ್ಯವಸ್ಥೆಯು, ಪ್ರಜೆಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳ ಸ್ವತಂತ್ರ ಅಭಿವ್ಯಕ್ತಿಗೆ ಒದಗುವ ಒಂದು 'ಅಸಾಂವಿಧಾನಿಕ ತಡೆಗೋಡೆ' ಎನ್ನಬಹುದೇ?! ಏಕೆಂದರೆ, ಚುನಾವಣೆಗೂ ಮುನ್ನ ಹತ್ತು ಹಲವು ಆಶ್ವಾಸನೆಗಳನ್ನು ಘೋಷಿಸಿ ಜನರಿಂದ ಆಯ್ಕೆಯಾಗಿ 'ಜನಪ್ರತಿನಿಧಿ' ಎನಿಸಿಕೊಳ್ಳುವ ಬಹುತೇಕರು, ತರುವಾಯದಲ್ಲಿ ಮತದಾರರನ್ನೇ ಮರೆತು ಈ 'ಹೈಕಮಾಂಡ್' ಎಂಬ ಪುಂಗಿಯ ನಾದಕ್ಕೆ ತಲೆದೂಗತೊಡಗುತ್ತಾರೆ!

ಹೀಗೆ ತಮ್ಮ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳುವ ಜನಪ್ರತಿನಿಧಿಗಳು ಒಂದು ಲೆಕ್ಕದಲ್ಲಿ 'ತಮ್ಮತನ' ಇಲ್ಲದವರಾಗುತ್ತಾರೆ. ಅವರು ಈ ರೀತಿ ವರ್ತಿಸುವುದಕ್ಕೆ ಕಾರಣವಾಗುವ ಹೈಕಮಾಂಡ್ ಎಂಬ ವ್ಯವಸ್ಥೆಯಲ್ಲಿ ಇರುವವರನ್ನು 'ಪ್ರಜಾವಿರೋಧಿಗಳ ಗುಂಪು' ಎನ್ನಬಹುದೇ? 'ನಮ್ಮ ರಾಜ್ಯದ ಆಡಳಿತ ನಮ್ಮ ರಾಜ್ಯದಿಂದಲೇ ಹೊರತು, ದೆಹಲಿಯ ಕೃಪೆಯಿಂದಲ್ಲ' ಎಂದು ಸಾರಿದ ರಾಜಕೀಯ ಪಕ್ಷವೊಂದು ರಾಜ್ಯದಲ್ಲಿ ಮತದಾರರ ಒಲವನ್ನು ಗಳಿಸಿತ್ತು. ಆದರೆ ಎಲ್ಲದಕ್ಕೂ ಹೈಕಮಾಂಡ್ ಕಡೆಗೆ ಮುಖಮಾಡುವ ಚಾಳಿ ಮತ್ತೆ ಎಲ್ಲ ಕಡೆ ಮುಂದುವರಿದಿದೆ. ಜನರಿಂದ ಚುನಾಯಿತರಾದ ಶಾಸಕರು ಮತ್ತು ಸಂಸದರು ಎದ್ದರೆ-ಕೂತರೆ, ಮಾತುಮಾತಿಗೂ ದೆಹಲಿಯ ವಿಮಾನವನ್ನೇರುವುದು, ತಮ್ಮ ಅಸಲು ಕೆಲಸವನ್ನೇ ಮರೆಯುವುದು ಸರಿಯಲ್ಲ. ಮಂತ್ರಿಗಳು ಕೂಡ ತಮ್ಮ ಖಾತೆಗೆ ಸಂಬಂಧಿಸಿದ ಕೆಲಸಗಳ ನೆಪವೊಡ್ಡಿ, ಸರಕಾರಿ ವೆಚ್ಚದಲ್ಲಿ ವಿಶೇಷ ವಿಮಾನವೇರಿ ದೆಹಲಿಗೆ ಧಾವಿಸಿ, ತಮ್ಮ ಸ್ಥಾನದ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳುವುದನ್ನು ಅಥವಾ ತಮಗಾಗದವರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುವುದನ್ನು ಸಾಕಷ್ಟು ವರ್ಷಗಳಿಂದ ನೋಡುತ್ತಾ ಬಂದಿದ್ದೇವೆ. ಹೇಳಿ-ಕೇಳಿ ಇದು ಡಿಜಿಟಲ್ ಯುಗ. ಎಲ್ಲ ಪರಸ್ಪರ ಮಾತುಕತೆ, ಸಭೆ, ವ್ಯವಹಾರ ಇತ್ಯಾದಿಗಳನ್ನು ಆನ್‌ಲೈನ್ ಮಾರ್ಗೋಪಾಯದಲ್ಲೇ ನಡೆಸುವ ಸೌಲಭ್ಯವಿದ್ದರೂ, ಇವರೆಲ್ಲ ಸಣ್ಣ ಪುಟ್ಟ ಸಂಗತಿಗಳಿಗೆ ವಿಮಾನವೇರಿ ದೆಹಲಿಗೆ ತೆರಳುವುದೇಕೆ? ತಾವು ಭೇಟಿಯಾಗಲು ಬಯಸಿರುವ ಪ್ರಭಾವಿ/ಪ್ರತಿಷ್ಠಿತ ವ್ಯಕ್ತಿಯ ಸಮಯದ ಕೃಪೆಗಾಗಿ ದಿನಗಟ್ಟಲೆ ಶಾಲು ಮತ್ತು ಹೂಗುಚ್ಛಗಳನ್ನು (ಅವೂ ಸರಕಾರಿ ದುಡ್ಡಿನಿಂದ ಪಡೆದಂಥವೇ!) ಹಿಡಿದು ಕಾಯುವ ಪಡಿಪಾಟಲು ಅಗತ್ಯವೇ? ತಮ್ಮ ಕಾರ್ಯಾವಧಿಯಲ್ಲಿ ಹೆಚ್ಚಿನ ಪಾಲನ್ನು ಅವರು ಇಂಥ ಅನಗತ್ಯ ಬಾಬತ್ತುಗಳಿಗೇ ವಿನಿಯೋಗಿಸಿದರೆ, ಮತದಾರರಿಗೆ ಸಲ್ಲಿಸಬೇಕಾದ ಸೇವೆಯನ್ನು ಮತ್ತು ಕ್ಷೇತ್ರದಲ್ಲಿ ನಡೆಸಬೇಕಾದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದು ಯಾವಾಗ? ಮತದಾರರೆಂದರೆ ಏಕಿಂಥ ನಿರ್ಲಕ್ಷ್ಯ?

ರಾಜಕೀಯ ಪಕ್ಷಗಳಲ್ಲಿ ಇಂಥ ಹೈಕಮಾಂಡ್ ಸಂಸ್ಕೃತಿ ಇರುವವರೆಗೂ, ಜನಪ್ರತಿನಿಧಿಗಳನ್ನು ಚುನಾಯಿಸಿ ಕಳಿಸಿದ ಮತದಾರರು ಅವರಿಂದ ನಿರೀಕ್ಷಿತ ಸೇವೆ ಪಡೆಯುವುದು ಅಸಾಧ್ಯ; ಏಕೆಂದರೆ, ಅವರೆಲ್ಲ 'ಹೈಕಮಾಂಡ್' ಗೀಳಿಗೆ ಬಲಿಯಾಗಿ, ಅಲ್ಲಿಂದಲೇ ಔಷಧಿಯನ್ನೂ ಪಡೆಯುವವರು!

– **ಬೆಳ್ಳಿ ಚಂದ್ರಶೇಖರಶೆಟ್ಟಿ**, ಬೆಂಗಳೂರು

ಮುಂಜಾಗ್ರತೆ ಅಗತ್ಯ

ಒಂದಲ್ಲಾ ಒಂದು ಕಡೆ, ಅಡುಗೆ ಅನಿಲ ಸೋರಿಕೆಯಿಂದ ಸಿಲಿಂಡರ್ ಸ್ಫೋಟವಾಗುತ್ತಿರುವ, ಅನಿಲದ ಸೇವನೆಯಿಂದ ದುರಂತಗಳಾಗುತ್ತಿರುವ ವರದಿಗಳನ್ನು ಓದುತ್ತಲೇ ಇದ್ದೇವೆ. ಈಗ ಬಹುತೇಕ ಮನೆಗಳಲ್ಲಿ ಅಡುಗೆ ಅನಿಲದ ಬಳಕೆ ಸರ್ವೇಸಾಮಾನ್ಯವಾಗಿದೆ. ಹೀಗಾಗಿ ಸುರಕ್ಷತೆಯನ್ನು ಕಾಯ್ದುಕೊಳ್ಳಲು ಇನ್ನಿಲ್ಲದ ಮುಂಜಾಗ್ರತೆಯನ್ನು ವಹಿಸಬೇಕಾದ ಅನಿವಾರ್ಯತೆಯಿದೆ. ಒಂದೊಮ್ಮೆ ಅನಿಲ ಸೋರಿಕೆಯಾದಲ್ಲಿ, ಅದು ಅಡುಗೆಮನೆಯಿಂದ ಹೊರಹೋಗುವುದಕ್ಕೆ ಹೊರದಾರಿಯ ಅಗತ್ಯವಿರುತ್ತದೆ. ಆದರೆ ರಾತ್ರಿ ವೇಳೆಯಲ್ಲಿ ಅಥವಾ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಅಡುಗೆಮನೆಯ ಕಿಟಕಿಗಳನ್ನು ಮುಚ್ಚುವುದು ಕೆಲವರ ಮನೆಯಲ್ಲಿ ಕಂಡುಬರುವ ಪರಿಪಾಠ. ಕೆಲವೊಬ್ಬರ ಮನೆಯಲ್ಲಂತೂ ಅತಿಚಿಕ್ಕ ಕಿಟಕಿಯಿದ್ದು, ಅದಕ್ಕೂ ಸೊಳ್ಳೆಜಾಲರಿಯನ್ನು ಹಾಕಲಾಗಿರುತ್ತದೆ. ಹೀಗಾಗಿ ಒಂದೊಮ್ಮೆ ಅನಿಲ ಸೋರಿಕೆಯಾದರೆ ಅದು ಅಡುಗೆ ಮನೆಯಲ್ಲಿ ದಟ್ಟವಾಗಿ ಹಬ್ಬುವುದರ ಜತೆಗೆ ಮತ್ತಿತರ ಕೋಣೆಗಳಿಗೂ ವ್ಯಾಪಿಸಿ ಮನೆಯ ಸದಸ್ಯರು ಉಸಿರುಗಟ್ಟುವ ಸಾಧ್ಯತೆ ಇರುತ್ತದೆ. ಇನ್ನು, ಅಡುಗೆಮನೆಯ ಬಾಗಿಲನ್ನು ಸಂಪೂರ್ಣ ಮುಚ್ಚಿಬಿಡುವ ಅಭ್ಯಾಸವೂ ಕೆಲವರಲ್ಲಿದೆ, ಇಂಥ ವೇಳೆ ಹೊರದಾರಿ ಇಲ್ಲದೆ ಅನಿಲ ದಟ್ಟವಾಗಿ ಜಮೆಯಾಗಿ ಸಿಲಿಂಡರ್ ಸ್ಫೋಟವಾಗಬಹುದು. ಆದ್ದರಿಂದ ಈ ಎಲ್ಲ ಅಂಶಗಳನ್ನೂ ಅಡುಗೆ ಅನಿಲದ ಬಳಕೆದಾರರು ಗಂಭೀರವಾಗಿ ಪರಿಗಣಿಸಿ ಸುರಕ್ಷತೆಯ ಕಡೆಗೆ ಹೆಚ್ಚಿನ ಗಮನ ನೀಡಬೇಕಿದೆ.

– **ಸತ್ಯಬೋಧ**, ಬೆಂಗಳೂರು

ವಿಶಿಷ್ಟ ಪ್ರಸ್ತುತಿ

ಕಳೆದ ಭಾನುವಾರ ಆಕಾಶವಾಣಿಯಲ್ಲಿ ಬಿತ್ತರಗೊಂಡ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಜನರ ಸ್ಥೂಲಕಾಯ ಸಮಸ್ಯೆಯ ಬಗ್ಗೆ ಆತಂಕ ವ್ಯಕ್ತಪಡಿಸಿ, ಅದಕ್ಕೆ ಪರಿಹಾರವನ್ನೂ ಸೂಚಿಸಿದ್ದು ಗಮನಾರ್ಹ. ಇತ್ತೀಚಿನ ದಿನಗಳಲ್ಲಿ ಪ್ರಸಾರವಾದ 'ಮನ್ ಕಿ ಬಾತ್' ಕಾರ್ಯಕ್ರಮಗಳ ಪೈಕಿ ಇದು ವಿಶಿಷ್ಟವಾಗಿತ್ತು ಎನ್ನಲಡ್ಡಿಯಿಲ್ಲ.

ದೇಶದ ಜನಸಂಖ್ಯೆಯ ಪ್ರತಿ 8 ಜನರ ಪೈಕಿ ಒಬ್ಬರು ಈ ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎನ್ನಲಾಗುತ್ತದೆ. ಮುಖ್ಯವಾಗಿ ಯುವಜನರು ಸ್ಥೂಲಕಾಯದ ಬಲಿಪಶುಗಳಾಗುತ್ತಿದ್ದು ಅದರ ಉಪಪರಿಣಾಮವಾಗಿರುವ ಅನಾರೋಗ್ಯ ಸಮಸ್ಯೆಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಇನ್ನು ಚಿಕ್ಕ ವಯಸ್ಸಿನಲ್ಲೇ ಮಧುಮೇಹಕ್ಕೆ ಒಳಗಾಗುತ್ತಿರುವವರ ಸಂಖ್ಯೆಯೂ ಸಾಕಷ್ಟಿದೆ. ಹೀಗಾಗಿ ಪ್ರಧಾನಿಯವರು ಈ ಬಗ್ಗೆ ಜಾಗೃತಿ ಮೂಡಿಸಿದ್ದು ಸಕಾಲಿಕವೂ ಶ್ಲಾಘನೀಯವೂ ಆಗಿತ್ತು ಎನ್ನಲಡ್ಡಿಯಿಲ್ಲ. 'ಮನ್ ಕಿ ಬಾತ್' ಕಾರ್ಯಕ್ರಮದ ಮುಂಬರುವ ಸಂಚಿಕೆಗಳಲ್ಲೂ ಇಂಥ ಉಪಯುಕ್ತ ಮಾಹಿತಿ ಹೊಮ್ಮುವಂತಾಗಲಿ.

– **ಬೂಕನಕೆರೆ ವಿಜೇಂದ್ರ**, ಮೈಸೂರು

ಭಟ್ಟರ್ ಸ್ಕಾಚ್

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
  ಭಟ್ರೇ, ಪಾಕ್ ಬೌಲರುಗಳನ್ನು ನೋಡಿ ಏನನಿಸಿತು?
- **ಭಾರತ ಪರ ಅನಿಸ್ತು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
  ಭಟ್ರೇ, ರೂಪೇಶ್ ರಾಜಣ್ಣನ ಕನ್ನಡ ಅಭಿಮಾನ ಬೆಂಗಳೂರಿನಲ್ಲಿ ಮಾತ್ರ ಉಕ್ಕುತ್ತದಾ?
- **ಬೆಳಗಾವಿ ಅವರ ಲಿಮಿಟ್ಸ್‌ಗೆ ಬರಲ್ವಂತೆ!**

- **ರಾಯಪುರ ಶ್ರೀಕರ, ಬೆಂಗಳೂರು**
  ಭಟ್ರೇ, ಲಕ್ಷ್ಮಿ ಹೆಬ್ಬಾಳ್ಕರ್ ನಡೆಯಲಾರಂಭಿಸಿದರೆ ಗೃಹಲಕ್ಷ್ಮಿ ಹಣ ಬರುವುದಂತೆ?
- **ಅವರನ್ನು ಸಾಕ್ಷಾತ್ ನಡೆದಾಡುವ ಲಕ್ಷ್ಮಿ ಎನ್ನಬಹುದು!**

- **ಎಲ್.ವಿ.ಸತೀಶ, ಮೈಸೂರು**
  ಭಟ್ರೇ, ಕಾಡ್ಗಿಚ್ಚಿಗೂ, ಹೊಟ್ಟೆಕಿಚ್ಚಿಗೂ ಏನು ವ್ಯತ್ಯಾಸ?
- **ಕಾಡ್ಗಿಚ್ಚು ಕಾಡನ್ನು ಮಾತ್ರ ಸುಡುತ್ತದೆ, ಹೊಟ್ಟೆ ಕಿಚ್ಚು ಏನನ್ನು ಬೇಕಾದರೂ ಸುಡುತ್ತದೆ!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಭಾರತೀಯರೂ ಜಪಾನಿಯರ ಹಾಗೆ ಆಗಲು ಸಾಧ್ಯವಾ?
- **ಸಾಧ್ಯ..ಆದರೆ ಅವರು ಜಪಾನಿಗೆ ಹೋಗಬೇಕು!**

- **ಡಾ.ಆನಂದ ಕುಲಿಗೋಡ, ಧಾರವಾಡ**
  ಭಟ್ರೇ, ಬರವಣಿಗೆ ಮತ್ತು ಓದಿನ ಮಧ್ಯೆ ನೀವು ಏನು ಕುಡೀತೀರಾ?
- **ಏನು ಕಡೀತೀರಾ ಅಂತ ಕೇಳಿದ್ರೆ ಹೇಳ್ತಿದ್ದೆ!**

- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಪ್ರೀತಿಯಲ್ಲಿ ಗೆದ್ದವರಿಗಿಂತ ಬಿದ್ದವರೇ ಜಾಸ್ತಿ ಅಲ್ಲವೇ?
- **ಬೀಳದೇ ಪ್ರೀತಿಸುವುದು ಹೇಗೆ ಸಾಧ್ಯ?!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
  ಭಟ್ರೇ, 'ಹೆಂಡತಿ'ಯ ವಿರುದ್ಧ ಪದ ಯಾವುದು?
- **ಹೆಂಡತಿಗೆ ವಿರುದ್ಧವಿದ್ದು ಬದುಕಲು ಸಾಧ್ಯವಾ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೇ, ದಾಂಪತ್ಯದಲ್ಲಿ ಸಾಮರಸ್ಯ ಯಾವಾಗ ಸಾಧ್ಯ?
- **ಗಂಡನೂ ಹೆಂಡತಿ ಪಾರ್ಟಿ ಸೇರಿದಾಗ!**

- **ವಾಸುದೇವ ಹೆಬ್ಬಾರ, ಬ್ರಹ್ಮಾವರ**
  ಭಟ್ರೇ, 'ನಿನ್ನ ಹೆಸರೇನು?' ಅಂತ ಕೇಳಿದ್ರೆ, 'ಯೋಗಿ ದುರ್ಲಭಜೀ' ಅಂತ ಇಲ್ಲೊಬ್ಬ ಹೇಳ್ತಾನಲ್ಲ?
- **ಯಾವಾಗ ಹೆಸರನ್ನು ಬದಲಿಸಿಕೊಂಡೆ ಅಂತ ಕೇಳಬೇಕಿತ್ತು!**

- **ಕೆ.ವಿನಯ್ ಶೆಟ್ಟಿ, ಕುಂದಾಪುರ**
  ಭಟ್ರೇ, ನೀವು ಹವ್ಯಕರಾಗಿದ್ದೂ ಎಲೆ-ಅಡಕೆ ಜಗಿಯುವುದಿಲ್ಲವಲ್ಲ?
- **ನಿಜ, ನಾನು ಎಲೆ-ಅಡಕೆ ಜಗಿಯುವುದಿಲ್ಲ, ಆದರೆ ಉಗಿಯುತ್ತೇನೆ!**

- **ವಿನಾಯಕ ಕುದ್ರೋಳಿ, ಬೆಂಗಳೂರು**
  ಭಟ್ರೇ, ಭಟ್ಟರ ಸಂಖ್ಯೆ ಜಾಸ್ತಿಯಾಗಬೇಕು ಎಂದು ಕರೆ ಕೊಟ್ಟಿದ್ದೀರಂತೆ?
- **ಅಡುಗೆ ಭಟ್ಟರ ಸಂಖ್ಯೆ ಜಾಸ್ತಿಯಾಗಲೆಂದು ಕರೆ ಕೊಟ್ಟಿದ್ದೇನೆ ಎಂದು ಕೆಲವರು ತಪ್ಪು**

ಕಾಲದ ಲೆಕ್ಕಾಚಾರ ತಪ್ಪಿದ್ದೆಲ್ಲಿ..?

'ಸರಳ ಬದುಕು, ಸುಂದರ ಬದುಕು' ಎಂಬುದು ಬದುಕಿನ ಸಾಮಾನ್ಯ ಸೂತ್ರವೆಂಬುದನ್ನು ಮರೆತು ನಮ್ಮ ಗ್ರಹವನ್ನ ನಾವೇ ಕುಲಗೆಡಿಸಿದ್ದೇವೆ. ಅದನ್ನು ಸಾಧ್ಯವಾದಷ್ಟು ಪುನಃ ಕಟ್ಟುವ ಹೊಣೆ ನಮ್ಮ ಮೇಲಿದೆ. ಅದರಲ್ಲೂ ವ್ಯಾಪಾರಿ ಬುದ್ಧಿ ತೋರುವುದನ್ನು, ಹಣ ಮಾಡಬೇಕು ಎಂಬ ಹಪಹಪಿಯನ್ನು ಬಿಟ್ಟು ಒಮ್ಮನಸ್ಸಿನಿಂದ ಈ ಕಾರ್ಯ ಮಾಡಬೇಕಿದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ವಾತಾವರಣ ಬದಲಾವಣೆ ಅಥವಾ ಕ್ಲೈಮೇಟ್ ಚೇಂಜ್ ಎನ್ನುವುದೆಲ್ಲಾ ಬೊಗಳೆ; ಇದು ವಾತಾವರಣ ವಿಜ್ಞಾನಿಗಳು ಸೃಷ್ಟಿಸಿರುವ ಕಲ್ಪಿತ ಭಯ. ಇದೊಂದು ಡ್ರಾಮಾ, ಸುಳ್ಳಾಟ ಎನ್ನುವುದು ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ನಿಲುವು. ಪ್ಯಾರಿಸ್ ಒಪ್ಪಂದದಿಂದ 2016ರಲ್ಲಿ ಅಮೆರಿಕ ಹೊರಬಂದಿದ್ದು ಟ್ರಂಪ್ ಅವರ ಈ ನಿಲುವುಗಳಿಂದ. ಬೈಡೆನ್ ಆಡಳಿತದಲ್ಲಿ ಮತ್ತೆ ಪ್ಯಾರಿಸ್ ಒಪ್ಪಂದವನ್ನು ಒಪ್ಪಿಕೊಳ್ಳಲಾಗಿತ್ತು. ಇದೀಗ ಟ್ರಂಪ್ ಮತ್ತೊಮ್ಮೆ ಈ ಒಪ್ಪಂದದಿಂದ ಹೊರಬರುವುದಾಗಿ ಧಮಕಿ ಹಾಕಿದ್ದಾರೆ. ಈ ಮಧ್ಯೆ ನಮ್ಮ ಕರ್ನಾಟಕದಲ್ಲಿ ಫೆಬ್ರವರಿಯಲ್ಲೇ ಇನ್ನಿಲ್ಲದ ಸೆಖೆ ಶುರುವಾಗಿದೆ. ಹೀಗಾಗಿ ಏಪ್ರಿಲ್ ವೇಳೆಗೆ ಮಳೆ ಬರುತ್ತದೆ ಎನ್ನಲಾಗುತ್ತಿದೆ. ವಾತಾವರಣ ಬದಲಾವಣೆ ಆಗಿರುವುದಂತೂ ಸತ್ಯ.

ಪ್ರತಿವರ್ಷ ಜೂನ್ ತಿಂಗಳ 5ನೇ ದಿನವನ್ನ ವಿಶ್ವ ಪರಿಸರ ದಿನವೆಂದು ಆಚರಿಸಲಾಗುತ್ತದೆ. ಆ ದಿನ ಸಾಮಾಜಿಕ ಜಾಲತಾಣದಲ್ಲಿ ಅಬ್ಬರ! ಹೌದು, 'ನೀರು ಉಳಿಸಿ, ಗಿಡ ಬೆಳೆಸಿ' ಎನ್ನುವುದು, ಅರಣ್ಯನಾಶದ ಬಗ್ಗೆ ವಿಷಾದ ವ್ಯಕ್ತಪಡಿಸುವುದು, ಹೀಗೆ ಒಂದಲ್ಲ ಹಲವು ರೀತಿಯ ಸಂದೇಶಗಳನ್ನು ತಮ್ಮ ಗೋಡೆಯ ಮೇಲೆ ಹಂಚಿಕೊಂಡು ಪ್ರತಿಯೊಬ್ಬರೂ ಆ ದಿನದ ಮಟ್ಟಿಗೆ ಪುಟ್ಟ ಪರಿಸರವಾದಿಯಾಗಿ ಪರಿವರ್ತನೆಗೊಂಡಿರುತ್ತಾರೆ. ಇದೊಂದು ಸಮೂಹಸನ್ನಿ! ಇಂಥ ಸಮೂಹಸನ್ನಿ ರಸ್ತೆಗಿಳಿದು ಕೆಲಸ ಮಾಡುವ ಮಟ್ಟಕ್ಕೆ ಬೆಳೆದುಬಿಟ್ಟರೆ ಸಾಕು! ಅಲ್ಲಿಗೆ ನಾವು ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಪ್ಲಾನೆಟ್ ಅನ್ನು ಬಿಟ್ಟುಹೋಗಬಹುದು. ಇಷ್ಟೆಲ್ಲಾ ಪೀಠಿಕೆ ಹಾಕಿದ್ದರ ಉದ್ದೇಶ ಬಹಳ ಸರಳ. ಗಮನಿಸಿ ನೋಡಿ- ಜಗತ್ತಿನಲ್ಲಿ ಅತಿಸಣ್ಣ ಅಥವಾ ಅತಿದೊಡ್ಡದೆನ್ನುವ ಯಾವುದೇ ಘಟನೆ ಘಟಿಸಲಿ, ಅದರ ಹಿಂದೆ 'ಹಣ' ಎನ್ನುವುದು ಇದ್ದೇ ಇರುತ್ತದೆ. ಬದುಕಿಗೆ ಉಸಿರು ಹೇಗೋ, ಹಾಗೆ ಜಗತ್ತಿಗೆ 'ಹಣ' ಎನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ಅವಶ್ಯಕ ಹಣವನ್ನ ಗಳಿಸಲು ಮನುಷ್ಯ ಯಾವ ಹಂತಕ್ಕೂ ಹೋಗಬಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ, ಆನೆಗಳನ್ನು ಕೊಂದು ಅವುಗಳ ದಂತವನ್ನ, ಕಾಡನ್ನು ಕಡಿದು ಮರವನ್ನ ಮಾರಿಕೊಂಡ ಒಬ್ಬ ವೀರಪ್ಪನ್ ಹೆಸರು ನೆನಪಿಗೆ ಬರುತ್ತದೆ. ಇಂಥ ವೀರಪ್ಪನ್ ವ್ಯವಸ್ಥೆಯ ಅತ್ಯಂತ ಚಿಕ್ಕ ಕೊಂಡಿ. ಅಮೆರಿಕ, ಯುರೋಪ್, ಚೀನಾ ದೇಶಗಳು ವಿಶ್ವದ ದೊಡ್ಡಣ್ಣನಾಗುವ ಜಟಾಪಟಿಯಲ್ಲಿ ಯಾವುದನ್ನೂ ಲೆಕ್ಕಿಸದೆ, ತಾವು ಕುಳಿತ ರೆಂಬೆಯನ್ನೇ ಕತ್ತರಿಸುವ ಹುಂಬತನಕ್ಕೆ ಬಿದ್ದಿವೆ. ಈಗಾಗಲೇ ನಮ್ಮ ಭೂಮಿಗೆ ನಾವು ಹೊಡೆದಿರುವ ಮೊಳೆಗಳ ಲೆಕ್ಕ ಇಡುವವರಾರು? ಹಾಗೆಂದು ಪ್ರಕೃತಿ ಸುಮ್ಮನೆ ಬಿಡುವುದಿಲ್ಲ. ನಾವು ಮಾಡಿದ ತಪ್ಪುಗಳಿಗೆ ಅಂದು ದಂಡವನ್ನು ವಿಧಿಸುವುದು ಖಂಡಿತ.

ಕ್ಲೈಮೇಟ್ ಚೇಂಜ್ ಅಥವಾ ವಾತಾವರಣ ಬದಲಾವಣೆ ಎನ್ನುವ ಮಾತು ಕಳೆದ ಒಂದು ದಶಕದಿಂದ ಹೆಚ್ಚಾಗಿ ಚಾಲ್ತಿಗೆ ಬಂದಿರುವಂಥದ್ದು. ನಮ್ಮಲ್ಲಿರುವ ನೈಸರ್ಗಿಕ ಸಂಪತ್ತನ್ನು ಹಿತಮಿತವಾಗಿ ಬಳಸುತ್ತಾ ಬಂದಿದ್ದರೆ ಎಲ್ಲರಿಗೂ ಒಳ್ಳೆಯದಿತ್ತು. ಅಮೆರಿಕ ಎನ್ನುವ ದೇಶ ಕೈಗಾರಿಕಾ ಕ್ರಾಂತಿಗೆ ಮುಂದಾಯಿತು. ಈ ಕ್ರಾಂತಿಯ ಮೂಲಕ ಅದು ಸೃಷ್ಟಿಮಾಡಿದ ಸಂಪತ್ತು, ಅದರಿಂದಾಗಿ ಅಲ್ಲಿನ ಜನಜೀವನದಲ್ಲಾದ ಬದಲಾವಣೆ, ಜಗತ್ತಿನ ಇತರ ರಾಷ್ಟ್ರಗಳ ಕಣ್ಣನ್ನು ಕುಕ್ಕಿತು. ಉಳಿದದ್ದು ಇತಿಹಾಸ. ಒಬ್ಬರ ಹಿಂದೆ ಒಬ್ಬರು ಹಠಕ್ಕೆ ಬಿದ್ದವರಂತೆ ತಂತಮ್ಮ ದೇಶದ ನೈಸರ್ಗಿಕ ಸಂಪನ್ಮೂಲವನ್ನು ಲೂಟಿಹೊಡೆದರು. ಅದು ಸಾಲದು ಎನಿಸಿದಾಗ, ಇತರ ಬಡದೇಶಗಳಿಂದ ಅದನ್ನು ಆಮದು ಮಾಡಿಕೊಂಡು ಸಿದ್ಧವಸ್ತುವನ್ನಾಗಿ ಮಾರ್ಪಡಿಸಿ, ಮತ್ತೆ ಅದನ್ನ ಅದೇ ಬಡದೇಶಕ್ಕೆ ಹೆಚ್ಚಿನ ಬೆಲೆಗೆ ರಫ್ತುಮಾಡಲು ಶುರುಮಾಡಿದರು. ಇದೊಂದು ವಿಷವರ್ತುಲ. ಒಮ್ಮೆ ಇಂಥ ಚಕ್ರದಲ್ಲಿ ಸಿಕ್ಕರೆ ಅಲ್ಲಿಗೆ ಮುಗಿಯಿತು.

ಹೀಗೆ ಪ್ರಕೃತಿಗೆ ಆಗಿರುವ ಹಾನಿಯ ಮೊತ್ತ ಇಷ್ಟು ಎಂದು ಸಂಖ್ಯೆಯಲ್ಲಿ ಹೇಳಿದರೆ ಅದೊಂದು ಅಂದಾಜು ಸಂಖ್ಯೆಯೇ ಹೊರತು, ನಿಜವಾಗಿ ಆದ ಹಾನಿಯನ್ನು ವರ್ಣಿಸಲು ಕೂಡ ಸಾಧ್ಯವಿಲ್ಲ. 20-30 ವಯಸ್ಸಿನ ಜನರು ಹೃದಯಾಘಾತ, ಕ್ಯಾನ್ಸರ್‌ನಂಥ ಮಾರಕ ರೋಗದಿಂದ ಸಾಯುತ್ತಿರುವುದನ್ನು ನಾವು ಒಪ್ಪಿಕೊಂಡಿದ್ದೆವು. ಈಗ ನಾವು ಇನ್ನೊಂದು ಹಂತಕ್ಕೆ ಬಡ್ತಿ ಪಡೆದಿದ್ದೇವೆ. ಇತ್ತೀಚಿನ ದಿನಗಳಲ್ಲಿ 8-10 ವಯೋಮಾನದ ಮಕ್ಕಳು ಕೂಡ ಹೃದಯಾಘಾತಕ್ಕೆ ತುತ್ತಾಗಿ ಜೀವಬಿಡುತ್ತಿರುವುದು ಸುದ್ದಿಯಾಗುತ್ತಿದೆ. ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಹುಡುಗನೊಬ್ಬ ಫೆಬ್ರವರಿ 22ರಂದು ಹೃದಯಾಘಾತದಿಂದ ಸತ್ತಿದ್ದಾನೆ ಎಂಬುದು ಸುದ್ದಿಯಾಗಿದೆ. ಮಾನಸಿಕ ಖಿನ್ನತೆ ಮತ್ತು ಒತ್ತಡದ ಬಳುವಳಿಯಿದು.

ವಾತಾವರಣ ಬದಲಾವಣೆಯಿಂದ ಆಗುವ ತೊಂದರೆಗಳನ್ನು ಪಟ್ಟಿಮಾಡುತ್ತಾ ಹೋದರೆ ಅದೊಂದು ವಿಜ್ಞಾನಬರಹವಾಗುತ್ತದೆ. ಇಲ್ಲಿನ ಉದ್ದೇಶವು ವಾತಾವರಣ ಬದಲಾವಣೆಗೆ ಜಗತ್ತಿನ ದೊಡ್ಡ ಮತ್ತು ಅತಿದೊಡ್ಡ ಸಂಸ್ಥೆಗಳು ಏನು ಮಾಡುತ್ತಿವೆ? ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸೀಮಿತವಾಗಿದೆ. 2018ರಲ್ಲಿ ಜಗತ್ತಿನ 7,000 ಸಂಸ್ಥೆಗಳು 'ಇಂಗಾಲದ ಹೊರಸೂಸುವಿಕೆಯ ಪ್ರಮಾಣವನ್ನು ಬಹಿರಂಗಪಡಿಸುವ' (ಅಂದರೆ, 'ಕಾರ್ಬನ್ ಡಿಸ್‌ಕ್ಲೋಷರ್' ಮಾಡುವ) ಒಂದು ಸಮೀಕ್ಷೆಯಲ್ಲಿ ಪಾಲ್ಗೊಂಡು ವಿವರಗಳನ್ನ ಹಂಚಿಕೊಂಡಿವೆ. ಇನ್ನೂ ಸಾವಿರಾರು ಸಂಸ್ಥೆಗಳು ಈ ಸಮಸ್ಯೆಯನ್ನ ಇನ್ನೂ ಅಷ್ಟೊಂದು ತೀವ್ರವಾಗಿ ತೆಗೆದುಕೊಂಡಿಲ್ಲ. ಇಂಥ ಒಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ 80 ಪ್ರತಿಶತ ಸಂಸ್ಥೆಗಳು, 'ಇದೊಂದು ಜಾಗತಿಕ ಸಮಸ್ಯೆ, ಇದಕ್ಕೆ ಅತ್ಯಂತ ಬೇಗ ಪರಿಹಾರ ಕಂಡುಕೊಳ್ಳಬೇಕಿದೆ' ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ. ಹೀಗೆ ಹದಗೆಡುತ್ತಿರುವ ವಾತಾವರಣವನ್ನು ಒಂದು ಹಂತಕ್ಕೆ ತರಲು ಆಗುವ ಖರ್ಚು ಒಂದು ಟ್ರಿಲಿಯನ್ ಅಮೆರಿಕನ್ ಡಾಲರ್ ಎನ್ನುವ ಅಂದಾಜು-ಖರ್ಚಿನ ಲೆಕ್ಕವನ್ನು ಮುಂದಿಟ್ಟಿವೆ. ಇದೆಷ್ಟು ದೊಡ್ಡ ಹಣ ಎನ್ನುವುದಕ್ಕೆ ಒಂದರ ಮುಂದೆ ಹನ್ನೆರಡು ಸೊನ್ನೆ ಹಾಕಿ ನೀವೇ ಲೆಕ್ಕಹಾಕಿ! ಜಗತ್ತು, ತಂತ್ರಜ್ಞಾನ ಎಷ್ಟೆಲ್ಲಾ ಮುಂದುವರಿದಿದೆ ಎಂದು ಉಬ್ಬುವ ನಾವು, ಬದುಕಿನ ಸಾಮಾನ್ಯ ತತ್ವವನ್ನು ಮರೆತದ್ದು ಇದಕ್ಕೆ ಕಾರಣ. ಇದು ಹೇಗಾಯಿತೆಂದರೆ, ನಿದ್ರೆಗೆಟ್ಟು ವಾರಗಟ್ಟಲೆ ಹಣವನ್ನು ಸಂಪಾದಿಸಿ ಅದರ 90 ಪ್ರತಿಶತ ಹಣವನ್ನ 'ಸ್ಲೀಪ್ ಡಿಸಾರ್ಡರ್' ಗುಣಪಡಿಸಲು ಖರ್ಚುಮಾಡಿದಂತೆ!

ಎಂಥ ಸಮಯದಲ್ಲೂ ಲಾಭ-ನಷ್ಟದ ಲೆಕ್ಕಾಚಾರ ಹಾಕುವ ಪಕ್ಕಾ ವ್ಯಾಪಾರಿ ಮನೋಭಾವದ ಸಂಸ್ಥೆಗಳು ಇದರಲ್ಲಿ ಕೂಡ ಒಂದು ಹೊಸ ವ್ಯಾಪಾರವನ್ನು ಕಂಡುಕೊಂಡಿವೆ. ಮುಂಬರುವ ದಿನಗಳಲ್ಲಿ, ನವೀಕರಿಸಬಹುದಾದ ಇಂಧನ ಮತ್ತು ವಿದ್ಯುಚ್ಚಾಲಿತ ಕಾರುಗಳ ಬೇಡಿಕೆ ಗಗನ ಮುಟ್ಟಲಿದೆ. ಇಂಥ ಸಂಸ್ಥೆಗಳ ವ್ಯಾಪಾರ ವಹಿವಾಟಿನ ಅಂದಾಜು 2.1 ಟ್ರಿಲಿಯನ್ ಅಮೆರಿಕನ್ ಡಾಲರ್. ಅಂದರೆ ವಾತಾವರಣವು ಕೆಡದಂತೆ ತಡೆಯಲು ಮಾಡುವ ಖರ್ಚಿನ ಎರಡು ಪಟ್ಟು ವ್ಯಾಪಾರದ ವಾಸನೆ ಅವುಗಳ ಮೂಗಿಗೆ ಆಗಲೇ ಬಡಿದಿದೆ. ವಿಶ್ವ ಬದುಕುವ ರೀತಿಯನ್ನು ನಿರ್ಧರಿಸುವ ಕೆಲವೇ ಕೆಲವು ಮಂದಿ, ಮುಂದಿನ ದಿನಗಳು ಹೀಗಿರಬೇಕು ಎನ್ನುವ ನೀಲನಕ್ಷೆಯನ್ನ ಬರೆಯುವುದರಲ್ಲಿ ಮಗ್ನರಾಗಿದ್ದಾರೆ. ಕ್ಲೈಮೇಟ್ ಚೇಂಜ್ ಅನ್ನು ಚೀನಾ ಮತ್ತು ಭಾರತ ಗಂಭೀರವಾಗಿ ಪರಿಗಣಿಸಿಲ್ಲ ಎನ್ನುವ ಮಾತುಗಳು ದಶಕದಿಂದ ಕೇಳಿಬರುತ್ತಿವೆ. ಆದರೆ ಅಮೆರಿಕ ಮತ್ತು ಚೀನಾ ದೇಶಗಳು ಭೂಮಿಗೆ ಮಾಡಿರುವ ಹಾನಿಯ ಹತ್ತನೇ ಒಂದು ಭಾಗದಷ್ಟನ್ನು ಕೂಡ ಭಾರತ ಮಾಡಿಲ್ಲ. ಅಂದಮಾತ್ರಕ್ಕೆ ನಾವೇನೂ ಕಡಿಮೆ ದೇಣಿಗೆ ನೀಡುತ್ತಿಲ್ಲ. ಕಾರುಗಳ ಸಂಖ್ಯೆ, ಮರಗಳನ್ನು ಕಡಿದು ನಿವೇಶನ ಮಾಡುತ್ತಿರುವವರ ಸಂಖ್ಯೆ ನಮ್ಮಲ್ಲೂ ಹೆಚ್ಚುತ್ತಾ ಹೋಗುತ್ತಿದೆ. ಜಿದ್ದಿಗೆ ಬಿದ್ದವರಂತೆ ನಾವು ಕೂಡ ಅಮೆರಿಕ ಮತ್ತು ಚೀನಾದ ಅಭಿವೃದ್ಧಿ ಮಾದರಿಯ ಹಿಂದೆ ಓಡುತ್ತಿದ್ದೇವೆ. ಆದರೆ ಅದು ಹೀನಾಯವಾಗಿ ಸೋತಿರುವ ಮಾದರಿ ಎಂಬುದು ಭಾರತಕ್ಕೆ ಅರಿವಾಗುವುದು ಯಾವಾಗ? ಅಭಿವೃದ್ಧಿ ಎಂದರೆ ಜಿಡಿಪಿ ಹೆಚ್ಚಳ ಎನ್ನುವ ನಂಬಿಕೆ ತಲೆಯಲ್ಲಿ ಹೊಕ್ಕಿರುವಾಗ, ನಾವು ಬೇರೆ ಸಾಧ್ಯತೆಗಳ ಕಡೆಗೆ ನೋಡುವ ಸಂಭಾವ್ಯತೆ ಕಡಿಮೆ.

ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ತಯಾರಾಗುತ್ತಿರುವ ಕಂಪ್ಯೂಟರ್, ಲ್ಯಾಪ್‌ಟಾಪ್ ಮತ್ತು ಮೊಬೈಲ್ ಫೋನುಗಳು ತಲೆನೋವಾಗಿ ಬದಲಾಗಲಿವೆ. ಬಳಸಿ ಕೆಟ್ಟ ಇಂಥ ಉಪಕರಣಗಳನ್ನು ಬಿಸಾಡುವುದಾದರೂ ಎಲ್ಲಿ? ಹಾಗೆಯೇ ಡೀಸೆಲ್ ಮತ್ತು ಪೆಟ್ರೋಲ್ ಕಾರುಗಳು ನೇಪಥ್ಯ ಸೇರಲಿವೆ. ಇವುಗಳ ಹಲವು ಭಾಗವನ್ನು ಮರುಬಳಕೆ ಮಾಡಿಕೊಂಡರೂ ಉಳಿದಿದ್ದನ್ನು ಎಸೆಯುವುದೆಲ್ಲಿ? ಹೀಗೆ ಒಂದಲ್ಲ ಹತ್ತು ಪ್ರಶ್ನೆಗಳು, ಸವಾಲುಗಳು ನಮ್ಮ ಮುಂದಿವೆ.

ಇವತ್ತು ಎಲ್ಲವನ್ನೂ ಹಣದ ಮೂಲಕ ಅಳೆಯುತ್ತೇವೆ.

ಜಗತ್ತಿನ ಶ್ರೀಮಂತರ ಪಟ್ಟಿಯನ್ನು ಬಿಡುಗಡೆ ಮಾಡುವ 'ಫೋರ್ಬ್ಸ್' ಸಂಸ್ಥೆಯು, 'ಇಂಥ ಸಾಹುಕಾರರ ಒಟ್ಟು ಮೌಲ್ಯ ಇಷ್ಟು' ಎಂದು ನಮೂದಿಸುತ್ತದೆ. ಸಮಯವಲ್ಲದ ಸಮಯದಲ್ಲಿ ಮಳೆ, ಚಳಿ, ಗಾಳಿ ಇವುಗಳು ನಮ್ಮ ಮನೆಯನ್ನು ಮುಳುಗಿಸಿದರೆ? ಸದ್ಯ ಜೀವ ಉಳಿದರೆ ಸಾಕು ಎಂದು ಹಪಹಪಿಸುವ ಸಮಯ ಬಂದರೆ? ಆಗ ನಮ್ಮ ನಿಮ್ಮ ಮನೆಯ ಮೌಲ್ಯ ಎಷ್ಟಾದರೂ ಇರಲಿ ಅದನ್ನ ಕೊಳ್ಳುವವರು ಯಾರು? ಬ್ಯಾಂಕಿನಲ್ಲಿರುವ ನಿಮ್ಮ ಹಣದ ಮೊತ್ತವು, ಕೇವಲ ಕಂಪ್ಯೂಟರ್ ಪರದೆಯ ಮೇಲಿನ ಒಂದು ಸಂಖ್ಯೆಯಾಗಿ ಉಳಿದುಕೊಳ್ಳುತ್ತದೆ. 'ಸರಳ ಬದುಕು, ಸುಂದರ ಬದುಕು' ಎಂಬುದು ಬದುಕಿನ ಸಾಮಾನ್ಯ ಸೂತ್ರವೆಂಬುದನ್ನು ಮರೆತು ನಮ್ಮ ಗ್ರಹವನ್ನ ನಾವೇ ಕುಲಗೆಡಿಸಿದ್ದೇವೆ. ಅದನ್ನು ಸಾಧ್ಯವಾದಷ್ಟು ಪುನಃ ಕಟ್ಟುವ ಹೊಣೆ ನಮ್ಮ ಮೇಲಿದೆ. ಅದರಲ್ಲೂ ವ್ಯಾಪಾರಿ ಬುದ್ಧಿ ತೋರುವುದನ್ನು, ಹಣ ಮಾಡಬೇಕು ಎಂಬ ಹಪಹಪಿಯನ್ನು ಬಿಟ್ಟು ಒಮ್ಮನಸ್ಸಿನಿಂದ ಈ ಕಾರ್ಯ ಮಾಡಬೇಕಿದೆ. ನಾಲ್ಕು ಜನ ಸೇರಿದ ಕಡೆ ಎಂಟು ಗುಂಪಾಗುವ ಮನುಷ್ಯ ಈ ಕಾರ್ಯದಲ್ಲಿ ಒಗ್ಗಟ್ಟು ತೋರಿಯಾನೇ? ಎನ್ನುವುದು ಸದ್ಯದ ಪ್ರಶ್ನೆ.

ನಮ್ಮ ಬಳಿ ಹೆಚ್ಚಿನ ಸಮಯವಿಲ್ಲ. 2050ರ ವೇಳೆಗೆ ಹಲವು ಕಡೆ ಬಿಸಿಲು ಹೆಚ್ಚಾಗುತ್ತದೆ. ಮತ್ತೆ ಹಲವು ಕಡೆ ಚಳಿ, ಪ್ರವಾಹ ಹೀಗೆ ಹತ್ತು ಹಲವು ಬದಲಾವಣೆಗಳಾಗುತ್ತವೆ. ಮುಂದಿನ 5 ವರ್ಷದಲ್ಲಿ ನಮ್ಮ ತಪ್ಪನ್ನು ತಿದ್ದಿಕೊಳ್ಳುವ ಕೆಲಸ ಮಾಡದಿದ್ದರೆ, ತಕ್ಕ ಶಾಸ್ತಿ ಖಂಡಿತ ಆಗುತ್ತದೆ. ಆ ದಿನ ಯಾರೂ, ''ನಿಮ್ಮ ನೆಟ್‌ವರ್ತ್ ಎಷ್ಟು?'' ಎಂದು ಕೇಳುವುದಿಲ್ಲ, ಎದೆಯುಬ್ಬಿಸಿ ಹೇಳುವ ಹುಮ್ಮಸ್ಸು ನಮ್ಮಲ್ಲೂ ಇರುವುದಿಲ್ಲ!

ಮಾನವನನ್ನು ಮಾಧವನಾಗಿಸುವ ಮಹಾಕುಂಭಮೇಳ

ತೀರ್ಥಯಾತ್ರೆ
ಕೃಷ್ಣ ಹೆಗಡೆ
vveditoped@gmail.com

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 144 ವರ್ಷಕ್ಕೊಮ್ಮೆ ನಡೆಯುವ ಮಹಾಕುಂಭಮೇಳದ ಬಗ್ಗೆ ಪ್ರಾರಂಭದಲ್ಲಿ ಅಷ್ಟೊಂದು ಕುತೂಹಲವಿರಲಿಲ್ಲ. ಮೈಸೂರಿನ ಇಸ್ಕಾನ್ ಸಂಸ್ಥೆಯವರು ಹೇಳಿದಾಗಲೂ ನಾನು ಅಷ್ಟು ಆಸಕ್ತಿ ತೋರಲಿಲ್ಲ. ಆದರೆ ಇದಾದ 10 ದಿನಕ್ಕೆ ನನ್ನ ಸ್ನೇಹಿತರೊಬ್ಬರು ಕರೆಮಾಡಿ, ''ನಾವು ಕುಂಭಮೇಳಕ್ಕೆ ಹೋಗುತ್ತೇವೆ, ನೀನೂ ಬರುತ್ತೀಯಾ ಹೇಗೆ?'' ಅಂತ ಕೇಳಿದರು. ಅದೇನೋ ಗೊತ್ತಿಲ್ಲ, 'ಹೂಂ' ಅಂದೆ ಅಷ್ಟೇ...

ಸರಿ, ನಾವು ಬೆಂಗಳೂರಿನಿಂದ ಪಟನಾಕ್ಕೆ ವಿಮಾನದಲ್ಲಿ ಹೋಗಿ, ಅಲ್ಲಿಂದ ವಾರಾಣಸಿಗೆ (ಕಾಶಿ) ಕ್ಯಾಬ್ ಮೂಲಕ ತೆರಳಿ, ಅಲ್ಲಿನ ಗಂಗಾನದಿಯಲ್ಲಿ ಮಾಘಸ್ನಾನ ಮಾಡಿ, ವಿಶ್ವನಾಥನನ್ನು ದರ್ಶಿಸಿ, ಗಂಗಾ ತಟಾಕದಲ್ಲಿ ದೋಣಿಯ ಮೂಲಕ ಎಲ್ಲಾ ಘಾಟ್‌ಗಳನ್ನು ವೀಕ್ಷಿಸಿದೆವು. ಮಾರನೆಯ ದಿನ ಬೆಳಗ್ಗೆ, ಅಂದರೆ ಫೆ.6ರಂದು, ನಾನು, ನನ್ನ ಸ್ನೇಹಿತ ನಾಗೇಶ, ಮುರಳಿ, ಸುರೇಶ, ಸಂತೋಷರ ಕುಟುಂಬದವರು ಸೇರಿ ಒಟ್ಟು 15 ಜನ ಕ್ಯಾಬ್ ಮಾಡಿಕೊಂಡು ಪ್ರಯಾಗ್‌ರಾಜ್ ಕಡೆಗೆ ಹೊರಟು ಮಧ್ಯಾಹ್ನದ ವೇಳೆಗೆ ಅಲ್ಲಿಗೆ ತಲುಪಿದೆವು. ಪ್ರಾರಂಭದಲ್ಲಿ ಅಲ್ಲಿ ಅಷ್ಟು ಟ್ರಾಫಿಕ್ ಇರಲಿಲ್ಲ, ಬರುಬರುತ್ತ ಜಾಸ್ತಿಯಾಯಿತು. ಹೀಗಾಗಿ 15 ಕಿ.ಮೀ. ದೂರದಲ್ಲಿ ಕ್ಯಾಬ್ ಪಾರ್ಕ್ ಮಾಡಿ ನಡೆಯಲು ಶುರುಮಾಡಿದೆವು.

ನಾನು ಮತ್ತು ನನ್ನ ಸ್ನೇಹಿತ ಸ್ವಲ್ಪ ದೂರ ನಡೆದು ಒಬ್ಬ ಮೋಟಾರ್ ಬೈಕ್‌ನವನನ್ನು ಪರಿಚಯ ಮಾಡಿಕೊಂಡು, ಅವನೊಂದಿಗೆ ಕುಳಿತು ಪ್ರಯಾಣ ಮುಂದುವರಿಸಿದೆವು. ಆತ ನಮಗೆ ಗೊತ್ತಿಲ್ಲದ ಯಾವುದೋ ರಸ್ತೆಯಲ್ಲಿ (ಅಂದರೆ ಗದ್ದೆಯಲ್ಲಿ) ಬೈಕ್ ಓಡಿಸಿಕೊಂಡು ಹೋಗತೊಡಗಿದ. ತುಂಬಾ ಕಷ್ಟದ ಪ್ರಯಾಣ ಅದಾಗಿತ್ತು, ಸ್ವಲ್ಪ ವ್ಯತ್ಯಾಸವಾದರೂ ನಾವು ಆಸ್ಪತ್ರೆಯಲ್ಲಿರಬೇಕಿತ್ತು. ಗಂಗಾ, ಯಮುನಾ ಮಾತೆಯರ ಆಶೀರ್ವಾದದಿಂದ ಆತ, ಪ್ರಯಾಗ್‌ರಾಜ್ ರಸ್ತೆಯಲ್ಲಿ ತಾತ್ಕಾಲಿಕವಾಗಿ ನಿರ್ಮಾಣ ಮಾಡಲಾಗಿರುವ ಸೇತುವೆಯ ಹತ್ತಿರ ನಮ್ಮನ್ನು ಬಿಟ್ಟು ಹಣ ಪಡೆದು ಹೊರಟ. ನಮಗೆ ಬೆಳಗ್ಗೆಯಿಂದಲೂ ತಿಂಡಿಯಿಲ್ಲ, ಊಟವಿಲ್ಲ; ಆದರೂ ಅದೇನೋ ಹುಮ್ಮಸ್ಸು, ಉತ್ಸಾಹ. ಹೀಗಾಗಿ, ಮತ್ತೆ ಅಲ್ಲಿಯ ಪೊಲೀಸರು ಮತ್ತು ಮಾರ್ಗದರ್ಶಕರ ನೆರವು ಪಡೆದು ಸಂಗಮದತ್ತ ನಡೆಯಲು ಪ್ರಾರಂಭಿಸಿ, ಅಂತೂ ಗಮ್ಯದ ಹತ್ತಿರದ ಪ್ರದೇಶವನ್ನು ತಲುಪಿದೆವು. ಹೀಗೆ ನಾವು ಸಾಗುತ್ತಿದ್ದ ದಾರಿಯ ಎರಡೂ ಬದಿಯಲ್ಲಿ ಅಖಾಡಗಳು, ಮಧ್ಯೆ ಕೋಟಿ ಸಂಖ್ಯೆಯಲ್ಲಿರುವ ಭಕ್ತಾದಿಗಳು, ಅವರ ನಡುವೆ ನಮ್ಮ ನಡಿಗೆ. ಅದೊಂದು ಅವಿಸ್ಮರಣೀಯ ಅನುಭವ. ಜನದಟ್ಟಣೆಯ ನಿರ್ವಹಣೆಗಾಗಿ ಉತ್ತರ ಪ್ರದೇಶ ಸರಕಾರವು ಮಹಾಕುಂಭಮೇಳದ ಸುತ್ತಲಿನ ಪ್ರದೇಶವನ್ನು 'ವಾಹನ ಸಂಚಾರರಹಿತ ವಲಯ' ಎಂದು ಘೋಷಿಸಿದೆ.

ಅಂತೂ ನಾವು ನಿರೀಕ್ಷಿಸುತ್ತಿದ್ದ ಗಂಗಾ-ಯಮುನಾ-ಸರಸ್ವತಿ ನದಿಗಳ ಸಂಗಮ ಸ್ಥಾನವನ್ನು ತಲುಪಿ, ಶುದ್ಧ ಸಂಕಲ್ಪದೊಂದಿಗೆ ಪವಿತ್ರ ಸ್ನಾನವನ್ನು ಮಾಡಿದೆವು. ಭಾರತವು ಹೊಂದಿರುವ ಶ್ರೇಷ್ಠ ಸಂಪ್ರದಾಯದ ಪ್ರತೀಕವಾಗಿ ಈ ಕುಂಭಮೇಳವನ್ನು ನೋಡುತ್ತೇವೆ. ಇದು ದೇವರೊಂದಿಗಿನ ಸಹಭಾಗಿತ್ವವಾಗಿದ್ದು, ಜನಸಾಮಾನ್ಯರು ಸ್ವಯಂಪ್ರೇರಣೆಯಿಂದ ಇಲ್ಲಿಗೆ ಬರುತ್ತಿದ್ದಾರೆ. ದೇಶದ ಜನಸಂಖ್ಯೆಯ ಸುಮಾರು ಮೂರನೇ ಒಂದು ಭಾಗದಷ್ಟು ಜನರು ಇಲ್ಲಿನ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ. ಈ ನೆಲದಲ್ಲಿ ನಾಡಿನ ಸಾಧು-ಸಂತರು, ನಾಗಾ ಸಾಧುಗಳು, ಅಘೋರಿಗಳು ಮುಖಾಮುಖಿಯಾಗುತ್ತಾರೆ, ಪವಿತ್ರಸ್ನಾನ ಮಾಡುತ್ತಾರೆ. ಈ ನಡುವೆ, ಅಗ್ನಿದುರಂತ, ಕಾಲ್ತುಳಿತದ ಪ್ರಕರಣಗಳು ನಮ್ಮನ್ನು ಒಂದಿಷ್ಟು ವಿಚಲಿತರನ್ನಾಗಿಸಿದ್ದು ನಿಜ. ಆದರೆ, ಒಮ್ಮೆ ಅಲ್ಲಿ ಸ್ನಾನ ಮಾಡಿದ ಮೇಲೆ ಆದ ಹಿತಾನುಭವವೇ ಬೇರೆಯದ್ದಾಗಿತ್ತು. ನಾವು ಬೇರೆಲ್ಲೂ ಸ್ನಾನ ಮಾಡಿದಾಗ ಸಿಗುವ ಖುಷಿಗಿಂತ ಇದು ವಿಭಿನ್ನವಾಗಿತ್ತು.

10 ಸಾವಿರ ಎಕರೆ ಪ್ರದೇಶದಲ್ಲಿ ತಾತ್ಕಾಲಿಕವಾಗಿ ನಿರ್ಮಾಣವಾಗಿರುವ ಟೆಂಟ್‌ಗಳು, ನೀರು, ಊಟ, ತಿಂಡಿ, ಸ್ನಾನ, ಶೌಚಾಲಯ ವ್ಯವಸ್ಥೆಗಳು, ಸುಮಾರು 25 ಸೆಕ್ಟರ್‌ನಲ್ಲಿ ಹರಡಿದ್ದ ಸಾಧುಗಳ ಅಖಾಡಗಳು, ನದಿಪಾತ್ರದಲ್ಲಿ ಕಬ್ಬಿಣದ ಹಲಗೆ ಹಾಸಿ ನಿರ್ಮಿಸಿದ ರಸ್ತೆಗಳು, ಸೇತುವೆಗಳು, ಝಗಮಗಿಸುವ ಲಕ್ಷಾಂತರ ವಿದ್ಯುತ್ ದೀಪಗಳು ಇತ್ಯಾದಿಗಳನ್ನು ನೋಡಿ ಅಚ್ಚರಿಯಾಯಿತು. 'ಅಬ್ಬಾ ಇದರ ವಿಶ್ವರೂಪವೇ!' ಎಂದು ದಂಗಾದೆವು. ಕೆಲವು ಬಾಬಾಗಳ, ಸಾಧುಗಳ ದರ್ಶನವಾಯಿತು. ನಂತರ, ಪ್ರಯಾಗ್‌ರಾಜ್‌ನಿಂದ ಅಯೋಧ್ಯೆಗೆ ತೆರಳಿ ಪ್ರಭು ಶ್ರೀರಾಮಚಂದ್ರನ ದರ್ಶನ ಮಾಡಿ ಪುನೀತರಾಗಿ ಊರಿಗೆ ಮರಳಿದೆವು.

ಅಂತೂ ಈ ತೀರ್ಥಯಾತ್ರೆಯು ನನ್ನ ಜೀವನದಲ್ಲಿ ಅವಿಸ್ಮರಣೀಯ ಅನುಭವವನ್ನು ನೀಡಿದ್ದಂತೂ ಸತ್ಯ. ಪ್ರಯಾಗ್‌ರಾಜ್‌ನಲ್ಲಿ ಈ ಸ್ಮರಣೀಯ ಮಹಾಕುಂಭಮೇಳ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೆ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರಿಗೆ ಹಾಗೂ ಅಲ್ಲಿನ ಪೊಲೀಸ್ ಸಿಬ್ಬಂದಿವರ್ಗಕ್ಕೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ಈ ಐತಿಹಾಸಿಕ ಸಂದರ್ಭದ ಭಾಗವಾಗಿದ್ದು ನನ್ನ ಅದೃಷ್ಟವೂ ಹೌದು, ಹೆಮ್ಮೆಯ ಸಂಗತಿಯೂ ಹೌದು. ಈ ಮಹಾಕುಂಭ ಮೇಳವು ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಜಗತ್ತಿಗೆ ಪ್ರದರ್ಶಿಸಿರುವುದು ಮಾತ್ರವಲ್ಲದೆ, ಅದರ ಐತಿಹಾಸಿಕ ಮಹತ್ವವನ್ನೂ ಗಟ್ಟಿಗೊಳಿಸಿದೆ. ಮಹಾಕುಂಭದಂಥ ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಮೇಳವನ್ನು ಸಂಘಟಿಸಿರುವ ಪರಿ ಅಸಾಧಾರಣವಾಗಿದ್ದು, ಇಲ್ಲಿಗೆ ಹೋಗಿಬರಲು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟವೆಂದೇ ಭಾವಿಸಿದ್ದೇನೆ.

(ಲೇಖಕರು ಬಿಇಎಂಎಲ್ ನಿವೃತ್ತ ಉದ್ಯೋಗಿ)

ಮಗಳಿಗೆ ಆಸ್ತಿಯ ಹಕ್ಕು ಓಕೆ, ತಾಯಿ-ಹೆಂಡತಿಯರ ಹಕ್ಕು ಕಡಿಮೆಯೇಕೆ?

ಕಾನೂನ್ ಸೆನ್ಸ್
ತಿಮ್ಮಣ್ಣ ಭಾಗ್ವತ್
vveditoped@gmail.com

1937ರ ಹಿಂದೂ ಮಹಿಳೆಯರ ಆಸ್ತಿ ಕಾಯಿದೆಯಲ್ಲಿ ಹಿಂದೂ ವಾರಸುದಾರ ಪದ್ಧತಿಯನ್ನು ಕ್ರೋಡೀಕರಿಸಲಾಯಿತಾದರೂ ಸಮಾನತೆ ಇನ್ನೂ ದೂರವಿತ್ತು. ಸಂವಿಧಾನದ 14 ಹಾಗೂ 15ನೇ ವಿಧಿಗಳು ಒದಗಿಸುವ ಸಮಾನತೆಯ ಹಿನ್ನೆಲೆಯಲ್ಲಿ ಮತ್ತು ಪ್ರಗತಿಪರ ಚಿಂತನೆಗೆ ಅನುಗುಣವಾಗಿ 1956ರಲ್ಲಿ ಸಮಗ್ರ ಹಿಂದೂ ಉತ್ತರಾಧಿಕಾರ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಆ ಕಾಯಿದೆಯನ್ವಯ ಹಿಂದೂ ಅವಿಭಕ್ತ ಕುಟುಂಬದ ಸದಸ್ಯನೊಬ್ಬ ತೀರಿಕೊಂಡಾಗ ಗಂಡುಮಕ್ಕಳ ಜತೆಗೆ ಅವನ ವಿಧವೆ, ತಾಯಿ ಮತ್ತು ಹೆಣ್ಣುಮಕ್ಕಳನ್ನು ಕೂಡಾ ಪ್ರಥಮ ಶ್ರೇಣಿಯ ವಾರಸುದಾರರೆಂದು ಪರಿಗಣಿಸುವ ಮೂಲಕ ಅವರಿಗೆ ಸಮಾನ ಆಸ್ತಿ ಹಕ್ಕು ಸಿಗುವ ಅವಕಾಶ ಕಲ್ಪಿಸಲಾಯಿತು.

"ಯಥೈವಾತ್ಮಾ ತಥಾ ಪುತ್ರಃ ಪುತ್ರೇಣ ದುಹಿತಾ ಸಮಾ। ತಸ್ಯಾಮಾತ್ಮನಿ ತಿಷ್ಠಂತ್ಯಾಂ ಕಥಮನ್ಯೋ ಧನಂ ಹರೇತ್॥'' (ಮನುಸ್ಮೃತಿ- ಅಧ್ಯಾಯ 9, 130ನೇ ಶ್ಲೋಕ)- ''ಮಗನೆಂದರೆ ತಾನೇ ಇದ್ದಂತೆ ಮತ್ತು ಮಗಳು ಮಗನಿಗೆ ಸಮಾನಳು. ಅವಳು ಸ್ವತಃ ಇರುವಾಗ ಆಸ್ತಿಯನ್ನು ಬೇರೆಯವರು ಹೇಗೆ ತೆಗೆದುಕೊಳ್ಳುತ್ತಾರೆ?'' ಎಂಬುದು ಇದರ ಅರ್ಥ.

ಇದು, ಪ್ರಾಚೀನ ಹಿಂದೂ ಶಾಸ್ತ್ರ ಮತ್ತು ಹಿಂದೂ ಕಾನೂನುಗಳಿಗೆ ಮೂಲವೆನಿಸಿದ ಮನುಸ್ಮೃತಿಯಲ್ಲಿ, ಸ್ತ್ರೀಯರಿಗೆ ಆಸ್ತಿ ನೀಡಿಕೆ ಕುರಿತು ಇರುವ ಒಂದು ಉಕ್ತಿ. ಆದರೂ ಸ್ತ್ರೀಧನ, ಸೀಮಿತ ಆಸ್ತಿ ಮತ್ತು ತಾಯಿಯ ಆಸ್ತಿಯಲ್ಲಿ ಪಾಲು ಎಂಬ ಕೆಲವೇ ಅಪವಾದಗಳನ್ನು ಬಿಟ್ಟರೆ ಆಸ್ತಿಯ ಹಕ್ಕಿನ ವಿಷಯದಲ್ಲಿ ಮನುಸ್ಮೃತಿ ಸೇರಿದಂತೆ ಬಹುತೇಕ ಪ್ರಾಚೀನ ಸ್ಮೃತಿಗಳಲ್ಲಿ ಗಂಡುಮಕ್ಕಳಿಗೇ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿತ್ತು. ಯಾಕೆಂದರೆ ಅವರು ಮಾತಾ-ಪಿತೃಗಳ ಸದ್ಗತಿಗಾಗಿ ಪಿಂಡ ಮತ್ತು ತಿಲೋದಕಗಳನ್ನು ಕೊಡುತ್ತಾರೆ ಎಂಬುದು. ನಂತರದ ಅವಧಿಯಲ್ಲಿ ಮಿಥಾಕ್ಷರ ಮತ್ತು ದಾಯಭಾಗವೆಂಬ ಎರಡು ಸ್ಕೂಲ್‌ಗಳಲ್ಲದೆ (school of law), ಅಳಿಯಸಂತಾನ, ಮುರುಮಕ್ಕಟ್ಟಾಯಂ ಮುಂತಾದ ಅನೇಕ ಪದ್ಧತಿಗಳು ಜಾರಿಯಲ್ಲಿದ್ದವು. ದಾಯಭಾಗ ಮತ್ತು ಕೆಲವು ಮಿಥಾಕ್ಷರ ಪಂಗಡಗಳಲ್ಲಿ ಸಪಿಂಡರು ಎಂಬುದರ ಅರ್ಥವ್ಯಾಪ್ತಿಯಲ್ಲಿ ಸ್ತ್ರೀಯರನ್ನೂ ಸೇರಿಸಿ, ಮೃತನ ಹೆಂಡತಿ, ಮಗಳು ಮತ್ತು ತಾಯಿಯರನ್ನು ವಾರಸುದಾರರು ಎಂದು ಪರಿಗಣಿಸಲಾಗುತ್ತಿತ್ತು.

1937ರ ಹಿಂದೂ ಮಹಿಳೆಯರ ಆಸ್ತಿ ಕಾಯಿದೆಯಲ್ಲಿ ಹಿಂದೂ ವಾರಸುದಾರ ಪದ್ಧತಿಯನ್ನು ಕ್ರೋಡೀಕರಿಸಲಾಯಿತಾದರೂ ಸಮಾನತೆ ಇನ್ನೂ ದೂರವಿತ್ತು. ಸಂವಿಧಾನದ 14 ಹಾಗೂ 15ನೇ ವಿಧಿಗಳು ಒದಗಿಸುವ ಸಮಾನತೆಯ ಹಿನ್ನೆಲೆಯಲ್ಲಿ ಮತ್ತು ಪ್ರಗತಿಪರ ಚಿಂತನೆಗೆ ಅನುಗುಣವಾಗಿ 1956ರಲ್ಲಿ ಸಮಗ್ರ ಹಿಂದೂ ಉತ್ತರಾಧಿಕಾರ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಆ ಕಾಯಿದೆಯನ್ವಯ ಹಿಂದೂ ಅವಿಭಕ್ತ ಕುಟುಂಬದ ಸದಸ್ಯನೊಬ್ಬ ತೀರಿಕೊಂಡಾಗ ಗಂಡುಮಕ್ಕಳ ಜತೆಗೆ ಅವನ ವಿಧವೆ, ತಾಯಿ ಮತ್ತು ಹೆಣ್ಣುಮಕ್ಕಳನ್ನು ಕೂಡಾ ಪ್ರಥಮ ಶ್ರೇಣಿಯ ವಾರಸುದಾರರೆಂದು ಪರಿಗಣಿಸುವ ಮೂಲಕ ಅವರಿಗೆ ಸಮಾನ ಆಸ್ತಿ ಹಕ್ಕು ಸಿಗುವ ಅವಕಾಶ ಕಲ್ಪಿಸಲಾಯಿತು. ಆದರೆ ಹುಟ್ಟಿನಿಂದ ಹಿಸ್ಸೆದಾರರಾಗುವ ಹಕ್ಕು ಗಂಡುಮಕ್ಕಳಿಗೆ ಮಾತ್ರ ಸಿಗುತ್ತಿತ್ತು. ಕರ್ನಾಟಕ ಹಿಂದೂ ಉತ್ತರಾಧಿಕಾರ ಕಾಯಿದೆ 1990 ಮತ್ತು 2005ರ ಕೇಂದ್ರ ತಿದ್ದುಪಡಿ ಕಾಯಿದೆ ಜಾರಿಗೆ ಬಂದ ನಂತರ ಹಿಂದೂ ಅವಿಭಕ್ತ ಕುಟುಂಬದ ಸದಸ್ಯನೊಬ್ಬನ ಮಗಳು ತನ್ನ ಜನ್ಮದಿಂದಲೇ ಆ ಕುಟುಂಬದ ಸದಸ್ಯಳಾಗಲು ಮತ್ತು ಅಂಥ ಕುಟುಂಬದ ಆಸ್ತಿಗೆ ಸಮಾನ ಹಿಸ್ಸೆದಾರಳಾಗಲು (coparcener) ಗಂಡುಮಕ್ಕಳಿಗೆ ಇರುವ ಎಲ್ಲಾ ಹಕ್ಕುಗಳನ್ನು ಪಡೆಯುತ್ತಾಳೆ. ತಮ್ಮ ತಂದೆಯ ಅವಿಭಕ್ತ ಕುಟುಂಬದ ವಾಸದ ಮನೆಯೂ ಸೇರಿದಂತೆ ಎಲ್ಲಾ ಆಸ್ತಿಗಳಲ್ಲಿ ಸಮಾನ ಪಾಲು ಪಡೆಯುವುದರ ಜತೆಗೆ ಅಂಥ ಆಸ್ತಿಗಳ ವಿಭಜನೆ ಕೇಳುವ ಅಧಿಕಾರವನ್ನು ಕೂಡಾ ಅವಳು ಹುಟ್ಟಿನಿಂದಲೇ ಪಡೆಯುತ್ತಾಳೆ. ಮಗಳೊಬ್ಬಳು ಎಲ್ಲರಿಗಿಂತ ಹಿರಿಯಳಾಗಿದ್ದರೆ ಹಿಂದೂ ಅವಿಭಕ್ತ ಕುಟುಂಬದ ಮ್ಯಾನೇಜರ್ ಕೂಡಾ ಆಗಬಹುದು. ಮಗನಾದವನು ತನ್ನ ತಂದೆ, ತಾತ, ಮುತ್ತಾತರು ತೀರಿಸದೇ ಉಳಿಸಿದ ಸಾಲವನ್ನು ತೀರಿಸಬೇಕಾಗಿದ್ದ ಧಾರ್ಮಿಕ ಋಣಪರಿಹಾರದ ಬಾಧ್ಯತೆಯನ್ನು (pious obligation) ರದ್ದುಪಡಿಸಲಾಗಿದೆ.

2005ರ ಕಾಯಿದೆಯಡಿ ಲಭ್ಯವಾಗುವ ಹಕ್ಕುಗಳು ಅನ್ವಯವಾಗುವ ದಿನಾಂಕದ ಕುರಿತು ಸುದೀರ್ಘ ಕಾನೂನು ಹೋರಾಟ ನಡೆಯಿತು. ವಿವಿಧ ಉಚ್ಚ ನ್ಯಾಯಾಲಯಗಳು ವ್ಯತಿರಿಕ್ತ ನಿರ್ಣಯಗಳನ್ನು ನೀಡಿದವು. ಅಂತಿಮವಾಗಿ ಮಾನ್ಯ ಸುಪ್ರೀಮ್ ಕೋರ್ಟಿನ ತ್ರಿಸದಸ್ಯ ಪೀಠವು, ವಿನೀತಾ ಶರ್ಮಾ ವರ್ಸಸ್ ರಾಕೇಶ ಶರ್ಮಾ ಪ್ರಕರಣದಲ್ಲಿ ಈ ಕುರಿತ ಎಲ್ಲಾ ವಿವಾದಗಳಿಗೆ ಅಂತ್ಯ ಹಾಡಿ ಸದರಿ ತಿದ್ದುಪಡಿ ಕಾಯಿದೆಯ ನಿಬಂಧನೆಗಳು ತಿದ್ದುಪಡಿಯಾದ ಮೊದಲು ಅಥವಾ ನಂತರ ಹುಟ್ಟಿದ ಎಲ್ಲಾ ಹೆಣ್ಣುಮಕ್ಕಳಿಗೂ ಅನ್ವಯವಾಗುತ್ತವೆ ಎಂದು ಆದೇಶ ನೀಡಿದೆ. ಈ ಹಕ್ಕು ಹುಟ್ಟಿನಿಂದಲೇ ಬರುವ ಹಿಸ್ಸೆದಾರ ಹಕ್ಕಾದ್ದರಿಂದ ತಿದ್ದುಪಡಿ ಕಾಯಿದೆ ಜಾರಿಯಾದ ದಿನಾಂಕದಂದು (9ನೇ ಸೆಪ್ಟೆಂಬರ್ 2005) ಅವರ ತಂದೆ ಅಥವಾ ಯಾವ ಹಿಸ್ಸೆದಾರರಿಂದ ಅವರು ಹಕ್ಕನ್ನು ಪಡೆಯುತ್ತಾರೋ ಅವರು ಜೀವಂತ ಇರಬೇಕೆಂಬ ಅವಶ್ಯಕತೆಯಿಲ್ಲ. ಅಲ್ಲದೆ ಈ ಕಾಯಿದೆಯಡಿ ಲಭ್ಯವಿರುವ ವರ್ಗಾವಣೆ, ವಿಭಜನೆ ಮತ್ತು ಉಯಿಲಿನ ಮೂಲಕ ಇತ್ಯರ್ಥಗೊಳಿಸುವ ಹಕ್ಕುಗಳನ್ನೂ ಅವರು ಚಲಾಯಿಸಬಹುದು. ಈ ತಿದ್ದುಪಡಿ ಕಾಯಿದೆಗಿಂತ ಮೊದಲು ನೋಂದಾಯಿತ ಹಿಸ್ಸಾ ದಸ್ತಾವೇಜು ಅಥವಾ ಕೋರ್ಟ್ ಮೂಲಕ ಆಸ್ತಿ ವಿಭಜನೆಯನ್ನು ಮಾಡಿದ್ದರೆ ಮಾತ್ರ ಅದು ಊರ್ಜಿತವೇ ಹೊರತು ಮೌಖಿಕ ವಿಭಜನೆ ಅಥವಾ ಇನ್ನಾವುದೇ ರೀತಿಯ ಇತ್ಯರ್ಥಗಳನ್ನು ಪರಿಗಣಿಸಲಾಗುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ 1990ರ ಕರ್ನಾಟಕ ತಿದ್ದುಪಡಿ ಕಾಯಿದೆ ಜಾರಿಗೆ ಬಂದ ದಿನಾಂಕ ಅಂದರೆ 30.07.94ರ ಮೊದಲು ವಿವಾಹವಾದ ಹೆಣ್ಣು ಮಕ್ಕಳಿಗೆ 1956ರ ಕಾಯಿದೆಯ 6ನೇ ಕಲಮಿನ ಪ್ರಕಾರ ವಾರಸುದಾರ ಹಕ್ಕು ಸಿಗುತ್ತದೆಯೇ ಹೊರತು, ತಿದ್ದುಪಡಿ ಕಾಯಿದೆಗಳಲ್ಲಿ ಇರುವ ಹಿಸ್ಸೆದಾರ ಹಕ್ಕು ಸಿಗುವದಿಲ್ಲ (6 ಎ-ಡಿ- ಕರ್ನಾಟಕ ತಿದ್ದುಪಡಿ ಕಾಯಿದೆ).

ಸಮಾನತೆ ಹುಟ್ಟುಹಾಕಿದ ಕೆಲವು ವಿವಾದಗಳು:

2005ರ ತಿದ್ದುಪಡಿ ಕಾಯಿದೆ ಮತ್ತು ವಿನೀತಾ ಶರ್ಮಾ ಪ್ರಕರಣ ದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಆಸ್ತಿಹಕ್ಕಿನ ವಿಷಯದಲ್ಲಿ ಲಿಂಗ ಸಮಾನತೆ ಒದಗಿಸುವಲ್ಲಿ ಯಶಸ್ವಿಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಇದು ಸ್ವಾಗತಾರ್ಹ ಕೂಡಾ. ಆದರೆ ಈ ಕುರಿತು ಕೆಲವು ವ್ಯತಿರಿಕ್ತ ವಾದಗಳಿವೆ.

- **ತಂದೆಯ ವಾಸ್ತವ್ಯದ ಮನೆಯನ್ನು ಪಾಲು ಮಾಡುವ ಹಕ್ಕು:** 1956ರ ಕಾಯಿದೆಯ 23ನೇ ಕಲಮಿನ ಪ್ರಕಾರ ಯಾವುದೇ ಅವಿಭಕ್ತ ಕುಟುಂಬದ ಪುರುಷ ಸದಸ್ಯರು ಇಚ್ಛಿಸದೆ ಇದ್ದಲ್ಲಿ ಅಂಥ ಕುಟುಂಬದ ವಾಸ್ತವ್ಯದ ಮನೆಯ ವಿಭಜನೆಯನ್ನು ಕೇಳುವ ಹಕ್ಕು ಹೆಣ್ಣುಮಕ್ಕಳಿಗಾಗಲೀ ಇತರ ಮಹಿಳಾ ಸದಸ್ಯರಿಗಾಗಲೀ ಇರಲಿಲ್ಲ. ಆದರೆ 2005ರ ಕಾಯಿದೆ ಸದರಿ 23ನೇ ಕಲಮನ್ನು ರದ್ದು ಮಾಡಿರುವುದರಿಂದ, ತನ್ನ ಅಣ್ಣ-ತಮ್ಮಂದಿರು ಮತ್ತು ತಂದೆ ಒಟ್ಟಿಗೆ ಇರುತ್ತೇವೆ ಎಂದರೂ ಅವರ ವಾಸ್ತವ್ಯದ ಮನೆಯ ಮತ್ತು ಆಸ್ತಿಯ ವಿಭಜನೆಯನ್ನು ಕೇಳುವ ಹಕ್ಕು ಮಗಳಿಗೆ ಬರುತ್ತದೆ. ಹೆಣ್ಣುಮಕ್ಕಳು ವಿವಾಹದ ನಂತರ ತಮ್ಮ ಗಂಡನ ಮನೆಯಲ್ಲಿ ವಾಸಿಸುತ್ತಿದ್ದರೂ ತಂದೆಯು ಇರುವಾಗಲೇ ಅವನ ಕುಟುಂಬದ ಆಸ್ತಿಯ ವಿಭಜನೆಗೆ ಕಾರಣವಾಗುವ ಮೂಲಕ ತಂದೆ-ತಾಯಿ ಯರಿಗೆ ಮಾನಸಿಕವಾಗಿ ನೋವು ತರಬಹುದಾದ ಸಾಧ್ಯತೆ ಇದೆ. ಹುಟ್ಟಿನಿಂದ ಹೆಣ್ಣುಮಕ್ಕಳಿಗೆ ಬರುವ ಹಿಸ್ಸೆದಾರಿಕೆ ಹಕ್ಕು ವಿವಾಹ ವಾದ ಮೇಲೂ ಮುಂದುವರಿಯುತ್ತದಾದರೂ ಅವಿಭಕ್ತ ಕುಟುಂಬದ ಸದಸ್ಯತ್ವ ವಿವಾಹದ ನಂತರ ರದ್ದಾಗುತ್ತದೆ. ಅವಿಭಕ್ತ ಕುಟುಂಬದ ಸದಸ್ಯತ್ವ ಇಲ್ಲದೆ ಕೇವಲ ಹಿಸ್ಸೆದಾರ ಹಕ್ಕನ್ನು ಮುಂದುವರಿಸುವುದು ಹಿಂದೂ ಅವಿಭಕ್ತ ಕುಟುಂಬ ವ್ಯವಸ್ಥೆಯ ಮೂಲ ರಚನೆ ಹಾಗು ತತ್ವಗಳಿಗೆ ವಿರುದ್ಧ ಎಂಬ ವಾದವಿದೆ. ಅನೇಕ ಸಂದರ್ಭಗಳಲ್ಲಿ ಹೆಣ್ಣುಮಕ್ಕಳಿಗೆ ಮನಸ್ಸಿರದಿದ್ದರೂ ಅವರ ಗಂಡನ ಮನೆಯವರ ಒತ್ತಾಯದಿಂದ ಆಸ್ತಿ ವಿಭಜನೆ ಕೇಳುವ ಮೂಲಕ ಹೆಣ್ಣು ಮಕ್ಕಳು ತವರಿನ ಬಾಂಧವ್ಯವನ್ನು ಕಳೆದುಕೊಳ್ಳುವ ಸಾಧ್ಯತೆಗಳಿವೆ.
- **ತಾಯಿ ಮತ್ತು ವಿಧವೆಯರ ಹಕ್ಕು:** ಈ ಕಾಯಿದೆಯನ್ವಯ ಹೆಣ್ಣುಮಕ್ಕಳಿಗೆ ಹಿಸ್ಸೆದಾರ ಹಕ್ಕು ದೊರಕಿತಾದರೂ, ಹೆಂಡತಿ ಮತ್ತು ತಾಯಿ ವಾರಸುದಾರರಾಗಿಯೇ ಮುಂದುವರಿ ಯುತ್ತಾರೆ. ತನಗಿರುವ ಹಿಸ್ಸೆದಾರ ಹಕ್ಕನ್ನು ತಂದೆ ಜೀವಂತ ಇರುವಾಗಲೇ ಮಗಳು ಚಲಾಯಿಸಿದರೆ, ಆತನ ತಾಯಿ ಮತ್ತು ಹೆಂಡತಿಯರ ಹಕ್ಕಿನಲ್ಲಿ ಕಡಿಮೆಯಾಗುತ್ತದೆ. ಗಂಡನ ಆಸ್ತಿಯಲ್ಲಿ ಆತ ಜೀವಂತ ಇರುವವರೆಗೆ ಹೆಂಡತಿಗೆ ಯಾವ ಹಕ್ಕೂ ಇರುವದಿಲ್ಲ. ಗಂಡನ ಮರಣಾನಂತರ ಮಕ್ಕಳ ಜತೆಗೆ ಒಂದು ಹಕ್ಕು ಮಾತ್ರ ದೊರಕುತ್ತದೆ. ವಿಚ್ಛೇದನ ಸಂದರ್ಭದಲ್ಲಿ ದೊರಕುವ ಜೀವನಾಂಶ ಹಕ್ಕಿಗೆ ಸಂಬಂಧಿಸಿದಂತೆ ಆತನ ಆಸ್ತಿಯ ಮೇಲೆ ಸಾಂದರ್ಭಿಕ ಬೋಜಾ ಇರುವುದಾದರೂ ಬಹುತೇಕ ಸಂದರ್ಭಗಳಲ್ಲಿ ಆಸ್ತಿಯಲ್ಲಿ ಪಾಲು ಸಿಗುವುದಿಲ್ಲ. ಮಗನ ಆಸ್ತಿಯಲ್ಲಿಯೂ ವಾರಸುದಾರ ಹಕ್ಕು ಮಾತ್ರ ದೊರಕುತ್ತದೆ. ಹೆಂಡತಿ, ತಾಯಿಯರೂ ಮಹಿಳೆಯರಲ್ಲವೇ? ಅವರಿಗೂ ಸಮಾನತೆ ಬೇಡವೇ? ಎಂಬ ವಾದವಿದೆ.
- **ಮಹಿಳೆಯರ ವಾರಸುದಾರಿಕೆ:** ಹಿಂದೂ ಮಹಿಳೆಯೊಬ್ಬಳು ವಿಲ್ ಬರೆಯದೇ ನಿಧನಳಾದಾಗ ಅವಳ ಆಸ್ತಿಗೆ ಮಕ್ಕಳು ಮತ್ತು ಗಂಡ ನೇರ ವಾರಸುದಾರರಾಗುತ್ತಾರೆ. ಗಂಡ ತೀರಿಕೊಂಡಿದ್ದರೆ ಮತ್ತು ಸಂತಾನವಿಲ್ಲದಿದ್ದರೆ ಆಕೆಯ ಸ್ವಯಾರ್ಜಿತ ಮತ್ತು ಗಂಡನ ಮನೆಯಿಂದ ಬಂದ ಆಸ್ತಿ ಗಂಡನ ವಾರಸುದಾರರಿಗೆ ಹೋಗುತ್ತದೆ ಹೊರತು ಆಕೆಯ ತಂದೆ-ತಾಯಿಯರಿಗಲ್ಲ. ತಂದೆಯ ಮನೆಯಿಂದ ಬಂದ ಆಸ್ತಿ ಮಾತ್ರ ತಂದೆಯ ವಾರಸುದಾರರಿಗೆ ಹೋಗುತ್ತದೆ. ಆದರೆ ಗಂಡುಮಕ್ಕಳ ಆಸ್ತಿಗೆ ಆತನ ತಾಯಿ ಪ್ರಥಮ ಶ್ರೇಣಿಯ ವಾರಸುದಾರಳಾಗುತ್ತಾಳೆ. ಈ ದೃಷ್ಟಿಯಲ್ಲಿ ಅಸಮಾನತೆ ಇನ್ನೂ ಇದೆ ಎಂಬ ವಾದ ಕೂಡಾ ಒಪ್ಪತಕ್ಕದ್ದೇ.
- **ತಾಯಿಗೆ ಮಗನ ವಾರಸುದಾರ ಹಕ್ಕು:** ಹಿಂದೂ ಪುರುಷನೊಬ್ಬ ತೀರಿಕೊಂಡಾಗ ಆತನ ಆಸ್ತಿಯಲ್ಲಿ ಆತನ ತಾಯಿಗೆ ಕೂಡಾ ಒಂದು ಪಾಲು ದೊರಕುತ್ತದೆ. ಒಂದುವೇಳೆ ತಂದೆಯ ಆಸ್ತಿ ವಿಭಜನೆಯಾಗಿ ಎಲ್ಲಾ ಮಕ್ಕಳಿಗೆ ಮತ್ತು ತಾಯಿಗೆ ಪ್ರತ್ಯೇಕ ಪಾಲನ್ನು ನೀಡಿದ್ದರೂ ಮಗ ತೀರಿಕೊಂಡಾಗ ಆತನ ಆಸ್ತಿಯಲ್ಲಿ ತಾಯಿ ಪ್ರಥಮ ಶ್ರೇಣಿಯ ವಾರಸುದಾರಳಾಗುತ್ತಾಳೆ. ಮುಂದೆ ಆ ತಾಯಿ ತೀರಿಕೊಂಡಾಗ ಅಂಥ ತೀರಿಕೊಂಡ ಮಗನ ಆಸ್ತಿಯ ಪೈಕಿ ಆಕೆ ಪಡೆದುಕೊಂಡ ಪಾಲಿನಲ್ಲಿ ಪುನಃ ಆಕೆಯ ಎಲ್ಲಾ ಮಕ್ಕಳಿಗೆ ಪಾಲು ಸಿಗುತ್ತದೆ. ಆಗ ಆ ಆಸ್ತಿಯಲ್ಲಿ ಅಂಥ ಮಗನ ವಿಧವೆ ಮತ್ತು ಆಕೆಯ ಮಕ್ಕಳಿಗೆ ಸೇರಿ ಕೇವಲ ಒಂದು ಅಂಶದ ಪಾಲು ಮಾತ್ರ ಸಿಗುತ್ತದೆ. ಇದು ಆಕೆಗೆ ಅನ್ಯಾಯ ಮಾಡಿದಂತೆ ಎಂಬ ವಾದದಲ್ಲಿ ಹುರುಳಿದೆ.
- **ಪಿತೃ ಮತ್ತು ದೇವ ಕಾರ್ಯಗಳು:** ಹಿಂದೂ ಅವಿಭಕ್ತ ಕುಟುಂಬಗಳಲ್ಲಿ ಅನೇಕ ದೇವ ಮತ್ತು ಪಿತೃ ಕಾರ್ಯಗಳು ಸಂಪ್ರದಾಯದಂತೆ ನಡೆಯಬೇಕಾಗುತ್ತದೆ. ಸಮಾಜ ಮತ್ತು ದೇವಾಲಯಗಳಲ್ಲಿ ನಡೆಯುವ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಕೂಡಾ ಕುಟುಂಬದ ವತಿಯಿಂದ ಪಾಲ್ಗೊಳ್ಳಬೇಕಾಗುತ್ತದೆ. ವಿವಾಹವಾದ ಹೆಣ್ಣು ಮಕ್ಕಳು ಗಂಡನ ಮನೆಗೆ ಸೇರುವುದರಿಂದ ಅಂಥ ಕಾರ್ಯಗಳಿಗೆ ತಗಲುವ ಖರ್ಚು ಮತ್ತು ಆ ಜವಾಬ್ದಾರಿಗಳನ್ನು ಪೂರ್ತಿಯಾಗಿ ಗಂಡುಮಕ್ಕಳೇ ನೋಡಿಕೊಳ್ಳಬೇಕಾಗುತ್ತದೆ. ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಹಕ್ಕು ಕಲ್ಪಿಸುವ ಕಾಯಿದೆಗಳು ಈ ಕುರಿತು ಏನನ್ನೂ ಹೇಳದಿರುವುದು ಸರಿಯಲ್ಲ ಎಂಬುದು ಒಪ್ಪತಕ್ಕ ವಾದ.

ವಾದಗಳೇನೇ ಇರಲಿ. ಹೆಣ್ಣುಮಕ್ಕಳಿಗೆ ಸಮಾನ ಆಸ್ತಿ ಹಕ್ಕು ಒದಗುವುದು ಸಮಂಜಸ ಮತ್ತು ಸಂವಿಧಾನದ ಆಶಯಗಳಿಗೆ ಅನುಗುಣವಾಗಿದೆ ಎಂಬುದು ನಿಸ್ಸಂಶಯ. ಆದರೆ ಈ ಹಕ್ಕುಗಳ ಕುರಿತು ಗ್ರಾಮೀಣ ಮತ್ತು ಅಶಿಕ್ಷಿತ ಮಹಿಳೆಯರಿಗೆ ಸೂಕ್ತ ಮಾಹಿತಿಯನ್ನು ಮತ್ತು ಈ ಕಾಯಿದೆಯ ಜ್ಞಾನವನ್ನು ಒದಗಿಸುವ ಅವಶ್ಯಕತೆಯಿದೆ. ಇಲ್ಲವಾದಲ್ಲಿ ಕಾಯಿದೆಗಳು ಪುಸ್ತಕಗಳಲ್ಲಿ ಮಾತ್ರ ಉಳಿದು ಅವುಗಳ ಫಲ ಮಹಿಳೆಯರಿಗೆ ದೊರಕುವುದಿಲ್ಲ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 42

ಬೊಜ್ಜು ಜಾಗೃತಿಗೆ ಸುಧಾಮೂರ್ತಿ, ನಂದನ್ ನಿಲೇಕಣಿ ಸೇರಿ 10 ಗಣ್ಯರ ತಂಡ | ಖಾದ್ಯತೈಲ ಕಡಿಮೆ ಬಳಸಿ, ಆರೋಗ್ಯವಂತ ಪ್ರಜೆಗಳಾಗಿ: ಪ್ರಧಾನಿ ನರೇಂದ್ರ ಮೋದಿ ಹೊಸ ಅಭಿಯಾನ

ಬೊಜ್ಜು ವಿರುದ್ಧ ಮೋದಿ ಅಭಿಯಾನ

ದೆಹಲಿ: ಯಾವುದೇ ದೇಶದ ನೈಜ ಸಂಪತ್ತು ಆರೋಗ್ಯವಂತ ಜನಸಮುದಾಯ. ಅಂತಹುದೊಂದು ಆರೋಗ್ಯವಂತ ಜನಸಮುದಾಯವನ್ನು ರೂಪಿಸಲು ಪ್ರಧಾನಿ ನರೇಂದ್ರ ಮೋದಿ ಹೊಸತೊಂದು ಅಭಿಯಾನ ಆರಂಭಿಸಿದ್ದಾರೆ. ಪ್ರಧಾನಿ ಮೋದಿ ಬೊಜ್ಜಿನ ವಿರುದ್ಧ ಸಮರ ಸಾರಿದ್ದಾರೆ.

ದೇಹದಲ್ಲಿನ ಬೊಜ್ಜು ಸಮಸ್ಯೆ, ಅದಕ್ಕೆ ಕಾರಣವಾದ ಆಹಾರ ಪದ್ಧತಿ, ಜೀವನ ವಿಧಾನ, ವ್ಯಾಯಾಮ, ಅಡುಗೆ ಎಣ್ಣೆ ಬಳಕೆ ಪ್ರಮಾಣ ಮೊದಲಾದ ಬಗ್ಗೆ ಜಾಗೃತಿ ಮೂಡಿಸಲು ದೇಶದ 10 ಖ್ಯಾತ ನಾಯಕರಿಗೆ ಕರೆ ಕೊಟ್ಟಿದ್ದಾರೆ. ಇನ್ಫೋಸಿಸ್‌ನ ಸುಧಾಮೂರ್ತಿ ಸೇರಿದಂತೆ 10 ಜನಾಕರ್ಷಕ ವ್ಯಕ್ತಿಗಳು ಇರುವ ತಂಡವನ್ನು ಅವರು ರಚಿಸಿದ್ದಾರೆ.

ಬೊಜ್ಜು ಸಮಸ್ಯೆಗೆ ಪರಿಹಾರವನ್ನೂ ಸೂಚಿಸಿರುವ ಪ್ರಧಾನಿ ಮೋದಿ, ಅಡುಗೆಯಲ್ಲಿ ಖಾದ್ಯತೈಲದ ಬಳಕೆ ಪ್ರಮಾಣ ತಗ್ಗಿಸುವಂತೆ, ದಿನನಿತ್ಯ ವ್ಯಾಯಾಮ, ನಡಿಗೆ, ಕ್ರೀಡಾ ಚಟುವಟಿಕೆ ಹೆಚ್ಚಿಸುವಂತೆ ಸಲಹೆ ನೀಡಿದರು.

ದೇಶದ ಜನರನ್ನು ಕಾಡುತ್ತಿರುವ ದೇಹದ ಬೊಜ್ಜು ಸಮಸ್ಯೆ ವಿರುದ್ಧ ಸಮರ ಸಾರಲು ಮತ್ತು ಜನಜಾಗೃತಿ ಮೂಡಿಸಲು ತಂಡದ ಸದಸ್ಯರಿಗೆ ಕರೆ ಕೊಟ್ಟಿರುವ ಮೋದಿ, ಇದೇ ಸರಪಳಿ ಮುಂದುವರಿಸಿ ಪ್ರತಿಯೊಬ್ಬರೂ ತಲಾ 10 ಜನರನ್ನು ಗುರುತಿಸಿ ಘೋಷಿಸಿ ತಂಡವನ್ನು ವಿಸ್ತರಿಸುವಂತೆ, ಆ 10 ಮಂದಿ ಮತ್ತಷ್ಟು ಮಂದಿಯನ್ನು ಜೋಡಿಸಿಕೊಳ್ಳುತ್ತಾ ಅಭಿಯಾನವನ್ನು ವಿಸ್ತಾರಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

10 ಜನಾಕರ್ಷಕ ವ್ಯಕ್ತಿಗಳ ತಂಡ

ಬೊಜ್ಜು ಸಮಸ್ಯೆ ಬಗ್ಗೆ ಜನಜಾಗೃತಿ ಮೂಡಿಸಲೆಂದೇ 10 ಗಣ್ಯರ ತಂಡವನ್ನು ಪ್ರಧಾನಿ ಮೋದಿ ರಚಿಸಿ ಪ್ರಕಟಿಸಿದ್ದಾರೆ. ಈ ತಂಡದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸುಧಾ ಮೂರ್ತಿ, ನಂದನ್ ನಿಲೇಕಣಿ, ಖ್ಯಾತ ಉದ್ಯಮಿ ಆನಂದ್ ಮಹೀಂದ್ರಾ, ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಒಲಂಪಿಕ್ ಪದಕ ವಿಜೇತ ಶೂಟರ್ ಮನು ಬಾಕರ್, ವೇಟ್ ಲಿಫ್ಟರ್ ಮೀರಾಬಾಯಿ ಚಾನು, ಚಿತ್ರನಟರಾದ ಮೋಹನಲಾಲ್, ಮಾಧವನ್, ಗಾಯಕಿ ಶ್ರೇಯಾ ಘೋಷಾಲ್, ನಟ-ಗಾಯಕ, ಅಜಂಗಢ ಕ್ಷೇತ್ರದ ಬಿಜೆಪಿ ಮಾಜಿ ಸಂಸದ ನಿರಹುವಾ ಹಿಂದೂಸ್ತಾನಿ ಇದ್ದಾರೆ.





ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಸೋಮವಾರ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ ಮೋದಿ, ಆಹಾರದಲ್ಲಿ ಖಾದ್ಯತೈಲ ಬಳಕೆ ಪ್ರಮಾಣ ಕಡಿಮೆ ಮಾಡುವ ಬಗೆಗೂ ಜನಜಾಗೃತಿ ಮೂಡಿಸಿ ಎಂದಿದ್ದಾರೆ.

ಮನ್ ಕಿ ಬಾತ್: ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿ ಮಾಸದ ಕಡೆ ಭಾನುವಾರ ನಡೆಸಿಕೊಟ್ಟ 'ಮನ್ ಕೀ ಬಾತ್' ರೇಡಿಯೋ ಭಾಷಣದಲ್ಲಿ ಹುಲಿಗಳ ಸಂರಕ್ಷಣೆ, ಸೋಲಿಗರ ಕೊಡುಗೆ, ಮಾ.8ರ ಮಹಿಳಾ ದಿನ ಮೊದಲಾದ ಹಲವು ವಿಷಯಗಳ ಬಗ್ಗೆ ಚರ್ಚಿಸಿ ಶ್ರೋತೃಗಳ

ವಿಶ್ವ ಆರೋಗ್ಯ ಸಂಸ್ಥೆಯ ಅಂಕಿ ಅಂಶ

- **2025ರಲ್ಲಿ ವಿಶ್ವದಲ್ಲಿನ ಪ್ರತಿ ಐವರು ಪ್ರೌಢರಲ್ಲಿ ಒಬ್ಬರು ಬೊಜ್ಜು/ದಢೂತಿ ದೇಹ ಸಮಸ್ಯೆ ಹೊಂದಿರುತ್ತಾರೆ.**
- **ಕಡಿಮೆ ಮತ್ತು ಮಧ್ಯಮ ಪ್ರಮಾಣದ ಆದಾಯವಿರುವ ದೇಶಗಳಲ್ಲೇ ಬೊಜ್ಜು ಸಮಸ್ಯೆ ಹೆಚ್ಚಿದೆ.**
- **ಬಾಡಿ ಮಾಸ್ ಇಂಡೆಕ್ಸ್(ಬಿಎಂಐ) ಹೆಚ್ಚಿರುವ ಕಾರಣ ಆರೋಗ್ಯ ಸೇವೆಗಳ ವಾರ್ಷಿಕ ಜಾಗತಿಕ ವೆಚ್ಚ 99,000 ಕೋಟಿ ಡಾಲರ್(78 ಲಕ್ಷ ಕೋಟಿ ರು.)ಗಳಷ್ಟಾಗಲಿದೆ.**
- **ದಢೂತಿ ದೇಹದಿಂದ ಮಧುಮೇಹ, ರಕ್ತದೊತ್ತಡ, ಹೃದ್ರೋಗ, ಕ್ಯಾನ್ಸರ್‌ಗೆ ತುತ್ತಾಗುವ ಅಪಾಯ ಹೆಚ್ಚಿರುತ್ತದೆ.**

ಪ್ರಧಾನಿ ಮೋದಿ ಅವರ ಸಂದೇಶಕ್ಕೆ ತಕ್ಷಣವೇ ಪ್ರತಿಕ್ರಿಯಿಸಿರುವ ಒಮರ್ ಅಬ್ದುಲ್ಲಾ, ಬೊಜ್ಜು ವಿರುದ್ಧದ ಅಭಿಯಾನ ಸೇರಲು ಸಂತೋಷವಾಗಿದೆ. ಮೋದಿ ಅವರು ಹೇಳಿದಂತೆಯೇ ನನ್ನ ಕಡೆಯಿಂದ 10 ಜನರನ್ನು ಈ ಅಭಿಯಾನಕ್ಕೆ ಜೋಡಿಸುತ್ತಿರುವೆ ಎಂದು 10 ಹೆಸರುಗಳನ್ನು ಪ್ರಕಟಿಸಿದ್ದಾರೆ.

ಗಮನ ಸೆಳೆದರು. ಎಲ್ಲಕ್ಕಿಂತ ಮುಖ್ಯವಾಗಿ ದೇಶದಲ್ಲಿ ದಢೂತಿಗೆ ದೇಹಿಗಳ ಸಂಖ್ಯೆ ಹೆಚ್ಚುತ್ತಿರುವುದು, ಬೊಜ್ಜು ಸಮಸ್ಯೆ ಜನರ ಆರೋಗ್ಯವನ್ನು ಕಸಿದುಕೊಂಡಿರುವುದು, ಮಕ್ಕಳಲ್ಲಿಯೂ ಬೊಜ್ಜು ಸಮಸ್ಯೆ ಹೆಚ್ಚುತ್ತಿರುವುದರ ಕುರಿತು ವಿವರವಾಗಿ ಮಾತನಾಡಿದರು. ಬೊಜ್ಜು ಸಮಸ್ಯೆಯಿಂದ ದೇಶದಲ್ಲಿ ಆರೋಗ್ಯವಂತರ ಸಂಖ್ಯೆ ಇಳಿಮುಖವಾಗುತ್ತಿರುವ ಬಗೆಗೆ ಕಳವಳ ವ್ಯಕ್ತಪಡಿಸಿದರು. ಪ್ರತಿ 8 ಜನರಲ್ಲಿ ಒಬ್ಬರು ಸ್ಥೂಲಕಾಯ/ಬೊಜ್ಜು ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಅಂಕಿ ಅಂಶ ನೀಡಿದ್ದರು.

ಕಿಸಾನ್ ಸಮ್ಮಾನ್ 19ನೇ ಕಂತು: ರೈತರಿಗೆ 22 ಸಾವಿರ ಕೋಟಿ ರು.

ಪ್ರಧಾನಿ ಮೋದಿ ಅವರಿಗೆ ಬಿಹಾರದ ಬಿಜೆಪಿ ನಾಯಕರಿಂದ ಮಖಾನಾದಲ್ಲಿ ಸಿದ್ಧಪಡಿಸಿದ ಹಾರ ಹಾಕಿ ಸನ್ಮಾನ.

ದೆಹಲಿ: 'ಪಿಎಂ ಕಿಸಾನ್ ಸಮ್ಮಾನ್ ನಿಧಿ' ಯೋಜನೆಯ 19ನೇ ಕಂತಿನ ಮೊತ್ತ 22 ಸಾವಿರ ಕೋಟಿ ರು.ಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬಿಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು.

ಇದೇ ವೇಳೆ ಅವರು ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು.

2019ರ ಫೆ.24ರಂದು ಪ್ರಾರಂಭಿಸಲಾದ ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಪಿಎಂ ಕಿಸಾನ್ ಯೋಜನೆಯಡಿ ಅರ್ಹ ರೈತರು ಪ್ರತಿ 4 ತಿಂಗಳಿಗೊಮ್ಮೆ 2,000 ರು. ಪಡೆಯುತ್ತಾರೆ. ಅರ್ಹ ಕೃಷಿ ಕುಟುಂಬಕ್ಕೆ ವರ್ಷಕ್ಕೆ ಪಿಎಂ ಕಿಸಾನ್ ಸಮ್ಮಾನ್ ನಿಧಿಯಿಂದ 6,000 ರು. ಆರ್ಥಿಕ ಸಹಾಯವನ್ನು ಕೇಂದ್ರ ಸರಕಾರ ನೀಡುತ್ತಿದೆ. ಈವರೆಗೆ ಒಟ್ಟು 18 ಕಂತುಗಳಲ್ಲಿ 11 ಕೋಟಿಗೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ 3.46 ಲಕ್ಷ ಕೋಟಿ ರು.ಗಳಿಗೂ ಹೆಚ್ಚು ಹಣ ನೇರ ವರ್ಗಾವಣೆಯಾಗಿದೆ.

ಈ ಯೋಜನೆಯನ್ನು 2019ರ ಮಧ್ಯಂತರ ಬಜೆಟ್‌ನಲ್ಲಿ ಅಂದಿನ ಹಣಕಾಸು ಸಚಿವ ಪಿಯೂಷ್ ಗೋಯಲ್ ಘೋಷಿಸಿದರು, ಪ್ರಧಾನಿ ನರೇಂದ್ರ ಮೋದಿ ಯೋಜನೆಗೆ ಚಾಲನೆ ನೀಡಿದರು. ಇದು ಈಗ ರೈತರ ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ ಆಗುತ್ತಿರುವ ವಿಶ್ವದ ಅತಿದೊಡ್ಡ ಆರ್ಥಿಕ ನೆರವಿನ ಯೋಜನೆ ಎನಿಸಿಕೊಂಡಿದೆ.

ಮಹಾ ಕುಂಭಮೇಳದ ಕುರಿತು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅರ್ಥಹೀನ ಹೇಳಿಕೆ ನೀಡಿದ್ದಾರೆ. ಅದು ಬಹಳ ವಿಷಾದಕರ. ಪಶುಗಳ ಮೇವನ್ನೂ ಕದ್ದು ತಿನ್ನುವವರು ಇರುವವರೆಗೂ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಜಂಗಲ್ ರಾಜ್‌ನಲ್ಲಿ ಭಾಗಿಯಾಗಿರುವ ಜನರು ಹಿಂದೂ ನಂಬಿಕೆ ಮತ್ತು ನಂಬಿಕೆಯನ್ನು ದ್ವೇಷಿಸುತ್ತಾರೆ ಎಂದು ಪ್ರಧಾನಿ ಮೋದಿ ಕಿಡಿಕಾರಿದರು.

ಮಖಾನ ಹಾರ

ಇದೇ ಕಾರ್ಯಕ್ರಮದಲ್ಲಿ ಬಿಹಾರದ ಬಿಜೆಪಿ ನಾಯಕರು ಮೋದಿ ಅವರಿಗೆ 'ಮಖಾನ'ದಿಂದ ಮಾಡಿದ ಬೃಹತ್ ಹಾರ ಹಾಕಿ ಸನ್ಮಾನಿಸಿದರು. ಮಖಾನ ಸೂಪರ್ ಫುಡ್ ಎನ್ನುವ ಮೋದಿ, ಆರೋಗ್ಯ ಪ್ರಯೋಜನಗಳಿಗಾಗಿ ಪ್ರತಿದಿನ ಮಖಾನ ಸೇವಿಸುತ್ತೇನೆ. ಜಾಗತಿಕವಾಗಿ ಮಖಾನಾ ಉತ್ಪಾದಿಸಬೇಕು ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೊಳವೆ ಬಾವಿಗೆ ಬಿದ್ದ ಐದು ವರ್ಷದ ಬಾಲಕ

ಝಲಾವರ್: ರಾಜಸ್ಥಾನದ ಝಲಾವರ್ ಜಿಲ್ಲೆಯ ಕೃಷಿ ಜಮೀನಿನಲ್ಲಿ ತೆರೆದುಕೊಂಡಿದ್ದ ಕೊಳವೆ ಬಾವಿಗೆ 5 ವರ್ಷದ ಬಾಲಕ ಪ್ರಹ್ಲಾದ್ ಭಾನುವಾರ ಮಧ್ಯಾಹ್ನ 1 ಗಂಟೆ ವೇಳೆ ಬಿದ್ದಿದ್ದು, ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ಪ್ರಹ್ಲಾದ್ ಪ್ರಸ್ತುತ ಕೊಳವೆ ಬಾವಿಯಲ್ಲಿ 32 ಅಡಿ ಆಳದಲ್ಲಿ ಸಿಲುಕಿದ್ದು, ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾನೆ ಎಂದು ತಿಳಿದುಬಂದಿದೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಧಾವಿಸಿದ್ದು ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡ ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ. ಸ್ಥಳೀಯವಾಗಿ ಲಭ್ಯವಿರುವ ಯಂತ್ರಗಳನ್ನು ಬಳಸಿಕೊಂಡು ಬಾಲಕನನ್ನು ಹೊರತೆಗೆಯುವ ಪ್ರಯತ್ನ ನಡೆದಿವೆ. 2 ದಿನದ ಹಿಂದಷ್ಟೇ ಕೊಳವೆ ಬಾವಿ ಕೊರೆಯಲಾಗಿತ್ತು. ನೀರು ಬಾರದ ಕಾರಣ ಮುಚ್ಚಲು ನಿರ್ಧರಿಸಲಾಗಿತ್ತು. ಹೊಲದಲ್ಲಿ ಆಟವಾಡುತ್ತಿದ್ದ ಪ್ರಹ್ಲಾದ್ ಆಕಸ್ಮಿಕವಾಗಿ ಕೊಳವೆ ಬಾವಿಗೆ ಬಿದ್ದಿದ್ದಾನೆ. ನಾವು ಹೊಲದ ಇನ್ನೊಂದು ಬದಿಯಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ ಅವಘಡವಾಗಿದೆ ಎಂದು ಪ್ರಹ್ಲಾದ್ ತಂದೆ ತಿಳಿಸಿದ್ದಾರೆ.

ಕಾಜಿರಂಗಕ್ಕೆ 61 ದೇಶ ರಾಯಭಾರಿಗಳ ಭೇಟಿ

ಕಾಜಿರಂಗ: 61 ದೇಶಗಳ ಹೈಕಮಿಷನ್ ಮುಖ್ಯಸ್ಥರು, ರಾಯಭಾರಿಗಳೊಂದಿಗೆ ಅಸ್ಸಾಂನ ಯುನೆಸ್ಕೋ ರಾಷ್ಟ್ರೀಯ ಉದ್ಯಾನವನ ಮತ್ತು ಆನೆಗಳ ವಿಶ್ವ ಪರಂಪರೆಯ ತಾಣವಾದ ಕಾಜಿರಂಗ ರಾಷ್ಟ್ರೀಯ ಉದ್ಯಾನವನಕ್ಕೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಸೋಮವಾರ ಭೇಟಿ ನೀಡಿದ್ದರು. ಕೊಹೊರಾ ಶ್ರೇಣಿಯಲ್ಲಿ ಸಫಾರಿ ನಡೆಸಿದರು. ಗುವಾಹಟಿಯಲ್ಲಿ ನಡೆಯಲಿರುವ 'ಜುಮೋಯಿರ್ ಬಿನಂದಿನಿ' ಕಾರ್ಯಕ್ರಮದಲ್ಲಿ ವಿದೇಶಿ ಪ್ರತಿನಿಧಿಗಳೆಲ್ಲರೂ ಭಾಗವಹಿಸಲಿದ್ದಾರೆ. ಫೆ.25-26 ರಂದು ಖಾನಪಾರದಲ್ಲಿ ನಡೆಯಲಿರುವ ಎರಡು ದಿನಗಳ ಅಡ್ವಾಂಟೇಜ್ ಅಸ್ಸಾಂ 2.0 ಹೂಡಿಕೆ ಮತ್ತು ಮೂಲಸೌಕರ್ಯ ಶೃಂಗಸಭೆ-2025ರಲ್ಲಿಯೂ ಭಾಗಿಯಾಗಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋಪ್ ಫ್ರಾನ್ಸಿಸ್ ಆರೋಗ್ಯ ಗಂಭೀರ

ಲಂಡನ್: ಕ್ರೈಸ್ತ ಧರ್ಮದ ಸರ್ವೋಚ್ಚ ಗುರು ಪೋಪ್ ಫ್ರಾನ್ಸಿಸ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಅವರಿಗೆ ಮೂತ್ರಪಿಂಡಗಳು ವಿಫಲವಾಗಿವೆ. ಅಲ್ಲದೇ, ನ್ಯುಮೋನಿಯ ಮತ್ತು ಶ್ವಾಸಕೋಶದ ಸೋಂಕಿನಿಂದ

ಬಳಲುತ್ತಿದ್ದಾರೆ ಎಂದು ವ್ಯಾಟಿಕನ್ ಮಾಹಿತಿ ನೀಡಿದೆ. ಪೋಪ್ ಫ್ರಾನ್ಸಿಸ್ ಆರೋಗ್ಯ ತಪಾಸಣಾ ವರದಿಗಳು 'ಆರಂಭಿಕ ಮೂತ್ರ ಪಿಂಡ ವೈಫಲ್ಯ'ವನ್ನು ತೋರಿಸುತ್ತಿವೆ. 88 ವರ್ಷದ ಪೋಪ್ ಆರೋಗ್ಯದ ಕುರಿತು ತೀವ್ರ ನಿಗಾ ಇಡಲಾಗಿದೆ. ಈವರೆಗೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಕೆಲವೊಮ್ಮೆ ಮಲಗಿದಲ್ಲೇ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ವ್ಯಾಟಿಕನ್ ಭಾನುವಾರ ತಡರಾತ್ರಿ, ಹೇಳಿಕೆಯಲ್ಲಿ ವಿವರಿಸಿದೆ. ಶನಿವಾರ ರಾತ್ರಿಯಿಂದ ಫ್ರಾನ್ಸಿಸ್ ಯಾವುದೇ ಉಸಿರಾಟದ ತೊಂದರೆಗಳನ್ನು ಅನುಭವಿಸಿರಲಿಲ್ಲ. ಆದರೆ ಪೂರಕ ಆಮ್ಲಜನಕ ಪೂರೈಕೆ ಮುಂದುವರಿಸಲಾಗಿದೆ ಎಂದು ಮೂಲಗಳು ತಿಳಿಸಿರುವುದಾಗಿ ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.

ಎಲ್‌ಸಿಎಗಾಗಿ ಸಮಿತಿ

ದೆಹಲಿ: ಭಾರತದ ಸೇನಾಪಡೆಗಳಿಗೆ ಅತ್ಯಗತ್ಯವಾದ ಲಘು ಯುದ್ಧ ವಿಮಾನ (ಎಲ್‌ಸಿಎ) ತಯಾರಿಕೆಯಲ್ಲಿ ಬಹಳ ವಿಳಂಬವಾಗುತ್ತಿರು ವುದರಿಂದ ವಾಯುಪಡೆ (ಐಎಎಫ್) ಮುಖ್ಯಸ್ಥ ಎ.ಪಿ.ಸಿಂಗ್ ಆಕ್ಷೇಪ ವ್ಯಕ್ತಪಡಿಸಿದ್ದರು. ವಿಳಂಬಕ್ಕೆ ಕಾರಣ ಕಂಡುಕೊಂಡು ಪರಿಹಾರ ಶೋಧಿಸಲೆಂದೇ ರಕ್ಷಣಾ ಸಚಿವಾಲಯ, ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

{ಕೆ.ಅಣ್ಣಾಮಲೈ} ಬಿಜೆಪಿ ರಾಜ್ಯಾಧ್ಯಕ್ಷ

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಹುಟ್ಟುಹಬ್ಬ ಇಂದು. ಜಯಲಲಿತಾ ಅವರು ಅತ್ಯುತ್ತಮ ರಾಷ್ಟ್ರೀಯವಾದಿ ನಾಯಕಿಯಾಗಿದ್ದರು. ಜನರ ಕಲ್ಯಾಣಕ್ಕಾಗಿ ಬಹಳಷ್ಟು ಜನೋಪಕಾರಿ ಯೋಜನೆಗಳನ್ನು ಜಾರಿಗೆ ತಂದಿದ್ದರು. ತಮಿಳುನಾಡಿನಲ್ಲಿ ಎರಡು ಬಾರಿ ಸತತವಾಗಿ ಅಧಿಕಾರ ನಡೆಸಿದ್ದರು.

ಜಾರ್ಖಂಡ್‌ನ ಮೂರು ಗಿರಿಜನ ಬಾಲೆಯರ ಮೇಲೆ ಅತ್ಯಾಚಾರ

ರಾಂಚಿ: ಜಾರ್ಖಂಡ್ ರಾಜ್ಯದ ಖುಂಟಿ ರಾನಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಉಲಿಹಾಟು ಗ್ರಾಮದಲ್ಲಿ ಫೆ.21ರ ತಡರಾತ್ರಿ ಮೂವರು ಬುಡಕಟ್ಟು ಬಾಲಕಿಯರ ಮೇಲೆ 18 ಯುವಕರು ಸಾಮೂಹಿಕ ಅತ್ಯಾಚಾರ ನಡೆಸಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಿ ಮನೆಗೆ ಹಿಂತಿರುಗುತ್ತಿದ್ದ ಬುಡಕಟ್ಟು ಜನಾಂಗದ ಐವರು ಬಾಲಕಿಯರನ್ನು ಉಲಿಹತುವಿನಿಂದ ನಿಚಿತ್‌ಪುರಕ್ಕೆ ಹೋಗುವ ದಾರಿಯಲ್ಲಿ ಕರೋ ನದಿ ಬಳಿ 18 ಯುವಕರು ಅಡ್ಡಗಟ್ಟಿದ್ದಾರೆ. ಈ ಸಂದರ್ಭ ಇಬ್ಬರು ಬಾಲಕಿಯರು ತಪ್ಪಿಸಿಕೊಂಡು ಓಡಿ ಹೋಗಿದ್ದಾರೆ. ಯುವಕರ ಕೈಗೆ ಸಿಕ್ಕಿಕೊಂಡ ಮೂವರು ಬಾಲಕಿಯರ ಮೇಲೆ 18 ಮಂದಿಯೂ ಅತ್ಯಾಚಾರ ಎಸಗಿದ್ದಾರೆ. ಘಟನೆಯ ಬಗ್ಗೆ ಯಾರಿಗೂ ಹೇಳದಂತೆ ಬಾಲಕಿಯರಿಗೆ ಯುವಕರು ಬೆದರಿಕೆ ಹಾಕಿದ್ದರು ಎಂದು ಪೊಲೀಸರಿಗೆ ನೀಡಲಾದ ದೂರಿನಲ್ಲಿ ತಿಳಿಸಲಾಗಿದೆ.

ಶನಿವಾರ ಮನೆಗೆ ತಲುಪಿದ ಬಾಲಕಿಯರು ಕುಟುಂಬದವರಿಗೆ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ನಂತರ, ಕುಟುಂಬ ಸದಸ್ಯರು, ಗ್ರಾಮಸ್ಥರೊಂದಿಗೆ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಮೂವರು ಬಾಲಕಿಯರ ಹೇಳಿಕೆ ಪಡೆದ ಬಳಿಕವಷ್ಟೇ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.ಆ ಯುವಕರೂ ಮದುವೆಗೆ ತೆರಳಿದವರಾಗಿದ್ದರು. 18 ಆರೋಪಿಗಳನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಖುಂಟಿ ಎಸ್‌ಪಿ ಅಮನ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕಾಡಾನೆಗೆ ಕಣ್ಣೂರು ದಂಪತಿ ಬಲಿ

ಕಣ್ಣೂರು: ಕೇರಳದ ಕಣ್ಣೂರಿನಲ್ಲಿ ಕಾಡಾನೆಯೊಂದು ಬುಡಕಟ್ಟು ಜನಾಂಗದ ದಂಪತಿಯನ್ನು ತುಳಿದು ಕೊಂದಿದೆ.



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆ ಸ್ಥಾಪಿಸಿರುವ ಅರಲಂ ಫಾರ್ಮಿಂಗ್ ಕಾರ್ಪೊರೇಷನ್(ಕೇರಳ) ಲಿ.ನ ಒಡೆತನಕ್ಕೆ ಸೇರಿದ 1,500 ಹೆಕ್ಟೇರ್ ವಿಸ್ತೀರ್ಣದ ಅರಳಂ ಫಾರ್ಮ್ ಜಮೀನಿನಲ್ಲಿ ವೆಲ್ಲಿ ಮತ್ತು ಲೀಲಾ ದಂಪತಿ ಗೋಡಂಬಿ ಕೊಯ್ಯುತ್ತಿದ್ದಾಗ ಕಾಡಾನೆ ದಾಳಿ ಮಾಡಿದೆ ಎಂದು ವರದಿಯಾಗಿದೆ.

ಕೇರಳದಲ್ಲಿ ಕಾಡಾನೆ ದಾಳಿ ಸಂಖ್ಯೆ ಫೆಬ್ರವರಿಯಲ್ಲಿ ಹೆಚ್ಚಳವಾಗಿದೆ. ಫೆ.10ರಂದು ವಯನಾಡಿನ ಗಡಿ ಭಾಗದ ಅರಣ್ಯ ಪ್ರದೇಶ ಸುಲ್ತಾನ್ ಬತ್ತೇರಿಯ ನೂಲ್ಪುಳ ಪ್ರದೇಶದಲ್ಲಿ ಕಾಡಾನೆ ದಾಳಿಗೆ 45 ವರ್ಷದ ಬುಡಕಟ್ಟು ವ್ಯಕ್ತಿ ಸಾವನ್ನಪ್ಪಿದ್ದರು. ಮರುದಿನವೇ ಜಿಲ್ಲೆಯ ಪ್ರವಾಸಿ ತಾಣ ಅಟ್ಟಮಲ ಬಳಿ 26 ವರ್ಷದ ಯುವಕ ಕಾಡಾನೆ ದಾಳಿಯಿಂದ ಸಾವನ್ನಪ್ಪಿದ್ದ. ಅದೇ ದಿನ ಇಡುಕ್ಕಿ ಜಿಲ್ಲೆಯಲ್ಲಿಯೂ ಕಾಡಾನೆ ದಾಳಿ ನಡೆಸಿದ್ದರಿಂದ ಮಹಿಳೆಯೊಬ್ಬರು ಸಾವನ್ನಪ್ಪಿದ್ದರು. ಜ.19ರಂದು ವಯನಾಡಿನಲ್ಲಿ ಕಾಡಾನೆಯೊಂದು ಬೈಕ್ ಮೇಲೆ ದಾಳಿ ನಡೆಸಿದ್ದು, ಮೂವರು ಸವಾರರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದರು. 2024ರ ಡಿಸೆಂಬರ್‌ನಲ್ಲಿ ಎರ್ನಾಕುಲಂ ಜಿಲ್ಲೆಯಲ್ಲಿ 40 ವರ್ಷದ ವ್ಯಕ್ತಿಯನ್ನು ಕಾಡಾನೆ ತುಳಿದು ಕೊಂದಿತ್ತು. ಕಳೆದ ಕೆಲ ತಿಂಗಳಿಂದ ದಕ್ಷಿಣ ಭಾರತದ ಈ ರಾಜ್ಯದಲ್ಲಿ ಕಾಡಾನೆಗಳ ದಾಳಿ ಹೆಚ್ಚಿದೆ. ಮಾನವ -ವನ್ಯಮೃಗ ಸಂಘರ್ಷ ತೀವ್ರಗೊಂಡಿದ್ದು, ಕಳವಳಕ್ಕೆ ಕಾರಣವಾಗಿದೆ. ಈ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಅರಣ್ಯ ಸಚಿವ ಎ.ಕೆ.ಸಸೀಂದ್ರನ್ ಸೋಮವಾರ ಸರ್ವಪಕ್ಷ ಸಭೆ ನಡೆಸಿ ಚರ್ಚಿಸಿದರು.

ಜಮ್ಮು ಕಾಶ್ಮೀರದಲ್ಲಿ ಮೊದಲ ಇ-ಎಫ್‌ಐಆರ್ ದಾಖಲು

ಶ್ರೀನಗರ: ದೇಶದಲ್ಲಿ ವಾಟ್ಸಾಪ್ ಬಳಕೆ ವ್ಯಾಪಕವಾಗಿದೆ. ಈಗ ವಾಟ್ಸಾಪ್ ಮೂಲಕವೂ ಪೊಲೀಸರಿಗೆ ದೂರು ನೀಡಬಹುದಾಗಿದೆ. ಜಮ್ಮು-ಕಾಶ್ಮೀರ ಪೊಲೀಸರು ವಾಟ್ಸಾಪ್ ಮೂಲಕ ಬಂದ ದೂರನ್ನು ಸ್ವೀಕರಿಸಿ 'ಇ-ಎಫ್‌ಐಆರ್' ದಾಖಲಿಸಿದ್ದಾರೆ.

ಇದರೊಂದಿಗೆ ಹಂದ್ವಾರದ ವಿಲ್ಗಾಮ್ ಪೊಲೀಸ್ ಠಾಣೆಯ ಪೊಲೀಸರು ವಾಟ್ಸಾಪ್ ದೂರು ದಾಖಲಿಸಿದ ಪ್ರಥಮರು ಎನಿಸಿ ಕೊಂಡಿದ್ದಾರೆ. ಡಿಜಿಟಲ್ ಪೊಲೀ ಸಿಂಗ್ ಕಡೆಗೆ ಹೆಜ್ಜೆ ಇಟ್ಟಿದ್ದಾರೆ.

ಜಮ್ಮು-ಕಾಶ್ಮೀರ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಚಾಲಕರಾಗಿರುವ ಕುಪ್ವಾರಾ ಜಿಲ್ಲೆಯ ಹಂಜಿಪೋರಾ ನಿವಾಸಿ ಇಮ್ತಿಯಾಜ್ ಅಹ್ಮದ್ ದಾರ್ ವಾಟ್ಸಾಪ್ ಮೂಲಕ ದೂರು ನೀಡಿದವರು. ಟಾರತ್ಪೋರಾದಿಂದ ಶ್ರೀನಗರಕ್ಕೆ ಶನಿವಾರ ಹೋಗುತ್ತಿದ್ದ ಅವರನ್ನು ವಿಲ್ಗಾಮ್ ಬಳಿ ತಡೆದ ಇಬ್ಬರು ಯುವಕರು ಜಗಳಕ್ಕಿಳಿದು ಥಳಿಸಿದರು. ಹಲ್ಲೆಯಲ್ಲಿ ಗಾಯವಾ ಗಿದೆ. ವಿಲ್ಗಾಮ್‌ನ ಶಹನಿಪೋರಾ ನಿವಾಸಿಗಳಾದ ಆಶಿಕ್ ಹುಸೇನ್ ಭಟ್ ಮತ್ತು ಗೌಹರ್ ಅಹ್ಮದ್ ಭಟ್ ಥಳಿಸಿದವರು ಎಂದು ವಾಟ್ಸಾಪ್‌ನಲ್ಲಿ ದೂರು ನೀಡಿದ್ದರು.

ಇನ್‌ಸ್ಟಾಗ್ರಾಂ ಹೊಸ ಫೀಚರ್‌ಗೆ ಸಿದ್ಧತೆ

ಕಾಮೆಂಟ್ ಇಷ್ಟವಾಗಲಿಲ್ಲ...!

ದೆಹಲಿ: ಇನ್‌ಸ್ಟಾಗ್ರಾಂ ಅಪ್ಲಿಕೇಷನ್‌ಗೆ 2025ರಲ್ಲಿ ವಿಶ್ವಾದ್ಯಂತ 235 ಕೋಟಿ ಬಳಕೆದಾರರಿದ್ದಾರೆ ಎಂದು ಕಂಪನಿ ಹೇಳಿಕೊಂಡಿದೆ. ಅದೇ ಖುಷಿಯಲ್ಲಿ ಇನ್‌ಸ್ಟಾಗ್ರಾಂ ಕಂಪನಿ ತನ್ನ ಬಳಕೆದಾರರಿಗಾಗಿ ಹೊಸ ಸೌಲಭ್ಯಗಳನ್ನು ಪರಿಚಯಿಸಲು ಸಿದ್ಧವಾಗುತ್ತಿದೆ.



ಈ ಬಾರಿ 'ಈ ಕಾಮೆಂಟ್ ಇಷ್ಟವಾಗಲಿಲ್ಲ' ಎಂದು ಮರು ಪ್ರತಿಕ್ರಿಯೆ ನೀಡಬಹುದಾದ ಆಯ್ಕೆಯನ್ನು ತನ್ನ ಬಳಕೆದಾರರಿಗಾಗಿ ಇನ್‌ಸ್ಟಾಗ್ರಾಂ ಸಿದ್ಧಪಡಿಸುತ್ತಿದೆ. ಅಷ್ಟೇ ಅಲ್ಲ, ಬಳಕೆದಾರರು ತಮಗೆ ಇಷ್ಟವಾಗದ ಕಾಮೆಂಟ್ ಬಗ್ಗೆ ಸ್ಪಷ್ಟ 'ಅಸಮಾಧಾನ' ವ್ಯಕ್ತಪಡಿಸಲೂ ಅವಕಾಶ ಇರುವಂತೆ ಹೊಸ ಸೌಲಭ್ಯವನ್ನು ರೂಪಿಸಲು ಕಂಪನಿ ಯೋಜಿಸಿದೆ.

- ಬಳಕೆದಾರರ ಮಾಡಿದ ಪೋಸ್ಟ್‌ಗೆ ಜಾಲತಾಣದಲ್ಲಿ ಯಾರಾದರೂ 'ನಕಾರಾತ್ಮಕ' ಕಾಮೆಂಟ್ ಮಾಡಿದರೆ, ಆ ಕಾಮೆಂಟ್ ಬಳಕೆದಾರರಿಗೆ ಇಷ್ಟವಾಗದೇ ಇದ್ದರೆ ಆ ಬಗ್ಗೆ ತಮ್ಮ 'ಅಸಮಾಧಾನ'ವನ್ನು ಅಲ್ಲಿಯೇ ವ್ಯಕ್ತಮಾಡಬಹುದಾಗಿದೆ. ಬಳಕೆದಾರರ ಈ ಅಸಮಾಧಾನದ ಪ್ರತಿಕ್ರಿಯೆಯೂ ನಕಾರಾತ್ಮಕ ಕಾಮೆಂಟ್ ಮಾಡಿದವರಿಗೆ ತಿಳಿಯುತ್ತದೆ.
- ಇಂಥ ನಕಾರಾತ್ಮಕ ಕಾಮೆಂಟ್ ಮತ್ತು ಬಳಕೆದಾರರ ಅಸಮಾಧಾನ ಕುರಿತು ಬೇರೆ ನೆಟ್ಟಿಗರಿಗೂ ಪ್ರತಿಕ್ರಿಯಿಸಲು, ಅದರ ಟ್ರ್ಯಾಕ್ ಮುಂದುವರಿಸಲೂ ಈ ಹೊಸ ಫೀಚರ್‌ನಲ್ಲಿ ಅವಕಾಶವಿರಲಿದೆ.
- ಬಳಕೆದಾರರು ಇಷ್ಟಪಡದ ನಕಾರಾತ್ಮಕ ಕಾಮೆಂಟ್‌ಗಳು ಹೈಲೈಟ್ ಆಗದೇ, ಇನ್‌ಸ್ಟಾಗ್ರಾಂ ಖಾತೆಯ ಕೆಳಭಾಗದಲ್ಲಿ ಗೋಚರವಾಗುವಂತೆಯೂ ಹೊಸ ಫೀಚರ್‌ನಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ.
- ಈ ಬಗೆಯ ಹೊಸ ಫೀಚರ್‌ನಿಂದ ಸಾಮಾಜಿಕ ಮಾಧ್ಯಮದಲ್ಲಿ ಬಳಕೆದಾರರಿಗೆ ಹೊಸ ಅನುಭವ ಲಭ್ಯವಾಗಲಿದೆ. ನಕಾರಾತ್ಮಕ ಕಾಮೆಂಟ್‌ಗಳ ಸಂಖ್ಯೆ ತಗ್ಗಿ, ಸಕಾರಾತ್ಮಕ ಭಾವಗಳ, ಉತ್ತಮ ಅನುಭವಗಳ ಪ್ರತ್ರಿಕಿಯೆ ಹೆಚ್ಚಲು ಅವಕಾಶವಾಗಲಿದೆ ಎಂದು ಕಂಪನಿ ಹೇಳಿಕೊಂಡಿದೆ.

280 ಪ್ರಯಾಣಿಕರಿದ್ದ ಬೋಯಿಂಗ್ ವಿಮಾನ | ನ್ಯೂಯಾರ್ಕ್‌ನಿಂದ ದೆಹಲಿಯತ್ತ ಸಂಚಾರ

ಸ್ಫೋಟ ಭೀತಿ: ಅಮೆರಿಕ ವಿಮಾನ ದೆಹಲಿ ಬದಲು ರೋಮ್‌ಗೆ!

ನ್ಯೂಯಾರ್ಕ್/ದೆಹಲಿ: ನ್ಯೂಯಾರ್ಕ್‌ನ ಜಾನ್ ಎಫ್ ಕೆನಡಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಯತ್ತ ಹೊರಟಿದ್ದ ಅಮೆರಿಕ ಏರ್‌ಲೈನ್ಸ್‌ನ ವಿಮಾನಕ್ಕೆ ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ, ವಿಮಾನ ಸಾಗುವ ಮಾರ್ಗದಲ್ಲಿ ದಿಢೀರ್ ಬದಲಾವಣೆ ಮಾಡಿ ಇಟಲಿಯ ರಾಜಧಾನಿ ರೋಮ್‌ನ ವಿಮಾನ ನಿಲ್ದಾಣದಲ್ಲಿ ಭಾನುವಾರ ಸಂಜೆ ತುರ್ತು ಲ್ಯಾಂಡಿಂಗ್ ಮಾಡಿಸಲಾಗಿದೆ.

ವಿಮಾನದಲ್ಲಿ ಸ್ಫೋಟಕ ಸಾಧನ ಇರಿಸಲಾಗಿದೆ ಎಂಬ ಬೆದರಿಕೆ ಕರೆ ಬಂದ ಹಿನ್ನಲೆಯಲ್ಲಿ ಬೋಯಿಂಗ್ ವಿಮಾನವನ್ನು ಮುಂಜಾಗ್ರತಾ ಕ್ರಮವಾಗಿ ಫಿಯುಮಿಸಿನೊ ವಿಮಾನ ನಿಲ್ದಾಣದತ್ತ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಬೋಯಿಂಗ್ 787-9 ಡ್ರೀಮ್‌ಲೈನರ್ ವಿಮಾನದಲ್ಲಿ 280 ಪ್ರಯಾಣಿಕರು ಮತ್ತು ಸಿಬ್ಬಂದಿ ವರ್ಗದವರಿದ್ದರು. ನ್ಯೂಯಾರ್ಕ್‌ನಿಂದ ಶನಿವಾರ ರಾತ್ರಿ 8.30ಕ್ಕೆ ಹೊರಟ ವಿಮಾನ ದೆಹಲಿಗೆ ನಿಗದಿಯಂತೆ 14 ಗಂಟೆಗಳ ಪ್ರಯಾಣದ ಬಳಿಕ ತಲುಪಬೇಕಿತ್ತು. ಆದರೆ, ಹಾರಾಟ ಆರಂಭವಾದ 10 ಗಂಟೆಗಳ ನಂತರ ವಿಮಾನ ಕ್ಯಾಸ್ಪಿಯನ್ ಸಮುದ್ರದ ಮೇಲೆ ಹಾರುತ್ತಿದ್ದಾಗ ಪಶ್ಚಿಮ ದಿಕ್ಕಿಗೆ ತಿರುಗುವುದಕ್ಕೆ

ಬದಲಾಗಿ ಇಟಲಿಯತ್ತ ಮುಖ ಮಾಡಿತು. ರೋಮ್‌ನ ಫಿಮಿಸಿನೊ ವಿಮಾನ ನಿಲ್ದಾಣದಲ್ಲಿ ಇಳಿಯಿತು.

ಇಟಲಿ ವಾಯುಪ್ರದೇಶ ಪ್ರವೇಶಿಸಿದಾಗ ಮುನ್ನೆಚ್ಚರಿಕೆ ಕ್ರಮವಾಗಿ ಇಟಲಿಯ 2 ಯುದ್ಧ ವಿಮಾನಗಳು ಬೋಯಿಂಗ್ ವಿಮಾನದ ಬೆಂಗಾವಲಿಗೆ ಹಾರಿಬಂದವು. ಭಾನುವಾರ ಸಂಜೆ 5.30ರಲ್ಲಿ ರೋಮ್ ವಿಮಾನ ನಿಲ್ದಾಣದಲ್ಲಿ ಬೋಯಿಂಗ್ ಸುರಕ್ಷಿತವಾಗಿ ಇಳಿಯುವವರೆಗೂ ಇಟಲಿ ವಾಯುಪಡೆಯ ಎರಡು ಯುರೋ ಫೈಟರ್ ಜೆಟ್‌ಗಳೆರಡೂ ನಿಗಾ ಇರಿಸಿದ್ದವು.

ಬಳಿಕ ವಿಮಾನ ತಪಾಸಣೆ ಮಾಡಿದಾಗ ಬೆದರಿಕೆ ಕರೆ ಹುಸಿ ಎಂಬುದು ತಿಳಿದು ಪ್ರಯಾಣ ಮರು ಆರಂಭ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲರೂ ಭಯದಲ್ಲಿದ್ದೆವು

ವಿಮಾನದಲ್ಲಿದ್ದ ಭಾರತದ ಪ್ರಯಾಣಿಕ ಐಟಿ ಸಲಹೆಗಾರ ಮಹೇಶ್ ಕುಮಾರ್ ಸುದ್ದಿಸಂಸ್ಥೆ ಜತೆ ಮಾತನಾಡಿ, '2 ಯುದ್ಧ ವಿಮಾನಗಳು ನಾವಿದ್ದ ವಿಮಾನದ ಮಗ್ಗುಲಲ್ಲೇ ಹಾರಿಬಂದಾಗ ರೋಮಾಂಚನವಾಯಿತು. ವಿಮಾನದ ಸಿಬ್ಬಂದಿ ಆಸನದಿಂದ ಎದ್ದು ಓಡಾಡದಂತೆ ಸೂಚನೆ ನೀಡಿದರು. ವಿಮಾನ ದೆಹಲಿ ತಲುಪುವುದಕ್ಕೆ ಇನ್ನು 3 ಗಂಟೆಗಳಷ್ಟೇ ಇದೆ ಎನ್ನುವಾಗ 'ಭದ್ರತಾ ಕಾರಣಗಳಿಂದ ವಿಮಾನವನ್ನು ರೋಮ್ ಕಡೆಗೆ ತಿರುಗಿಸಲಾಗುತ್ತಿದೆ' ಎಂದು ಪೈಲಟ್ ಘೋಷಿಸಿದರು. ಆಗ ವಿಮಾನದಲ್ಲಿದ್ದ ನಾವೆಲ್ಲರೂ ಭಯಪಟ್ಟೆವು. ಎಲ್ಲರೂ ಮೌನವಾಗಿ ಕುಳಿತು ವಿಮಾನ ಸಿಬ್ಬಂದಿಯ ಆದೇಶಗಳನ್ನು ಪಾಲಿಸಿದೆವು' ಎಂದು ತಿಳಿಸಿದ್ದಾರೆ.

ತೆಲಂಗಾಣ ಶ್ರೀಶೈಲಂ ಎಡದಂಡೆ ಸುರಂಗ ಕುಸಿದು 3 ದಿನ | ಕಾರ್ಮಿಕರು ಬದುಕಿರುವ ಸಾಧ್ಯತೆ ಕ್ಷೀಣ ಎಂದ ಸಚಿವ

ಎಂಟು ಕಾರ್ಮಿಕರ ರಕ್ಷಿಸಲು ರ್‍ಯಾಟ್ ಮೈನರ್ಸ್

ತೆಲಂಗಾಣ: ನಾಗರ್‌ಕರ್ನೂಲ್ ಜಿಲ್ಲೆಯ ಶ್ರೀಶೈಲಂ ಎಡದಂಡೆ ಕಾಲುವೆಯ ಸುರಂಗದ ಒಂದು ಭಾಗ ಕುಸಿದಿದ್ದರಿಂದ ಒಳಗೆ 3 ದಿನಗಳಿಂದ ಸಿಲುಕಿಕೊಂಡಿರುವ ಎಂಟು ಕಾರ್ಮಿಕರನ್ನು ರಕ್ಷಿಸಲು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಅವಿರತವಾಗಿ ಶ್ರಮಿಸುತ್ತಿವೆ. ಆದರೆ, ಕಾರ್ಮಿಕರು ಸಿಲುಕಿರು ವೆಡೆಗೆ ತಲುಪಲಾಗದೇ ಇದ್ದುದಕ್ಕೆ ಈಗ ದೆಹಲಿ ಯಿಂದ 'ರ್‍ಯಾಟ್ ಮೈನರ್ಸ್'ಗಳ ತಂಡವನ್ನು ಕರೆಸಿಕೊಳ್ಳಲಾಗಿದೆ.

ಉತ್ತರಾಖಂಡದ ಕೇದಾರ ಬಳಿ ಹೆದ್ದಾರಿಯಲ್ಲಿನ ಸುರಂಗ ಮಾರ್ಗವೂ ನಿರ್ಮಾಣ ಹಂತದಲ್ಲಿ 2023ರಲ್ಲಿ ಕುಸಿದಿದ್ದಾಗ ಕಾರ್ಮಿಕರನ್ನು ಇಲಿಗಳಂತೆ ನೆಲವನ್ನು ಕೊರೆಯುತ್ತಾ ಸಾಗಿ ರಕ್ಷಿಸಿದ್ದು ಇದೇ ರ್‍ಯಾಟ್ ಮೈನರ್ಸ್ ತಂಡ ಎಂಬುದು ಉಲ್ಲೇಖಾರ್ಹ.

ಶನಿವಾರ ಬೆಳಗ್ಗೆ ಸುರಂಗ ಕುಸಿದಿದ್ದು, ಒಳಗೆ ಸಿಲುಕಿರುವವರಲ್ಲಿ ಇಬ್ಬರು ಎಂಜಿನಿಯರ್‌ಗಳು, ಇಬ್ಬರು ಆಪರೇಟರ್‌ಗಳು ಮತ್ತು ಉತ್ತರ ಪ್ರದೇಶ, ಜಮ್ಮು-ಕಾಶ್ಮೀರ, ಪಂಜಾಬ್ ಮತ್ತು ಜಾರ್ಖಂಡ್‌ನ ನಾಲ್ವರು ಕಾರ್ಮಿಕರು

ಸೇರಿದ್ದಾರೆ.

ಈ ಮಧ್ಯೆ, ಕ್ಯಾಮೆರಾಗಳು ಮತ್ತು ಗಣಿ ಪತ್ತೆ ರೋಬೊ ಜತೆ ಬಂದಿರುವ ಐಐಟಿ-ಚೆನ್ನೈ ತಂಡ ರಕ್ಷಣಾ ಕಾರ್ಯಾಚರಣೆಗೆ ಕೈಜೋಡಿಸಿವೆ. ಐಐಟಿ ಚೆನ್ನೈನ ಮೂವರು ಮತ್ತು ಎಲ್ ಅಂಡ್ ಟಿ ಕಂಪನಿಯ ಮೂವರು ತಜ್ಞರನ್ನು ಒಳಗೊಂಡ ಆರು ಸದಸ್ಯರ ತಂಡ ಉಪಕರಣಗಳ ಮೂಲಕ ದೃಶ್ಯಗಳನ್ನು ಸೆರೆಹಿಡಿಯಲಿವೆ. ಕ್ಯಾಮೆರಾಗಳು ಸುರಂಗದೊಳಕ್ಕೆ ತಲುಪಲಾಗದೇ ಇದ್ದರೆ ಲ್ಯಾಪ್‌ಟಾಪ್‌ಗೆ ಸಂಪರ್ಕಗೊಂಡಿರುವ ರೋಬೊವನ್ನು ಬಳಸಲಾಗುವುದು.

ಭಾರತೀಯ ಸೇನೆಯ ಯೋಧರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ತಂಡ(ಎಸ್‌ಡಿಆರ್‌ಎಫ್)ಗಳ ಸಿಬ್ಬಂದಿ ಮತ್ತು ರಾಜ್ಯ ಇಲಾಖೆಗಳ ರಕ್ಷಣಾ ತಂಡಗಳು 3 ದಿನಗಳಿಂದ ನಿರಂತರವಾಗಿ ಶ್ರಮಿಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಾರ್ಮಿಕರು ಸಿಲುಕಿರುವ ಜಾಗವನ್ನೂ ತಲುಪಲಾಗಿಲ್ಲ. ಸೋಮವಾರ ಘಟನಾ ಸ್ಥಳ ತಲುಪಿದ ನೌಕಾಪಡೆ ತಂಡ ಸುರಂಗದೊಳಗೆ ಪ್ರವೇಶಿಸಲಾಗಿಲ್ಲ.

ಪ್ರಾಕೃತಿಕ ವಿಪತ್ತು ನಿರ್ವಹಣಾ ಪಡೆಯ ವಿಶೇಷ ಮುಖ್ಯ ಕಾರ್ಯದರ್ಶಿ ಅರವಿಂದ್ ಕುಮಾರ್ ಅಧಿಕಾರಿಗಳ ತಂಡದ ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಮಣ್ಣಿನ ರಾಶಿಯಡಿ ಕಾರ್ಮಿಕರು

ಸುರಂಗದ ಮೇಲ್ಭಾಗ ಕುಸಿದು ಅದಾಗಲೇ 3 ದಿನಗಳೇ ಕಳೆದಿವೆ. ಸುರಂಗದಲ್ಲಿ ಸಿಲುಕಿರುವ 8 ಕಾರ್ಮಿಕರು ಈವರೆಗೂ ಬದುಕುಳಿದಿರುವ ಸಾಧ್ಯತೆ ಕ್ಷೀಣ ಎಂದು ತೆಲಂಗಾಣ ಸಚಿವ ಜೂಪಲ್ಲಿ ಕೃಷ್ಣರಾವ್ ಕಳವಳ ವ್ಯಕ್ತಪಡಿಸಿದ್ದಾರೆ. ಸುರಂಗದಲ್ಲಿ ಮಣ್ಣು ಕುಸಿದಿರುವ ಭಾಗದವರೆಗೂ ನಾನೂ ಹೋಗಿದ್ದೆ. 9 ಮೀ. ವ್ಯಾಸದ ಸುರಂಗದಲ್ಲಿ 20 ಅಡಿಗಳವರೆಗೂ ಮಣ್ಣಿನ ರಾಶಿ ಬಿದ್ದಿದೆ. ಕಾರ್ಮಿಕರ ಹೆಸರನ್ನು ಕೂಗಿದಾಗ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಅವರ

ಬದುಕುಳಿಯುವ ಸಾಧ್ಯತೆಗಳು ತುಂಬಾ ಕಡಿಮೆಯಿದೆ ಎಂದು ಸಚಿವರು ಆತಂಕ ವ್ಯಕ್ತಪಡಿಸಿದರು. ರಕ್ಷಣಾ ತಂಡಗಳು ಕಾರ್ಮಿಕರನ್ನು ಸಂಪರ್ಕಿಸಲು ಎಲ್ಲಾ ಪ್ರಯತ್ನ ಮಾಡುತ್ತಿವೆ. ಸುರಂಗ ಕುಸಿದ ಸ್ಥಳದಲ್ಲಿ ಕೆಸರು, ಮಣ್ಣು-ಕಲ್ಲುಗಳು ತುಂಬಿರುವುದರಿಂದ ಕಾರ್ಮಿಕರಿರುವ ಜಾಗ ತಲುಪಲು 3-4 ದಿನಗಳೇ ಬೇಕಾಗುತ್ತವೆ ಎಂದರು.

ರಷ್ಯಾ-ಉಕ್ರೇನ್ ಯುದ್ಧಕ್ಕೆ 3 ವರ್ಷ

ಕೀವ್: ಯೂರೋಪ್ ದೇಶಗಳ ಒಕ್ಕೂಟವಾದ 'ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ'(ನ್ಯಾಟೊ) ಸೇರಲು ಉಕ್ರೇನ್ ಹೊರಟಿದ್ದೇ ಕಾರಣವಾಗಿ ಆ ದೇಶದ ವಿರುದ್ಧ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಆರಂಭಿಸಿದ ಯುದ್ಧಕ್ಕೆ ಫೆ.24ಕ್ಕೆ ಸರಿಯಾಗಿ



3 ವರ್ಷಗಳು ತುಂಬಿವೆ. ಆದರೆ ಯುದ್ಧ ಕೊನೆಗೊಳ್ಳುವ ಹಂತಕ್ಕೆ ಈಗಲೂ ಬಂದಿಲ್ಲ.

ನ್ಯಾಟೊ ಸೇರುವ ಉಕ್ರೇನ್ ದೇಶದ ನಿರ್ಧಾರ ವಿರುದ್ಧ 2022ರ ಫೆ.24ರಂದು ರಷ್ಯಾ ಯುದ್ಧ ಶುರು ಮಾಡಿತು. 3 ವರ್ಷಗಳ ಯುದ್ಧದಲ್ಲಿ ರಷ್ಯಾ ಈವರೆಗೂ ಉಕ್ರೇನ್ ದೇಶದ ಐದನೇ ಒಂದು ಭಾಗವನ್ನು ತನ್ನ ಕೈವಶ ಮಾಡಿಕೊಳ್ಳಲಷ್ಟೇ ಸಾಧ್ಯವಾಗಿದೆ. ಸಾವು-ನೋವಿನ ಸಂಖ್ಯೆ ಲೆಕ್ಕಕ್ಕೆ ಸಿಗದಷ್ಟು ಅಪಾರವಾಗಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ನಿರೀಕ್ಷಿಸಿದಷ್ಟು ತ್ವರಿತವಾಗಿ ಗೆಲುವು ಪಡೆಯಲಾಗಿಲ್ಲ. ಉಕ್ರೇನ್ ನಾಯಕ ವೊಲೊಡಿಮಿರ್ ಝೆಲೆನ್ಸ್ಕಿಗೆ ಪಾಶ್ಚಿಮಾತ್ಯ ದೇಶಗಳ ಶತಕೋಟಿ ಡಾಲರ್ ನೆರವಿನಿಂದ ಪ್ರತಿದಾಳಿ ನಡೆಸುತ್ತಾ ಬಂದಿದ್ದಾರೆ. ಯುದ್ಧಕ್ಕೆ 3 ವರ್ಷಗಳಾದ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳ ನಾಯಕರು, ವೀರ ಮರಣ ಹೊಂದಿದ ತಮ್ಮ ದೇಶಗಳ ಸೈನಿಕರಿಗೆ ನಮನ ಸಲ್ಲಿಸಿದ್ದಾರೆ.

ರಾಜೀನಾಮೆಗೆ ಸಿದ್ಧ: ಝೆಲೆನ್‌ಸ್ಕಿ

ಉಕ್ರೇನ್‌ನಲ್ಲಿ ಶಾಶ್ವತ ಶಾಂತಿ ನೆಲೆಸುವುದಾದರೆ ಅಥವಾ ಉಕ್ರೇನ್‌ಗೆ ನ್ಯಾಟೊ ರಾಷ್ಟ್ರಗಳ ಭಾಗವಾಗಲು ಸಾಧ್ಯವಾದಲ್ಲಿ ಆ ಕ್ಷಣವೇ ರಾಜೀನಾಮೆ ನೀಡಲು ಸಿದ್ಧ. ದಶಕಗಳ ಕಾಲ ಅಧಿಕಾರದಲ್ಲಿ ಮುಂದುವರಿಯಲು ಬಯಸುವುದಿಲ್ಲ ಎಂದು ಝೆಲೆನ್‌ಸ್ಕಿ ಸೋಮವಾರ ಹೇಳಿದ್ದಾರೆ. 'ನನಗೆ ಯಾವುದೇ ರೀತಿಯ ಅಸಮಾಧಾನವಿಲ್ಲ. ಅದರೆ, ಸರ್ವಾಧಿಕಾರಿಯಾಗಿದ್ದರೆ ಅಸಮಾಧಾನ ಆಗುತ್ತಿತ್ತು. ಉಕ್ರೇನ್ ಭದ್ರತೆಯ ಬಗ್ಗೆ ನಾನು ಗಮನ ನೀಡಿದ್ದೇನೆ' ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಕರಾಮುವಿ ಪ್ರವೇಶ ಪ್ರಕ್ರಿಯೆ ಆರಂಭ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿವಿ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಆರಂಭವಾಗಿದ್ದು, ವಿವಿಧ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಪದವಿಯಲ್ಲಿ ಬಿ.ಎ, ಬಿಕಾಂ, ಬಿಎಸ್ಸಿ, ಬಿಎಸ್‌ಡಬ್ಲ್ಯು, ಬಿಬಿಎ, ಬಿಸಿಎ, ಬಿಎಲ್‌ಐಎಸ್‌ಸಿ, ಸ್ನಾತಕೋತ್ತರ ಕೋರ್ಸುಗಳಾದ ಎಂಎ, ಎಂಎಸ್ಸಿ, ಎಂಕಾ, ಎಂಸಿಜೆ, ಎಂಎಸ್‌ಡಬ್ಲ್ಯು, ಎಂಎಲ್‌ಐಎಸ್‌ಸಿ, ಎಂಸಿಎ, ಎಂಬಿಎ, ಹಾಗೂ ವಿವಿಧ ಪಿಜಿ ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದು. ಕರಾಮುವಿಯ ವೆಬ್‌ಸೈಟ್ www.ksoumysuru.ac.in ನಲ್ಲಿ ಅರ್ಜಿ ಭರ್ತಿ, ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿ ನಂತರ ಮಲ್ಲೇಶ್ವರದ ವಿವಿಯ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗೆ 080-23448811 ಅಥವಾ 97411 979 21 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಚುನಾವಣೆ ಬಿಜೆಪಿ ಸುಪ್ರೀಂ ಮೊರೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಕೂಡಲೇ ಚುನಾವಣೆ ನಡೆಸಬೇಕೆಂದು ನಿರ್ದೇಶಿಸಲು ಕೋರಿ ಬಿಜೆಪಿಯು ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಿದೆ. ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರು ಈ ಸಂಬಂಧ ಸಮಿತಿಯೊಂದನ್ನು ರಚಿಸಿದ್ದರು. ಈ ಸಮಿತಿಯು ಹಿರಿಯ ವಕೀಲರಾದ ಸಂದೀಪ್ ಪಾಟೀಲ್ ಅವರ ಮೂಲಕ ಸುಪ್ರೀಂ ಕೋರ್ಟ್‌ಗೆ ವಕಾಲತ್ತು ಸಲ್ಲಿಸಿ ಮನವಿ ಮಾಡಿದೆ. ಬೆಂಗಳೂರಿನಲ್ಲಿ ಆದಷ್ಟು ಬೇಗನೆ ಚುನಾವಣೆ ನಡೆಸಬೇಕಿದೆ ಎಂದು ಅರ್ಜಿಯಲ್ಲಿ ಕೋರಲಾಗಿದೆ. ಮಾಜಿ ಮೇಯರ್‌ಗಳಾದ ಗೌತಮ್, ನಾರಾಯಣಸ್ವಾಮಿ, ಮಾಜಿ ಉಪ ಮೇಯರ್ ಮತ್ತು ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಹರೀಶ್ ಅವರು ಸಹಿ ಮಾಡಿ ಈ ವಕಾಲತ್ತು ಸಲ್ಲಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಅವರು ತಿಳಿಸಿದ್ದಾರೆ.

ಪ್ರಿ ನರ್ಸರಿ ತರಗತಿ ಅರ್ಜಿ ಆಹ್ವಾನ

ಬೆಂಗಳೂರು: ಬಿಬಿಎಂಪಿ ಶಿಕ್ಷಣ ವ್ಯಾಪ್ತಿಗೆ ಒಳಪಡುವ ಭಾರತೀಯ ವಿದ್ಯಾಭವನ ಮತ್ತು ಬಿಬಿಎಂಪಿ ಪಬ್ಲಿಕ್ ಶಾಲೆಯ ಜಂಟಿ ಸಹಯೋಗದಲ್ಲಿ ನಡೆಯುತ್ತಿರುವ ನರ್ಸರಿ ತರಗತಿಗೆ 2025-26ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಸ್ಕೂಲ್, ಶ್ರೀರಾಮ ಪುರದಲ್ಲಿ ಫ್ರೀ ನರ್ಸರಿ ತರಗತಿಗೆ ಫೆ.25ರಿಂದ ಮಾ.11ರವರೆಗೆ ಅರ್ಜಿ ವಿತರಿಸಲಾಗುತ್ತಿದೆ. ಅರ್ಜಿ ನಮೂನೆಗಳನ್ನು ಸಲ್ಲಿಸಲು ಕೊನೆಯ ಮಾ.11 ರಿಂದ 25ರವರೆಗೆ ಅವಕಾಶ ನೀಡಲಾಗಿದ್ದು, ಭರ್ತಿ ಮಾಡಿದ ಅರ್ಜಿಯನ್ನು ಹಿರಿಯ ಸಹಾಯಕ ನಿರ್ದೇಶಕ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಲ್ಲಿಸಬೇಕು. 20-04-2025ರಂದು ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಅರ್ಜಿ ಸಲ್ಲಿಸುವಾಗ ಮಗುವಿನ ಪಾಸ್‌ಪೋರ್ಟ್ ಐದು ಫೋಟೋ, ಮಗುವಿನ ಜತೆಗಿರುವ ತಂದೆ ತಾಯಿಯ ಭಾವಚಿತ್ರ(ಕುಟುಂಬ ಭಾವ ಚಿತ್ರ), ಮಗುವಿನ ಜನನ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ತಂದೆ/ತಾಯಿಯ ಆಧಾರ್ ಕಾರ್ಡ್, ಖಾಯಂ ವಿಳಾಸ ವಿರುವ ಗುರುತಿನ ಚೀಟಿ ಸೇರಿದಂತೆ ವಿವಿಧ ದಾಖಲೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಎಲೆಕ್ಷನ್‌ಗೆ ಅಮೆರಿಕ ದೇಣಿಗೆ ಪಡೆದಿಲ್ಲ

ದೆಹಲಿ: ಭಾರತದ ಚುನಾವಣೆ ಮೇಲೆ ಪ್ರಭಾವ ಬೀರಲು ಅಮೆರಿಕದ ಯುಎಸ್‌ಏಡ್ ಮೂಲಕ ಹಣ ಪಡೆಯಲಾಗಿದೆ ಎಂಬ ವಿವಾದದ ನಡುವೆ 2023-24ನೇ ಸಾಲಿನಲ್ಲಿ ಮತದಾನ ಪ್ರಮಾಣ ಹೆಚ್ಚಳ ಉದ್ದೇಶಕ್ಕೆ ಅಮೆರಿಕದಿಂದ ಯಾವುದೇ ಹಣಕಾಸು ನೆರವು ಬಂದಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಪ್ರಕಟಿಸಿರುವ ವರದಿಯಲ್ಲಿ ಬೆಳಕಿಗೆ ಬಂದಿದೆ. 2023-24ನೇ ಸಾಲಿನಲ್ಲಿ ಜಂಟಿ ಸಹಭಾಗಿತ್ವದಲ್ಲಿ ಜಾರಿಯಾಗಿರುವ 7 ಯೋಜನೆಗಳಿಗೆ 750 ಮಿಲಿಯನ್ ಡಾಲರ್ ಆರ್ಥಿಕ ನೆರವು ಬಂದಿದೆ. ಆದರೆ, ಮತದಾನ ಹೆಚ್ಚಳದ ಕಾರ್ಯಕ್ರಮಗಳಿಗೆ ಅನುದಾನ ನೀಡಿಲ್ಲ. ಕೃಷಿ, ಆಹಾರ ಭದ್ರತೆ, ನೀರು, ನೈರ್ಮಲ್ಯ ರಕ್ಷಣೆ, ಮರುಬಳಕೆಯ ಇಂಧನ ಅಭಿವೃದ್ಧಿ, ವಿಪತ್ತು ನಿರ್ವಹಣೆ ಯೋಜನೆಗಳಿಗೆ ಯುಎಸ್‌ಏಡ್ ಮೂಲಕ ನೆರವು ಪಡೆಯಲಾಗಿದೆ. ಇದಲ್ಲದೆ ಸುಸ್ಥಿರ ಅರಣ್ಯ ಅಭಿವೃದ್ಧಿ, ಹವಾಮಾನ ಬದಲಾವಣೆ, ಇಂಧನ ದಕ್ಷತೆ, ತಂತ್ರಜ್ಞಾನ ಸೇರಿ ಹಲವು ಯೋಜನೆಗಳಿಗೆ ಹಣಕಾಸು ನೆರವು ಪಡೆಯಲಾಗಿದೆ ಎಂಬ ಮಾಹಿತಿಯನ್ನು ಹಣಕಾಸು ಸಚಿವಾಲಯ ವಾರ್ಷಿಕ ವರದಿಯಲ್ಲಿ ತಿಳಿಸಿದೆ. ಭಾರತ-ಅಮೆರಿಕ ದ್ವಿಪಕ್ಷಿಯ ಒಪ್ಪಂದದಂತೆ 1951ರಿಂದ ಯುಎಸ್‌ಏಡ್ ಮೂಲಕ ಭಾರತಕ್ಕೆ ಆರ್ಥಿಕ ನೆರವು ನೀಡಲಾಗುತ್ತಿದೆ. ಕಳೆದ 70 ವರ್ಷದಲ್ಲಿ ಸುಮಾರು 555 ಯೋಜನೆಗಳಿಗೆ 17 ಬಿಲಿಯನ್ ಡಾಲರ್ ಹಣದ ನೆರವು ಬಂದಿದೆ ಎಂದು ವರದಿಯಲ್ಲಿ ತಿಳಿಸಿದೆ.

{ ಜೈರಾಮ್ ರಮೇಶ್ }
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

ಯುಎಸ್‌ಏಡ್ ನೆರವಿನ ವಿಚಾರದಲ್ಲಿ ಬಿಜೆಪಿಯ ಸುಳ್ಳುಗಳನ್ನು ಕೇಂದ್ರ ಹಣಕಾಸು ಸಚಿವಾಲಯದ ವಾರ್ಷಿಕ ವರದಿಯು ಎಳೆಎಳೆಯಾಗಿ ಬಿಚ್ಚಿಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸುಳ್ಳಿನ ಬ್ರಿಗೇಡ್ ಹಾಗೂ ವಿದೇಶಾಂಗ ಸಚಿವರ ಸುಳ್ಳುಗಳನ್ನು ಹಣಕಾಸು ಸಚಿವಾಲಯವು ಬಯಲು ಮಾಡಿದೆ.

ಪರಾಜಿತ ಅಭ್ಯರ್ಥಿಗಳೊಂದಿಗೆ ಡಿಸಿಎಂ ಡಿಕೆಶಿ ಸಭೆ | ಮುಂದಿನ ಚುನಾವಣೆಗೆ ಸಜ್ಜಾಗಲು ಸಲಹೆ

ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಪರಾಜಿತಗೊಂಡ ಅಭ್ಯರ್ಥಿಗಳನ್ನು ವಿಶ್ವಾಸಕ್ಕೆ ಪಡೆಯುತ್ತಿರುವ ಎನ್ನುವ ಆರೋಪದ ನಡುವೆಯೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪರಾಜಿತ ಅಭ್ಯರ್ಥಿಗಳೊಂದಿಗೆ ಸಭೆ ನಡೆಸಿ, ಎಲ್ಲರನ್ನು ವಿಶ್ವಾಸಕ್ಕೆ ಪಡೆಯುವ ಪ್ರಯತ್ನ ಮಾಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪರಾಜಿತ ಅಭ್ಯರ್ಥಿಗಳ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಕೆಲ ಸಚಿವರು ನಮ್ಮ ಮಾತಿಗೆ ಬೆಲೆ ನೀಡುತ್ತಿಲ್ಲ. ಈ ರೀತಿಯಾದರೆ ಮುಂದಿನ ಚುನಾವಣೆ ವೇಳೆಗೆ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟ ಎನ್ನುವ ಬೇಸರವನ್ನು ಹೊರಹಾಕಿದ್ದಾರೆ ಎನ್ನಲಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಶೀಘ್ರವೇ ಪರಿಹಾರ ನೀಡುವ ಭರವಸೆಯನ್ನು ಡಿ.ಕೆ.ಶಿವಕುಮಾರ್ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಸರಣಿ ಸಭೆಯಲ್ಲಿ ನಗರ, ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪೂರ್ವ ತಯಾರಿ ನಡೆಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು. ಮೇ ತಿಂಗಳಿನಲ್ಲಿ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಇತರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯ ಸರಕಾರ ಸಿದ್ಧತೆ ನಡೆಸಿದೆ. ನ್ಯಾಯಾಲಯದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಕುರಿತ ಪ್ರಕರಣದ ತೀರ್ಪಿಗಾಗಿ ನಿರೀಕ್ಷಿಸಲಾಗುತ್ತಿದ್ದು, ಈ ನಡುವೆ ಪಕ್ಷದ ವತಿಯಿಂದ ಚುನಾವಣಾ ತಯಾರಿಯ ಬಗ್ಗೆ ಸಭೆಗಳನ್ನು ಆರಂಭಿಸಲಾಗಿದೆ. ಶಾಸಕರು, ಸಚಿವರ ಜೊತೆ ಸಭೆ ನಡೆಸುವ ಮೊದಲು ಮಾಜಿ ಶಾಸಕರು ಹಾಗೂ ಪರಾಜಿತ ಅಭ್ಯರ್ಥಿಗಳ ಜೊತೆ ಡಿ.ಕೆ.ಶಿವಕುಮಾರ್ ಚರ್ಚೆ ನಡೆಸಿರುವುದು ಮಹತ್ವ ಪಡೆದುಕೊಂಡಿದೆ.

ಮುಂದಿನ ಚುನಾವಣೆಗೆ ಸಜ್ಜಾಗಿ : ಇನ್ನು ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತಿರುವ ಕ್ಷೇತ್ರಗಳ ಪೈಕಿ ಸುಮಾರು 60 ಕ್ಷೇತ್ರಗಳಲ್ಲಿ

ಕಾಂಗ್ರೆಸ್ ಪಕ್ಷ ಗೆಲ್ಲುವ ಸಾಧ್ಯತೆಗಳಿವೆ ಎಂದು ನಮ್ಮ ಆಂತರಿಕ ಸಮೀಕ್ಷೆಗಳು ವರದಿ ನೀಡಿವೆ. ಈ ಹಿನ್ನೆಲೆಯಲ್ಲಿ ಪರಾಜಿತ ಅಭ್ಯರ್ಥಿಗಳ ಕಷ್ಟ ಆಲಿಸಿ, ಮುಂದಿನ 2028ರ ಚುನಾವಣೆಗೆ ಸಜ್ಜಾಗಿ ಎಂದು ಸೂಚನೆ ನೀಡಲಾಗಿದೆ ಎಂದು ಹೇಳಿದರು. ನಾವು ಸೋತಿದ್ದ 86 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಕರೆಸಿ ಅವರ ಕಷ್ಟ ಆಲಿಸಿ, ಮುಂದಿನ ಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ತಯಾರಿ ಬಗ್ಗೆ ಚರ್ಚೆ ಮಾಡಿದ್ದೇವೆ. ಪರಾಜಿತ ಅಭ್ಯರ್ಥಿಗಳು ಸುಮ್ಮನೆ ಕೂರದೆ ಕಾರ್ಯಪ್ರವೃತ್ತರಾಗಬೇಕು ಎಂದು ಮಾರ್ಗದರ್ಶನ ನೀಡಲಾಗಿದೆ. ಎಐಸಿಸಿ ಜತೆ ಚರ್ಚೆ ಮಾಡಿ ಪಕ್ಷಕ್ಕೆ ಹಿನ್ನಡೆ ಇರುವ ಉಳಿದ 20 ಕ್ಷೇತ್ರಗಳಲ್ಲಿ ಪಕ್ಷವನ್ನು ಯಾವ ರೀತಿ ಕಟ್ಟಬೇಕು ಎಂದು ಕಾರ್ಯಯೋಜನೆ ಸಿದ್ಧಪಡಿಸುತ್ತೇವೆ ಎಂದು ತಿಳಿಸಿದರು.

ಲೋಕಸಭೆ ಚುನಾವಣೆಯಲ್ಲಿ ಗೆದ್ದವರು ಹಾಗೂ ಸೋತವರನ್ನು ಮತ್ತೊಂದು ದಿನ ಕರೆದು ಸಭೆ ಮಾಡಲಿದ್ದೇನೆ. ಚುನಾವಣೆಯಲ್ಲಿ ಸೋತ ನಂತರ ಇವರು ಲೋಕಸಭೆ ಚುನಾವಣೆ, ಸಹಕಾರಿ ಸಂಘಗಳ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಶಕ್ತಿ ತುಂಬಲು ಸಲಹೆ ನೀಡಲಾಗಿದೆ. ಮುಂದಿನ ಅಧಿವೇಶನ ನಡೆಯುವಾಗ ನಾನು ಹಾಗೂ ಮುಖ್ಯಮಂತ್ರಿಗಳು ಪರಾಜಿತ ಅಭ್ಯರ್ಥಿಗಳನ್ನು ಕರೆಸಿ ಚರ್ಚೆ ಮಾಡಲು ದಿನಾಂಕ ನಿಗದಿಪಡಿಸಲಾಗುವುದು ಎಂದು ಹೇಳಿದ್ದೇವೆ ಎಂದು ತಿಳಿಸಿದರು.

ಮಾರ್ಚ್ 23ರಿಂದ ಏಪ್ರಿಲ್ 1ರವರೆಗೂ ನಾನು, ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ಸಚಿವರು, ಉಸ್ತುವಾರಿ ಜಿಲ್ಲೆಗಳ ಕ್ಷೇತ್ರಗಳಲ್ಲಿ ಕಾರ್ಯಕರ್ತರ ಸಭೆ ನಡೆಸಬೇಕಿದೆ. ಅದಕ್ಕೂ ಮುನ್ನವೇ ಶನಿವಾರ ಅಥವಾ ಭಾನುವಾರ ಸಮಯ ಸಿಕ್ಕರೆ ಸಭೆ ಮಾಡಲು ಜಿಲ್ಲಾ ಉಸ್ತುವಾರಿ ಸಚಿವರಿಗೆ ಅವಕಾಶ ನೀಡಲಾಗುವುದು. ನಾನು ಬೆಂಗಳೂರಿನ 28 ಕ್ಷೇತ್ರಗಳನ್ನು ದಿನಕ್ಕೆ 2-3 ಕ್ಷೇತ್ರಗಳಂತೆ ಭೇಟಿ ನೀಡಿ ಕಾರ್ಯಕರ್ತರ ಸಭೆ ಮಾಡಲು ತೀರ್ಮಾನಿಸಿದ್ದೇನೆ. ಈ ಕಾರ್ಯಕರ್ತರ ಸಭೆಯಲ್ಲಿ ಮಂಡಳಿ, ಸಂಘ, ಸಂಸ್ಥೆ, ಸಮಿತಿಗಳಲ್ಲಿ ಸರ್ಕಾರದಿಂದ ನಾಮನಿರ್ದೇಶನವಾಗಿರುವ ಕಾರ್ಯಕರ್ತರಿಗೆ ಸನ್ಮಾನ ಮಾಡಬೇಕು. ಆಮೂಲಕ ಅವರನ್ನು ಗುರುತಿಸಿ ಅವರ ಜವಾಬ್ದಾರಿ ತಿಳಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿ ಇರಲಿ

ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರಿಗೆ ನೂತನ ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಿದ್ದೇನೆ. ಅವರು ಬೆಂಗಳೂರಿಗೆ ಆಗಮಿಸಿ ಶಂಕುಸ್ಥಾಪನೆ ಮಾಡಲಿದ್ದಾರೆ. ನೂರಕ್ಕೂ ಹೆಚ್ಚು ಕಡೆಗಳಲ್ಲಿ ವರ್ಚುವಲ್ ಮೂಲಕ ಶಂಕುಸ್ಥಾಪನೆ ಮಾಡಲಾಗುವುದು. ನಗರಾಭಿವೃದ್ಧಿ, ಸರ್ಕಾರದಿಂದ ಮಂಜೂರಾದ ಜಾಗಗಳಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಕೆಲವು ಕಡೆ ಜಮೀನು ಖರೀದಿ ಮಾಡಲು ಸೂಚಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಕಚೇರಿಗಳು ಇರಬೇಕು ಎಂಬುದು ನಮ್ಮ ಗುರಿ. ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿರುವ ಜಾಗದಲ್ಲಿ ಮಾತ್ರ ಕಾಂಗ್ರೆಸ್ ಕಚೇರಿ ಕಟ್ಟಲು ಶಂಕುಸ್ಥಾಪನೆ ಮಾಡಲಾಗುವುದು. ವೈಯಕ್ತಿಕ ಹೆಸರಿನಲ್ಲಿರುವ ಜಾಗದಲ್ಲಿ ಕಚೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡುವುದಿಲ್ಲ. ಜಾಗ ಇಲ್ಲದ ಕಡೆ ಜಾಗ ಖರೀದಿ ಮಾಡಿ ಅದನ್ನು ಪಕ್ಷಕ್ಕೆ ದಾನ ಮಾಡಬೇಕು. ನಾನು ಕೂಡ ರಾಮನಗರ ಪಕ್ಷದ ಕಚೇರಿಗೆ ಜಾಗ ಖರೀದಿ ಮಾಡಿಕೊಟ್ಟಿದ್ದೇನೆ. ನಾವೆಲ್ಲರೂ ಪಕ್ಷದ ನಾಯಕತ್ವದ ಫಲಾನುಭವಿಗಳು ಹೀಗಾಗಿ ಪಕ್ಷಕ್ಕಾಗಿ ನಾವು ನೆರವು ನೀಡಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ

ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಅಣಕು ನ್ಯಾಯಾಲಯದ ಸ್ಪರ್ಧೆಯ ಸಮಾರೋಪದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್, ಹೈಕೋರ್ಟ್ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್, ನ್ಯಾ. ಸಿ.ಎಂ.ಪೂಣಚ್ಚ ಮತ್ತು ನ್ಯಾ. ವಿಜಯ್‌ಕುಮಾರ್ ಪಾಟೀಲ್, ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

ಬೆಂಗಳೂರು: ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ ಫೆ.21 ರಿಂದ 23 ರ ವರೆಗೆ ಭಾರತದ ದಿವಾಳಿತನ ಮಂಡಳಿ ಸಹಯೋಗದಲ್ಲಿ ಪಿಇಎಸ್ ವಿವಿ ಯಲ್ಲಿ ನಡೆಯಿತು.

ದೇಶದ ಕಾನೂನು ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಿಸಲು ಆಯೋಜಿಸಿದ್ದ ಸ್ಪರ್ಧೆಯಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, ಒಬ್ಬ ವ್ಯಕ್ತಿ ವೃತ್ತಿಯಲ್ಲಿ ಮುಂದುವರಿಯಲು ಆಯ್ಕೆ ಮಾಡಿದ ಕ್ಷೇತ್ರ ಲೆಕ್ಕಿಸದೆ ಉತ್ತಮ ಮನುಷ್ಯನಾಗುವುದರ ಮಹತ್ವ ಅರಿತಿರಬೇಕು. ಕಾನೂನು ಪದವೀಧರರು ದಾವೆಗಳಲ್ಲಿ ತೊಡಗಿಸಿಕೊಳ್ಳುವುದು, ವಕೀಲರು ಕಾನೂನು ನಿಬಂಧನೆಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಜ್ಞಾನ ಹೊಂದಿರಬೇಕು ಎಂದು ತಿಳಿಸಿದರು.

ಸ್ಪರ್ಧೆಯಲ್ಲಿ ದೇಶದ ವಿವಿಧ ಕಾನೂನು ಸಂಸ್ಥೆಗಳು ಭಾಗವಹಿಸಿದ್ದವು. ಸ್ಪರ್ಧೆಯ ಅಂತಿಮ ಹಂತದ ತೀರ್ಪುಗಾರರಾಗಿ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್, ನ್ಯಾ. ಸಿ.ಎಂ.ಪೂಣಚ್ಚ ಮತ್ತು ನ್ಯಾ. ವಿಜಯ್‌ಕುಮಾರ್ ಪಾಟೀಲ್ ತೀರ್ಪು ನೀಡಿದರು. ಬೆಂಗಳೂರಿನ ಸಿಎಂಆರ್ ವಿವಿ ಮೊದಲ ಸ್ಥಾನ ಪಡೆದರೆ, ಬೆಂಗಳೂರಿನ ಎನ್‌ಎಂಐಎಂಎಸ್ ದ್ವಿತೀಯ ಸ್ಥಾನ ಪಡೆಯಿತು. ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ, ಅರವಿಂದ್ ಕಾಮತ್, ಜೆ.ಸಾಗರ್ ಅಸೋಸಿಯೇಟ್ಸ್ ಪಾಲುದಾರ ಪ್ರಶಾಂತ್.ವಿ.ಜಿ, ಪಿಇಎಸ್ ವಿವಿ ಕುಲಾಧಿಪತಿ ಪ್ರೊ.ಜವಾಹರ್ ದೊರೆಸ್ವಾಮಿ, ಕುಲಪತಿ ಡಾ.ಜೆ.ಸೂರ್ಯಪ್ರಸಾದ್, ಸಿಇಒ ಪ್ರೊ. ಅಜೋಯ್ ಕುಮಾರ್ ಉಪಸ್ಥಿತರಿದ್ದರು.

ಎಚ್‌ಎಸ್‌ಆರ್‌ಪಿ ಗಡುವು ವಿಸ್ತರಣೆ

ಬೆಂಗಳೂರು: ಹಳೆ ವಾಹನಗಳ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಯ ಗಡುವನ್ನು ಮಾ.31ರ ವರೆಗೆ ವಿಸ್ತರಿಸಲಾಗಿದೆ.

ಆರನೇ ಬಾರಿಗೆ ವಿಸ್ತರಣೆ ಯಾಗಿದ್ದು, 2019ರ ಏಪ್ರಿಲ್ 1ಕ್ಕಿಂತ ಮೊದಲು ನೋಂದಾಯಿತ ವಾಹನಗಳಿಗೆ ಇದು ಕಡ್ಡಾಯವಾಗಿದೆ. ಎಚ್‌ಎಸ್‌ಆರ್‌ಪಿ ಅಳವಡಿಕೆಯಿಂದ ವಾಹನಗಳ ಭದ್ರತೆ ಹೆಚ್ಚಾಗಲಿದೆ ಮತ್ತು ಅಕ್ರಮ ವಾಹನಗಳನ್ನು ಪತ್ತೆಹಚ್ಚಲು ಸಹಾಯವಾಗಲಿದೆ. ಈವರೆಗೆ 6 ಬಾರಿ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು ವಿಸ್ತರಣೆಯಾಗಿದೆ. ಜ.31ರವರೆಗೆ ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು ನೀಡಲಾಗಿತ್ತು. ಇದೀಗ ಸಾರಿಗೆ ಇಲಾಖೆ ಮತ್ತೆ ಮಾ.31ರವರೆಗೆ ಗಡುವು ವಿಸ್ತರಿಸಿದೆ. ಕರ್ನಾಟಕದಲ್ಲಿ ಸುಮಾರು 2 ಕೋಟಿಯಷ್ಟು ಹಳೆಯ ವಾಹನಗಳಿವೆ. ಇದರಲ್ಲಿ 58 ಲಕ್ಷ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಯಾಗಿವೆ. 2019ರ ಏಪ್ರಿಲ್ 1ರ ಹಿಂದಿನ ಎಲ್ಲ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೆ ಕಡ್ಡಾಯವಾಗಿದೆ.

ಒಂದು ವೇಳೆ ಎಚ್‌ಎಸ್‌ಆರ್‌ಪಿ ಅಳವಡಿಸದಿದ್ದರೆ ಮಾಲೀಕತ್ವದ ಬದಲಾವಣೆ, ವಿಳಾಸ ಬದಲಾವಣೆ, ನಕಲಿ ಆರ್‌ಸಿ, ವಿಮೆ ಹಾಗೂ ಇನ್ನಿತರ ಕೆಲಸಗಳನ್ನು ಮಾಡಲಾಗುವುದಿಲ್ಲ. ಸಾರಿಗೆ ಇಲಾಖೆ ಹೊರಡಿಸಿರುವ ಈ ಸೂಚನೆಯಿಂದ ಅಧಿಕೃತವಾಗಿಲ್ಲದ ವಾಹನಗಳು ರಸ್ತೆಯಲ್ಲಿ ಓಡಾಡುವುದನ್ನು ಸುಲಭವಾಗಿ ಪತ್ತೆ ಹಚ್ಚಲು ಸಹಾಯಕವಾಗಲಿದೆ.

ಎಚ್‌ಎಸ್‌ಆರ್‌ಪಿ ಕಾರ್ಯವಿಧಾನ

- https://transport.karnataka.gov.in **ಅಥವಾ** www.siam.in **ಭೇಟಿ ನೀಡಿ ಮತ್ತು** Book HSRP **ನ್ನು ಕ್ಲಿಕ್ ಮಾಡಿ.**
- **ನಿಮ್ಮ ವಾಹನ ತಯಾರಕರನ್ನು ಆಯ್ಕೆಮಾಡಿ.**
- **ವಾಹನದ ಮೂಲ ವಿವರಗಳನ್ನು ಭರ್ತಿ ಮಾಡಿ.**
- **ಎಚ್‌ಎಸ್‌ಆರ್‌ಪಿ ಅಳವಡಿಕೆಗಾಗಿ ಡೀಲರ್ ಸ್ಥಳವನ್ನು ಆಯ್ಕೆಮಾಡಿ.**
- **ಎಚ್‌ಎಸ್‌ಆರ್‌ಪಿ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಿ.**
- **ವಾಹನ ಮಾಲೀಕರ ಮೊಬೈಲ್ ಸಂಖ್ಯೆಗೆ ಒಟಿಪಿ.**
- **ಎಚ್‌ಎಸ್‌ಆರ್‌ಪಿ ಅಳವಡಿಕೆಯ ದಿನಾಂಕ ಮತ್ತು ಸಮಯವನ್ನು ಆಯ್ಕೆಮಾಡಿ.**
- **ನಿಮ್ಮ ವಾಹನದ ಯಾವುದೇ ತಯಾರಕ/ಡೀಲರ್ ಸಂಖ್ಯೆಗೆ ಭೇಟಿ ನೀಡಿ.**
- **ವಾಹನ ಮಾಲೀಕರ ಕಚೇರಿ ಆವರಣವನ್ನು ಎಚ್‌ಎಸ್‌ಆರ್‌ಪಿ ಅಳವಡಿಕೆಗಾಗಿ ಆಯ್ಕೆ ಮಾಡಿ**

ಬಿಬಿಎಂಪಿ ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಸೂಚನೆ

ಕೊಳವೆಬಾವಿಗಳ ಸ್ಥಿತಿಗತಿ ವರದಿ ನೀಡಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಉದ್ಯಾನವನಗಳಲ್ಲಿ ಕೊಳವೆಬಾವಿಗಳ ಸ್ಥಿತಿಗತಿ ಕುರಿತು ವರದಿ ನೀಡಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳ ಕುರಿತು ಪಾಲಿಕೆ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲ ಉದ್ಯಾನವನಗಳ ಪೈಕಿ, ಎಷ್ಟು ಕೊಳವೆಬಾವಿಗಳು ಸುಸ್ಥಿತಿಯಲ್ಲಿವೆ, ಎಷ್ಟು ದುಸ್ಥಿತಿಯಲ್ಲಿವೆ ಎಂಬುದನ್ನು ಪರಿಶೀಲಿಸಿ ಶೀಘ್ರ ವರದಿ ನೀಡಬೇಕು. ಕೊಳವೆಬಾವಿಗಳು ದುರಸ್ತಿಯಲ್ಲಿರುವ ಉದ್ಯಾನವನಗಳಲ್ಲಿ ಕೂಡಲೇ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಈ ಸಂಬಂಧ ಜಲಮಂಡಳಿಯ ಜತೆ ಮಾತನಾಡಿ, ತ್ಯಾಜ್ಯನೀರು ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ನೀರನ್ನು ಟ್ಯಾಂಕರ್ ಗಳ ಮೂಲಕ ಉದ್ಯಾನವನಗಳಲ್ಲಿರುವ ಸಸಿ, ಮರಗಳಿಗೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಸ್ಕರಿಸಿದ ನೀರು ವ್ಯವಸ್ಥೆ ಮಾಡಿ: ನಗರದಲ್ಲಿ ಬೇಸಿಗೆ ಕಾಲ ಆರಂಭವಾಗುತ್ತಿದ್ದು, ಉದ್ಯಾನವನಗಳು, ಕೆರೆಗಳು, ಮೀಡಿಯನ್ಸ್ ಗಳಲ್ಲಿರುವ ಸಸಿ,ಮರಗಳಿಗೆ ನೀರು ಅವಶ್ಯಕತೆಯಿದೆ. ಈ ಸಂಬಂಧ ಕೂಡಲೇ ಎಷ್ಟು ನೀರಿನ ಅಗತ್ಯವಿದೆ, ಎಷ್ಟು ಟ್ಯಾಂಕರ್‌ಗಳು ಬೇಕಿದೆ ಎಂಬುದನ್ನು ಪಟ್ಟಿ ಮಾಡಿ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸೂಚಿಸಿದರು. ನಗರದಲ್ಲಿ ಬೇಸಿಗೆ ಆರಂಭವಾಗಿದ್ದು, ಮರದ ಎಲೆಗಳು ಸಾಕಷ್ಟು ಬೀಳುತ್ತಿವೆ. ಎಲ್ಲೆಂದರಲ್ಲಿ ಒಣಗಿದ ಎಲೆಗಳ ರಾಶಿಯಾಗುತ್ತಿದೆ. ಈ ನಿಟ್ಟಿನಲ್ಲಿ ನಿಗದಿತ ಸ್ಥಳಗಳನ್ನು ಗುರುತಿಸಿ ಎಲೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಗರದ ಸ್ವಚ್ಛತೆ ಕಾಪಾಡಲು ಬಿಎಸ್‌ಡಬ್ಲ್ಯೂಎಂಎಲ್ ವತಿಯಿಂದ ಕ್ರಮ ಕೈಗೊಳ್ಳಲು ಸ್ವಚ್ಛಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾಂಪೋಸ್ಟ್ ಗೊಬ್ಬರ ಬಳಸಿಕೊಳ್ಳಿ: ನಗರದಲ್ಲಿ 1280 ಉದ್ಯಾನವನಗಳು ಬರಲಿದ್ದು, ಈ ಪೈಕಿ 100 ಉದ್ಯಾನಗಳಲ್ಲಿ ಎಲೆ ಗೊಬ್ಬರ ತಯಾರಿಕಾ ಘಟಕ(ಲೀವ್ಸ್ ಕಾಂಪೋಸ್ಟರ್)ಗಳನ್ನು ಸ್ಥಾಪಿಸಲಾಗುತ್ತಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳ್ಳಲಿದೆ. ಆ ಬಳಿಕ ಉದ್ಯಾನವನಗಳಲ್ಲಿ ಸಸಿ/ಮರಗಳಿಂದ ಬೀಳುವ ಎಲೆಗಳನ್ನು ಸ್ಥಳದಲ್ಲಿಯೇ ಗೊಬ್ಬರವನ್ನಾಗಿಸಿ ಅದನ್ನು ಉದ್ಯಾನವನಗಳಲ್ಲಿಯೇ ಬಳಸಿಕೊಳ್ಳುವಂತೆ ಮಾಡಲು ಸೂಚಿಸಿದರು.

ಈ ವೇಳೆ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಡಾ. ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತ ಸತೀಶ್, ಅರ್ಚನಾ, ರಮ್ಯಾ, ಕರೀಗೌಡ, ಸ್ನೇಹಲ್, ರಮೇಶ್, ದಿಗ್ವಿಜಯ್ ಬೋಡ್ಕೆ, ಗಿರೀಶ್, ಪ್ರಧಾನ ಅಭಿಯಂತರ ಪ್ರಹ್ಲಾದ್, ಮುಖ್ಯ ಅಭಿಯಂತರರು, ಅಧಿಕಾರಿಗಳು ಇದ್ದರು.

ಗೃಹಜ್ಯೋತಿ ಸಹಾಯಧನ ಎಸ್ಕಾಂಗೆ ಮುಂಗಡ ಪಾವತಿ

ಬೆಂಗಳೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆ ಗೃಹ ಜ್ಯೋತಿಯ ಸಹಾಯಧನವನ್ನು ಎಸ್ಕಾಂಗ ಳಿಗೆ ಸರಕಾರ ಮುಂಗಡವಾಗಿ ಪಾವತಿಸು ತ್ತಿದ್ದು, ಗ್ರಾಹಕರಿಂದ ಹಣ ಪಡೆಯುವ ಯಾವ ಪ್ರಸ್ತಾಪ ಮುಂದಿಲ್ಲ ಎಂದು ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ಸೋಮವಾರ ಬೆಳಕು ಭವನದಲ್ಲಿ ಆಯೋಜಿ ಸಿದ್ದ ಇಲಾಖೆಯ ಸಭೆ ಬಳಿಕ ಇಂಧನ ಸಚಿವ ಕೆ.ಜೆ. ಜಾರ್ಜ್ ವಿವರಣೆ ನೀಡಿ, ಗೃಹಜ್ಯೋತಿ ಹಣವನ್ನು ಸರಕಾರ ಮುಂಗಡವಾಗಿ ಪಾವತಿಸದಿದ್ದರೆ ಜನರಿಂದ ಪಡೆಯಲು ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗಕ್ಕೆ ಎಸ್ಕಾಂಗಳು ಮನವಿ ಮಾಡಿದೆ ಎನ್ನುವ ವಿಚಾರದ ತಪ್ಪು ಕಲ್ಪನೆಯಿಂದ ಸೃಷ್ಟಿಯಾಗಿದೆ. ಸರಕಾರಕ್ಕೆ ಅಂತಹ ಯಾವುದೇ ಉದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಗೃಹಜ್ಯೋತಿ ಯೋಜನೆ ಘೋಷಣೆಯ ಸಂದರ್ಭದಲ್ಲೇ, ಗೃಹ ಬಳಕೆದಾರರಿಗೆ 200 ಯೂನಿಟ್‌ವರೆಗೆ ಉಚಿತವಾಗಿ ಪೂರೈಸುವುದಾಗಿ ಸರಕಾರ ಹೇಳಿದ್ದು, ಸಬ್ಸಿಡಿ ಮೊತ್ತವನ್ನು ಸರಕಾರದಿಂದಲೇ ಪಾವತಿಸುವುದಾಗಿ ಹೇಳಲಾಗಿತ್ತು. ಅದರಂತೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುತ್ತಿದ್ದು, ಫೆ.2025ರ ವರೆಗಿನ ಗೃಹಜ್ಯೋತಿ ಯೋಜನೆ ಸಹಾಯಧನವನ್ನು ಮುಂಗಡವಾಗಿ ಎಲ್ಲಾ ಎಸ್ಕಾಂಗಳಿಗೆ ಪಾವತಿಸಲಾಗಿದೆ ಎಂದು ಹೇಳಿದರು.

ಬಜೆಟ್‌ಗೆ ಮುನ್ನವೇ ಸಿಎಂಗೆ ಶುಭ ಹಾರೈಸಿದ ಬಿವೈವಿ

ಬೆಂಗಳೂರು: ಸುಸ್ಥಿರ ಆರ್ಥಿಕ ಬೆಳವಣಿಗೆ, ಸಾಮಾಜಿಕ ಕಲ್ಯಾಣ ಮತ್ತು ವಿವೇಚನಾಯುಕ್ತ ಹಣಕಾಸು ನಿರ್ವಹಣೆಗೆ ಅಡಿಪಾಯ ಹಾಕುತ್ತದೆ ಎಂದು ಭಾವಿಸುತ್ತೇನೆ. ಈ ಮಹತ್ವದ ಪ್ರಯತ್ನದಲ್ಲಿ ನಿಮಗೆ ಯಶಸ್ಸು ಸಿಗಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ದಾಖಲೆಯ ಬಜೆಟ್ ಮಂಡಿಸುವ ಮುನ್ನವೇ ಹಾರೈಸಿ ಅಚ್ಚರಿ ಮೂಡಿಸಿದ್ದಾರೆ.

ಮಾರ್ಚ್ 7ರಂದು ಸಿಎಂ ಸಿದ್ದರಾಮಯ್ಯ 16ನೇ ಬಜೆಟ್ ಮಂಡಿಸಲಿರುವ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 4 ಪುಟಗಳ ಬಹಿರಂಗ ಪತ್ರ ಬರೆದಿದ್ದಾರೆ. ಪತ್ರದಲ್ಲಿ 2ನೇ ಬಾರಿಗೆ ಹಾಲು ಮತ್ತು ವಿದ್ಯುತ್ ದರ ಏರಿಕೆ ಕುರಿತು ಚರ್ಚೆ ಆರಂಭಿಸಿರುವುದು, ಮೆಟ್ರೋ ದರ ಏರಿಕೆ ಇತ್ಯಾದಿ ಪ್ರಸ್ತಾಪಿಸಿದ್ದಾರೆ. ವಿದ್ಯುತ್ ಬಿಲ್ ಭರಿಸಲಾಗದ, ಗುತ್ತಿಗೆದಾರರ ಬಾಕಿ ಪಾವತಿಸಲಾಗದ ದಾರುಣ ಸ್ಥಿತಿಗೆ ಕರ್ನಾಟಕವನ್ನು ತಂದು ನಿಲ್ಲಿಸಿದ ಅಪಕೀರ್ತಿಗೆ ತಾವು ಗುರಿಯಾಗಬಾರದು. 16ನೇ ಬಜೆಟ್ ನಲ್ಲಿ ಕರ್ನಾಟಕಕ್ಕೆ ಆರ್ಥಿಕವಾಗಿ ಜವಾಬ್ದಾರಿಯುತ, ಅಭಿವೃದ್ಧಿ ಆಧಾರಿತ ಮಾರ್ಗಸೂಚಿ ಮಂಡಿಸಲು ಒಂದು ಅವಕಾಶವಿದೆ. ತಾವು ಮಂಡಿಸಲಿರುವ ಬಜೆಟ್ ಈ ಆದ್ಯತೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಎರಡನೇ ಬಾರಿಗೆ ಹಾಲು ಮತ್ತು ವಿದ್ಯುತ್ ದರ ಏರಿಕೆಗೆ ಸರಕಾರ ಚರ್ಚೆ ಆರಂಭಿಸಿರುವುದನ್ನು ವಿರೋಧಿಸುತ್ತೇನೆ. ದರ ನಿಗದಿ ಆಯೋಗಕ್ಕೆ ರಾಜ್ಯ ಸರಕಾರ ಪತ್ರ ಬರೆಯದೇ ಇದ್ದಲ್ಲಿ ಮೆಟ್ರೋ ದರ ಏರಿಕೆ ಸಂದರ್ಭವೇ ಬರುತ್ತಿರಲಿಲ್ಲ, ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸಿ ಶಿಕ್ಷಣ ಕ್ಷೇತ್ರವನ್ನು ಸಧೃಡಗೊಳಿಸುವುದರ ಬದಲು ತಮ್ಮ ನೇತೃತ್ವದ ಸರಕಾರ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಮುಂದಾಗಿದೆ ಎಂಬ ಅಂಶವೇ ಕಳವಳಕಾರಿಯಾಗಿದೆ ಎಂದು ಪತ್ರದಲ್ಲಿ ವಿಜಯೇಂದ್ರ ಉಲ್ಲೇಖಿಸಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಎಷ್ಟು ಸಾಲ ಮಾಡಲಿದ್ದೀರಿ ಎಂದು ಜನ ಆತಂಕದಿಂದ ನೋಡುತ್ತಿದ್ದಾರೆ. ನೌಕರರಿಗೆ ಸಂಬಳ ಕೊಡಲಾಗದ, ವಿದ್ಯುತ್ ಬಿಲ್ ಭರಿಸಲಾಗದ, ಗುತ್ತಿಗೆದಾರರ ಬಾಕಿ ಪಾವತಿಸಲಾಗದ ದಾರುಣ ಸ್ಥಿತಿಗೆ ಕರ್ನಾಟಕವನ್ನು ತಂದು ನಿಲ್ಲಿಸಿದ ಅಪಕೀರ್ತಿಗೆ ತಾವು ಗುರಿಯಾಗಬಾರದು. ಕರ್ನಾಟಕಕ್ಕೆ ಆರ್ಥಿಕವಾಗಿ ಜವಾಬ್ದಾರಿಯುತ, ಅಭಿವೃದ್ಧಿ ಆಧಾರಿತ ಮಾರ್ಗಸೂಚಿ ಮಂಡಿಸಲು ಒಂದು ಅವಕಾಶವಿದೆ ತಾವು ಮಂಡಿಸಲಿರುವ ಬಜೆಟ್ ಈ ಆದ್ಯತೆಗಳನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

ಸಾರ್ವಜನಿಕ ಹಣಕಾಸನ್ನು ಸಂಕಷ್ಟಕ್ಕೆ ಸಿಲುಕಸುವ ಅಲ್ಪಾವಧಿಯ ಕ್ರಮಗಳಿಗಿಂತ ಕೌಶಲ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ಸುಧಾರಿತ ಆರೋಗ್ಯ, ಮೂಲಸೌಕರ್ಯದಂತಹ ದೀರ್ಘಕಾಲೀನ ಕಲ್ಯಾಣ ಕ್ರಮಗಳ ಬಗ್ಗೆ ಬಜೆಟ್ ಗಮನ ಹರಿಸಬೇಕು. ಹಣಕಾಸಿನ ಸೋರಿಕೆ ತಡೆಗಟ್ಟಲು ಮತ್ತು ಸರಕಾರಿ ವೆಚ್ಚ ನಿಜವಾಗಿಯೂ ಜನರಿಗೆ ನೀಡುತ್ತಿದೇ ಎಂದು ಖಚಿತಪಡಿಸಿಕೋಲು ಪಾರದರ್ಶಕ ನಿಧಿ ಮತ್ತು ಪರಿಣಾಮಕಾರಿ ಕಾರ್ಯವಿಧಾನಗಳು ಜಾರಿಯಲ್ಲಿರಬೇಕು ಎಂದು ಹೇಳಿದ್ದಾರೆ.

ವಿಜಯೇಂದ್ರ ಹೇಳಿದ್ದೇನು?

ಆರ್ಥಿಕ ದೂರದೃಷ್ಟಿ ಇಲ್ಲದ, ಬದ್ಧತೆಯಿಲ್ಲದ ಮತಬ್ಯಾಂಕ್ ಆಧಾರಿತ ಯೋಜನೆಗಳು ಸೊರಗುತ್ತಿದೆ, ಅಭಿವೃದ್ಧಿ ಎನ್ನುವುದು ಗಗನಕುಸುಮವಾಗಿದ್ದು, ಬೆಲೆ ಏರಿಕೆಯ ಬಿಸಿ ಜನಸಾಮಾನ್ಯರನ್ನು ಹೈರಾಣಾಗಿಸುತ್ತಿದೆ. ಇದರ ನಡುವೆ ಪಂಚ ಗ್ಯಾರಂಟಿಯ ಯೋಜನೆಗಳು ತೋರಿಕೆಗೆ, ಹೇಳಿಕೆಗೆ ಮಾತ್ರ ಎಂಬಂತೆ ಜನರಿಗೆ ತಲುಪುವಲ್ಲಿ ಬಹುತೇಕ ವಿಫಲವಾಗಿವೆ. ಕೇವಲ ಎರಡು ವರ್ಷದಲ್ಲಿ ಸುಮಾರು 2 ಲಕ್ಷ ಕೋಟಿ ರು. ಸಾಲದ ಹೊರೆಯನ್ನು ಜನತೆಗೆ ನೀಡಿ, ಈ ಬಾರಿಯ ಬಜೆಟ್‌ನಲ್ಲಿ ಪುನಃ ಎಷ್ಟು ಸಾಲ ಮಾಡಲಿದ್ದೀರಿ ಎಂಬ ಆತಂಕದಲ್ಲಿ ರಾಜ್ಯದ ಜನರು ತೆರೆದ ಕಣ್ಣುಗಳಿಂದ ತಾವು ಮಂಡಿಸಲಿರುವ ಬಜೆಟ್ ಅನ್ನು ಎದುರು ನೋಡುತ್ತಿದ್ದಾರೆ. ಹೀಗೆ ಸರಕಾರದ ಕೆಲ ಸಮಸ್ಯೆಗಳನ್ನು ಸರಿಪಡಿಸಲು ಒತ್ತಾಯಿಸಿ ಈ ಮಹತ್ವದ ಬಜೆಟ್‌ನಲ್ಲಿ ತಮಗೆ ಯಶಸ್ಸು ಸಿಗಲಿ ಎಂದು ವಿಜಯೇಂದ್ರ ಹೇಳಿದ್ದಾರೆ.

'ಶರಣ ದರ್ಶನ' ಕೇಂದ್ರ ಸ್ಥಾಪನೆ ಕೋರಿ ಸಿಎಂಗೆ ಲಿಂಗಾಯತ ಸ್ವಾಮೀಜಿಗಳ ಮನವಿ

ಬಸವ ತತ್ವ ಪ್ರಚಾರಕ್ಕೆ 500 ಕೋಟಿಗೆ ಮನವಿ

ಬೆಂಗಳೂರು: ಬೆಂಗಳೂರಿನಲ್ಲಿ 25 ಎಕರೆ ಪ್ರದೇಶದಲ್ಲಿ ಅಕ್ಷರಧಾಮದ ಮಾದರಿಯಲ್ಲಿ 'ಶರಣ ದರ್ಶನ' ಕೇಂದ್ರ ಸ್ಥಾಪಿಸುವಂತೆ ಕೋರಿ ಲಿಂಗಾಯತ ಸ್ವಾಮೀಜಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸೋಮವಾರ ಮನವಿ ಸಲ್ಲಿಸಿದರು.

ಕಾವೇರಿ ನಿವಾಸದಲ್ಲಿ ಸಿಎಂ ಅವರನ್ನು ಭೇಟಿಯಾದ ಲಿಂಗಾಯತ ಸ್ವಾಮೀಜಿಗಳು, ಸಚಿವರು, ಶಾಸಕರು, ಸಮಾಜದ ಮುಖಂಡರು ಹಲವು ಬೇಡಿಕೆಗಳನ್ನು ಸಲ್ಲಿಸಿದರು. 25 ಎಕರೆ ಪ್ರದೇಶದಲ್ಲಿ ಬೃಹತ್ 'ಶರಣ ದರ್ಶನ' ಕೇಂದ್ರ ಸ್ಥಾಪಿಸಬೇಕು. ಈ ಕೇಂದ್ರದಲ್ಲಿ ಉದ್ಯಾನವನ, ಗ್ರಂಥಾಲಯ, ಅತಿಥಿ ಕೇಂದ್ರ, ದಾಸೋಹ ಭವನ, ಸಭಾಂಗಣ ನಿರ್ಮಿಸಿ ಪ್ರವಾಸಿ ತಾಣವನ್ನಾಗಿಸಬೇಕು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಬಸವಣ್ಣನ ಬೃಹತ್ ಪ್ರತಿಮೆ ಪ್ರತಿಷ್ಠಾಪಿಸಬೇಕು ಎಂಬುದನ್ನು ಬಾಲ್ಕಿ ಮಠದ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಎಲ್ಲರ ಪರವಾಗಿ ಮುಖ್ಯಮಂತ್ರಿಯವರ ಗಮನಕ್ಕೆ ತಂದರು.

ಸಿಎಂ ಭೇಟಿಗೂ ಮುನ್ನ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರ ರೇಸ್ ಕೋರ್ಸ್ ರಸ್ತೆಯ ಅಧಿಕೃತ ನಿವಾಸದಲ್ಲಿ ಬೆಳಗ್ಗೆ ಮಠಾಧೀಶರು, ಸಮುದಾಯದ ಸಚಿವರು, ಶಾಸಕರು ಸಭೆ ನಡೆಸಿದರು. ರಾಜ್ಯದೆಲ್ಲೆಡೆಯಿಂದ ಆಗಮಿಸಿದ್ದ ಸಮುದಾಯದ ಸ್ವಾಮೀಜಿಗಳು, ಶಾಸಕರು, ಮಾಜಿ ಶಾಸಕರು ಹಾಗೂ ಸಂಘ ಸಂಸ್ಥೆಗಳ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡು ಚರ್ಚಿಸಿದರು.

100 ಕೋಟಿ ರು. ನೀಡಬೇಕು: ವಿಶ್ವಗುರು ಬಸವೇಶ್ವರರ ವಿಚಾರಧಾರೆಯನ್ನು ಪರಿಣಾಮಕಾರಿಯಾಗಿ ಜನಮಾನಸಕ್ಕೆ ತಲುಪಿಸುವ ನಿಟ್ಟಿನಲ್ಲಿ ಈ ವರ್ಷದ ಬಜೆಟ್‌ನಲ್ಲಿ 100 ಕೋಟಿ ರು. ನೀಡಬೇಕು. ಇದರೊಂದಿಗೆ ಮುಂದಿನ ನಾಲ್ಕು ವರ್ಷದ ಬಜೆಟ್‌ನಲ್ಲಿ ತಲಾ 100 ಕೋಟಿಯಂತೆ ಒಟ್ಟು 500 ಕೋಟಿ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಜಾತಿ ವ್ಯವಸ್ಥೆ ಬಹಳ ಗಟ್ಟಿಯಾಗಿ ಬೇರೂರಿದೆ. ಇದಕ್ಕೆ ಪಟ್ಟಭದ್ರರು ನೀರು, ಗೊಬ್ಬರ ಹಾಕುತ್ತಿದ್ದಾರೆ. ಜಾತ್ಯತೀತ, ಸಮಸಮಾಜ ನಿರ್ಮಾಣ ಮಾಡಲು ಬಸವಣ್ಣನವರ ಹೋರಾಟ ಪೂರಕ. ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ. ಜಾತಿ ಜಡತ್ವ, ಆರ್ಥಿಕ ಜಡತ್ವ ಇರುವ ಸಮಾಜದಲ್ಲಿ ಚಲನೆ ಸಾಧ್ಯವಿಲ್ಲ. ಬಸವಣ್ಣನವರ ವಿಚಾರಗಳೇ ಅಂಬೇಡ್ಕರ್ ವಿಚಾರಗಳಾಗಿದ್ದು, ಇವೆಲ್ಲವೂ ಸಂವಿಧಾನದಲ್ಲಿ ಅಡಕವಾಗಿವೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ವಚನ ವಿಶ್ವವಿದ್ಯಾಲಯ ಆರಂಭಿಸಿ

ಎಲ್ಲ ಶರಣರ ಜನ್ಮಸ್ಥಳ, ಐಕ್ಯಸ್ಥಳ ಹಾಗೂ ಇತರೆ ಸ್ಮಾರಕಗಳ ರಕ್ಷಣೆಗಾಗಿ 'ಪ್ರತ್ಯೇಕ ಶರಣ ಸ್ಮಾರಕ ರಕ್ಷಣೆ ಪ್ರಾಧಿಕಾರ' ರಚಿಸಬೇಕು. ಬಸವಕಲ್ಯಾಣದಲ್ಲಿ ನಿರ್ಮಿಸುತ್ತಿರುವ ಅನುಭವ ಮಂಟಪದ ಸದ್ಬಳಕೆಯಾಗಲು ಅಲ್ಲಿಯೇ 'ವಚನ ವಿಶ್ವವಿದ್ಯಾಲಯ' ಮತ್ತು ಸಂಶೋಧನ ಕೇಂದ್ರ ಆರಂಭಿಸಬೇಕು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 'ಬಸವಭವನ' ನಿರ್ಮಿಸಿ, ಅಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಆಗ್ರಹಿಸಿದರು. ವಚನ ಸಾಹಿತ್ಯ ಸಂಗ್ರಹ, ಪ್ರಕಟಣೆ, ಮರು ಪ್ರಕಟಣೆ, ಹಸ್ತಪ್ರತಿಗಳ ದಾಖಲೀಕರಣ, ಶರಣ ಕ್ಷೇತ್ರಗಳ ಅಧ್ಯಯನ ಮತ್ತು ದಾಖಲೀಕರಣ, ವಿಚಾರ ಸಂಕಿರಣ, ಸಮ್ಮೇಳನಗಳು, ವಚನಾಧಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಚಟುವಟಿಕೆಗಳನ್ನು ನಡೆಸಲು ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿಯೇ ಇರುವ ಸಂಸ್ಥೆಗಳಿಗೆ ಅನುದಾನ ಒದಗಿಸಬೇಕು ಎಂದರು.

ಇನ್ಮುಂದೆ ಬೆಂಗಳೂರು-ಮಂಗಳೂರು ಪ್ರಯಾಣದ ಅವಧಿ ಬರೀ 7-8 ಗಂಟೆ

ಬೆಂಗಳೂರು: ಬೆಂಗಳೂರು-ಮಂಗಳೂರು ನಡುವೆ ಹೊಸ ಎಕ್ಸ್‌ಪ್ರೆಸ್ ವೇ ಯೋಜನೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಘೋಷಿಸಿದ್ದು, 6 ಲೇನ್‌ಗಳೊಂದಿಗೆ 335 ಕಿ.ಮೀ ವ್ಯಾಪ್ತಿಯನ್ನು ಹೊಂದಿರಲಿದೆ.

ಈ ಯೋಜನೆ ಎನ್‌ಎಚ್‌ಎಐ-ಲೋಕೋಪಯೋಗಿ ಇಲಾಖೆಯಿಂದ ನಡೆಯಲಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಬೆಂಗಳೂರು ಮತ್ತು ಮಂಗಳೂರನ್ನು ಹಾಸನ ಮೂಲಕ ಸಂಪರ್ಕಿಸುವ ಹೊಸ ಎಕ್ಸ್‌ಪ್ರೆಸ್ ವೇಯನ್ನು ನಿರ್ಮಿಸುತ್ತಿದೆ. ಈ ಎಕ್ಸ್‌ಪ್ರೆಸ್ ವೇ ಪೂರ್ಣಗೊಂಡ ನಂತರ ಎರಡೂ ನಗರಗಳ ನಡುವಿನ ಪ್ರಯಾಣದ ಸಮಯವನ್ನು 7 ರಿಂದ 8 ಗಂಟೆಯಾಗುವ ನಿರೀಕ್ಷೆಯಿದೆ. ಬೆಂಗಳೂರು ಮತ್ತು ಮಂಗಳೂರು ನಡುವಿನ ಸಂಪರ್ಕ ಸುಧಾರಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿ ನಿರ್ಮಾಣ ಕಾಮಗಾರಿ 2028 ರಲ್ಲಿ ಪ್ರಾರಂಭವಾಗಲಿವೆ.

ಸಂಪರ್ಕವನ್ನು ಹೆಚ್ಚಿಸಲು ಹೊಸ ಎಕ್ಸ್‌ಪ್ರೆಸ್ ವೇ: ಸುಮಾರು 335 ಕಿ.ಮೀ ಉದ್ದದ ಪ್ರಸ್ತಾವಿತ ಎಕ್ಸ್‌ಪ್ರೆಸ್ ವೇ, ಬೆಂಗಳೂರು ಮತ್ತು ಮಂಗಳೂರು ನಡುವಿನ ಪ್ರಯಾಣದ ಸಮಯವನ್ನು 7-8 ಗಂಟೆಯಾಗುವ ನಿರೀಕ್ಷೆಯಿದೆ. ಇದು ರಾಜ್ಯದ ಸಾರಿಗೆಯಲ್ಲಿ ಒಂದು ಪ್ರಮುಖ ಬದಲಾವಣೆಯಾಗಿರಲಿದೆ. ಪ್ರಸ್ತುತ, ಈ ಎರಡು ನಗರಗಳ ನಡುವಿನ ಪ್ರಯಾಣವು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದೆ. ವಿಶೇಷವಾಗಿ ಮಳೆಗಾಲದಲ್ಲಿ ಅಸ್ತಿತ್ವದಲ್ಲಿರುವ ಮಾರ್ಗವು ಭೂಕುಸಿತಗಳು ಮತ್ತು ಇತರ ಅಡಚಣೆಗಳಿಗೆ ಗುರಿಯಾಗುತ್ತದೆ.

ಯೋಜನೆಯ ಸಮಯ ಮತ್ತು ಅಭಿವೃದ್ಧಿ ಯೋಜನೆಗಳು: ಜುಲೈನಲ್ಲಿ ವಿವರವಾದ ಯೋಜನಾ ವರದಿ (ಡಿಪಿಆರ್) ಗಾಗಿ ಸಲಹೆಗಾರರನ್ನು ಆಯ್ಕೆ ಮಾಡಲು ಸಚಿವಾಲಯವು ಬಿಡ್‌ಗಳನ್ನು ಕೋರಿತ್ತು. ನವೆಂಬರ್ ವೇಳೆಗೆ, 9 ಸಂಸ್ಥೆಗಳು ತಮ್ಮ ತಾಂತ್ರಿಕ ಬಿಡ್‌ಗಳನ್ನು ಸಲ್ಲಿಸಿದ್ದವು. ಸರಕಾರವು ಮುಂದಿನ ವರ್ಷ ಒಪ್ಪಂದವನ್ನು ನೀಡಲು ಯೋಜಿಸಿದೆ, ಆಯ್ಕೆ ಮಾಡಿದ ಸಂಸ್ಥೆಗೆ ಡಿಪಿಆರ್ ಪೂರ್ಣಗೊಳಿಸಲು 540 ದಿನಗಳನ್ನು ನೀಡಲಾಗಿದೆ. ಎಕ್ಸ್‌ಪ್ರೆಸ್ ವೇ ನಿರ್ಮಾಣವು 2028 ರ ವೇಳೆಗೆ ಪ್ರಾರಂಭವಾಗಲಿದೆ. ಈ ಯೋಜನೆಯು ಕರ್ನಾಟಕದ ಲೋಕೋಪಯೋಗಿ ಇಲಾಖೆ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಡುವಿನ ಸಹಯೋಗದ ಪ್ರಯತ್ನವಾಗಿದ್ದು, ಜೋಡಣೆ ಮತ್ತು ಭೂ ಸ್ವಾಧೀನದ ಮೇಲೆ ಕೇಂದ್ರೀಕರಿಸುತ್ತದೆ.



ನಾಲ್ಕರಿಂದ ಆರು ಪಥ

ಎಕ್ಸ್‌ಪ್ರೆಸ್ ವೇ ನಾಲ್ಕರಿಂದ ಆರು ಪಥಗಳನ್ನು ಹೊಂದುವ ನಿರೀಕ್ಷೆಯಿದ್ದು, ಹಾಸನದ ಮೂಲಕ ಹಾದುಹೋಗಲಿದೆ. ಈ ಪ್ರದೇಶದ ಸಾರಿಗೆ ಮೂಲಸೌಕರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಸುಧಾರಿತ ಮಾರ್ಗವು ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಪ್ರಯಾಣದ ಸಮಯವನ್ನು ಕಡಿಮೆ ಮಾಡುತ್ತದೆ ಮತ್ತು ಕರ್ನಾಟಕದ ಪ್ರಮುಖ ನಗರಗಳ ನಡುವೆ ಸುರಕ್ಷಿತ, ಹೆಚ್ಚು ಪರಿಣಾಮಕಾರಿ ಸಂಪರ್ಕವನ್ನು ಒದಗಿಸುತ್ತದೆ. ಪೂರ್ಣಗೊಂಡ ನಂತರ, ಈ ಹೈ-ಸ್ಪೀಡ್ ಕಾರಿಡಾರ್ ಪ್ರಯಾಣದ ಅನುಭವವನ್ನು ಪರಿವರ್ತಿಸಲು, ರಾಜ್ಯಾದ್ಯಂತ ಆರ್ಥಿಕ ಬೆಳವಣಿಗೆ ಮತ್ತು ಸಂಪರ್ಕವನ್ನು ಹೆಚ್ಚಿಸಲು ಸಜ್ಜಾಗಿದೆ.

ಚಿತ್ತವಿಹಾರ

ವಿಷಕಂಠನ ಸಂದೇಶ

ಸಮುದ್ರಮಥನವು ಪುರಾಣದ ಕತೆಯಾದರೂ ಅದಕ್ಕೂ ನಮ್ಮ ಜೀವನಕ್ಕೂ ಇರುವ ಸಾಮ್ಯ ಅಚ್ಚರಿ ಹುಟ್ಟಿಸುತ್ತದೆ. ಮಂದಾರ ಪರ್ವತವನ್ನು ದೇವತೆಗಳು ಮತ್ತು ಅಸುರರು ಕಡೆದರಲ್ಲವೇ? ಅದನ್ನು ಕಡೆಯಲು ವಾಸುಕಿ ಎಂಬ ಸರ್ಪವನ್ನು ಹಗ್ಗವಾಗಿ ಬಳಸಿದರಂತೆ. ಈ ಮಂದಾರ ಪರ್ವತವೇ ನಾವಿರುವ ಜಗತ್ತು, ವಾಸುಕಿಯೇ ನಮ್ಮ ಮನಸ್ಸು. ಮನಸ್ಸೆಂಬ ಕಡಗೋಲಿನಿಂದ ಬದುಕೆಂಬ ಮಂದಾರ ಪರ್ವತವನ್ನು ಕಡೆಯುವುದೇ ನಮ್ಮ ಬದುಕಿನ ಹೋರಾಟ. ಇಂತಹ ಮಥನವು ಪ್ರತಿ ದಿನ ನಡೆಯುತ್ತಿದೆ. ಮಜ್ಜಿಗೆಯನ್ನು ಕಡೆದಾಗ ಬೆಣ್ಣೆ ಮಾತ್ರ ಬರುತ್ತದೆ, ಆದರೆ ಮನ ಮಂಥನದಿಂದ ಬರೀ ಬೆಣ್ಣೆಯಂತ ಭಾವಗಳೇ ಬರುತ್ತವೆ ಎನ್ನಲು ಸಾಧ್ಯವೇ ಇಲ್ಲ! ಅಷ್ಟು ಬಗೆಯ ಮನದ ಉದ್ಗಾರ, ನಿಟ್ಟುಸಿರು, ಹೊಯ್ದಾಟ, ಹಾರಾಟ ಆ ಮಂಥನದಲ್ಲಿ ಹುಟ್ಟಿ ಬರುವವು. ಅವುಗಳನ್ನು ಹದ್ದು ಬಸ್ತಿನಲ್ಲಿ ಇಟ್ಟುಕೊಳ್ಳುವುದೇ ನಮಗೆ ಸವಾಲು.

ಸುರ ಅಸುರರು ಅಮೃತಕ್ಕಾಗಿ ಸಮುದ್ರ ಮಥನ ಮಾಡಲು ಪ್ರಾರಂಭಿಸಿದರೂ ಬಹಳ ಕಾಲದವರೆಗೂ ಏನೂ ಫಲ ಕಾಣಲಿಲ್ಲ. ನಮ್ಮ ಪ್ರಯತ್ನಗಳು ಎಷ್ಟಿದ್ದರೂ ಅದು ಫಲ ಕೊಡುವ ಕಾಲ ಮೊದಲೇ ನಿರ್ಣಯಿಸಿದಂತೆ ಬರುವುದು. ಬಹು ಸಮಯ ಸಮುದ್ರವನ್ನು ಕಡೆದ ನಂತರ ಫಲಗಳು ಬರಲು ಆರಂಭಿಸಿದವು. ಮೊದಲು ಕಾಮಧೇನು ಎಂಬ ಗೋವು, ಕಲ್ಪವೃಕ್ಷ, ಅಶ್ವ, ಐರಾವತವೆಂಬ ಬಿಳಿಯ ಆನೆ, ಕೌಸ್ತುಭ ಎಂಬ ದಿವ್ಯವಾದ ರತ್ನ, ಅಪ್ಸರೆಯರು, ಚಂದ್ರ, ಕೊನೆಯಲ್ಲಿ ಮಹಾಲಕ್ಷ್ಮಿ ಹೀಗೆ ದೊರೆತವು.

ಸಾಲು ಸಾಲು ಯಶಸ್ಸು ಕಂಡ ಮೇಲೆ ಬಹು ಕಠಿಣ ಫಲವನ್ನು ಮಥನದಿಂದ ಪಡೆದರು. ಅದೇ ಹಾಲಾಹಲ ಎಂಬ ವಿಷ. ಹಾಲಾಹಲದ ಪ್ರಭಾವದಿಂದ ವಾತಾವರಣವು ವಿಷಮಯವಾಯಿತು. ದೇವತೆಗಳ ಗುರು ಬೃಹಸ್ಪತಿಗೆ ಈ ವಿಷದಿಂದ ಪಾರಾಗಲು ಪರಶಿವನ ಮೊರೆ ಹೋಗುವುದೇ ಸರಿ ಎನಿಸಿತು. ಎಲ್ಲರೂ ಶಿವನನ್ನು ಸ್ತುತಿಸಿದರು. ಶಿವನು ವೈರಾಗ್ಯದ ಮೂರ್ತಿರೂಪ. ತೊಗಲಿನ ಹೊದಿಕೆ, ಕಪಾಲ ಪಾತ್ರೆ, ಚಿತಾಭಸ್ಮ, ಸ್ಮಶಾನವಾಸ. ಆದರೆ ಭಕ್ತರಿಗೆ ಎಲ್ಲವನ್ನೂ ದಯಪಾಲಿಸುವವನು. ಇಂತಹ ಮಹಾತ್ಮನಾದ ತ್ರಿನೇತ್ರನು, ದೇವ ಮತ್ತು ಅಸುರರ ಪ್ರಾರ್ಥನೆಗೆ ಒಲಿದು ಹಾಲಾಹಲವನ್ನು ಕುಡಿದುಬಿಟ್ಟನು. ಆ ವಿಷವನ್ನು ತನ್ನ ಗಂಟಲಿನಲ್ಲಿ ಇರಿಸಿಕೊಂಡು ಶಿವನು 'ನೀಲಕಂಠ' 'ವಿಷಕಂಠ, 'ಶ್ರೀಕಂಠ' ನಾದನು. ಉದಾರ ಮನಸ್ಸಿನವರಿಗೆ ಲೋಕವೆಲ್ಲ ಕುಟುಂಬ ಎಂಬ ತತ್ವವನ್ನು ಶಿವನ ಈ ಲೋಕಕಲ್ಯಾಣದ ಕಾರ್ಯವು ಎತ್ತಿಹಿಡಿಯುತ್ತದೆ. ನಾಗಾಭರಣನು ಹಾಲಾಹಲವನ್ನು ನುಂಗಿದಂತೆ, ನಾವು ಬದುಕಿನ ಕಷ್ಟಗಳನ್ನು ಸಹಿಸಿ, ಬಾಳಿನ ನೌಕೆಯನ್ನು ದಡ ಸೇರಿಸಬೇಕು. ಒಳಗೆ ಬೇಗುದಿಯಿದ್ದರೂ ಹೊರಗೆ ಸಮಾಧಾನದ ಮುಖವನ್ನು ಧರಿಸಿ ಬದುಕಿನ ಹೋರಾಟವನ್ನು ಗೆಲ್ಲಬೇಕು. ಇದೇ ನೀಲಕಂಠನಾದ ಈಶ್ವರನು ನಮಗೆ ಹೇಳುವ ಶಾಶ್ವತ ಸತ್ಯ.

• ವಿದ್ಯಾಶಂಕರ ಶರ್ಮ

ಹನಿಮಳೆ

ದುಬಾರಿ ಕಟ್

ಅಬ್ಬಾ ಅದೆಷ್ಟು ದುಡ್ಡು
ಅವಳ ಹೇರ್ ಕಟ್ಟಿಗೆ
ಅಷ್ಟೇ ದರದಲ್ಲಿ
ಅಪ್ಪ ಮಗ ಒಟ್ಟಿಗೆ
ಕ್ಷೌರ ಮಾಡಿಸಿಕೊಳ್ಳಬಹುದು
ಒಂದು ವರ್ಷದ ಮಟ್ಟಿಗೆ!

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ
ಮಠದ ಹತ್ತಿರ, ಬಿಇಎಂಎಲ್
ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098

ಇ-ಮೇಲ್
vishwavanimagazine@gmail.com

ನಮ್ಮ ನಾಡಿನಲ್ಲಿ ಪುರಾತನ ಕಾಲದಿಂದಲೂ ಹಲವು ಕಡೆ ಶಿವದೇಗುಲಗಳನ್ನು ನಿರ್ಮಿಸಲಾಗಿದೆ. ಸಣ್ಣ ಸಣ್ಣ ಊರುಗಳಲ್ಲೂ ಶಿವ ದೇಗುಲವಿರುವುದು ವಿಶೇಷ. ಅಲ್ಲೆಲ್ಲಾ ಶಿವರಾತ್ರಿಯಂದು ಪೂಜೆ ನಡೆಯುತ್ತದೆ.

ಎಲ್ಲೆಲ್ಲೂ ಶಿವ!

ನಾಳೆ ಮಹಾ ಶಿವರಾತ್ರಿ

• ಶ್ರೀನಿವಾಸ ಮೂರ್ತಿ ಎನ್. ಎಸ್.

ಕರ್ನಾಟಕದ ವಾಸ್ತುಶಿಲ್ಪದ ಕೊಡುಗೆಯಲ್ಲಿ ಶೈವ ದೇವಾಲಯಗಳು ಗಣನೀಯವಾಗಿವೆ. ಶಿವನನ್ನು ಲಿಂಗ ರೂಪದಲ್ಲಿ ಆರಾಧಿಸುವುದೇ ಹೆಚ್ಚು. ಶಿವನನ್ನು ಮೂರ್ತಿ ರೂಪದಲ್ಲಿ ಆರಾಧನೆ ನಮ್ಮಲ್ಲಿ ಕಾಣಸಿಗದಿದ್ದರೂ ಶಿವನ ಪತ್ನಿ ಸಮೇತ ಮತ್ತು ಅವನ ವಿವಿಧ ರೂಪದಲ್ಲಿ ಆರಾಧಿಸುವ ದೇವಾಲಯಗಳು ಇವೆ.

ಲಕ್ಕೈ ್ಮೇಶ್ವರ ಸೋಮೇಶ್ವರ ದೇವಾಲಯ



ಪುರದ ಸೋಮೇಶ್ವರ.

ಈ ದೇವಾಲಯವನ್ನು ಆದಯ್ಯನೆಂಬ ಶೈವ ಸೋಮೇಶ್ವರನನ್ನು ಸ್ಥಾಪಿಸಿದ ಉಲ್ಲೇಖವನ್ನು ಹರಿಹರ ಕವಿಯ ರಗಳೆಯಲ್ಲಿ ನೋಡಬಹುದು. ರಾಘವಾಂಕ ಸೇರಿದಂತೆ ಹಲವು ಕವಿಗಳಲ್ಲಿ ಈ ದೇವಾಲಯದ ಉಲ್ಲೇಖ ನೋಡಬಹುದು. ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ ಹಾಗು ಮುಖಮಂಟಪ ಹೊಂದಿದ್ದು ಗರ್ಭಗುಡಿಯಲ್ಲಿ ನಂದಿಯ ಮೇಲೆ ಕುಳಿತಿರುವ ಪಾರ್ವತಿ ಸಮೇತನಾದ ಶಿವ ಇರುವುದು ವಿಶೇಶ. ನಾಲ್ಕು ಕೈಗಳಿದ್ದು ಡಮರು ಹಾಗು ತ್ರಿಶೂಲ ಇದ್ದು ಪಾರ್ವತಿಯ ಹಿಂದೆ ಇರುವಂತಿದೆ. ದೇವಾಲಯದ ಆವರಣದಲ್ಲಿ ಹಲವು ಚಿಕ್ಕ ಚಿಕ್ಕ ದೇವಾಲಯಗಳಿದ್ದು ಶಿವಲಿಂಗಗಳಿವೆ. ಹಿಂಭಾಗದಲ್ಲಿ 11 ನೇ ಶತಮಾನದಲ್ಲಿ ನಿರ್ಮಾಣವಾದ ಸುಂದರ ಕಲ್ಯಾಣಿ ಇದೆ. ಗೌರಿ ಎಂಬವಳು ಕಟ್ಟಿಸಿದ ಈ ಕಲ್ಯಾಣಿ ಸುಮಾರು 100 ಅಡಿ ಆಳದಲ್ಲಿದೆ.

ಗೌರಿಪುರ ಗೌರಿಶಂಕರ ದೇವಾಲಯ

ಶಿವನನ್ನು ಪತ್ನಿಯ ಸಮೇಪ ಆರಾಧಿಸುವ ದೇವಾಲಯಗಳ್ಲಲ್ಲಿ ಚಿತ್ರದುರ್ಗ ಜಿಲ್ಲೆಯ ಪರಶುರಾಮಪುರದ ಬಳಿ ಇರುವ ಗೌರಿಶಂಕರ ದೇವಾಲಯ ಪ್ರಸಿದ್ಧ. ಸ್ಥಳ ಪುರಾಣದಂತೆ ಇಲ್ಲಿ ಪಾಂಡವರು ಇಲ್ಲಿ ಅಜ್ಞಾತವಾಸದ ಸಂಧರ್ಭದಲ್ಲಿ ಗಜಗೌರಿ ವ್ರತ ಆಚರಿಸಿದ್ದರಿಂದ ಈ ಸ್ಥಳಕ್ಕೆ ಗೌರಿಪುರದ ಎಂಬ ಹೆಸರು ಬಂದಿತು; ನಂತರ ಇಲ್ಲಿ ಗೌರಿಶಂಕರ ದೇವಲಯ ನಿರ್ಮಾಣವಾಯಿತು. ಸುಮಾರು 16 ನೇ ಶತಮಾನದಲ್ಲಿ ನಿರ್ಮಾಣವಾದ ಈ ದೇವಾಲಯ ಅತ್ಯಂತ ಸರಳವಾಗಿದ್ದು ಗರ್ಭಗುಡಿ, ಸುಖನಾಸಿ, ನವರಂಗ ಹಾಗು ಮುಖಮಂಟಪ ಹೊಂದಿದೆ. ಗರ್ಭಗುಡಿಯಲ್ಲಿ ಸುಮಾರು 5 ಅಡಿ ಎತ್ತರದ ಸುಂದರ ಗೌರಿ ಶಂಕರ ಮೂರ್ತಿ ಇದೆ. ಪಾರ್ವತಿಯನ್ನು ಬಳಸಿ ಕುಳಿತಿರುವಂತೆ ಇರುವ ಈ ಶಿಲ್ಪವಿದೆ. ಶಿವ ಚತುರ್ಭುಜನಾಗಿದ್ದು ಮೇಲಿನ ಕೈನಲ್ಲಿ ಕೊಡಲಿ, ಚಿಗರೆ ಇದ್ದು ಕೆಳಭಾಗದ ಬಲಗೈ ಅಭಯ ಹಸ್ತ ಹಿಡಿದಂತೆ ಹಾಗು ಇನ್ನೊಂದು ಕೈನಲ್ಲಿ ಪಾರ್ವತಿಯನ್ನ ಬಳಸಿರುವಂತೆ ಇದೆ. ಇಲ್ಲಿನ ಗೌರಿ ಶಂಕರ ಮೂರ್ತಿ ಕರ್ನಾಟಕದಲ್ಲಿ ದೊರೆತ ಅಪುರೂಪದ ಶಿಲ್ಪವಾಗಿದ್ದು ಶಿವ ಪತ್ನಿಯ ಸಮೇತ ಕಾಣುವ ದೇವಾಲಯಗಳಲ್ಲಿಯೇ ವಿಶೇಷಶವಾದುದು.

ಪುರದ ಸೋಮೇಶ್ವರ ದೇವಾಲಯ

ಸಾಂತರಸರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯ ಗರ್ಭಗುಡಿ, ಸುಖನಾಸಿ ಹಾಗೂ ನವರಂಗ ಹೊಂದಿದ್ದು ಗರ್ಭಗುಡಿಯಲ್ಲಿ ಶಿವಲಿಂದ ಬದಲಾಗಿ ನಂದಿಯ ಮೇಲೆ ಇರುವ ಸೊಮೇಶ್ವರನ ಶಿಲ್ಪ ಇರುವುದು ವಿಷೇಶ. ಚತುರ್ಭುಜನಾದ ಶಿವ ಇಲ್ಲಿ ಡಮರು, ಕಪಾಲ, ತ್ರಿಶೂಲ ಹಾಗೂ ಅಭಯಹಸ್ತನಾಗಿದ್ದು ಗಮನ ಸೆಳೆಯುತ್ತದೆ. ಶಿವನು ಧರಿಸಿದ ನಾಗಕುಂಡಲ ಗಮನ ಸೆಳೆಯುತ್ತದೆ. ನವರಂಗದಲ್ಲಿ ತಿರುಗಣೆ ಮಾದರಿಯ ಕಂಭಗಳಿದ್ದು ಸಪ್ತಮಾತೃಕೆಯರು, ವಿಷ್ಣು, ಚಾಮುಂಡೇಶ್ವರಿ ಹಾಗೂ ಉಮಾಮಹೇಶ್ವರ ಶಿಲ್ಪವಿದೆ. ಸೊರಬದಿಂದ ಸುಮಾರು 12 ಕಿ ಮೀ ದೂರದಲ್ಲಿದೆ.

ಕನವಳ್ಳಿ ಪರಮೇಶ್ವರ ದೇವಾಲಯ

ಸಾಕಷ್ಟು ನವೀಕರಣಗೊಂಡಿರುವ ಹಾವೇರಿ ಜಿಲ್ಲೆಯ ಕನವಳ್ಳಿಯ ಈ ದೇವಾಲಯದಲ್ಲಿ ಪುರಾತನ ಸುಮಾರು 9 ನೇ ಶತಮಾನದ ರಾಷ್ಟ್ರಕೂಟರ ಕಾಲದ ನಟರಾಜನ ಮೂರ್ತಿ ಇದೆ. ಸ್ಥಳೀಯವಾಗಿ ಪರಮೇಶ್ವರ ಎಂದೇ ಕರಯುತ್ತಿದ್ದರೂ ಗರ್ಭಗುಡಿಯಲ್ಲಿ ನಟರಾಜನ ತಾಂಡವ ಸ್ವರೂಪದ ಮೂರ್ತಿಯನ್ನ ನೋಡಬಹುದು. ಇತಿಹಾಸ ಪುಟದಲ್ಲಿ ಕಂನ್ನವಳ್ಳಯ ಉಲ್ಲೇಖವಿದೆ. ಇಲ್ಲಿನ ಶಿವನ ಮೂರ್ತಿ ಕಲಾತ್ಮಕವಾಗಿದ್ದು ನರ್ತನ ಭಂಗಿಯಲ್ಲಿ ಇದ್ದು ಸುಮಾರು ಏಳು ಆಡಿ ಎತ್ತರದಲ್ಲಿದೆ. ಶಿವನ ಶಿಲ್ಪ ಜಟಾ ಮುಕುಟಧಾರಿಯಾಗಿದ್ದು ಕೈನಲ್ಲಿನ ಕಡಗಗಳು, ಕಂಠೀಹಾರ ಗಮನ ಸೆಳೆಯುತ್ತದೆ. ಎಂಟು ಕೈಗಳನ್ನ ಹೊಂದಿರುವ ಶಿಲ್ಪ ತ್ರಿಶೂಲ, ಬಾಣ, ಡಮರುಗ, ಕತ್ತಿ, ಅಕ್ಷರಮಾಲೆ, ಅಭಯಹಸ್ತ, ಗುರಾಣಿ ಹಾಗು ಕಟ್ವಾಂಗವಿದೆ. ದೇವಾಲಯದ ಪಕ್ಕದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಿವ ದೇವಾಲಯವಿದ್ದು ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಸನಿಹದಲ್ಲಿ ಭೂಗೇಶ್ವರ ದೇವಾಲಯವಿದ್ದು ಇಲ್ಲಿ ಭೂಗೇಶ್ವರ ಶಿವಲಿಂಗವಿದೆ.

ನಾಟ್ಯ ಶಿವ ಕನವಳ್ಳಿ.

ಕಲ್ಲೀಹಾಳ್ ಸಹದೇವಶ್ವರ

ಕಲ್ಲಿಹಾಳ್‌ನಲ್ಲಿರುವ ಶಿವ ಪಾರ್ವತಿ.

ಕನವಳ್ಳಿ ದೇವಾಲಯದಿಂದ ಅನತಿ ದೂರದಲ್ಲಿ ಈ ದೇವಾಲಯವಿದೆ. ಕಲ್ಯಾಣ ಚಾಲುಕ್ಯ ಜಯಸಿಂಹನ ಕಾಲದಲ್ಲಿ ಆತನ ಪತ್ನಿ ಭೂ ದತ್ತಿ ನೀಡಿದ ಉಲ್ಲೇಖ ಇದ್ದು ಆತನ ತಮ್ಮ ಇದನ್ನು ಪೂರ್ಣಗೊಳಿಸಿದರು. ಇಲ್ಲಿನ ಗರ್ಭಗುಡಿಯಲ್ಲಿ ನಿಂತ ಭಂಗಿಯಲ್ಲಿರುವ ಶಿವ ಪಾರ್ವತಿಯರ ಶಿಲ್ಪವಿದೆ.

ಚನ್ನರಾಯಪಟ್ಟಣದ ಚಂದ್ರಶೇಖರ



ಚನ್ನರಾಯಪಟ್ಟಣದ ಚಂದ್ರಶೇಖರ

ಸ್ಥಳೀಯವಾಗಿ ಚಂದ್ರಮೌಳೇಶ್ವರ ಎಂದು ಕರೆಯುವ ಈ ದೇವಾಲಯವನ್ನು ಸುಮಾರು 1673 ರಲ್ಲಿ ಕಾನಕಾನಹಳ್ಳಿಯ ವಂಶದ ದೊಡ್ಡಯ್ಯನ ಮಗ ಕುಮಾರ ಬಸವಯ್ಯ ನಿರ್ಮಿಸಿದ. ಗರ್ಭಗುಡಿ, ಸುಖನಾಸಿ ಹಾಗು ಮಂಟಪವನ್ನು ಹೊಂದಿದೆ. ದೇವಾಲಯದ ಗರ್ಭಗುಡಿಯಲ್ಲಿ ಚಂದ್ರಮೌಳೇಶ್ವರ ಎಂದು ಕರೆಯುವ ಮೂರ್ತಿ ಇದೆ. ಇದು ಶಿವನ ಚಂದ್ರಶೇಖರ ಮೂರ್ತಿಯ ಸ್ವರೂಪ. ಶಿವನ ತಲೆಯಲ್ಲಿ ಚಂದ್ರನನ್ನ ಧರಿಸಿದ್ದು ಸುಮಾರು ಐದು ಅಡಿ ಎತ್ತರವಿದೆ. ತ್ರಿನೇತ್ರ ಧಾರಿಯಾಗಿರುವ ಈ ಶಿಲ್ಪದ ಒಂದು ಕೈನಲ್ಲಿ ಪರಶು ಇದ್ದರೆ ಮತ್ತೊಂದು ಕೈನಲ್ಲಿ (ಬಲ) ಜಿಂಕೆಯ ಕೆತ್ತನೆ ಇದೆ. ಉಳಿದ ಎರಡು ಕೈಗಳು ಅಭಯಹಸ್ತ ಸ್ವರೂಪದಲ್ಲಿದೆ. ಇನ್ನು ಇಲ್ಲಿ ಬೇಡರ ಕಣ್ಣಪ್ಪನ ಮೂರ್ತಿ ಇದ್ದು ಅವನ ಭಕ್ತಿಗೆ ಮನಸೋತು ಶಿವನು ಈ ಸ್ವರೂಪದಲ್ಲಿ ಕಾಣಿಸಿದ ಎಂಬ ನಂಬಿಕೆ. ಶಿವರಾತ್ರಿ ಹಾಗು ಕಾರ್ತಿಕ ಮಾಸದಲ್ಲಿ ವಿಶೇಶ ಪೂಜೆಗಳು ನಡೆಯುತ್ತವೆ.

ಗುಡೇಕೋಟೆ ಶಿವ ಪಾರ್ವತಿ ದೇಗುಲ



ಶಿವ ಪಾರ್ವತಿ ಗುಡೇಕೋಟೆ.

ಪಾಳೇಗಾರರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯವನ್ನು ಬಾಣಾಸುರ ನಿರ್ಮಿಸಿದ. ಇಲ್ಲಿ ಶಿವ ಪಾರ್ವತಿ ಸಮೇತನಾಗಿ ಇರುವ ಮೂರ್ತಿ ಇದೆ. ಶಿವನ ಕೈಯಲ್ಲಿ ಡಮರುಗ ಮತ್ತು ತ್ರಿಶೂಲ ಇದ್ದು ಪಾರ್ವತಿ ಶಿವ ಪರಸ್ಪರ ಬಳಸಿರುವಂತೆ ಇದೆ. ತ್ರಿಶೂಲದ ಮೇಲಿನ ರುಂಡ ಇದೆ. ಪ್ರಭಾವಳಿಯಲ್ಲಿ ನಕ್ಷತ್ರಾಕಾರದ ಕೆತ್ತನೆಗಳು ಕೀರ್ತಿಮುಖ ಗಮನ ಸೆಳೆಯುತ್ತದೆ. ಈ ದೇವಾಲಯ ಕೂಡ್ಲಿ ತಾಲ್ಲೂಕಿನಲ್ಲಿದ್ದು ಮೊಳಕಾಲ್ಮೂರಿಗೆ ಹತ್ತಿರದಲ್ಲಿದೆ.

ಮೂರ್ತಿ ರೂಪದಲ್ಲಿ ಶಿವ

ಶಿವನನ್ನು, ಈಶ್ವರನನ್ನು ಲಿಂಗದ ರೂಪದಲ್ಲಿ ಪೂಜಿಸುವುದು ಸಾಮಾನ್ಯ. ಆದರೆ, ಕೆಲವು ಕಡೆ ಮೂರ್ತಿ ರೂಪದಲ್ಲಿ ಶಿವನನ್ನು ಪೂಜಿಸುವ ಪದ್ಧತಿ ಇದೆ. ನಮ್ಮ ರಾಜ್ಯದಲ್ಲಿ ವಿವಿಧ ರೂಪದ ಮೂರ್ತಿಗಳಲ್ಲಿ ಶಿವನನ್ನು ಕಂಡರಿಸಲಾಗಿದ್ದು, ಅಂತಹ ಕೆಲವು ದೇಗುಲಗಳ ಪರಿಚಯ ಇಲ್ಲಿದೆ.

ಹೂವಿನ ಬೆಳೆಗೆ ಪ್ರಖರ ಬೆಳಕು

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಗಳ ಮಗ್ಗಲಿಗೆ ಇರುವ ಹೂವಿನ ತೋಟಗಳಲ್ಲಿ ರಾತ್ರಿಯಾಗುತ್ತಿದ್ದಂತೆಯೇ ಹಾಲಿನಂತಹ ಬೆಳಕು ಚೆಲ್ಲುತ್ತಿದೆ. ಸೇವಂತಿಗೆ ಹೂವಿನ ಸೆಂಟ್ ಎಲೊ ತಳಿ ಉಳಿಸಿಕೊಳ್ಳಲು ಬೆಳೆಗಾರರು ಎಲ್‌ಇಡಿ ಬಲ್ಬ್ ಅಳವಡಿಸಿದ್ದು, ನೋಡುಗರ ಮನಸೂರೆಗೊಳ್ಳುತ್ತಿದೆ. ರೈತರು ಈಗ ವರ್ಷಪೂರ್ತಿ ಹೂವು ಬೆಳೆಯುತ್ತಿದ್ದು, ಬೆಳೆ ಉಳಿಸಿಕೊಳ್ಳುವುದಕ್ಕಾಗಿ ಆಧುನಿಕ ವಿಧಾನಗಳ ಮೊರೆ ಹೋಗುತ್ತಿದ್ದಾರೆ. ಹೂವಿನ ತೋಟಗಳಿಗೆ ಎಲ್‌ಇಡಿ ಬಲ್ಬ್ ಅಳವಡಿಸಿ ಬೆಳಕು ಹಾಯಿಸುತ್ತಿದ್ದಾರೆ.

ಮೊದಲೆಲ್ಲ ರೈತರು ದಸರಾ, ದೀಪಾವಳಿ ವೇಳೆ ಕಟಾವಿಗೆ ಬರುವಂತಹ ಸೇವಂತಿಗೆ ಹೂವಿನ ತಳಿಯನ್ನು ಮಾತ್ರ ಬೆಳೆಯುತ್ತಿದ್ದರು, 1 ಬೆಳೆಗಷ್ಟೇ ಸೀಮಿತವಾಗಿ ದ್ದರು. ಆದರೆ, ಈಗ ಕೆಲ ರೈತರು ವರ್ಷದಲ್ಲಿ 3 ಬೆಳೆ ತೆಗೆಯುತ್ತಿದ್ದು, ಹವಾಮಾನ ಆಧರಿತ ತಳಿಗಳ ಮೊರೆ ಹೋಗುತ್ತಿದ್ದಾರೆ. ಚಳಿಗಾಲದಲ್ಲಿ ಹೂವಿಗೆ ಕೃತಕವಾಗಿ ಉಷ್ಣಾಂಶ ಒದಗಿಸಲು ಎಲ್‌ಇಡಿ ಬಲ್ಬ್ ಅಳವಡಿಸಿದ್ದಾರೆ. ಸೇವಂತಿಗೆ ಹೂವಿನ ಸೆಂಟ್ ಎಲ್ಲೋ ತಳಿಯನ್ನು ಮಾತ್ರ ಈ ಭಾಗದಲ್ಲಿ ಬೆಳೆಯುತ್ತಿದ್ದು ಇದು ವರ್ಷದ ಎಲ್ಲಾ ಕಾಲದಲ್ಲೂ ಇಳುವರಿ ತರುತ್ತಿದೆ. ನವೆಂಬರ್‌ನಿಂದ ಜನವರಿವರೆಗೆ ಚಳಿಗಾಲದಲ್ಲಿ ಹೂವನ್ನು ಶೀತದಿಂದ ರಕ್ಷಿಸಿಕೊಳ್ಳಲು ರೈತರು ಎಲ್.ಇ.ಡಿ ಬಲ್ಬ್‌ಗಳ ಮೊರೆ ಹೋಗುತ್ತಿದ್ದಾರೆ. ಇವುಗಳಿಂದ ಶಾಖ ಉತ್ಪತ್ತಿಯಾಗಿ ಅಧಿಕ ಇಳುವರಿ ಬರುತ್ತಿದೆ ಹಾಗೂ ರೋಗಗಳೂ ಕಡಿಮೆ.

ಹೆಚ್ಚು ವಾಟ್ ಸಾಮರ್ಥ್ಯದ ಎಲ್‌ಇಡಿ ಬಲ್ಬ್‌ಗಳನ್ನೇ ರೈತರು ಅಳವಡಿಸುತ್ತಿದ್ದಾರೆ. ಒಂದು ಎಕರೆಗೆ ಸುಮಾರು 300 ದೀಪಗಳನ್ನು ಹಾಕಿದ್ದಾರೆ. ಪ್ರತಿ ಸಾಲಿನ ಮುಂದೆಯೂ ಕಬ್ಬಿಣದ ಸರಳು ನೆಟ್ಟು ವೈರಿಂಗ್ ಮಾಡಲಾಗುವುದು. ಹೂವಿನ ಸಸಿಗಳನ್ನು ತಮಿಳುನಾಡಿನಿಂದ ತಂದು ನಾಟಿ ಮಾಡುತ್ತಾರೆ. ಸಸಿ ಕೊಂಚ ಬೆಳವಣಿಗೆ ಕಂಡ ನಂತರ ಬಲ್ಬ್‌ಗಳನ್ನು ಅಳವಡಿಸುತ್ತಾರೆ. ಹನಿ ನೀರಾವರಿ ಮೂಲಕ ಗಿಡಗಳಿಗೆ ನೀರು ಒದಗಿಸುತ್ತಾರೆ.

ಗಿಡ 3 – 4 ಅಡಿ ಎತ್ತರದವರೆಗೆ ಬೆಳೆಯುತ್ತಿದ್ದು, ಉದ್ದಕ್ಕೂ ಮೊಗ್ಗು ಕಟ್ಟಿ ಹೆಚ್ಚು ಹೂವು ದೊರೆಯುತ್ತದೆ. ಹೆಚ್ಚು ಇಳುವರಿಗಾಗಿ ರೈತರು ಕರೆಂಟ್ ಅಳವಡಿಕೆಯ ಮಾದರಿ ಅನುಸರಿಸುತ್ತಿದ್ದಾರೆ. 100 ದಿನಗಳವರೆಗೆ ಈ ರೀತಿ ವಿದ್ಯುತ್ ಬಲ್ಬ್‌ಗಳ ಬೆಳಕು ಹಾಯಿಸಬೇಕು. ವಿದ್ಯುತ್ ವೆಚ್ಚಕ್ಕಾಗಿ ಕೆಲವು ರೈತರು ಎಕರೆಗೆ ಸುಮಾರು ರು.30,000 ವೆಚ್ಚ ಮಾಡುತ್ತಿದ್ದಾರೆ.

ಪ್ರಖರ ಬೆಳಕಿನ ಬಲ್ಬ್ ಬೆಳಗುವ ಮೂಲಕ, ಉಷ್ಣತೆ ಕಾಪಾಡಿ ಹೂವಿನ ಬೆಳೆ ಬೆಳೆಯುವುದು ಚಿತ್ರದುರ್ಗ ಪ್ರದೇಶದ ರೈತರ ವಿಶೇಷತೆ ಎನ್ನಬಹುದು.

ಬಾನಿಗೊಂದು ಎಲ್ಲೆ ಎಲ್ಲಿದೆ?

• ಜಿ. ನಾಗೇಂದ್ರ ಕಾವೂರು

ಕೋಲಾರ ಜಿಲ್ಲೆಯ ಚಿಂತಾಮಣಿ ಪಾಲಿಟೆಕ್ನಿಕ್‌ನಲ್ಲಿ 1976ರಲ್ಲಿ ಪ್ರಥಮ ವರ್ಷದ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದಾಗ ನಡೆದ ಘಟನೆ ಇಂದಿಗೂ ಅಚ್ಚಳಿಯದೆ ನನ್ನ ನೆನಪಿನಲ್ಲಿ ಉಳಿದಿದೆ. ಎಂ.ಟೆಕ್. ಪದವೀಧರರಾದ ಮೈಸೂರು ಮೂಲದ ರಾಮ್ ಶೆಟ್ಟಿ ಅವರು ಹೊಸದಾಗಿ ಲೆಕ್ಚರರ್ ಆಗಿ ನೇಮಕಗೊಂಡಿದ್ದರು. ಗಡಿಭಾಗದಲ್ಲಿ ಇರುವ ಚಿಂತಾಮಣಿಯ ಜನರ ವ್ಯವಹಾರಿಕ ಭಾಷೆ ಸ್ವಾಭಾವಿಕವಾಗಿ ತೆಲುಗು. ಮೈಸೂರಿನವರಾದ ರಾಮ್ ಶೆಟ್ಟಿ ಅವರಿಗೆ ತೆಲುಗು ಭಾಷೆ ಗೊತ್ತಿರಲಿಲ್ಲ. ಆದ್ದರಿಂದ ಅವರು ತಮ್ಮ ನಿಕಟ ಶಿಷ್ಯರಲ್ಲಿ ಮಾತ್ರ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು. ನಾನು ಮತ್ತು ನನ್ನ ಗೆಳೆಯ ಕೃಷ್ಣಮೂರ್ತಿ ಈ ಪಟ್ಟಿಯಲ್ಲಿದ್ದೆವು. ಒಂದು ದಿನ ಸಂಜೆ 6 ಗಂಟೆಗೆ ಅವರ ತಾಯಿ ವಿಧಿವಶರಾದ ದುಃಖಕರ ಸಂದೇಶವು ಟೆಲಿಗ್ರಾಂ ಮೂಲಕ ಪಾಲಿಟೆಕ್ನಿಕ್‌ಗೆ ಬಂದಿತ್ತು. ವಾಚ್‌ಮೆನ್ ಈ ವಿಷಯವನ್ನು ರಾಮ್ ಶೆಟ್ಟಿಗೆ ತಿಳಿಸಲು ಅವರ ಮನೆಯತ್ತ ಹೋದರು. ಅವರು ಇರಲಿಲ್ಲ. ನೆರೆಹೊರೆಯವರಲ್ಲಿ ವಿಚಾರಿಸಿದರೂ ಪತ್ತೆಯಾಗಲಿಲ್ಲ. ಕೊನೆಗೆ ನನ್ನನ್ನು ಸಂಪರ್ಕಿಸಿದಾಗ ಸಿನಿಮಾ ನೋಡಲು ಹೋಗಿರಬಹುದೆಂದು ನಾನು ನಿರ್ಧರಿಸಿ, ಕೃಷ್ಣಮೂರ್ತಿಯೊಡನೆ ಸೈಕಲ್ ಏರಿ ಚಿತ್ರಮಂದಿರ ತಲುಪುವಷ್ಟರಲ್ಲಿ 7.15 ಆಗಿತ್ತು.

ಅಂದಿನ ದಿನಗಳಲ್ಲಿ ಚಿಂತಾಮಣಿಯ ಚಿತ್ರಮಂದಿರಗಳಲ್ಲಿ ಹೆಚ್ಚಾಗಿ ತೆಲುಗು ಚಿತ್ರಗಳೇ ಪ್ರದರ್ಶಿತವಾಗುತ್ತಿದ್ದವು; ಕನ್ನಡ ಚಿತ್ರಗಳು ಅಪರೂಪವಾಗಿ ಪ್ರದರ್ಶಿತಗೊಳ್ಳುತ್ತಿದ್ದವು. ಆ ದಿನ 'ಗೀತಾ' (ಈಗಿನ ಆದರ್ಶ) ಚಿತ್ರಮಂದಿರದಲ್ಲಿ 'ಪ್ರೇಮದ ಕಾಣಿಕೆ' ಚಿತ್ರ ಪ್ರದರ್ಶನಗೊಳ್ಳುತ್ತಿತ್ತು. ರಾಮ್ ಶೆಟ್ಟಿಯವರು ಕನ್ನಡ ಚಿತ್ರಗಳ ಅಪಾರ ಅಭಿಮಾನಿಯಾಗಿದ್ದರಿಂದ, ಅವರು ಈ ಚಿತ್ರವನ್ನು ನೋಡಲು ಖಂಡಿತಾ ಹಾಜರಿರುತ್ತಾರೆ ಎಂಬುದು ನನ್ನ ಊಹೆ. ಗೇಟ್ ಕೀಪರ್‌ಗೆ ವಿಚಾರ ತಿಳಿಸಿ ಒಳಗೆ ಹೋದಾಗ 'ಬಾನಿಗೊಂದು ಎಲ್ಲೆ ಎಲ್ಲಿದೆ' ಎಂಬ ಹಾಡಿನ ದೃಶ್ಯ ಪ್ರದರ್ಶನವಾಗುತ್ತಿತ್ತು. ಮಂದ ಬೆಳಕಿನಲ್ಲಿ ರಾಮ್ ಶೆಟ್ಟಿಯವರನ್ನು ಪತ್ತೆಹಚ್ಚಿ ಹೊರಗೆ ಕರೆದುಕೊಂಡು ಬಂದು ದುಃಖಕರ ಸುದ್ದಿ ತಿಳಿಸಿದೆವು. ಅವರು ಆಘಾತಕ್ಕೊಳಗಾದವರಂತೆ ಕಂಡಿತು. ಕೃಷ್ಣಮೂರ್ತಿಯ ಸೈಕಲಿನಲ್ಲಿ ಅವರ ರೂಮಿಗೆ ಕರೆದುಕೊಂಡು ಹೋಗಿ ತಕ್ಷಣವೇ ಬಟ್ಟೆ ಬದಲಾಗಿಸಿ ಬಸ್ ನಿಲ್ದಾಣ ತಲುಪುವಷ್ಟರಲ್ಲಿ 8 ಗಂಟೆಯಾಗಿತ್ತು. ಬೆಂಗಳೂರಿಗೆ ಅದೇ ಸಮಯದಲ್ಲಿ ಹೊರಡುತ್ತಿದ್ದ ಕೊನೆಯ ಬಸ್ಸಿನಲ್ಲಿ ಅವರನ್ನು ಕಳಿಸಿದೆವು. ಒಂದು ವೇಳೆ ನಾವು ಸರಿಯಾದ ಸಮಯಕ್ಕೆ ತಲುಪದೇ ಇದ್ದರೆ ಅವರು ಮುರುದಿನ ಬೆಳಗ್ಗಿನವರೆಗೆ ಕಾಯಬೇಕಾಗುತ್ತಿತ್ತು. ನಮ್ಮ ಜೀವನದಲ್ಲಿ ಗುರುಗಳಿಗೆ ನೆರವಾದ ಕ್ಷಣ ತೃಪ್ತಿ ನೀಡಿತ್ತು. ಬಾನಿಗೊಂದು ಎಲ್ಲೆ ಎಲ್ಲಿದೆ ಎಂಬ ಹಾಡು ಕೇಳಿದಾಗಲೆಲ್ಲಾ ಈ ಘಟನೆ ನೆನಪಾಗುತ್ತದೆ.

ಕಾಲ್ನಡಿಗೆಯ ಶಿವರಾತ್ರಿ!

• ಕಿರಣ್ ಕೊಕ್ಕರ್ಣೆ

ಕಳೆದ ಒಂದು ವಾರದ ಅವಧಿಯಲ್ಲಿ, ಚಾರ್ಮಾಡಿ ಘಾಟಿಯಲ್ಲಿ ನೀವು ಬಸ್‌ನಲ್ಲಿ ಪಯಣಿಸಿದರೆ, ದಾರಿಯುದ್ದಕ್ಕೂ ಒಂದು ವಿಶೇಷವಾದ ದೃಶ್ಯವನ್ನು ಕಾಣಬಹುದು. ಅದೇನೆಂದರೆ, ಸಾಲಾಗಿ ಧರ್ಮಸ್ಥಳದ ಕಡೆಗೆ ನಡೆದು ಸಾಗುವ ಜನರು! ಒಂದಲ್ಲ, ಹತ್ತಲ್ಲ, ನೂರಲ್ಲ, ಅಕ್ಷರಶಃ ಸಾವಿರಾರು ಜನರು ಕಳೆದ ಒಂದು ವಾರದಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಮಾಡುತ್ತಿದ್ದಾರೆ.

ಅವರೆಲ್ಲರ ಗುರಿ ಎಂದರೆ, ಶಿವರಾತ್ರಿಯ ದಿನ, ಅಂದರೆ ಇದೇ ತಿಂಗಳ 26 ರಂದು, ಧರ್ಮಸ್ಥಳವನ್ನು ತಲುಪುವುದು ಮತ್ತು ಅಲ್ಲಿನ ಶಿವರಾತ್ರಿ ಸಂಭ್ರಮದಲ್ಲಿ ಪಾಲ್ಗೊಳ್ಳುವುದು. ಇದೊಂದು ಅಪೂರ್ವ ಭಕ್ತಿ ಸಂಚಲನ. ಕಾಲ್ನಡಿಗೆಯಲ್ಲೇ ಧರ್ಮಸ್ಥಳ ತಲುಪುವ ಈ ಪದ್ಧತಿಯು ಬಹಳ ವರ್ಷಗಳಿಂದ ಚಾಲ್ತಿಯಲ್ಲಿದ್ದು, ಪ್ರತಿವರ್ಷ ಸಾವಿರಾರು ಜನರು ನಡೆದುಕೊಂಡೇ ಧರ್ಮಸ್ಥಳವನ್ನು ತಲುಪುತ್ತಾರೆ.

ಅತ್ತ ಶಿರಾಡಿ ಘಾಟಿಯಲ್ಲೂ ಸಾಕಷ್ಟು ಜನರು ಧರ್ಮಸ್ಥಳದ ಕಡೆ ನಡೆಯುವುದನ್ನು ನೋಡಬಹುದು. ಬೆಂಗಳೂರಿನಿಂದ ಮಂಗಳೂರಿಗೆ ಸಾಗುವ ಹೆದ್ದಾರಿಯುದ್ದಕ್ಕೂ, ಕುಣಿಗಲ್ ದಾಟಿದ ತಕ್ಷಣ ಪಾದಯಾತ್ರಿಗಳನ್ನು ನೋಡುವ ಅವಕಾಶ ದೊರಕುತ್ತದೆ. ಹಾಸನದ ಸನಿಹ ತಲುಪಿದಂತೆ, ಅವರ ಸಂಖ್ಯೆ ಹೆಚ್ಚಳಗೊಳ್ಳುತ್ತದೆ. ಚಾರ್ಮಾಡಿ ಘಾಟಿಯಲ್ಲಿ ಅಧಿಕ ಜನರು ನಡೆಯುತ್ತಾ ಧರ್ಮಸ್ಥಳದತ್ತ ಹೆಜ್ಜೆ ಹಾಕುವುದನ್ನು ನೋಡಬಹುದು.

ಹಲವು ಜನರು ಬರಿಗೈಯಲ್ಲೇ ನಡೆಯುವುದುಂಟು! ಇನ್ನು ಕೆಲವರು ಸಣ್ಣ ಪುಟ್ಟ ಬ್ಯಾಗುಗಳನ್ನು, ಚೀಲಗಳನ್ನು ಹಿಡಿದು ನಡೆಯುತ್ತಿರುತ್ತಾರೆ. ಈ ರೀತಿ ನಡೆಯುವವರರಲ್ಲಿ ಮಕ್ಕಳ ಸಂಖ್ಯೆ ಅತಿ ಕಡಿಮೆ. ಪ್ರತಿ ದಿನ 20 ರಿಂದ 30 ಕಿ. ಮೀ. ದೂರವನ್ನು, ಒಂದೆರಡು ವಾರಗಳ ಅವಧಿಯಲ್ಲಿ ನಡೆಯಲು ಮಕ್ಕಳಿಗೆ ಕಷ್ಟವಾಗಬಹುದು.

ಧರ್ಮಸ್ಥಳಕ್ಕೆ ಸಾಗುವ ಜನರಲ್ಲಿ ಮಹಿಳೆಯರ ಸಂಖ್ಯೆ ಅಧಿಕವೆಂದೇ ಹೇಳಬಹುದು. ಯುವಕರು, ಮಧ್ಯವಯಸ್ಕರ ಜತೆಯಲ್ಲೇ, ಸಾಕಷ್ಟು ಸಂಖ್ಯೆಯ ವೃದ್ಧರೂ ಈ ಕಾಲ್ನಡಿಗೆಯಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದು.

ಚಾಲಕರು ಎಚ್ಚರವಹಿಸಬೇಕು

ಪಶ್ಚಿಮ ಘಟ್ಟದ ಘಾಟಿ ರಸ್ತೆಯಲ್ಲಿ ಧರ್ಮಸ್ಥಳಕ್ಕೆ ನಡೆದು ಸಾಗುವವರ ಮೇಲೆ ಖಾಸಗಿ ಬಸ್ ಹಾಯ್ದು, ಮೊನ್ನೆ ಇಬ್ಬರು ಯಾತ್ರಿಕರು ಮೃತಪಟ್ಟ ದುರ್ಘಟನೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಇಂತಹ ಅಪಘಾತಗಳು ನಡೆಯುವುದನ್ನು ತಪ್ಪಿಸಬೇಕು; ಇದಕ್ಕಾಗಿ ಸೂಕ್ತ ಎಚ್ಚರಿಕೆಯನ್ನು ಸರಕಾರದ ವಿಭಾಗಗಳು ತೆಗೆದುಕೊಂಡು, ವಾಹನ ಚಾಲಕರಿಗೆ ಅಗತ್ಯವೆನಿಸುವ ಮಾರ್ಗದರ್ಶನ ನೀಡಬೇಕಾಗಿದೆ. ಜತೆಗೆ, ಪ್ರತಿವರ್ಷ ಸಾವಿರಾರು ಜನರು ಈ ರೀತಿ ಪಾದಯಾತ್ರೆ ನಡೆಸುವ ಪದ್ಧತಿ ಇರುವುದರಿಂದ, ಸರಕಾರದ ವಿವಿಧ ಇಲಾಖೆಗಳು ಸಮನ್ವಯದಿಂದ, ಅವರಿಗೆ ಸೂಕ್ತ ವ್ಯವಸ್ಥೆ ಮತ್ತು ರಕ್ಷಣೆ ನೀಡಬೇಕಾಗಿದೆ.

ಈ ರೀತಿ ಕಾಲ್ನಡಿಗೆಯಲ್ಲಿ ಧರ್ಮಸ್ಥಳಕ್ಕೆ ಹೋಗುವವರಿಗಾಗಿ, ದಾರಿಯುದ್ದಕ್ಕೂ ಕೆಲವು ಹಳ್ಳಿಗಳಲ್ಲಿ, ಊರುಗಳಲ್ಲಿ ಸ್ವಯಂಸೇವಕರು ಆಹಾರ, ನೀರು ನೀಡುವುದುಂಟು. ಕೆಲವು ಕಡೆ ರಾತ್ರಿ ತಂಗಲು ಸರಳವಾದ ವಸತಿ ವ್ಯವಸ್ಥೆ ಮಾಡಿರುವವರುಂಟು. ನಡು ಬಿಸಿಲಿನಲ್ಲಿ ನಡೆಯುವುದು ಕಡಿಮೆ; ಇಳಿ ಸಂಜೆಯಲ್ಲಿ ಮತ್ತು ರಾತ್ರಿಯ ಹೊತ್ತು ಸಹ ಕೆಲವು ನಡೆಯುವುದುಂಟು. ಧರ್ಮಸ್ಥಳವನ್ನು ತಲುಪಿದ ನಂತರ, ಅಲ್ಲಿನ ದೇಗುಲದವರು ಕಾಲ್ನಡಿಗೆಯಲ್ಲಿ ಬಂದವರಿಗೆ ಉಚಿತ ವಸತಿ, ಆಹಾರ ನೀಡುತ್ತಾರೆ.

ನಮ್ಮ ರಾಜ್ಯದಲ್ಲಿ ಪ್ರತಿವರ್ಷ ಧರ್ಮಸ್ಥಳಕ್ಕೆ ಕಾಲ್ನಡಿಗೆಯಲ್ಲಿ ಹೋಗುವವರ ಸಂಖ್ಯೆ ಸಾವಿರಾರು. ಪ್ರತಿದಿನ 20 ರಿಂದ 30 ಕಿ.ಮೀ. ದೂರ ನಡೆಯುವ ಇವರಿಗೆ, ತಮ್ಮ ಗುರಿ ತಲುಪಿ, ಶಿವರಾತ್ರಿಯ ದಿನ ಧರ್ಮಸ್ಥಳವನ್ನು ಸೇರಲು ಹಲವು ದಿನಗಳ ಕಾಲಾವಕಾಶ ಬೇಕಾಗಿರುತ್ತದೆ. ಇಂತಹವರಿಗೆ, ಸೂಕ್ತ ಆಹಾರವನ್ನು, ನೀರನ್ನು ಮತ್ತು ವಸತಿಯನ್ನು ಒದಗಿಸಲು ಮುಂದಿನ ವರ್ಷದಲ್ಲಾದರೂ ರಾಜ್ಯದ ಧಾರ್ಮಿಕ ಮತ್ತು ದತ್ತಿ ಇಲಾಖೆಯು ಮನಸ್ಸು ಮಾಡಬಹುದು!

ಮಹಾಶಿವರಾತ್ರಿಯಂದು ಪೂಜೆಯಲ್ಲಿ ಪಾಲ್ಗೊಳ್ಳಲು ಇದೇ ರೀತಿ ಮಹದೇಶ್ವರ ಬೆಟ್ಟಕ್ಕೂ ಸಾವಿರಾರು ಜನರು ಕಾಲ್ನಡಿಗೆ ಯಾತ್ರೆಯನ್ನು ಮಾಡುವ ಪದ್ಧತಿ ಇದೆ.

ಆಸೆಯ ಶಕ್ತಿ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಆಸೆಯನ್ನು ಹೊಂದಿದ ತುಲಸೀದಾಸರು ತಮ್ಮ ಹೊಸದಾಗಿ ಮದುವೆಯಾದ ಹೆಂಡತಿಯನ್ನು ಭೇಟಿಯಾಗಲು ತುಂಬ ಉತ್ಸುಕರಾಗಿದ್ದರು. ಅದಕ್ಕಾಗಿ ಅವರು ಹೆಣವನ್ನು ಕಟ್ಟಿಗೆ ತುಂಡು ಎಂದು ತಿಳಿದು ಅದರ ಸಹಾಯದಿಂದ ರಾತ್ರಿಯಲ್ಲಿ ನದಿಯನ್ನು ದಾಟಿದರು ಹಾಗೂ ಹಾವನ್ನು ಹಗ್ಗವೆಂದು ತಿಳಿದು ಅದರ ಸಹಾಯದಿಂದ ಗೋಡೆಯನ್ನು ಏರಿದರು. ಅವರ ಹೆಂಡತಿಯು ಇವರನ್ನು ಬೈದು 'ಇಷ್ಟೇ ಉತ್ಸಾಹ ಪ್ರಭು ರಾಮನ ಬಗ್ಗೆ ಇದ್ದಿದ್ದರೆ ಎಷ್ಟೋ ಒಳ್ಳೆಯದಿತ್ತು' ಎಂದು ಹೇಳಿದಳು. ಇದರಿಂದ ಅವರಲ್ಲಿ ಪರಿವರ್ತನೆಯಾಗಿ ಕೊನೆಗೆ ಪ್ರತಿಷ್ಠಿತ 'ರಾಮಚರಿತ ಮಾನಸ' ಗ್ರಂಥವನ್ನು ರಚಿಸಿದರು. ನಮ್ಮ ಇಂದ್ರಿಯಗಳನ್ನು ಶಿಸ್ತಿಗೆ ಒಳಪಡಿಸಿ ನಮ್ಮ ಆಸೆಯನ್ನು ನಾಶಗೊಳಿಸಿಕೊಳ್ಳಬೇಕೆಂಬ ಕೃಷ್ಣನ ಉಪದೇಶಕ್ಕೆ ಈ ಘಟನೆ ಉತ್ತಮ ಉದಾಹರಣೆಯಾಗಿದೆ (3.41).

ಆಸೆಗೆ ಎರಡು ಮುಖಗಳಿವೆ. ಮೊದಲನೆಯದು ಧೈರ್ಯ, ದೃಢ ನಿಶ್ಚಯ ಹಾಗೂ ಉತ್ಕಟತೆ. ಇವು ನಮ್ಮಲ್ಲಿ ಹುಟ್ಟುತ್ತವೆ. ಎರಡನೆಯದು ಅದರ ದಿಕ್ಕು. ಬಾಹ್ಯಕ್ಕೆ ತಿರುಗಿಸಿದರೆ ಅದು ಇಂದ್ರಿಯ ಸುಖ ಮತ್ತು ಸಂಪತ್ತುಗಳಲ್ಲಿ ಕರಗಿ ಹೋಗುತ್ತದೆ. ನಮ್ಮ ಆಸೆಗಳ ನಾಶವಾಗಬೇಕೆಂದು ಕೃಷ್ಣ ಹೇಳಿದಾಗ ಅದರ ಶಕ್ತಿಯ ನಾಶವಾಗಬೇಕೆಂದು ಅವನು ಹೇಳುವುದಿಲ್ಲ. ಆದರೆ ತುಳಸಿದಾಸರ ಹಾಗೆ ಅದನ್ನು ಅಂತರ್ಮುಖಿಗೊಳಿಸಬೇಕೆಂದು ಹೇಳುತ್ತಾನೆ. ಪ್ರಾರಂಭದಲ್ಲಿ ಉಪಗ್ರಹವು ತನ್ನ ಕಕ್ಷೆ ಸೇರಲು ತನ್ನ ರಾಕೇಟುಗಳಿಂದ ಶಕ್ತಿ ಪಡೆಯುವಂತೆ ನಮ್ಮ ಆಧ್ಯಾತ್ಮಿಕ ಪಯಣದಲ್ಲಿ ಇದರ ಶಕ್ತಿಯು ಅವಶ್ಯಕವಿದೆ. ಒಮ್ಮೆ ನಾವು ಅಂತಿಮ, ಶಾಶ್ವತ ಸ್ಥಿತಿ ಮುಟ್ಟಿದರೆ ಶಕ್ತಿ ಮತ್ತು ಅದರ ದಿಕ್ಕು ಅರ್ಥಹೀನವಾಗುತ್ತವೆ.

ನಮ್ಮ ಶಕ್ತಿಯನ್ನು ಆಂತರ್ಯಕ್ಕೆ ತಿರುಗಿಸಲು ನಮ್ಮ ಇಂದ್ರಿಯಗಳನ್ನು ಒಂದು ಶಿಸ್ತಿಗೆ ಒಳಪಡಿಸಿಕೊಳ್ಳಬೇಕೆಂದು ಕೃಷ್ಣ ಹೇಳುತ್ತಾನೆ. ಇದಕ್ಕೆ ಅವನು ಒಂದು ಶ್ರೇಣಿಯನ್ನು ವಿವರಿಸುತ್ತಾನೆ. ಬಿಡಿ ಭಾಗಗಳ ಸಮೂಹಕ್ಕಿಂತ ಇಡಿಯದು ಶ್ರೇಷ್ಠವಾಗಿರುವುದರಿಂದ ಎಲ್ಲ ಇಂದ್ರಿಯಗಳ ಸಮೂಹವಾದ ಮನಸ್ಸು ಇಂದ್ರಿಯಗಳಿಗಿಂತ ಹೆಚ್ಚಿನದಾಗಿರುತ್ತದೆ. ಹೋರಾಟಕ್ಕೂ ಮನಸ್ಸಿಗೊಂದು ಮಿತಿಯಿದೆ. ಇದು ಜೀವಿಗಳ ಅಸ್ತಿತ್ವಕ್ಕಷ್ಟೇ ಸಾಕು. ನಮ್ಮ ಬುದ್ಧಿ ಇದನ್ನು ಮೀರಿ ಹೋಗುತ್ತದೆ ಮತ್ತು ಪ್ರಾಣಿಗಳಿಂದ ನಮ್ಮನ್ನು ಬೇರ್ಪಡಿಸುತ್ತದೆ. ಆದ್ದರಿಂದ ಇದು ಮನಸ್ಸಿಗಿಂತಲೂ ಹೆಚ್ಚಿನದು. ಮುಂದುವರೆದು ಕೃಷ್ಣ ಹೇಳುತ್ತಾನೆ : ಆತ್ಮ ಬುದ್ಧಿಗಿಂತ ಹೆಚ್ಚಿನದು, ಆದ್ದರಿಂದ ಆಸೆಯೆಂಬ ಶತ್ರುವನ್ನು ನಾಶ ಮಾಡಲು ಅದನ್ನು ಉಪಯೋಗಿಸಬೇಕು. ಯಾಕೆಂದರೆ ಮನಸ್ಸು ಅಥವಾ ಬುದ್ಧಿಯಿಂದ ಅದನ್ನು ಗೆಲ್ಲುವುದು ತುಂಬಾ ಕಷ್ಟ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
25.02.2025 ಮಂಗಳವಾರ
vishwavani.news

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ಕೃಷ್ಣ ಪಕ್ಷ, ದ್ವಾದಶಿ ತಿಥಿ, ಉತ್ತರಾಷಾಢ ನಕ್ಷತ್ರ, ವ್ಯತೀಪಾತ ಯೋಗ, ರಾಹುಕಾಲ ಮಧ್ಯಾಹ್ನ 3.30ರಿಂದ ಸಂಜೆ 4.59ರವರೆಗೆ, ಅಭಿಜಿತ್ ಮುಹೂರ್ತ ಮಧ್ಯಾಹ್ನ 12.09ರಿಂದ 12.56ರವರೆಗೆ

ಮನೆಮದ್ದು

ಬೇವಿನ ಉಪಯೋಗದಿಂದ ಅನೇಕ ರೋಗಗಳನ್ನು ಗುಣಪಡಿಸಬಹುದು. ಚರ್ಮದ ಮೇಲೆ ಕಜ್ಜಿ, ಹುರುಕುಗಳು ಕಂಡುಬಂದಾಗ, ಬೇವಿನ ಬೀಜಗಳನ್ನು ಎಳ್ಳೆಣ್ಣೆಯಲ್ಲಿ ಅರೆದು ಸ್ವಲ್ಪ ಕರ್ಪೂರ ಕೂಡಿಸಿ ಹಚ್ಚಿದರೆ ವಾಸಿಯಾಗುತ್ತದೆ.

ಸೌಂದರ್ಯ ಸೂತ್ರ

ತಲೆಗೂದಲಿಗೆ ಶಾಂಪೂ ಅಥವಾ ಸಾಬೂನನ್ನು ಲೇಪಿಸಿ ತೊಳೆದ ನಂತರ, ನೀರಿನಿಂದ ಮತ್ತೆ ತೊಳೆದುಕೊಳ್ಳುವಾಗ ಅದಕ್ಕೆ ಕೊಂಚ ನಿಂಬೆರಸವನ್ನು ಕಲಕಿದರೆ, ಕೂದಲಿಗೆ ಪೂರ್ವಸ್ಥಿತಿಯ ವರ್ಣಛಾಯೆ ಬರುತ್ತದೆ ಮತ್ತು ಹೊಳೆಯುತ್ತದೆ.

ದಿನ ಭವಿಷ್ಯ

ಮೇಷ: ಕಾರ್ಯಕ್ಷಮತೆ ಹೆಚ್ಚಬೇಕೆಂದರೆ, ಪರಿಶ್ರಮ ಮತ್ತು ಅಧ್ಯಯನಶೀಲತೆ ಮುಖ್ಯ ಎಂಬುದನ್ನು ಮರೆಯದಿರಿ. ಈ ಎರಡು ಅಂಶಗಳನ್ನು ಪಟ್ಟಾಗಿ ಹಿಡಿದುಕೊಂಡು ಕೆಲಸದಲ್ಲಿ ವ್ಯಸ್ತರಾದರೆ ಜಯ ಖಚಿತ.

ವೃಷಭ: ನಿಮ್ಮದಲ್ಲದ ವಸ್ತು ಯಾವತ್ತಿಗೂ ನಿಮ್ಮದಾಗದು. ನಿಮಗೆ ಸೇರಬೇಕಾದ ವಸ್ತು, ಒಂದೊಮ್ಮೆ ನೀರಲ್ಲಿ ಮುಳುಗಿದ್ದರೂ ಶತಾಯ ಗತಾಯ ನಿಮಗೆ ಸಿಗುತ್ತದೆ ಎಂಬುದನ್ನು ಮರೆಯದಿರಿ. ಗಣೇಶನನ್ನು ಪ್ರಾರ್ಥಿಸಿ.

ಮಿಥುನ: ಉತ್ತರ ದಿಕ್ಕಿನಿಂದ ಶುಭಸುದ್ದಿಯೊಂದನ್ನು ಕೇಳಲಿದ್ದೀರಿ. ನಿಮಗೆ ಬಹಳ ಕಾಲದಿಂದ ಬರುವುದು ಬಾಕಿಯಿದ್ದ ಹಣವು ಇಂದು ಕೈಸೇರಿ ಸಂತಸವನ್ನು ತರಲಿದೆ. ಗುರುಪೀಠಕ್ಕೆ ತೆರಳಿ ನಮಸ್ಕರಿಸಿ.

ಕಟಕ: ಯಾವುದಾದರೂ ಒಂದು ಕೆಲಸದ ಮೇಲೆ ಗಮನ ಹರಿಸಿ, ಒಂದಕ್ಕಿಂತ ಹೆಚ್ಚು ಬಾಬತ್ತಿನಲ್ಲಿ ಮೂಗು ತೂರಿಸಿದರೆ ಎಲ್ಲದರಲ್ಲೂ ವಿಫಲರಾಗಿ ನಗೆಪಾಟಲಿಗೆ ಈಡಾಗುತ್ತೀರಿ. ದುರ್ಗಾ ದೇವಿಯನ್ನು ಆರಾಧಿಸಿ.

ಸಿಂಹ: ಸೋದರನ ಕುರಿತಾದ ನಿಮ್ಮ ವಾತ್ಸಲ್ಯ ಶ್ಲಾಘನೀಯ. ಆದರೆ ಆತ ಜತೆಗಿದ್ದು ಉದ್ಯೋಗದಲ್ಲಿ ತೊಡಗದಿದ್ದುದಕ್ಕೆ ನಿಮಗೆ ಬೇಸರವಾಗಿರಬಹುದು. ಕಾಲ ಕೂಡಿಬಂದಾಗ ಎಲ್ಲವೂ ಸರಿಹೋಗುತ್ತದೆ.

ಕನ್ಯಾ: ಬರಹಗಾರಿಕೆಯೇ ನಿಮಗೆ ಅನ್ನ ನೀಡುವಂಥ ಬಾಬತ್ತು, ಆದರೆ ಸೃಜನಶೀಲ ಬರಹದ ರಚನೆಯಿಂದ ನೀವು ಕೆಲ ವರ್ಷಗಳಿಂದ ಆಚೆಗೆ ಬಂದಿರುವಂತಿದೆ. ಆತ್ಮಾವಲೋಕನಕ್ಕೆ ಮುಂದಾಗಿ.

ತುಲಾ: ಇಲೆಕ್ಟ್ರಾನಿಕ್ಸ್ ಮಳಿಗೆ, ಔಷಧದ ಅಂಗಡಿ ಹಾಗೂ ಹಾರ್ಡ್‌ವೇರ್ ವ್ಯವಹಾರದಲ್ಲಿ ತೊಡಗಿಸಿಕೊಂಡವರಿಗೆ ಇಂದು ಅನಿರೀಕ್ಷಿತ ಲಾಭ ಒದಗಲಿದೆ. ಸೋಮಾರಿತನವನ್ನು ಬಿಟ್ಟರೆ ಒಳ್ಳೆಯದು. ಗಣೇಶನನ್ನು ಪ್ರಾರ್ಥಿಸಿ.

ವೃಶ್ಚಿಕ: ಸ್ವಂತ ಮನೆ ಅಥವಾ ವಾಹನದ ಕನಸು ನನಸಾಗಿದ್ದಕ್ಕೆ ನಿಮ್ಮ ಹೃದಯತುಂಬಿ ಬರುತ್ತದೆ. ಈ ಖುಷಿಯು ನಿಮ್ಮ ಕಚೇರಿ ಕೆಲಸದಲ್ಲೂ ಪ್ರತಿಫಲಿಸಿ ಮುಖ್ಯಸ್ಥರಿಂದ ಭೇಷ್ ಎನಿಸಿಕೊಳ್ಳುವಿರಿ. ಗುರುಪೀಠಕ್ಕೆ ತೆರಳಿ ನಮಸ್ಕರಿಸಿ.

ಧನು: ಇನ್ನು ಮುಂದೆ ಮನೆಯ ಜವಾಬ್ದಾರಿ ನಿಮ್ಮದೇ, ಅದನ್ನು ನಿರ್ವಹಿಸುವ ಸಾಮರ್ಥ್ಯ ನಿಮ್ಮಲ್ಲಿದೆ. ದೇವರಲ್ಲಿ ನಂಬಿಕೆಯಿಡಿ, ಅಸಾಧ್ಯವೆನಿಸಿದ ಕೆಲಸವೂ ಅಚ್ಚರಿಯಾಗುವ ರೀತಿಯಲ್ಲಿ ಕೈಗೂಡುವುದು.

ಮಕರ: ಬೇಬಿ ಸಿಟ್ಟಿಂಗ್ ವ್ಯವಹಾರ ನಿಮಗೆ ಆಗಿಬರುವುದಿಲ್ಲ, ಪರ್ಯಾಯ ಮಾರ್ಗವನ್ನು ಅವಲಂಬಿಸಿ. ಆರೋಗ್ಯದ ಕಡೆಗೆ ಹೆಚ್ಚು ಗಮನ ನೀಡಿ, ರಸ್ತೆ ದಾಟುವಾಗ ಎಚ್ಚರವಿರಲಿ. ಗಣೇಶನನ್ನು ಪ್ರಾರ್ಥಿಸಿ.

ಕುಂಭ: ಇಂದು ಮನೆಯಲ್ಲಿ ಶುಭಕಾರ್ಯಗಳು ನಡೆಯಲಿವೆ. ಉದ್ಯೋಗ ಅಥವಾ ವ್ಯವಹಾರದ ನಿಮಿತ್ತ ದೂರದ ಊರಿಗೆ ತೆರಳಲು ಸಿದ್ಧತೆ ಮಾಡಿಕೊಳ್ಳಬೇಕಾಗಿ ಬರಬಹುದು. ಹೊರಗಡೆ ಆಹಾರ ಸೇವಿಸುವಾಗ ಜಾಗ್ರತೆ.

ಮೀನ: ಬ್ಯಾಂಕ್ ಉದ್ಯೋಗಿಗಳಿಗೆ ಹಾಗೂ ಬಟ್ಟೆ ವ್ಯಾಪಾರಿಗಳಿಗೆ ಇಂದು ಶುಭದಿನ. ಹಳೆಯ ಮಿತ್ರರೊಬ್ಬರ ಆಗಮನವು ನಿಮ್ಮ ಮನಸ್ಸಿಗೆ ಸಂತಸವನ್ನು ಹೊತ್ತು ತರಲಿದೆ. ಗಣೇಶನನ್ನು ಆರಾಧಿಸಿ, ಗುರುಪೀಠಕ್ಕೆ ತೆರಳಿ ನಮಸ್ಕರಿಸಿ.

• ಕೆ.ಬಿ.ಸಂತೋಷ್ ಗುರೂಜಿ

ಮಧುರ ಸ್ಮೃತಿ

ಚಿತ್ರರಂಗವನ್ನು ಪ್ರವೇಶಿಸುವುದಕ್ಕೂ ಮುನ್ನ ಸಾಕಷ್ಟು ವರ್ಷಗಳ ಕಾಲ ವೃತ್ತಿ ರಂಗಭೂಮಿಯಲ್ಲಿ ನಟನಾಗಿ ಕಾರ್ಯನಿರ್ವಹಿಸಿದವರು ಡಾ.ರಾಜ್‌ಕುಮಾರ್. ಒಂದು ಮುಷ್ಟಿ ಅನ್ನವನ್ನು ಸಂಪಾದಿಸುವುದಕ್ಕೆ ಎಷ್ಟೆಲ್ಲಾ ಕಷ್ಟಪಡಬೇಕು ಎಂಬುದನ್ನು ಪ್ರತ್ಯಕ್ಷವಾಗಿ ಅರಿತಿದ್ದ ಅಣ್ಣಾವ್ರು, ತರುವಾಯದಲ್ಲಿ ಚಿತ್ರರಂಗದಲ್ಲಿ ಭದ್ರನೆಲೆ ಸಿಕ್ಕ ನಂತರವೂ ಅನ್ನಕ್ಕೆ ಮತ್ತು ಅನ್ನದಾತರಿಗೆ ಇನ್ನಿಲ್ಲದ ಗೌರವವನ್ನು ನೀಡುತ್ತಿದ್ದರು. ಉಣಬಡಿಸಿದ ಊಟ-ಉಪಾಹಾರ ಯಾವುದೇ ಇರಲಿ, ಎಂಥದ್ದೇ ಇರಲಿ ಬಾಯಿ ಚಪ್ಪರಿಸಿಕೊಂಡು ಆಸ್ವಾದಿಸುತ್ತಿದ್ದ ಹಾಗೂ ಊಟದ ನಂತರ ತಾಂಬೂಲವನ್ನು ಮೆಲ್ಲುತ್ತಿದ್ದ ರಸಿಕರು ಅವರು. ಇಂಥ ಒಂದು ಸಂದರ್ಭದಲ್ಲಿ ಅವರನ್ನು ಕುತೂಹಲಭರಿತರಾಗಿ ನೋಡುತ್ತಾ, ಅವರ ಮಾತಿಗೆ ಕಿವಿಯಾಗಿರುವುದು ಮತ್ತೋರ್ವ ನಟ ಆರ್.ಎನ್.ಸುದರ್ಶನ್.

ತಲ್ಲಣಿಸದಿರು ಕಂಡ್ಯ ತಾಳು ಮನವೇ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ವ್ಯಕ್ತಿಯೊಬ್ಬ ಬಹಳ ವರ್ಷಗಳಿಂದ ಕಟ್ಟಿಗೆ ಮಾರಿ ಜೀವನ ನಡೆಸುತ್ತಿದ್ದ. ಪ್ರತಿದಿನ ಕಾಡಿಗೆ ಹೋಗಿ ಕಟ್ಟಿಗೆ ಒಡೆದು ತರುವುದು, ಮಾರುಕಟ್ಟೆಯಲ್ಲಿ ಅದನ್ನು ಮಾರಾಟ ಮಾಡುವುದು, ಅದರಿಂದ ಬರುವ ಅಲ್ಪ-ಸ್ವಲ್ಪ ದುಡ್ಡಿನಲ್ಲಿ ಹೊಟ್ಟೆ ಹೊರೆದುಕೊಳ್ಳುವುದು ಇದು ಅವನ ಪರಿಪಾಠವಾಗಿತ್ತು. ಇದೇ ಕೆಲಸ ಮಾಡಿ ಮಾಡಿ ಅವನಿಗೆ ಬದುಕೇ ಬೇಸರವೆನಿಸತೊಡಗಿತು. ಜತೆಗೆ, ವಯಸ್ಸೂ ಆಗುತ್ತಾ ಬಂದಿದ್ದರಿಂದ ಕೆಲಸ ಮಾಡಲು ಸ್ವಲ್ಪ ಕಷ್ಟವೆನಿಸತೊಡಗಿತು.

ಒಂದು ದಿನ, ವಾಡಿಕೆಯಂತೆ ಕಟ್ಟಿಗೆ ತರಲು ಆತ ಕಾಡಿಗೆ ಹೋದ. ಆದರೆ, ಅಂದೇಕೋ ಅವನಿಗೆ ಕೆಲಸ ಮಾಡುವ ಉತ್ಸಾಹವೇ ಇರಲಿಲ್ಲ. 'ಎಷ್ಟೊಂದು ದಿನದಿಂದ ಇದನ್ನೇ ಮಾಡುತ್ತಿರುವೆ, ಒಂದು ದಿನ ಸತ್ತು ಹೇಗೂ ಮಣ್ಣಿನಲ್ಲಿ ಸೇರುವುದು ಇದ್ದೇ ಇದೆ. ಅದಕ್ಕಾಗಿ ನಾನು ಇಷ್ಟೆಲ್ಲಾ ಏಕೆ ಕಷ್ಟಪಡಬೇಕು? ಈ ಜೀವನ ಯಾಕೋ ಸಾಕಾಗಿಹೋಗಿದೆ, ಮುಂದೊಂದು ದಿನ ಬರುವ ಸಾವು ಇಂದೇ ಏಕೆ ಬರಬಾರದು?' ಎಂದು ನೊಂದುಕೊಂಡು, ''ಓ ಸಾವೇ, ನೀನು ಇಂದೇ ಬರಬಾರದೇ? ನಾನು ಬಹಳ ನೊಂದಿರುವೆ, ಈ ಬದುಕು ನನಗೆ ಸಾಕಾಗಿಹೋಗಿದೆ. ಕೃಪೆಮಾಡಿ ನನಗೆ ಇದರಿಂದ ಮುಕ್ತಿಕೊಡು'' ಎಂದುಬಿಟ್ಟ. ಇದನ್ನು ಕೇಳಿಸಿಕೊಂಡ ಮೃತ್ಯುದೇವತೆ ತಕ್ಷಣ ಅವನೆದುರು ಪ್ರಕಟಗೊಂಡು, ''ನಾನು ಮೃತ್ಯುದೇವತೆ, ನೀನು ನನ್ನನ್ನು ಕರೆದೆಯೆಂದು ಬಂದೆ. ನನ್ನಿಂದ ನಿನಗೇನು ಆಗಬೇಕಿದೆ?'' ಎಂದ.

ಸೌದೆ ಒಡೆಯುವವನಿಗೆ ಉಸಿರುಗಟ್ಟಿದಂತಾಗಿ ಭಯದಿಂದ ನಡುಗಲಾರಂಭಿಸಿದ. ನಂತರ ಸಾವರಿಸಿಕೊಂಡು, ಉಗುಳು ನುಂಗುತ್ತಾ, ''ಏನಿಲ್ಲಾ ಪ್ರಭೂ, ಈ ಕಟ್ಟಿಗೆಯ ಹೊರೆಯನ್ನು ನನ್ನೊಬ್ಬನಿಂದಲೇ ತಲೆಯ ಮೇಲೆ ಇಟ್ಟುಕೊಳ್ಳಲಾಗಲಿಲ್ಲ. ಇಲ್ಲಿ ಯಾರೂ ಕಾಣಲಿಲ್ಲವಾದ್ದರಿಂದ ನಿಮ್ಮನ್ನು ಕರೆದೆ. ಕೃಪೆಮಾಡಿ ಈ ಕಟ್ಟಿಗೆ ಹೊರೆಯನ್ನು ತನ್ನ ತಲೆಯ ಮೇಲೆ ಹೊತ್ತುಕೊಳ್ಳಲು ನೆರವಾಗಿ'' ಎಂದ!

ಸಾಯುವ ಮಾತು ಆಗಾಗ್ಗೆ ಕೆಲವರ ಬಾಯಿಂದ ಸುಮ್ಮನೆ ಬರುತ್ತಲೇ ಇರುತ್ತದೆ; ಆದರೆ ಸಾಯುವ ಆಕಾಂಕ್ಷೆ ಯಾರಿಗೂ ಇರುವುದಿಲ್ಲ. ಎಲ್ಲರ ಮನದಲ್ಲೂ ಇರುವುದು ಜೀವಿಸುವ ಆಕಾಂಕ್ಷೆಯೇ. ಆದರೆ ನಾವು ಯಾವಾಗಲಾದರೊಮ್ಮೆ ನೊಂದುಕೊಂಡಾಗ, ನಮ್ಮ ಆಸೆಗಳು ನೆರವೇರದಿದ್ದಾಗ ಈ ಬದುಕು ಸಾಕಪ್ಪಾ ಸಾಕು ಎನಿಸಿ 'ಅತ್ಲಾಗೆ ಸತ್ತರೆ ಸಾಕು' ಎಂದು ಉದ್ಗರಿಸಿಬಿಡುತ್ತೇವೆ! ಸಂಕಷ್ಟವನ್ನು ನಿಭಾಯಿಸಲು ಆಗದಿದ್ದಾಗ, ಈ ರೀತಿ ವ್ಯರ್ಥಜೀವನ ನಡೆಸುವುದಕ್ಕಿಂತ ಸಾವೇ ಎಷ್ಟೋ ಮೇಲು ಎನಿಸುವುದು ಸಹಜ. ಆದರೆ ನಿಜವಾಗಿಯೂ ಸಾಯಬೇಕೆಂಬ ಆಸೆ ಯಾರಿಗೂ ಇರುವುದಿಲ್ಲ, 'ಬದುಕಿರಬೇಕು' ಎಂಬುದನ್ನೇ ಎಲ್ಲರೂ ಬಯಸುವುದು.

ನಮ್ಮಲ್ಲಿ ಕೆಲವರು, ''ಕಷ್ಟಗಳನ್ನು ತಡೆದುಕೊಳ್ಳಲಾಗದೆ ಸತ್ತುಹೋಗಿಬಿಡಬೇಕು ಅನ್ನಿಸ್ತಿದೆ'' ಎನ್ನುವುದನ್ನು ಕೇಳಿರುತ್ತೇವೆ. ಆಗ ಅವರಿಗೆ ಬೈದು ಸಮಾಧಾನವನ್ನೂ ಮಾಡಿರುತ್ತೇವೆ. ಆದರೆ ಕೆಲವರಿಗೆ ಹೀಗೆ ಮಾತನಾಡುವುದು, ಎಲ್ಲದರಲ್ಲೂ ನಕಾರಾತ್ಮಕ ವಿಷಯಗಳನ್ನು ಹುಡುಕುವುದು ಅದೆಷ್ಟು ಅಭ್ಯಾಸವಾಗಿರುತ್ತದೆಯೆಂದರೆ, ಮತ್ತೊಬ್ಬರ ಗಮನ ಸೆಳೆದು ಸಹಾನುಭೂತಿಯನ್ನು ಗಳಿಸಲು ಮತ್ತೆ ಮತ್ತೆ ಹೀಗೆ ಮಾತನಾಡುತ್ತಿರುತ್ತಾರೆ. ಅವರನ್ನು ಸಮಾಧಾನಪಡಿಸಲು ನಾವು ಹೋದರೆ ಸ್ವತಃ ಖಿನ್ನತೆಗೆ ಜಾರುವ ಸಾಧ್ಯತೆಯಿರುತ್ತದೆ; ಅಂಥವರನ್ನು ಚಿಂತೆಯ ಕೂಪದಿಂದ ಹೊರತರುವುದಿರಲಿ, ಸ್ವತಃ ಅದರೊಳಗೆ ಬಿದ್ದುಬಿಡುತ್ತೇವೆ. ಆದ್ದರಿಂದ, ಹೇಳಿದ ಬುದ್ಧಿಮಾತನ್ನು ಸ್ವೀಕರಿಸುವ ಮನಸ್ಥಿತಿ ಇಲ್ಲದವರಿಗೆ, ತಿದ್ದಿಕೊಳ್ಳಲು ಮನಸ್ಸು ಮಾಡದವರಿಗೆ, ಬುದ್ಧಿವಾದ ಹೇಳಲು ಹೋಗಬಾರದು. ಏಕೆಂದರೆ, ಅಂಥವರಿಗೆ ಪರಿಹಾರ ಬೇಕಿರುವುದಿಲ್ಲ, ಪರರೊಂದಿಗೆ ತಮ್ಮ ಸಂಕಟವನ್ನು ತೋಡಿಕೊಳ್ಳುವುದರಲ್ಲೇ ಅವರು ಸುಖಿಸುತ್ತಾರೆ! ಜೀವನ್ಮುಖಿಯಾದ ನಾವು ಅವರನ್ನು ಸರಿಪಡಿಸಲು ಹೋದರೆ, ನಮ್ಮ ಸಮಯವೂ ವ್ಯರ್ಥವಾಗುತ್ತದೆ.

ನಮ್ಮ ಒಳ್ಳೆಯತನ, ಉಪಕಾರಬುದ್ಧಿ ಎಂದಿಗೂ ಅಪಾತ್ರದಾನವಾಗಬಾರದು. ನನ್ನ ಚೈತನ್ಯವು ಎಂದಿಗೂ ಕುಗ್ಗಬಾರದು. ಈ ಸೂಕ್ಷ್ಮವನ್ನು ಅರಿತು, ಯಾರಿಗೆ ಸಹಾಯಮಾಡಬೇಕು, ಎಷ್ಟು ಬುದ್ಧಿಹೇಳಿ ಸರಿಪಡಿಸಬೇಕು ಎಂಬ ವಿವೇಚನೆಯನ್ನು ರೂಢಿಸಿಕೊಳ್ಳಬೇಕು.

ವಿವಿಧ ವಿನೋದಾವಳಿ...

ಎಲ್ಲಿಗೆ ಪಯಣಾ, ಯಾವುದೋ ದಾರೀ, ಏಕಾಂಗಿ ಸಂಚಾರಿ!

ಯಗಟಿ ರಘು ನಾಡಿಗ್

ಪುಢಾರಿ ನುಂಗಣ್ಣನವರು ಕಾರ್ಯನಿಮಿತ್ತವಾಗಿ ದೂರದ ಊರಿಗೆ ತಮ್ಮ ಕಾರಿನಲ್ಲಿ ಸ್ವತಃ ತಾವೇ ಡ್ರೈವ್ ಮಾಡಿಕೊಂಡು ಹೋಗಿದ್ದರು. ಬೆಂಗಳೂರಿಗೆ ಹಿಂದಿರುಗುವ ಮಾರ್ಗದಲ್ಲಿ ಅವರು 'ಚಾರ್ಮಾಡಿ ಘಾಟ್' ಅನ್ನು ಹಾದುಬರಬೇಕಿತ್ತು. ಹೀಗೆ ಬರುತ್ತಿರುವಾಗ ಘಾಟ್‌ನಲ್ಲಿ ಕಾರು ಕೆಟ್ಟುಹೋಯಿತು. ತಾವೇ ಡ್ರೈವ್ ಮಾಡಬೇಕು ಎಂಬ ಉತ್ಸಾಹದಲ್ಲಿ ಡ್ರೈವರ್‌ಗೂ ಬರೋದು ಬೇಡ ಎಂದು ಹೇಳಿದ್ದಕ್ಕೆ ತಮಗೆ ತಾವೇ ಬೈದುಕೊಂಡರು ನುಂಗಣ್ಣ. ಸಹಾಯಕ್ಕೆ ಯಾರನ್ನಾದರೂ ಕರೆಯೋಣವೆಂದರೆ ಅದು ನಿರ್ಜನ ಪ್ರದೇಶ.

ಕೊನೆಗೆ ತಮಗೆ ತಿಳಿದಿದ್ದ ವಿದ್ಯೆಯನ್ನೆಲ್ಲಾ ಪ್ರಯೋಗಿಸಿ ಕಾರನ್ನು ಒಂದು ಹಂತಕ್ಕೆ ತರುವ ಹೊತ್ತಿಗೆ 'ಚಾರ್ಮಾಡಿ ಘಾಟ್'ನಲ್ಲಿ ಸಂಪೂರ್ಣ ಕತ್ತಲಾವರಿಸಿತ್ತು. ಕಾರೇನೋ 'ಸ್ಟಾರ್ಟ್' ಆಯಿತು, ಆದರೆ ಕಾರಿನ 'ಹೆಡ್ ಲೈಟ್' ಕೈಕೊಟ್ಟಿತು. ಅಮಾವಾಸ್ಯೆಯ ರಾತ್ರಿ ಬೇರೆ, ಸುತ್ತಮುತ್ತ ತುಂಬಾ ಹುಣಿಸೇಮರಗಳು ಇದ್ದುದನ್ನು ನೋಡಿ, ಬೇಡಬೇಡವೆಂದರೂ ಬಾಲ್ಯದಲ್ಲಿ ಕೇಳಿದ್ದ 'ಕೊಳ್ಳಿದೆವ್ವ'ದ ಕಥೆ ಪುಢಾರಿ ನುಂಗಣ್ಣನವರಿಗೆ ನೆನಪಾಗಿ, ಪಂಚೆಯೇಕೋ ಒದ್ದೆಯಾದಂತಾಯಿತು..!!

ಹೇಗಾದರೂ ಮಾಡಿ ಅಲ್ಲಿಂದ ಜಾಗ ಖಾಲಿಮಾಡಬೇಕೆಂದು ನಿರ್ಧರಿಸಿದ ನುಂಗಣ್ಣನವರು ಒಂದು ಉಪಾಯ ಮಾಡಿದರು. ಅದೇ ಮಾರ್ಗದಲ್ಲಿ ಬಂದ ಕಾರ್ ಒಂದರ ಹಿಂಭಾಗದ ಲೈಟ್ ಅನ್ನೇ ಅನುಸರಿಸಿಕೊಂಡು ಆ ಕಾರನ್ನು ಹಿಂಬಾಲಿಸಿಕೊಂಡು ತಮ್ಮ ಕಾರನ್ನು ಚಾಲನೆ ಮಾಡಲು ಪ್ರಾರಂಭಿಸಿದರು.

ಮುಂದೆ ಸಾಗುತ್ತಿದ್ದ ಕಾರು ಎಡಭಾಗದ ಇಂಡಿಕೇಟರ್ ಆನ್ ಮಾಡಿ ಎಡಕ್ಕೆ ಚಲಿಸಿದರೆ ಇವರೂ ಎಡಕ್ಕೆ ತಮ್ಮ ಕಾರನ್ನು ತಿರುಗಿಸಿದರು; ಮುಂದಿನ ಕಾರು ಬಲಕ್ಕೆ ತಿರುಗಿದರೆ ಇವರೂ ತಮ್ಮ ಕಾರನ್ನು ಬಲಕ್ಕೆ ತಿರುಗಿಸುತ್ತಿದ್ದರು. ಒಂದು ಪಕ್ಷ ಮುಂದಿನ ಕಾರು ಸೂಚನೆ ನೀಡಿ ಬ್ರೇಕ್ ಹಾಕಿದರೆ ಇವರೂ ತಮ್ಮ ಕಾರಿಗೆ ಬ್ರೇಕ್ ಹಾಕುತ್ತಿದ್ದರು. ಸಾಕಷ್ಟು ದೂರವನ್ನು ಹೀಗೇ ಕ್ರಮಿಸಿದ ನುಂಗಣ್ಣನವರು ತಮ್ಮ ಜಾಣತನಕ್ಕೆ ತಾವೇ ಮೆಚ್ಚಿಕೊಂಡು, ಎಡಗೈನಲ್ಲಿ 'ಸ್ಟಿಯರಿಂಗ್ ವೀಲ್' ಹಿಡಿದುಕೊಂಡು ಬಲಗೈನಲ್ಲಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಮರುದಿನ ಪತ್ರಿಕಾಗೋಷ್ಠಿ ಕರೆದು ಇದನ್ನು ಬಣ್ಣಾಬಣ್ಣಿಯಾಗಿ ಬಣ್ಣಿಸಿ ಪ್ರಚಾರ ತೆಗೆದುಕೊಳ್ಳಬೇಕು ಎಂದೇ ಮನದಲ್ಲಿ ಲೆಕ್ಕ ಹಾಕುತ್ತಿದ್ದರು. ಇದರ ಜತೆಜತೆಗೇ ಮುಂದುಗಡೆಯ ಕಾರಿನ ಇಂಡಿಕೇಟರ್‌ನ ನಿರ್ದೇಶನದಂತೆ ತಮ್ಮ ಕಾರನ್ನೂ ಎಡಕ್ಕೂ, ಬಲಕ್ಕೂ ತಿರುಗಿಸುವುದು, ಬ್ರೇಕ್ ಹಾಕುವುದು ನಡೆದೇ ಇತ್ತು. ಆದರೆ ಒಂದು ಹಂತದಲ್ಲಿ ಅವರಿಗೆ ಏನೂ ಕಾಣದಂತಾಗಿ, ದುರದೃಷ್ಟವಶಾತ್ ನುಂಗಣ್ಣನವರ ಕಾರು ಮುಂದಿನ ಕಾರಿಗೆ ಢಿಕ್ಕಿ ಹೊಡೆದು, ನುಂಗಣ್ಣನವರ ಕಾರಿನ ಮುಂಭಾಗ ಜಜ್ಜಿಹೋಯಿತು.....

ತಕ್ಷಣವೇ ಧುಮುಧುಮು ಎನ್ನುತ್ತಲೇ ಕಾರಿನಿಂದ ಕೆಳಗಿಳಿದ ನುಂಗಣ್ಣನವರು ಮುಂದಿನ ಕಾರ್‌ನವನೊಂದಿಗೆ ಜಗಳಕ್ಕಿಳಿದರು: ''ಅಲ್ಲಯ್ಯಾ, ನಿನ್ನ ಕಾರು ಎಡಕ್ಕೆ ತಿರುಗುವಾಗ ನೀನು ಎಡಕ್ಕೆ ಇಂಡಿಕೇಟರ್ ಹಾಕುತ್ತಿದ್ದೆ, ಬಲಕ್ಕೆ ತಿರುಗುವಾಗ ಬಲಕ್ಕೆ ಇಂಡಿಕೇಟರ್ ಹಾಕುತ್ತಿದ್ದೆ, ಬ್ರೇಕ್ ಹಾಕುವಾಗಲೂ ಅದರ ಸಿಗ್ನಲ್ ಬರುತ್ತಿತ್ತು ನಿನ್ ಕಡೆಯಿಂದ; ಈಗೇನಯ್ಯಾ ಆಗಿದೆ ನಿಂಗೆ ರೋಗಾ.? ಕಾರ್‌ನ ಸಡನ್ನಾಗಿ ನಿಲ್ಲಿಸೋಕೆ ಮುಂಚೆ ಒಂದು 'ಸಿಗ್ನಲ್' ಕೊಡ್ಬೇಕು ಅಂತ ನಿಂಗೆ ಗೊತ್ತಾಗಿಲ್ವಾ.....?'' ಎಂದು ಮುಂದಿನ ಕಾರ್‌ನವನಿಗೆ 'ಆವಾಜ್' ಹಾಕಿದರು ಪುಢಾರಿ ನುಂಗಣ್ಣ!

ಕೆಂಡವನ್ನು ಉಗುಳುತ್ತಿದ್ದ ನುಂಗಣ್ಣನವರ ಕಣ್ಣನ್ನೂ, ಒದ್ದೆಯಾಗಿದ್ದ ಅವರ ಪಂಚೆಯನ್ನೂ ತನ್ನ ಕಣ್ಣಿನಲ್ಲೇ ಅಳೆದ ಮುಂದಿನ ಕಾರಿನವ ಯಾವುದೇ ಉದ್ವೇಗವಿಲ್ಲದೆ, ತಣ್ಣನೆಯ ದನಿಯಲ್ಲೇ ಉತ್ತರಿಸಿದ:

''ನನ್ ಮನೆ ಕಾರ್ ಷೆಡ್‌ನಲ್ಲಿ ನನ್ನ ಕಾರನ್ನ ನಿಲ್ಲಿಸೋಕೆ ನಿಮಗ್ಯಾಕೆ ಸ್ವಾಮೀ ಸಿಗ್ನಲ್ ಕೊಡ್ಬೇಕೂ?!''

ಇಲ್ಲೊಂಚೂರು ಕೇಳ್ರೀ...

- ಬೆಳ್ಳಿಯ ಪಾತ್ರೆ, ಆಭರಣ ಅಥವಾ ಸಾಮಾನುಗಳಲ್ಲಿ ಮೊಟ್ಟೆಯ ಕಲೆಗಳಿದ್ದರೆ ಒದ್ದೆಯಾದ ಉಪ್ಪನ್ನು ಪ್ರಯೋಗಿಸಿ ಹೋಗಲಾಡಿಸಬಹುದು. ಇಂಥ ಸಾಮಗ್ರಿಗಳನ್ನು ವಿಭೂತಿಯಿಂದ ತಿಕ್ಕಿದರೆ ಅವುಗಳ ಹೊಳಪು ಹೆಚ್ಚುವುದು.
- ಗಾಜಿನ ಲೋಟ ಮತ್ತು ಚೀನಿ ಮಣ್ಣಿನ ಬಟ್ಟಲು, ಪಾತ್ರೆ, ಇತ್ಯಾದಿಗಳನ್ನು ತೊಳೆಯುವಾಗ ನೀರಿಗೆ ಸ್ವಲ್ಪ ಬಿಳಿಗಾರ (ಬೊರಾಕ್ಸ್) ಸೇರಿಸಿ ಕದಡುವುದರಿಂದ ಚೆನ್ನಾಗಿ ಸ್ವಚ್ಛವಾಗುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ

1. ರುಚಿರುಚಿಯಾದ ಅಡುಗೆ ಮಾಡುವವನು (4)
3. ಭದ್ರವಾದ ಎಂದರ್ಥ (4)
4. ಶಬ್ದ ಮಾಡುವ ಎನ್ನುವುದು ಹೀಗೆ (3)
5. ಇದೊಂದು ಜಾತಿ ಜಿಂಕೆಯೇ (3)
6. ಭವಿಷ್ಯಕ್ಕಾಗಿ ಮಾಡುವ ಸಂಗ್ರಹ (3)
8. ಪ್ರಾಣಿಗಳ ಲಾಂಗೂಲ (2)
9. ಮತ್ತೊಂದು ಹಸುವನ್ನು ಕಟ್ಟಿಕೊಂಡಿರುವ ಮನೆ (3)
11. ಸಂಪತ್ತು ಎನ್ನಲು ಎರಡಕ್ಷರ ಸಾಕು (2)
13. ಬರಹದ ಚಿಹ್ನೆ (2)
15. ಅಣ್ಣ ಮಾಡಿದ ಅಪಹಾಸ್ಯ (3)
17. ಎರಡಕ್ಷರದಲ್ಲೇ ಹೆದರು (2)
18. ತಿರುಗಿ ಬಂದಿರುವ ವ್ಯಾಪಾರಿ (3)
19. ಶಬ್ದ ಅಥವಾ ಧ್ವನಿ (3)
20. ಸ್ವರ್ಗದ ವಿರೋಧ ಪದ (3)
21. ಶಿವನಿಗೆ ಮತ್ತೊಂದು ಹೆಸರು (4)
22. ಯುದ್ಧಕ್ಕೆ ಹೆದರಿ ಓಡಿಹೋದವನು (4)

ಮೇಲಿನಿಂದ ಕೆಳಕ್ಕೆ

2. ಮರ ಕತ್ತರಿಸುವ ಸಾಧನ (4)
3. ಚುನಾವಣೆಯ ದಿನ ಮಾಡುವ ಪವಿತ್ರಕಾರ್ಯ (4)
5. ಮತ್ತೊಬ್ಬರಿಂದ ಪಡೆದ ಕಡ (2)
7. ಬಟ್ಟೆ ಅಥವಾ ಧಾನ್ಯ ಹಾಳುಮಾಡುವ ಸಣ್ಣ ಹುಳು (2)
8. ರೇಡಿಯೋ ಅಥವಾ ಆಕಾಶವಾಣಿಗೆ ಹೀಗೊಂದು ಹೆಸರು (3)
10. ಮುಖ ನೋಡಿಕೊಳ್ಳಲು ಬೇಕಾಗುವ ಕನ್ನಡಿ (3)
12. ರೀತಿಯೊಂದಿಗೆ ಬರುವ ಜೋಡಿಪದ (3)
14. ಕೋಗಿಲೆಗೆ ಮತ್ತೊಂದು ಹೆಸರು (2)
15. ಕೀಳುದೆಸೆಗೆ ಹೀಗೆನ್ನುವರು (4)
16. ಕರದ ಮಧ್ಯೆ ಬಂದಿರುವ ಕರುಣೆ (4)
17. ಸೊಬಗು ಅಥವಾ ಚೆಲುವು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ಬಾಣಸಿಗ 3.ಮಜಬೂತು 4.ರಣಿತ 5.ಸಾರಂಗ 6.ದಾಸ್ತಾನು 8.ಬಾಲ 9.ಸದನ 11.ಸಿರಿ 13.ಲಿಪಿ 15.ಅಣಕ 17.ಅಂಜು 18.ಕಣಿವ 19.ನಿನಾದ 20.ನರಕ 21.ಪಶುಪತಿ 22.ರಣಹೇಡಿ

ಮೇಲಿನಿಂದ ಕೆಳಕ್ಕೆ: 2.ಗರಗಸ 3.ಮತದಾನ 5.ಸಾಲ 7.ನುಸಿ 8.ಬಾನುಲಿ 10.ದರ್ಪಣ 12.ರಿವಾಜು 14.ಪಿಕ 15.ಅವನತಿ 16.ಕನಿಕರ 17.ಅಂದ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಸುಧೀರ್ ತೈಲಾಂಗ್

ಛೇ! ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವನ್ನು ಗೆಲ್ಲಿಸಿ ನನ್ನ ಕೈಗೆ ಅಧಿಕಾರವನ್ನು ಕೊಡ್ರಪ್ಪಾ ಅಂದ್ರೆ, ನಮ್ ಜನ ಕನ್‌ಫ್ಯೂಸ್ ಮಾಡ್ಕೊಂಡು ಆಮ್ ಆದ್ಮಿ ಪಕ್ಷದ ಚಿಹ್ನೆಯನ್ನೇ ನನ್ನ ಕೈಗೆ ಕೊಟ್ಟುಬಿಟ್ರು!!

'ಹಲ್‌ಬಿಡಿ' ಶಾಸನ

ಓಪನಿಂಗ್ ಬೌಲರ್..!

ಎಂಕ ಮತ್ತು ಮಂಕ ಆಪ್ತಮಿತ್ರರು ಹಾಗೂ ಕ್ರಿಕೆಟ್ ಅಂದರೆ 'ಪ್ರಾಣವನ್ನೇ ಬಿಡುವಷ್ಟು' ಕ್ರಿಕೆಟಾಭಿಮಾನಿಗಳು! ಬದುಕಿದ್ದಾಗ ಮಾತ್ರವಲ್ಲದೆ ಸತ್ತಮೇಲೂ ಕ್ರಿಕೆಟ್‌ಗೇ ತಮ್ಮ ಜೀವವನ್ನು(!) ಅರ್ಪಿಸಬೇಕು ಎಂದು ನಿರ್ಧರಿಸಿದ್ದ ಈ ಸನ್ಮಿತ್ರರು ಒಮ್ಮೆ ಒಂದು ತೀರ್ಮಾನಕ್ಕೆ ಬಂದರು. ತಮ್ಮಿಬ್ಬರಲ್ಲಿ ಯಾರು ಮೊದಲು ಸಾಯುತ್ತಾರೋ ಅವರು ಸ್ವರ್ಗದಲ್ಲಿ ಕ್ರಿಕೆಟ್ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಇನ್ನೊಬ್ಬರಿಗೆ ಕನಸಿನಲ್ಲಿ ಬಂದು ಹೇಳಬೇಕು ಎಂಬ ಅಲಿಖಿತ ಒಪ್ಪಂದವಾಯಿತು.

ಒಂದು ದಿನ ಎಂಕನ 'ವಿಕೆಟ್' ಉರುಳಿತು. ಕೆಲದಿನಗಳ ನಂತರ ಮಂಕನ ಕನಸಿನಲ್ಲಿ ಬಂದ ಎಂಕ, ''ಅಯ್ಯಾ ಮಿತ್ರಾ... ಮಂಕಾ... ಹೇಗಿದ್ದೀಯೋ?'' ಅಂದ. ಈ ಮಾತಿಗೆ ಮಂಕ ''ನಾನು ಚೆನ್ನಾಗೇ ಇದ್ದೀನಿ... ನೀನು ಸತ್ತುಹೋದವನು ಈಗ ಹ್ಯಾಗಿದ್ದೀಯ? ಕ್ಷೇಮವಾಗಿದ್ದೀಯಾ? ಅಂದ್ಹಾಗೆ ಸ್ವರ್ಗದಲ್ಲಿ ಕ್ರಿಕೆಟ್ ಇದೆಯಾ? ಅದರ ಕುರಿತು ಏನಾದ್ರೂ ಸುದ್ದಿ ಹೇಳಯ್ಯಾ...'' ಎಂದ.

ಅದಕ್ಕೆ ಎಂಕ ಹೇಳಿದ: ''ನನ್ನ ಬಳಿ ಒಳ್ಳೇ ಸುದ್ದಿ ಹಾಗೂ ಕೆಟ್ಟ ಸುದ್ದಿ ಎರಡೂ ಇದೆಯಮ್ಮಾ! ಒಳ್ಳೇ ಸುದ್ದಿ ಅಂದ್ರೆ, ಇಲ್ಲಿ ಸ್ವರ್ಗದಲ್ಲೂ ಕ್ರಿಕೆಟ್ ಇದೆ; ಕೆಟ್ಟ ಸುದ್ದಿ ಅಂದ್ರೇ ಅಂದ್ರೇ ಇಲ್ಲಿ ನಾಳೆ ನಡೆಯುವ ಮ್ಯಾಚ್‌ಗೆ ನೀನೇ 'ಓಪನಿಂಗ್ ಬೌಲರ್'!

ವೃತ್ತಿಯಲ್ಲಿ ಹಾಸ್ಯ...

ಅಪಾರ್ಥ ಮಾಡಿಕೊಂಡ ಅಮಾಯಕ ಗ್ರಾಹಕರು!

ಮೂವತ್ತಾರಕ್ಕೂ ಹೆಚ್ಚು ವರ್ಷದ ಸುದೀರ್ಘ ವೃತ್ತಿಯಿಂದ ಈಗಷ್ಟೇ ನಿವೃತ್ತಿ ಹೊಂದಿದ ಹೆಮ್ಮೆಯ ಬ್ಯಾಂಕ್ ಉದ್ಯೋಗಿ ನಾನು. ಹಳ್ಳಿ ಮತ್ತು ಸಣ್ಣ ಪಟ್ಟಣದ ಶಾಖೆಗಳಲ್ಲಿ ಸಾಮಾನ್ಯವಾಗಿ ಮುಗ್ಧ (ಅದರಲ್ಲೂ ಅಶಿಕ್ಷಿತ) ಗ್ರಾಹಕರು ಹಣ ಠೇವಣಿ ಇಡಲು ಬಯಸಿ ಬರುವುದು ಸಹಜ. ತಮ್ಮ ಹಣ ಇಲ್ಲಿ ಅತ್ಯಂತ ಸುರಕ್ಷಿತ ಅಂತ ಅವರಿಗೆ ಮನವರಿಕೆಯಾದರೆ ಮಾತ್ರವೇ ಅವರು ಮ್ಯಾನೇಜರ್ ಹತ್ತಿರ ಮಾತಿಗೆ ಬರೋದು.

ಇಂಥದೇ ಒಂದು ಸಂದರ್ಭ. ಹಳ್ಳಿಯ ಶಾಖೆಯಲ್ಲಿ ಒಂದು ದಿನ ಒಬ್ಬ ಯಜಮಾನರು ನಮ್ಮ ಬ್ಯಾಂಕಿನ ಠೇವಣಿ ಯೋಜನೆಗಳ ಕುರಿತು ಮಾಹಿತಿ ಪಡೆದು ದುಡ್ಡಿಡಲು ಸಂತೋಷದಿಂದ ಒಪ್ಪಿದರು. ಅವರ ಎಲ್ಲಾ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿಕೊಂಡೆ. ಕೊನೆಯ ಪ್ರಶ್ನೆಯಾಗಿ ''ಠೇವಣಿಗೆ ಯಾರನ್ನು ನಾಮನಿರ್ದೇಶನ (ನಾಮಿನೇಷನ್) ಮಾಡಬಯಸುವಿರಿ?'' ಅಂತ ಕೇಳಿದಾಗ ಅವರಿಗೆ ಅರ್ಥವಾಗಲಿಲ್ಲ. ''ನಿಮ್ಮ ತರುವಾಯ ಈ ದುಡ್ಡು ಯಾರಿಗೆ ಸೇರಬೇಕು?'' ಅಂತ ಕೇಳಿದೆ. ಅದಕ್ಕವರು, ''ಸ್ವಾಮೀ ಇದು ನನ್ನ ದುಡಿಮೆಯ ಹಣ, ಹೀಗಾಗಿ ಇದು ನನಗೇ ಸಿಗಬೇಕು, ಬೇರೆಯವರಿಗಲ್ಲ'' ಎನ್ನುವ ಖಡಕ್ಕಾದ ಮಾತು ಹೇಳಿದ್ರು.

ಅಂತೂ ಇಂತೂ ಸುಮಾರು ಉದಾಹರಣೆ ಕೊಟ್ಟು, ಠೇವಣಿಗೆ ನಾಮನಿರ್ದೇಶನ ಮಾಡುವುದಕ್ಕೆ ಇರುವ ಮಹತ್ವ, ಅದರ ಅನುಕೂಲದ ಬಗ್ಗೆ ಹೇಳಿದರೂ ಆಸಾಮಿ ಜಗ್ಗಲಿಲ್ಲ. ಮತ್ತೆ ಪ್ರಶ್ನೆಯ ಸುರಿಮಳೆ. ಕೊನೆಯದಾಗಿ ನಾನು, ''ದುಡ್ಡಿಟ್ಟ ನೀವು ಒಂದು ಪಕ್ಷ ಪರಂಧಾಮ ಸೇರಿದ್ರೆ, ಆಗ ಈ ನಿಮ್ಮ ಠೇವಣಿ ಹಣವನ್ನು ಬ್ಯಾಂಕು ಯಾರಿಗೆ ಕೊಡಬೇಕೆಂದು ಬಯಸ್ತೀರಿ?'' ಅಂದುಬಿಟ್ಟೆ..!

ಆ ಯಜಮಾನರ ಕೋಪ ನೆತ್ತಿಗೇರಿ, ''ನಿಮ್ಮ ಬ್ಯಾಂಕಿನಲ್ಲಿ ದುಡ್ಡು ಇಟ್ಟು ಉಪಕಾರ ಮಾಡೋಣ ಅಂತ ಬಂದರೆ, ನಾನು ಸಾಯೋ ಮಾತು ಹೇಳ್ತೀರಿ.. ಇದೇನಾ ನೀವು ಕೊಡೋ ಗ್ರಾಹಕ ಸೇವೆ?'' ಅನ್ನಬೇಕೆ! ಹಾಗೂ ಹೀಗೂ ಅವರನ್ನು ಸಮಾಧಾನಪಡಿಸಿ ಇನ್ನಷ್ಟು ಮಾಹಿತಿ ನೀಡಿ, ಕೊನೆಗೆ ನನ್ನ ಮಾತಿಗೆ ಕ್ಷಮೆ ಕೋರಿದೆ. ಆಗ ಪೂರ್ಣವಿಷಯ ಅರಿತ ಅವರು ಸಂತೋಷದಿಂದ ಠೇವಣಿ ನೀಡಿದರೆನ್ನಿ..

ನನ್ನ ಬ್ಯಾಂಕ್ ದಿನಗಳಲ್ಲಿ ಇದು ನಾನು ಕಲಿತ ಒಂದು ದೊಡ್ಡ ಪಾಠ. ಇದರ ನೆರವಿನಿಂದ, ಗ್ರಾಹಕರಿಗೆ ಸೂಕ್ತ ಮಾಹಿತಿಯನ್ನು ಆಪ್ತತೆಯಿಂದ ಹೇಳುವ ಕಲೆಯನ್ನು ಕರಗತ ಮಾಡಿಕೊಂಡು ಮುನ್ನಡೆದೆ.

ಹಾಸ್ಯದ ಹಂಚಿಕೆದಾರರು
ಲಕ್ಷ್ಮೀಕಾಂತ ಪಾಟೀಲ,
ಕರ್ನಾಟಕ ಬ್ಯಾಂಕ್‌ನ ನಿವೃತ್ತ ಅಧಿಕಾರಿ, ಮೈಸೂರು

ವಿಶ್ವಯೋಗ

ಥೈರಾಯ್ಡ್ ಗ್ರಂಥಿಯ ಬಲವರ್ಧಕ ಆಸನ

ಡಾ. ಪತಂಜಲಿ ಆಚಾರ್ಯ



ಮತ್ಸ್ಯಾಸನ: ಮತ್ಸ್ಯ ಎಂದರೆ ಮೀನು ಎಂದರ್ಥ. ಈ ಆಸನದ ಭಂಗಿಯು ಮೀನಿನ ಚಹರೆಯನ್ನು ಹೋಲುವುದರಿಂದ ಇದಕ್ಕೆ ಮತ್ಸ್ಯಾಸನ ಎಂಬ ಹೆಸರು ಬಂದಿದೆ. ಸರ್ವಾಂಗಾಸನವನ್ನು ಆಚರಿಸಿದ ನಂತರ ಈ ಆಸನವನ್ನು ಅಭ್ಯಾಸ ಮಾಡುವುದು ಒಳಿತು.

ಅಭ್ಯಾಸಕ್ರಮ: ಮೊದಲಿಗೆ ಪದ್ಮಾಸನವನ್ನು ಹಾಕಿ ಕೆಲ ಕ್ಷಣ ಕುಳಿತುಕೊಳ್ಳಿ. ನಂತರ ಹಾಗೆಯೇ ಹಿಂದಕ್ಕೆ ಬಾಗುತ್ತಾ ಅಂಗಾತ ಮಲಗಬೇಕು. ಎಡ ಮತ್ತು ಬಲ ಭಾಗದ ಕಾಲುಗಳ ಅಂಗುಷ್ಠಗಳನ್ನು (ಹೆಬ್ಬೆರಳುಗಳನ್ನು) ಆಯಾ ಭಾಗದ ಕೈಗಳಿಂದ ಹಿಡಿದುಕೊಳ್ಳಬೇಕು. ತೊಡೆಗಳನ್ನು ನೆಲಕ್ಕೆ ತಾಗಿಸಿಟ್ಟುಕೊಂಡು, ತಲೆಯ ಮೇಲೆ ಭಾರಹಾಕಿ, ಸಾಧ್ಯವಾದಷ್ಟು ಹಿಂದಕ್ಕೆ ಬೆನ್ನನ್ನು ಮಡಿಸಬೇಕು. ಹೀಗೆ ಮಾಡಿದಾಗ ಎದೆಯ ಭಾಗವು ಮೇಲಕ್ಕೆ ಎತ್ತರಿಸಿಕೊಂಡು ದೃಷ್ಟಿಯು ಎದುರಿಗೆ ನೆಟ್ಟಿರುವಂತಿರಬೇಕು. ಈ ಆಸನವನ್ನು ಶುರುವಿನಲ್ಲಿ 30 ಸೆಕೆಂಡುಗಳವರೆಗೆ ಆಚರಿಸಿ, ಕ್ರಮೇಣ 3 ನಿಮಿಷಗಳವರೆಗೆ ವಿಸ್ತರಿಸಬಹುದು.

ಪ್ರಯೋಜನಗಳು: ಮತ್ಸ್ಯಾಸನದ ಆಚರಣೆಯಿಂದಾಗಿ ಉಸಿರಾಟದ ಕ್ರಮವು ಬಲಗೊಳ್ಳುವುದು, ಜಠರಕ್ಕೆ ಸಂಬಂಧಿಸಿದ ಎಲ್ಲ ಅಂಗಗಳೂ ಚುರುಕುಗೊಳ್ಳುವುವು. ಹೆಚ್ಚಿನ ರಕ್ತಸಂಚಾರದಿಂದಾಗಿ ಥೈರಾಯ್ಡ್ ಗ್ರಂಥಿಯು ಚುರುಕುಗೊಂಡು, ಪುನಶ್ಚೇತನ ಪಡೆದುಕೊಳ್ಳುವುದು.

ಸಮಾಚಾರ ಸಣ್ಣದಲ್ಲ

ಕೊಹ್ಲಿ ಪ್ರದರ್ಶನ: ರಾಜೀವ್ ಶುಕ್ಲಾ ಸಂತಸ



ದುಬೈ: ಇಲ್ಲಿ ನಡೆಯುತ್ತಿರುವ ಚಾಂಪಿಯನ್ಸ್ ಟೂರ್ನಿಯಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಭಾರತದ ಮಾಜಿ ನಾಯಕ ವಿರಾಟ್ ಕೊಹ್ಲಿ ಆಡಿದ ಆಟ ಅದ್ಭುತವಾಗಿತ್ತು. ಒತ್ತಡದ ನಡುವೆಯೂ ಕೊಹ್ಲಿ ಅಸಾಧಾರಣ ಪ್ರದರ್ಶನ ತೋರಿದರು ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ವಿರಾಟ್ ಕೊಹ್ಲಿ ಒತ್ತಡವನ್ನು ಹೇಗೆ ನಿಭಾಯಿಸಬೇಕು, ದೇಶಕ್ಕಾಗಿ ಹೇಗೆ ಆಡಬೇಕು ಎಂಬುವುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ತಮ್ಮ ಅತ್ಯುತ್ತಮ ಇನ್ನಿಂಗ್ಸ್ ಮೂಲಕ ವಿರಾಟ್ ಪಂದ್ಯದ ಜತೆಗೆ ಕೋಟ್ಯಂತರ ಹೃದಯಗಳನ್ನು ಗೆದ್ದಿದ್ದಾರೆ. ವೈಯಕ್ತಿಕ ಇನ್ನಿಂಗ್ಸ್ ಮುಖ್ಯವಲ್ಲ, ದೇಶಕ್ಕಾಗಿ ಆಡುವ ಅವರ ಗುಣ ದೊಡ್ಡದು' ಎಂದು ಹೇಳಿದ್ದಾರೆ. 'ಕೊಹ್ಲಿ ಅವರ ಶತಕ ಅದ್ಭುತವಾಗಿತ್ತು. ಕೊಹ್ಲಿ ಶತಕ ಗಳಿಸಿದ ರೀತಿಯು ಭಾರತ ತಂಡದ ಸ್ಥಿರ ಪ್ರದರ್ಶನಕ್ಕೆ ಕಾರಣವಾಯಿತು. ಭಾರತ ತಂಡವು ಇದೀಗ ಸಂಪೂರ್ಣ ಫಾರ್ಮ್‌ಗೆ ಮರಳಿದೆ. ಎಲ್ಲಾ ಆಟಗಾರರೂ ಪೂರ್ಣವಾಗಿ ಫಿಟ್ ಆಗಿದ್ದರು. ಪಾಕಿಸ್ತಾನವನ್ನು ಎದುರಿಸಲು ಸಿದ್ಧರಾಗಿದ್ದರು ಎಂಬುದನ್ನು ಆಟದ ಮೂಲಕ ಪ್ರದರ್ಶಿಸಿದ್ದಾರೆ' ಎಂದು ರಾಜೀವ್ ಶುಕ್ಲಾ ತಿಳಿಸಿದ್ದಾರೆ.

ರಚಿನ್ ಐಫೋನ್ ಇನ್ನೂ ನಾಪತ್ತೆ

ಇಸ್ಲಾಮಾಬಾದ್: ತ್ರಿಕೋನ ಏಕದಿನ ಸರಣಿ ಮತ್ತು ಐಸಿಸಿ ಚಾಂಪಿಯನ್ಸ್ ಟ್ರೋಫಿ ಸರಣಿಗಾಗಿ ಪಾಕಿಸ್ತಾನಕ್ಕೆ ತೆರಳಿರುವ ನ್ಯೂಜಿಲೆಂಡ್ ತಂಡದ ಸ್ಟಾರ್ ಆಟಗಾರ ರಚಿನ್ ರವೀಂದ್ರ ಅವರ ಐಫೋನ್ ಕಳವಾಗಿರುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಸದ್ದು ಮಾಡುತ್ತಿದೆ. ತ್ರಿಕೋನ ಏಕದಿನ ಸರಣಿಗಾಗಿ ಪಾಕ್‌ಗೆ ತೆರಳಿದ್ದ ರಚಿನ್ ರವೀಂದ್ರ, ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ತಲೆಗೆ ಗಾಯ ಮಾಡಿಕೊಂಡಿದ್ದರು. ಕಳಪೆ ಲೈಟಿಂಗ್ ನಿಂದಾಗಿ ಫೀಲ್ಡಿಂಗ್ ಮಾಡುವ ವೇಳೆ ಅವರ ತಲೆಗೆ ಚೆಂಡು ಬಡಿದು ಗಂಭೀರವಾಗಿ ಗಾಯ ಗೊಂಡಿದ್ದರು. ಬಳಿಕ ಆಸ್ಪತ್ರೆಗೆ ದಾಖಲಾಗಿದ್ದ ರಚಿನ್ ರವೀಂದ್ರ, ಚಿಕಿತ್ಸೆ ಪಡೆಯುತ್ತಿರುವಾಗ ಅವರ ಐಫೋನ್ ಕಳವಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಸುದ್ದಿಯನ್ನು ಪಾಕಿಸ್ತಾನ ನಿರಾಕರಿಸಿದ್ದು, ಐಸಿಸಿ ಪಂದ್ಯಾವಳಿಯನ್ನು ಆಯೋಜಿಸುತ್ತಿರುವುದನ್ನು ಸಹಿಸಲಾಗದವರು ಅಪಪ್ರಚಾರ ನಡೆಸುತ್ತಿದ್ದಾರೆ ಎಂದಿದೆ.

ನ್ಯೂಜಿಲೆಂಡ್ ಎದುರು ಸೋತ ಬಾಂಗ್ಲಾ ಹೊರಕ್ಕೆ

ಕಿವೀ ಸೆಮಿಗೆ, ಪಾಕ್ ಮನೆಗೆ

ರಾವಲ್ಪಿಂಡಿ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಬಾಂಗ್ಲಾದೇಶದ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿತು. ಆರಂಭಿಕ ಆಘಾತದ ಹೊರತಾಗಿಯೂ ರಚಿನ್ ರವೀಂದ್ರ ಅವರ ಸ್ಫೋಟಕ ಶತಕದ ನೆರವಿನಿಂದ ಪಂದ್ಯವನ್ನು 46.1 ಓವರ್ ಗಳಲ್ಲಿ 5 ವಿಕೆಟ್‌ಗಳಿಂದ ಕಿವೀಸ್ ಗೆದ್ದು ಬೀಗಿತು. ಸುಲಭವಾಗಿ ಪಂದ್ಯ ಗೆಲ್ಲುವ ಮೂಲಕ ನ್ಯೂಜಿಲೆಂಡ್ ಗ್ರೂಪ್-ಎನಲ್ಲಿ ಭಾರತದ ಜೊತೆ ಸೆಮಿಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು. ಸತತ ಎರಡು ಪಂದ್ಯಗಳನ್ನು ಸೋಲುವ ಮೂಲಕ ಬಾಂಗ್ಲಾದೇಶವು ಪಾಕಿಸ್ತಾನದ ಜೊತೆಗೆ ಟೂರ್ನಿಯಿಂದಲೇ ಹೊರಬಿದ್ದಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ ತಂಡಕ್ಕೆ ಉತ್ತಮ ಆರಂಭದ ಹೊರತಾಗಿಯೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದಿಂದ ದಿಢೀರ್ ಕುಸಿತ ಅನುಭವಿಸಿತು. ಆರಂಭಿಕ ಬ್ಯಾಟರ್ ತಾಂಜಿದ್ ಹಸನ್ 24 ಹಾಗೂ ನಾಯಕ ನಜ್ಮುಲ್ ಹುಸೇನ್ ಶಾಂಟೋ 77 ರನ್ ಗಳಿಸಿದರು. ಆದರೆ ಟಾಪ್ ಆರ್ಡರ್ ಬ್ಯಾಟರ್‌ಗಳು ನೀರಸ ಪ್ರದರ್ಶನ ತೋರುವ ಮೂಲಕ ತಂಡದ ಕುಸಿತಕ್ಕೆ ಕಾರಣರಾದರು.

ಕೆಳ ಕ್ರಮಾಂಕದಲ್ಲಿ ಜಾಕಿರ್ ಅಲಿ 45 ಹಾಗೂ ರಿಶಾದ್ ಹುಸೇನ್ 26 ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು 230ರ ಗಡಿ ದಾಟಿಸಿದರು. ನ್ಯೂಜಿಲೆಂಡ್ ಪರವಾಗಿ ಅಮೋಘ ಬೌಲಿಂಗ್ ದಾಳಿ ಪ್ರದರ್ಶಿಸಿದ ಮೈಕೆಲ್ ಬ್ರೇಸ್‌ವೆಲ್ 4, ವಿಲಿಯಮ್ ಒರೂರ್ಕ್ 2, ಮ್ಯಾಟ್ ಹೆನ್ರಿ ಹಾಗೂ ಕೈಲ್ ಜೇಮಿಸನ್ ತಲಾ ಒಂದು ವಿಕೆಟ್ ಪಡೆದು ಬಾಂಗ್ಲಾ ಕುಸಿತಕ್ಕೆ ಕಾರಣರಾದರು.

237 ರನ್‌ಗಳ ಸಾಧಾರಣ ಮೊತ್ತ ಬೆನ್ನಟ್ಟಿದ ನ್ಯೂಜಿಲೆಂಡ್‌ಗೆ ಉತ್ತಮ ಆರಂಭ ದೊರಕಲಿಲ್ಲ. ಕಿವೀಸ್ ಪರವಾಗಿ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಇಳಿದ ಯುವ ಬ್ಯಾಟರ್ ರಚಿನ್ ರವೀಂದ್ರ, ಸ್ಫೋಟಕ ಇನ್ನಿಂಗ್ಸ್ ಕಟ್ಟಿದರು. ಅವರು 105 ಎಸೆತಗಳಲ್ಲಿ 12 ಬೌಂಡರಿ, 1 ಸಿಕ್ಸರ್ ಸಹಿತ 112 ರನ್ ಸಿಡಿಸಿದರು. ಅವರಿಗೆ ಉತ್ತಮ ಜತೆಯಾಟ ನೀಡಿದ ಟಾಮ್ ಲಾಥಮ್ 55 ಮತ್ತು ಆರಂಭಿಕ ಆಟಗಾರ ಡಿವೋನ್ ಕಾನ್ವೆ 30 ರನ್ ಸಿಡಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಾಂಗ್ಲಾ ಪರವಾಗಿ ಟಸ್ಕಿನ್ ಅಹ್ಮದ್, ನಾಹಿದ್ ರಾಣಾ,

ಮುಸ್ತಫಿಜೂರ್ ರೆಹಮಾನ್ ಹಾಗೂ ರಿಶಾದ್ ಹುಸೇನ್ ತಲಾ ಒಂದೊಂದು ವಿಕೆಟ್ ಪಡೆದುಕೊಂಡರು.

ಡಬ್ಲ್ಯೂಪಿಎಲ್ ಇತಿಹಾಸದ ಮೊದಲ ಸೂಪರ್ ಓವರ್ ಪಂದ್ಯದಲ್ಲಿ ಸೋತ ಆರ್‌ಸಿಬಿ

ತವರಲ್ಲಿ ಮತ್ತೆ ಅಪಜಯ

ಬೆಂಗಳೂರು: ಡಬ್ಲ್ಯೂಪಿಎಲ್ ಟೂರ್ನಿಯಲ್ಲಿ ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಯುಪಿ ವಾರಿಯರ್ಸ್ ತಲಾ 180 ರನ್ ಗಳಿಸುವ ಮೂಲಕ ಪಂದ್ಯ ಟೈ ಮಾಡಿಕೊಂಡರೂ ಸೂಪರ್ ಓವರ್‌ನಲ್ಲಿ ಯುಪಿ ವಾರಿಯರ್ಸ್ ತಂಡ ರೋಚಕ ಗೆಲುವನ್ನು ಸಾಧಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಆರ್‌ಸಿಬಿ ತಂಡದ ಪರವಾಗಿ ನಾಯಕಿ ಸ್ಮೃತಿ ಮಂದಾನ ವಿಕೆಟ್ ಬೇಗನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಸಂದರ್ಭದಲ್ಲಿ ಜೊತೆಯಾದ ಎಲ್ಲಿಸ್ ಪೆರ್ರಿ ಹಾಗೂ ವ್ಯಾಟ್ ಹಾಡ್ಜ್ 94 ರನ್‌ಗಳ ಜೊತೆಯಾಟ ಆಡುವ ಮೂಲಕ ತಂಡಕ್ಕೆ ಭದ್ರ ಬುನಾದಿ ಹಾಕಿದರು. ಕಳೆದ ಪಂದ್ಯದಲ್ಲಿ ಮಿಂಚಿದ್ದ ಪೆರ್ರಿ ಈ ಪಂದ್ಯದಲ್ಲೂ ಜಸ್ಟ್ 56 ಎಸೆತಗಳಲ್ಲಿ 90 ರನ್ ಸಿಡಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಆರ್‌ಸಿಬಿ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 180 ರನ್ ಸಿಡಿಸಿತ್ತು.

ಬೃಹತ್ ಮೊತ್ತ ಬೆನ್ನಟ್ಟಿದ ಯುಪಿ ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 180 ರನ್ ಗಳಿಸಿ ಆಲೌಟ್ ಆಯಿತು. ಒಂದು ಹಂತದಲ್ಲಿ ಆರ್‌ಸಿಬಿ ಸುಲಭಾಗಿ ಗೆಲುವು ಸಾಧಿಸಿತು ಎನ್ನುವಾಗಲೇ ಕಡೆಯ ಓವರ್‌ಗಳಲ್ಲಿ ಗೆಲ್ಲಲು ಹನ್ನೊಂದು ರನ್ ಅಗತ್ಯವಿತ್ತು. ಈ ಹಂತದಲ್ಲಿ 6 ಸಿಕ್ಸರ್ ಹಾಗೂ ಒಂದು ಬೌಂಡರಿ ಬಾರಿಸಿದ ಎಕ್ಲೆಸ್ಟೋನ್ ಪಂದ್ಯವನ್ನು ಡ್ರಾ ಮಾಡಿದರು.

ಸೂಪರ್ ಓವರ್ ಪಂದ್ಯ: ಸೂಪರ್ ಓವರ್ ನಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಯು.ಪಿ ವಾರಿಯರ್ಸ್ ನಿಗದಿತ 6 ಎಸೆತಗಳಲ್ಲಿ 7 ರನ್ ಗಳಿಸಲಷ್ಟೇ ಶಕ್ತವಾಯಿತು. ಸೂಪರ್ ಓವರ್‌ನಲ್ಲಿ ಕಿಮ್ ಮೆಗ್ರಾಥ್ ಅವರು ಅಮೋಘ ಬೌಲಿಂಗ್ ದಾಳಿ ನಡೆಸಿ ಕಡಿಮೆ ಮೊತ್ತಕ್ಕೆ ಕಟ್ಟಿ ಹಾಕುವಲ್ಲಿ ಯಶಸ್ವಿಯಾದರು.

ಸೂಪರ್ ಓವರ್‌ನಲ್ಲಿ 8 ರನ್ ಟಾರ್ಗೆಟ್ ಬೆನ್ನಟ್ಟಿದ ಆರ್‌ಸಿಬಿ ಮಹಿಳಾ ತಂಡದ ಪರವಾಗಿ ರಿಚಾ ಘೋಷ್ ಹಾಗೂ ಸ್ಮೃತಿ ಮಂದಾನ ಬ್ಯಾಟಿಂಗ್ ನಡೆಸಿದರು. ಆದರೆ ಅಮೋಘ ಬೌಲಿಂಗ್ ದಾಳಿ ನಡೆಸಿದ ಎಕ್ಲೆಸ್ಟೋನ್ ಕೇವಲ 3 ರನ್ ಬಿಟ್ಟು ಕೊಡುವ ಮೂಲಕ ಯುಪಿ ವಾರಿಯರ್ಸ್‌ಗೆ 4 ರನ್‌ಗಳ ರೋಚಕ ಜಯ ತಂದುಕೊಟ್ಟರು.

ಚಾಂಪಿಯನ್ ಟ್ರೋಫಿಗೆ ಉಗ್ರರ ಬೆದರಿಕೆ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ನಡೆಯುತ್ತಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯವನ್ನಾಡುತ್ತಿರುವ ವಿದೇಶಿ ತಂಡಗಳಿಗೆ ಮತ್ತು ಪಂದ್ಯ ವೀಕ್ಷಣೆಗೆ ಬಂದಿರುವ ಅಭಿಮಾನಿಗಳು ಆತಂಕಪಡುವ ಸುದ್ದಿಯೊಂದು ಹೊರಬಿದ್ದಿದೆ. ವಿದೇಶಿ ಅತಿಥಿಗಳನ್ನು ಅಪಹರಿಸಲು ಸಕ್ರಿಯ ರಹಸ್ಯ ಗುಂಪುಗಳು ತಮ್ಮ ದೇಶದಲ್ಲಿ ಸಂಚು ರೂಪಿಸಿವೆ ಎಂದು ಪಾಕಿಸ್ತಾನದ ಗುಪ್ತಚರ ಇಲಾಖೆಯು ಸೋಮವಾರ ದೇಶದ ಭದ್ರತಾ ಪಡೆಗಳಿಗೆ ಎಚ್ಚರಿಕೆ ನೀಡಿದೆ.

ಹೆಚ್ಚಿದ ಭದ್ರತಾ ವ್ಯವಸ್ಥೆ: ಗುಪ್ತಚರ ಇಲಾಖೆಯು ಎಚ್ಚರಿಕೆ ನೀಡಿದ ಬೆನ್ನಲ್ಲೇ ಪಾಕಿಸ್ತಾನದಲ್ಲಿರುವ ಆಟಗಾರರು ಮತ್ತು ಅವರ ಜತೆಗಿರುವ ಸಿಬ್ಬಂದಿಯ ಸುರಕ್ಷತೆಯನ್ನು ಕಾಪಾಡಲು ಪಾಕ್ ಸರಕಾರ ಹೆಚ್ಚಿನ ಭದ್ರತೆಯನ್ನು ರೂಪಿಸಿದೆ. ಈಗಿರುವ ಭದ್ರತೆಯ ಜತೆಗೆ ಸ್ಥಳೀಯ ಪೊಲೀಸರೂ ಸೇರಿದಂತೆ ಉನ್ನತ ಮಟ್ಟದ ರಕ್ಷಣಾ ತಂಡಗಳನ್ನು ನಿಯೋಜಿಸಿ, ಜತೆಗೆ ಪಂದ್ಯಕ್ಕೂ ಪೊಲೀಸರಿಂದ ಭಾರೀ ಬಿಗಿ ಬಂದೋಬಸ್ತ್ ಮಾಡಲಿದೆ.

ಇದೇ ಕಾರಣಕ್ಕೆ ಬದ್ಧವೈರಿ ಪಾಕಿಸ್ತಾನದ ನೆಲಕ್ಕೆ ತನ್ನ ಕ್ರಿಕೆಟ್ ತಂಡ ಕಾಲಿಡಲು ಭಾರತ ಸರಕಾರ ಮತ್ತು ಬಿಸಿಸಿಐ ಅವಕಾಶ ನೀಡಲಿಲ್ಲ. ಭಾರತ ತಂಡವನ್ನು ತನ್ನ ನೆಲಕ್ಕೆ ಹೇಗಾದರೂ ಮಾಡಿ ಕರೆಸಿಕೊಳ್ಳಬೇಕೆಂದು ಪಾಕ್ ಶತ ಪ್ರಯತ್ನ ಮಾಡಿತ್ತು. ಆದರೆ ಟೂರ್ನಿಯಿಂದ ಹಿಂದೆ ಸರಿದರೂ ಪರವಾಗಿಲ್ಲ, ಪಾಕ್‌ಗೆ ಕಾಲಿಡುವುದಿಲ್ಲ ಎಂದು ಬಿಸಿಸಿಐ ಕಡ್ಡಿ ಮುರಿದಂತೆ ತನ್ನ ನಿಲುವನ್ನು ತಿಳಿಸಿತ್ತು, ಕೊನೆಗೆ ಮಂಡಿಯೂರಿದ ಪಾಕಿಸ್ತಾನವು ಹೈಬ್ರೀಡ್ ಮಾದರಿಗೆ ಒಪ್ಪಿಕೊಂಡಿತು.

ಸ್ಪಿನ್ನರ್‌ಗಳಿಗೆ ಸೂಕ್ತ ಅವಕಾಶ ನೀಡದ ಪಾಕ್ ತಂಡ ದುರ್ಬಲವಾಗಿದೆ

ಪಾಕ್ ವಿರುದ್ಧ ಮಾಜಿ ವೇಗಿ ಶೋಯಬ್ ಅಖ್ತರ್ ಕಿಡಿ

ದುಬೈ: ಭಾರತದ ಎದುರು ಭಾನುವಾರ ನಡೆದಿದ್ದ ಪಂದ್ಯದಲ್ಲಿ ಹೀನಾಯ ಸೋಲು ಅನುಭವಿಸಿದ್ದ ಪಾಕಿಸ್ತಾನ ತಂಡದ ವಿರುದ್ಧ ಪಾಕ್ ಮಾಜಿ ವೇಗಿ ಶೋಯಬ್ ಅಖ್ತರ್ ಕಿಡಿಕಾರಿದ್ದಾರೆ. ದುಬೈ ಪಿಚ್ ನಿಧಾನಗತಿಯಿಂದ ಕೂಡಿದ್ದು, ಫಾಸ್ಟ್ ಬೌಲರ್‌ಗಳಿಗೆ ನೆರವು ನೀಡುತ್ತಿತ್ತು. ಆದರೂ ಭಾರತ ತಂಡದ ವಿರುದ್ಧ ಇನ್ನೂ 45 ಎಸೆತ ಬಾಕಿ ಇರುವಾಗಲೇ 6 ವಿಕೆಟ್ ಸೋಲು ಅನುಭವಿಸಿದ್ದಕ್ಕೆ ಪಾಕ್‌ನ ಮಾಜಿ ಬೌಲರ್ ಶೋಯಬ್ ಅಖ್ತರ್, ತಮ್ಮ ದೇಶದ ಟೀಮ್ ಮ್ಯಾನೇಜ್‌ಮೆಂಟ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದ ವಿಡಿಯೊದಲ್ಲಿ ಮಾತನಾಡಿದ ಶೋಯಬ್ ಅಖ್ತರ್, 'ಪಾಕಿಸ್ತಾನ ತಂಡದ ತನ್ನ ಹನ್ನೊಂದರ ಬಳಗದಲ್ಲಿ ಪೂರ್ಣ ಪ್ರಮಾಣ ಸ್ಪಿನ್ನರ್‌ಗೆ ಅವಕಾಶ ನೀಡಬೇಕಾಗಿತ್ತು, ಆದರೆ ಪಾಕಿಸ್ತಾನ ತಂಡದ ಟೀಮ್ ಮ್ಯಾನೇಜ್‌ಮೆಂಟ್‌ಗೆ ಬುದ್ಧಿಹೀನ ಕಾರ್ಯ ಮಾಡಿದೆ ಎಂದು ಅವರು ಆರೋಪ ಮಾಡಿದ್ದಾರೆ.

ಭಾರತದ ವಿರುದ್ಧ ಪಾಕಿಸ್ತಾನ ತಂಡದ ಪ್ಲೇಯಿಂಗ್ ಹನ್ನೊಂದು ಆಟಗಾರರ ಬಳಗದಲ್ಲಿ ಶಾಹೀನ್ ಶಾ ಅಫ್ರೀದಿ ದುಬಾರಿಯಾಗಿ ಎರಡು ವಿಕೆಟ್ ಕಿತ್ತರೆ, ನಸೀಮ್ ಶಾ ಮತ್ತು ಹ್ಯಾರಿಸ್ ರೌಫ್ ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದರು. ಸಲ್ಮಾನ್ ಅಘಾ, ಅಬ್ರಾರ್ ಅಹ್ಮದ್ ಮತ್ತು ಖುಷ್ದಿಲ್ ಶಾ ಸ್ಪಿನ್ ಆಲ್‌ರೌಂಡರ್ ಗಳಾಗಿದ್ದಾರೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಭಾರತ ತಂಡ ಹೆಚ್ಚಿನ ಸಂಖ್ಯೆಯ ಸ್ಪಿನ್ನರ್‌ಗಳನ್ನು ಹೊಂದಿದೆ. ಕುಲ್ದೀಪ್ ಯಾದವ್ ಜೊತೆಗೆ ಭಾರತ ತಂಡದಲ್ಲಿ ಪೂರ್ಣ ಪ್ರಮಾಣದ ಸ್ಪಿನ್ನರ್ ಆಗಿ ವರುಣ್ ಚಕ್ರವರ್ತಿ ಕೂಡಾ ಇದ್ದಾರೆ. ಕನಿಷ್ಠ ಆರು ಮಂದಿ ಬೌಲರ್‌ಗಳೊಂದಿಗೆ ಭಾರತ ತಂಡ ಕಣಕ್ಕೆ ಇಳಿಯುತ್ತಿದೆ. ರವೀಂದ್ರ ಜಡೇಜಾ ಮತ್ತು ಅಕ್ಷರ್ ಪಟೇಲ್ ಯಾವುದೇ ದಿನ 10 ಓವರ್ ಗಳನ್ನು ಬೌಲ್ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಆದರೆ, ಅದೇ ಅಂಶವನ್ನು ನಾವು ಪಾಕಿಸ್ತಾನ ತಂಡಕ್ಕೆ ಹೇಳಲು ಸಾಧ್ಯವಿಲ್ಲ' ಎಂದು ಶೊಯಬ್ ಅಖ್ತರ್ ಹೇಳಿದ್ದಾರೆ.

ಬುಲ್ಡೋಜರ್ಸ್-ರೈನೋಸ್: ಮಾರ್ಚ್ 1ಕ್ಕೆ ಸೆಮಿ ಫೈನಲ್



ಬೆಂಗಳೂರು: ಸೆಲೆಬ್ರಿಟಿ ಕ್ರಿಕೆಟ್ ಲೀಗ್ 2025ರ ಲೀಗ್ ಹಂತದ ಪಂದ್ಯಗಳು ಮುಕ್ತಾಯ ವಾಗಿದ್ದು ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಿಗೆ ವೇದಿಕೆ ಸಜ್ಜಾಗಿದೆ. ಒಟ್ಟು 7 ತಂಡಗಳು ಲೀಗ್ ಹಂತದಲ್ಲಿ ತಲಾ 4 ಪಂದ್ಯಗಳನ್ನು ಆಡಿದ್ದವು. ಅಗ್ರ ನಾಲ್ಕು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದು, ಮಾರ್ಚ್ 1ರಂದು ನಡೆಯಲಿರುವ ಸೆಮಿಫೈನಲ್ ಪಂದ್ಯಗಳಲ್ಲಿ ಸೆಣಸಲಿವೆ. ಹಾಲಿ ಚಾಂಪಿಯನ್ ಬೆಂಗಾಲ್ ಟೈಗರ್ಸ್ ಆಡಿರುವ ನಾಲ್ಕು ಪಂದ್ಯಗಳನ್ನು ಗೆದ್ದು ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡು ಸೆಮಿಫೈನಲ್‌ಗೆ ಅರ್ಹತೆ ಪಡೆದಿದೆ. ರನ್ನರ್ ಅಪ್ ತಂಡವಾಗಿರುವ ಕರ್ನಾಟಕ ಬುಲ್ಡೋಜರ್ಸ್ ಎರಡನೇ ಸ್ಥಾನದೊಂದಿಗೆ ಸೆಮಿಫೈನಲ್ ಆಡಲು ಸಜ್ಜಾಗಿದ್ದರೆ. ಚೆನ್ನೈ ರೈನೋಸ್ ಮತ್ತು ಪಂಜಾಬ್ ದಿ ಶೇರ್ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದೊಂದಿಗೆ ಸೆಮಿಫೈನಲ್ ಪ್ರವೇಶಿಸಿವೆ. ಮಾರ್ಚ್ 1ರಂದು ಶನಿವಾರ ಮೈಸೂರಿನ ಯೂನಿವರ್ಸಿಟಿ ಕ್ಯಾಂಪಸ್ ಕ್ರೀಡಾಂಗಣದಲ್ಲಿ ಸೆಮಿಫೈನಲ್ ಪಂದ್ಯಗಳು ನಡೆಯಲಿದೆ.

ವಿಟಾಕೀಸ್

ಮೋಡಿ ಮಾಡಲು ರೆಡಿಯಾದ ರವಿ ಬಸ್ರೂರು

ಕಳೆದವರ್ಷ ತೆರೆಕಂಡ ಆದಿತ್ಯ ಅಭಿನಯದ ಕಾಂಗರೂ ಚಿತ್ರತಂಡದಿಂದ ಹೊಸ ಚಿತ್ರವೊಂದು ಘೋಷಣೆಯಾಗಿದೆ. ಕೆ.ಜಿ.ಎಫ್ ನಂತಹ ಸೂಪರ್ ಹಿಟ್ ಚಿತ್ರಕ್ಕೆ ಸಂಗೀತ ನೀಡುವುದರ ಮೂಲಕ ಜನಪ್ರಿಯತೆ ಪಡೆದಿರುವ ಸಂಗೀತ ನಿರ್ದೇಶಕ ರವಿ ಬಸ್ರೂರ್ ಈ ನೂತನ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದ್ದಾರೆ.

ಕಾಂಗರೂ ಚಿತ್ರವನ್ನು ನಿರ್ಮಿಸಿದ್ದ ಆರೋಹ ಪ್ರೊಡಕ್ಷನ್ಸ್ ಲಾಂಛನದಲ್ಲಿ ಚನ್ನಕೇಶವ, ಸ್ವಾಮಿ ಚಕ್ರಭಾವಿ, ನರಸಿಂಹಮೂರ್ತಿ ಚಕ್ರಭಾವಿ, ರಮೇಶ್ ಬಂಡೆ, ರವಿ ಕೀಲಾರ ಮಂಡ್ಯ ಹಾಗೂ ಕೆ.ಜಿ.ಆರ್.ಗೌಡ ಒಟ್ಟಾಗಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಕಿಶೋರ್ ಮೇಗಳಮನೆ ಅವರೆ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ತಮ್ಮ ಜನಪ್ರಿಯ ಸಂಭಾಷಣೆ ಮೂಲಕ ಜನರ ಮನ ತಲುಪಿರುವ ಮಾಸ್ತಿ ಸಂಭಾಷಣೆ ಮತ್ತು ಚಿತ್ರಕಥೆ ಬರೆಯುತ್ತಿದ್ದಾರೆ.

ಕಾಂಗರೂ ತಂಡದ ಎರಡನೇ ಪ್ರಯತ್ನಕ್ಕೆ ಎಲ್ಲರ ಪ್ರೋತ್ಸಾಹವಿರಲಿ. ರವಿ ಬಸ್ರೂರ್ ಈ ಚಿತ್ರಕ್ಕೆ ಸಂಗೀತ ನೀಡಲು ಒಪ್ಪಿಕೊಂಡಿರುವುದು ಹಾಗೂ ಮಾಸ್ತಿ ಅವರು ಸಂಭಾಷಣೆಯ ಜತೆಗೆ ಚಿತ್ರಕಥೆಗೆ ಸಾಥ್ ನೀಡುತ್ತಿರುವುದು ಸಂತಸದ ವಿಚಾರ ಸದ್ಯದಲ್ಲೇ ಈ ನೂತನ ಚಿತ್ರದ ಶೀರ್ಷಿಕೆ ಅನಾವರಣ ಮಾಡಿ ಚಿತ್ರೀಕರಣ ಆರಂಭಿಸಲಾಗುವುದು. ಅದೇ ಸಮಯದಲ್ಲಿ ಚಿತ್ರದ ನಾಯಕ ಹಾಗೂ ನಾಯಕಿಯ ಯಾರೆಂದು ತಿಳಿಸಲಾಗುವುದು ಎಂದು ನಿರ್ದೇಶಕ ಕಿಶೋರ್ ಮೇಗಳಮನೆ ತಿಳಿಸಿದ್ದಾರೆ.

ಈ ವಾರ ತೆರೆಗೆ 1990

ಮನಸ್ಸು ಮಲ್ಲಿಗೆ ಕಂಬೈನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ, ನಂದಕುಮಾರ್ ನಿರ್ದೇಶಿಸಿರುವ 1990 ಈ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ. ತೊಂಬತ್ತರ ಕಾಲಘಟ್ಟದಲ್ಲಿ ನಡೆಯುವ ಪ್ರೇಮ ಕಥೆ ಚಿತ್ರದಲ್ಲಿದ್ದು ಅದನ್ನು ಎಲ್ಲರ ಮನಕ್ಕೆ ಮುಟಗಟುವಂತೆ ಹೆಣೆಯಲಾಗಿದೆ. ಅರುಣ್ ನಾಯಕನಾಗಿ ನಟಿಸಿದ್ದು, ರಾಣಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಈಗಾಗಲೇ ಮಹಾರಾಜ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಚಿತ್ರದ ಹಾಡುಗಳಿಗೆ ಮೆಚ್ಚುಗೆ ವ್ಯಕ್ತವಾಗಿದೆ. ಈ ಚಿತ್ರದ ಟೀಸರ್ ಹಾಗೂ ಟ್ರೇಲರ್ ಸಿನಿಪ್ರಿಯರ ಮನಗೆದ್ದಿದೆ.

ಹಾಲೇಶ್ ಛಾಯಾಗ್ರಹಣ, ಕೃಷ್ಣ ಸಂಕಲನ, ಅಶೋಕ್ ಸಾಹಸ ನಿರ್ದೇಶನ ಹಾಗೂ ಸಾದಿಕ್ ಸರ್ದಾರ್ ನೃತ್ಯ ನಿರ್ದೇಶನ 1990 ಚಿತ್ರಕ್ಕಿದೆ.

ಟಾಲಿವುಡ್‌ಗೆ ರಾಣಿ ಮುಖರ್ಜಿ

ಟಾಲಿವುಡ್ ಮೆಘಾಸ್ಟಾರ್ ಚಿರಂಜೀವಿ ಇಂದಿಗೂ ಬೇಡಿಕೆಯ ನಟರಾಗಿದ್ದಾರೆ. ಎಪ್ಪತ್ತರ ಸನಿಹದಲ್ಲಿರುವ ಚಿರಂಜೀವಿ ಈಗಲೂ ಆ್ಯಕ್ಷನ್ ಸಿನಿಮಾಗಳಲ್ಲಿ ಮಿಂಚುತ್ತಿದ್ದಾರೆ, ಭರ್ಜರಿಯಾಗಿ ಡ್ಯಾನ್ಸ್ ಮಾಡುತ್ತಾರೆ. ಹಾಗಾಗಿಯೇ ಮೆಘಾಸ್ಟಾರ್ ಎಲ್ಲರ ಅಚ್ಚುಮೆಚ್ಚಾಗಿದ್ದಾರೆ. ನಿರ್ದೇಶಕರಂತೂ ಚಿರಂಜೀವಿ ಅವರಿಗೆ ಒಂದಾದರೂ ಸಿನಿಮಾ ನಿರ್ದೇಶನ ಮಾಡಬೇಕು ಎಂದು ಕಾದುಕುಳಿತ್ತಿದ್ದಾರೆ. ಈಗ ಶ್ರೀಕಾಂತ್ ಒದೆಲ್ಲ, ಚಿರಂಜೀವಿ ಅವರಿಗಾಗಿ ಹೊಸ ಕಥೆ ಹೆಣೆದಿದ್ದು ಆ್ಯಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸಿದ್ದಾರೆ. ವಿಶೇಷ ಎಂದರೆ ಈ ಚಿತ್ರದಲ್ಲಿ ಬಾಲಿವುಡ್ ಖ್ಯಾತ ನಟಿ ರಾಣಿ ಮುಖರ್ಜಿ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಆ ಮೂಲಕ ರಾಣಿ ಮತ್ತೊಮ್ಮೆ ದಕ್ಷಿಣ ಭಾರತದ ಚಿತ್ರರಂಗದತ್ತ ಮುಖಮಾಡುತ್ತಿದ್ದಾರೆ. ಈ ಹಿಂದೆ ಕಮಲ್ ಹಾಸನ್ ಅವರೊಂದಿಗೆ ಹೇ ರಾಮ್ ಸಿನಿಮಾದಲ್ಲಿ ನಟಿಸಿದ್ದರು.

ಕುಚ್ ಕುಚ್ ಹೋತಾಹೈ, ಬಿಚ್ಚು, ಕಹಿ ಪ್ಯಾರ್‌ನ ಹೋಜಾಯೆ, ಚೋರಿ ಚೋರಿ ಚುಪ್ಕೆ ಚುಪ್ಕೆ ಹೀಗೆ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದ ರಾಣಿ ಮುಖರ್ಜಿ ಒಂದಷ್ಟು ಸಿನಿಮಾಗಳಲ್ಲಿ ಗ್ಲಾಮರ್ ಲುಕ್‌ನಲ್ಲಿಯೂ ಮಿಂಚಿದ್ದಾರೆ. ವಿವಾಹದ ಬಳಿಕ ಸಿನಿಮಾಗಳಲ್ಲಿ ನಟಿಸುವುದನ್ನು ಕಡಿಮೆ ಮಾಡಿದ್ದರೂ ಗ್ಲಾಮರ್ ಪಾತ್ರಗಳಿಗಿಂತ ಮಹಿಳಾ ಪ್ರಧಾನ ಕಥೆಗಳನ್ನು ಹೆಚ್ಚಾಗಿ ಆಯ್ದುಕೊಳ್ಳುತ್ತಿದ್ದರು. ಅಂತೆಯೇ ಈಗ ಮತ್ತೊಂದು ಒಳ್ಳೆಯ ಕಥೆ ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದ್ದಾರೆ.

ಶ್ರೀಕಾಂತ್ ಒದೆಲ್ಲ ರಿವೇಂಜ್ ಸ್ಟೋರಿಯನ್ನು ಹೆಣೆದಿದ್ದು, ಆ್ಯಕ್ಷನ್ ಬೆರೆಸಿ ತೆರೆಗೆ ತರಲಿದ್ದಾರೆ. ರೆಟ್ರೋ ಲುಕ್‌ನಲ್ಲಿ ಈ ಸಿನಿಮಾ ಸಾಗಲಿದ್ದು, ರಾಣಿ ಮುಖರ್ಜಿ ಅವರ ಪಾತ್ರಕ್ಕೆ ಸಾಕಷ್ಟು ಪ್ರಾಮುಖ್ಯತೆಯೂ ಇದೆಯಂತೆ. ಈಗಾಗಲೇ ಸಿನಿಮಾ ಪ್ರೀಪ್ರೊಡಕ್ಷನ್ ಕಾರ್ಯಗಳು ಆರಂಭವಾಗಿದ್ದು, ಇನ್ನೇನು ಸಿನಿಮಾದ ಶೂಟಿಂಗ್ ಕೂಡ ಶುರುವಾಗಲಿದೆ. ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾ ಪ್ಯಾನ್ ಇಂಡಿಯಾ ಚಿತ್ರವಾಗಿ ಮೂಡಿಬರಲಿದೆ.

ಮರಳಿಬಂದ ಮೀರಾ



ಮೌರ್ಯ, ಅರಸು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿ ಮನಗೆದ್ದಿದ್ದ ಮೀರಾ ಜಾಸ್ಮಿನ್ ಮಲೆಯಾಳಂ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. 2010 ರಲ್ಲಿ ತೆರೆಗೆ ಬಂದ ಹೂ ಸಿನಿಮಾದ ಬಳಿಕ ಮೀರಾ ಕನ್ನಡ ಚಿತ್ರಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಈಗ ಮತ್ತೆ ಮೀರಾ ಅವರನ್ನು ಚಂದನವನಕ್ಕೆ ಕರೆತರಲಾಗುತ್ತಿದೆ. ಹೌದು, ವಿಖ್ಯಾತ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ರಾಮ್ ಚಿತ್ರದಲ್ಲಿ ಮೀರಾ ಜಾಸ್ಮಿನ್ ನಾಯಕಿಯಾಗಿ ನಟಿಸಲಿದ್ದಾರಂತೆ. ಈಗಾಗಲೇ ಕಥೆ ಕೇಳಿರುವ ಮೀರಾ ನಟಿಸಲು ಸಮ್ಮತಿಸಿದ್ದಾರೆ ಎನ್ನಲಾಗುತ್ತಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಮೀರಾ, ರಾಮ್ ಚಿತ್ರತಂಡವನ್ನು ಸೇರಲಿದ್ದಾರೆ.

ಈಗಾಗಲೇ ಇಪ್ಪತ್ತೈದು ದಿನಗಳ ಶೂಟಿಂಗ್ ಮಾಡಿರುವ ಚಿತ್ರತಂಡ ಮಾತಿನ ಭಾಗದ ಜತೆಗೆ ಒಂದು ಹಾಡಿನ ಚಿತ್ರೀಕರಣವನ್ನು ಮುಗಿಸಿದೆ. ಎರಡನೇ ಶೆಡ್ಯೂಲ್‌ಗಾಗಿ ವಿದೇಶಕ್ಕೂ ಹಾರಲಿದೆ. ವಿಶೇಷ ಎಂದರೆ ರಾಮ್ ಚಿತ್ರದಲ್ಲಿ ರೆಟ್ರೋ ಶೈಲಿಯ ಹಾಡೊಂದಿದ್ದು ಈ ಹಾಡಿನಲ್ಲಿ ಖ್ಯಾತ ನಟಿಯೊಬ್ಬರು ಹೆಜ್ಜೆ ಹಾಕಲಿದ್ದಾರೆ ಎನ್ನಲಾಗುತ್ತಿದೆ. ಜಾನಿ ಮಾಸ್ಟರ್ ಈ ಹಾಡಿಗೆ ನೃತ್ಯ ಸಂಯೋಜಿಸುತ್ತಿದ್ದು ಹಾಡಿನ ಬಗ್ಗೆ ನಿರೀಕ್ಷೆಯೂ ಹೆಚ್ಚಿದೆ. ಮಾತಿನ ಭಾಗ ಸಂಪೂರ್ಣ ಮುಕ್ತಾಯವಾದ ಬಳಿಕ ಈ ಹಾಡಿಗಾಗಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸುವ ಯೋಜನೆ ಚಿತ್ರತಂಡಕ್ಕಿದೆ. ರಾಮ್ ಚಿತ್ರದಲ್ಲಿ ರಮೇಶ್ ಅರವಿಂದ್ ಹಾಗೂ ಗಣೇಶಗ ಒಟ್ಟಿಗೆ ನಟಿಸುತ್ತಿದ್ದಾರೆ. ಇಬ್ಬರು ತ್ಯಾಗರಾಜರೂ ಈ ಸಿನಿಮಾದಲ್ಲಿ ಅಭಿನಯಿಸುತ್ತಿರುವುದರಿಂದ ಇಲ್ಲಿಯೂ ತ್ಯಾಗಮಯ ಪ್ರೇಮಕಥೆ ಇದೆ ಎಂಬುದು ಸ್ಪಷ್ಟವಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಅಕ್ಟೋಬರ್‌ನಲ್ಲಿ ರಾಮ್ ಚಿತ್ರ ತೆರೆಗೆ ಬರಲಿದೆ.

ತೆರೆಗೆ ನಾಗವಲ್ಲಿ ಬಂಗಲೆ

ಕನ್ನಡದಲ್ಲಿ ಉತ್ತಮ ಕಂಟೆಂಟ್ ವುಳ್ಳ ಚಿತ್ರಗಳನ್ನು ಪ್ರೇಕ್ಷಕರು ಮೆಚ್ಚುತ್ತಿದ್ದಾರೆ. ಅಂತಹ ಉತ್ತಮ ಹಾಗೂ ವಿಭಿನ್ನ ಕಂಟೆಂಟ್ ಹೊತ್ತು ನಾಗವಲ್ಲಿ ಬಂಗಲೆ ಚಿತ್ರ ನಿರ್ಮಾಣವಾಗಿದೆ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ,ಮೋಹ, ಮದ, ಮತ್ಸರ ಈ ಆರು ಗುಣಗಳನ್ನು ಪ್ರತಿನಿಧಿಸುವ ಆರು ಪಾತ್ರಗಳ ಜತೆಗೆ ಮತ್ತೊಂದು ವಿಶೇಷ ಪಾತ್ರವಿರುವ ನಾಗವಲ್ಲಿ ಬಂಗಲೆ ಚಿತ್ರ ಈ ವಾರ ಬಿಡುಗಡೆಯಾಗುತ್ತಿದೆ.

ನೆ.ಲ.ನರೇಂದ್ರಬಾಬು, ಯಶ್, ತೇಜಸ್ವಿನಿ, ನೇವಿ ಮಂಜು, ರೂಪಶ್ರೀ ಮುಂತಾದವರು ತಾರಾಗಣದಲ್ಲಿದ್ದಾರೆ. ಈ ಚಿತ್ರವನ್ನು ಹಂಸ ವಿಷನ್ಸ್ ಲಾಂಛನದಲ್ಲಿ ನೆಲ ಮಹೇಶ್ ಮತ್ತು ನೇವಿ ಮಂಜು ನಿರ್ಮಿಸಿದ್ದಾರೆ. ಕವಿ ರಾಜೇಶ್ ಕಥೆ ನಿರ್ದೇಶನ ಮಾಡಿದ್ದು, ರೋಹನ್ ದೇಸಾಯಿ ಸಂಗೀತ ಸಂಯೋಜಿಸಿದ್ದಾರೆ. ಜೆ. ಎಮ್. ಪ್ರಹ್ಲಾದ್ ಕಥೆ

ಚಿತ್ರಕಥೆ- ಬರೆಯುವ ಜತೆಗೆ ಸಂಭಾಷಣೆಯನ್ನು ಬರೆದಿದ್ದಾರೆ.